
ಕರ್ನಾಟಕ ಸರ್ಕಾರ

ಸಮಗ್ರ
ಕನ್ನಡ ಜನಪದ ಮತ್ತು ಯಕ್ಷಗಾನ
ಸಾಹಿತ್ಯ ಮಾಲೆ

ಪದ್ಯ ಸಾಹಿತ್ಯ

೧೮



# ನಾಗಾರಾಧನೆಯ ಹಾಡುಗಳು

ಸಂ. ಪ್ರೊ. ಎ. ವಿ. ನಾವಡ

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ – ೪೭

ಪದ್ಯ ಸಾಹಿತ್ಯ ಪ್ರಕಾರ – ೨೮

# ನಾಗಾರಾಧನೆಯ ಹಾಡುಗಳು


ಸಂಪಾದಕರು

**ಪ್ರೊ. ಎ.ವಿ. ನಾವಡ**



**ಕರ್ನಾಟಕ ಸರ್ಕಾರ**

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

**ಬೆಂಗಳೂರು – ೫೬೦ ೦೦೨**

**'Nagaradhneya Hadugalu',** Edited by **Prof. A.V. Navada**
Published by K.A.Dayananda, Director, Dept. of Kannada and Culture,
Kannada Bhavana, J.C.Road, Bangalore-560002.

© ಕಾಯ್ದಿರಿಸಿದೆ

**ಆವೃತ್ತಿಯ ಹಕ್ಕು** : ಕನ್ನಡ ಮತ್ತು ಸಂಸ್ಕೃತಿ ಇಲಾಖೆ
**ಪ್ರಥಮ ಮುದ್ರಣ** : ೨೦೧೪
**ಪುಟಗಳು** : xliv + ೨೩೬ = ೨೮೦
**ಪ್ರತಿಗಳು** : ೧೦೦೦
**ಬಿಡಿ ಪ್ರತಿ ಬೆಲೆ** : ರೂ. ೫೦/–

Print : 2014
Pages : xliv + 236 = 280
Copies : 1000
Price : Rs. 50/-

ಪ್ರಕಾಶಕರು :
ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ
**ಶ್ರೀ ಕೆ.ಎ. ದಯಾನಂದ,** ಕ.ಆ.ಸೇ. ಅವರಿಂದ ಪ್ರಕಟಿತ

**ಸಹಕಾರ : ಶ್ರೀ ಬಿ.ಎನ್. ಪರಡ್ಡಿ,** ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

ಸಂಯೋಜಕರು : **ಡಾ. ಚಕ್ಕೆರೆ ಶಿವಶಂಕರ್**

ಮುಖಪುಟ ವಿನ್ಯಾಸ : **ಪ. ಸ. ಕುಮಾರ್**

**ಮುದ್ರಕರು :**
**ಗೀತಾಂಜಲಿ ಗ್ರಾಫಿಕ್ಸ್**
ನಂ. ಬಿ–71, ನ್ಯೂ ನಂ. 84, ಕೆ.ಎಸ್.ಎಸ್.ಐ.ಡಿ.ಸಿ. ಇಂಡಸ್ಟ್ರಿಯಲ್ ಎಸ್ಟೇಟ್,
6ನೇ ಬಡಾವಣೆ, ರಾಜಾಜಿನಗರ, ಬೆಂಗಳೂರು – 560 010.
ದೂರವಾಣಿ : 23404232

# ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣ ಯೋಜನೆ

## ಸಂಪಾದಕ ಸಮಿತಿ

ಅಧ್ಯಕ್ಷರು

**ಪ್ರೊ. ಹಿ.ಶಿ. ರಾಮಚಂದ್ರೇಗೌಡ**

ಸದಸ್ಯರು

**ಡಾ. ಸೋಮಶೇಖರ ಇಮ್ರಾಪುರ**

**ಡಾ. ಎಚ್.ಜೆ. ಲಕ್ಕಪ್ಪಗೌಡ**

**ಡಾ. ಎಂ. ಪ್ರಭಾಕರ ಜೋಶಿ**

**ಡಾ. ತೀ.ನಂ. ಶಂಕರನಾರಾಯಣ**

**ಶ್ರೀಮತಿ ಶಾಂತಿನಾಯಕ**

**ಡಾ. ಅರವಿಂದ ಮಾಲಗತ್ತಿ**

**ಡಾ. ಮ.ಗು. ಬಿರಾದಾರ**

**ಪ್ರೊ. ಎ.ವಿ. ನಾವಡ**

**ಡಾ. ವೆಂಕಟೇಶ ಇಂದ್ವಾಡಿ**

ಸದಸ್ಯ ಕಾರ್ಯದರ್ಶಿ

**ಶ್ರೀ ಕೆ.ಎ. ದಯಾನಂದ,** ಕ.ಆ.ಸೇ.,

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪದನಿಮಿತ್ತ ಸದಸ್ಯರು

**ಶ್ರೀ ಪಿಚ್ಚಳ್ಳಿ ಶ್ರೀನಿವಾಸ**

ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

**ನಾಡೋಜ ಬೆಳಗಲ್ಲು ವೀರಣ್ಣ**

ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

**ಟಿ. ತಿಮ್ಮೇಗೌಡ**

ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

## ಮೇಲ್ವಿಚಾರಣಾ ಸಮಿತಿ

ಅಧ್ಯಕ್ಷರು
**ಶ್ರೀ ಪಿ.ಎನ್. ಶ್ರೀನಿವಾಸಚಾರಿ,** ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸದಸ್ಯರು
**ಶ್ರೀ ಕೆ.ಎ. ದಯಾನಂದ,** ಕ.ಆ.ಸೇ.,
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಶ್ರೀ ಪಿಚ್ಚಳ್ಳಿ ಶ್ರೀನಿವಾಸ**
ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ

ಸಂಚಾಲಕರು
**ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ**
ಜಂಟಿ ನಿರ್ದೇಶಕರು (ಆಡಳಿತ)

**ಶ್ರೀ ಬಲವಂತರಾವ್ ಪಾಟೀಲ್**
ಜಂಟಿ ನಿರ್ದೇಶಕರು (ಸು.ಕ.)

**ಶ್ರೀ ಬಿ.ಎನ್. ಪರಡ್ಡಿ**
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ

**ಶ್ರೀ ಎನ್. ಹರಿಕುಮಾರ್**
ಲೆಕ್ಕಪತ್ರಾಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸಿದ್ಧರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನ ಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೨೮/೨೦೧೪ ದಿನಾಂಕ : ೦೪–೦೨–೨೦೧೪

# ಸಂದೇಶ

ಸಮಾಜ ನಿಂತ ನೀರಲ್ಲ. ಎಲ್ಲ ಕಾಲಘಟ್ಟಗಳಲ್ಲಿ ಚಾರಿತ್ರಿಕ ಭೌಗೋಳಿಕ ಒತ್ತಡಗಳಿಂದ ಬದಲಾವಣೆಗೆ ಒಳಗಾಗುತ್ತಿರುತ್ತದೆ. ಇದು ಎದ್ದು ಕಾಣಿಸುವ ವೇಗದಲ್ಲಿ ಆಗುವಂಥದ್ದೇನಲ್ಲ. ಮಂದಗತಿಯಲ್ಲಿಯೇ ಚಲನಶೀಲತೆಯನ್ನು ಮೈಗೂಡಿಸಿಕೊಳ್ಳುತ್ತಾ ಹೋಗುತ್ತಿರುತ್ತದೆ.

ಮನುಷ್ಯನ ಅಂತರಂಗದ ವಿಕಾಸಕ್ಕೆ ಸಂಬಂಧಿಸಿದ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರವೂ ಇಂತಹ ಬದಲಾವಣೆಗಳಿಗೆ ಮುಕ್ತ ಮನಸ್ಸಿನಿಂದ ಸ್ಪಂದಿಸುತ್ತಿರುತ್ತದೆ. **ಬದಲಾವಣೆ ಜಗದ ನಿಯಮ** ಎಂಬ ಮಾತಿಗನುಗುಣವಾಗಿ ಎಲ್ಲ ಸೃಜನಶೀಲ ಕಲೆಗಳೂ ಆಯಾ ಕಾಲದೊಂದಿಗೆ ಹೆಜ್ಜೆ ಹಾಕುತ್ತಿರುತ್ತವೆ.


ಸಮುದಾಯ ಹಿತವನ್ನೇ ತನ್ನೊಡಲಲ್ಲಿ ತುಂಬಿಕೊಂಡಿರುವ ಜನಪದ ಸಾಹಿತ್ಯ ಹಾಗೂ ಕಲಾ ಪ್ರಕಾರಗಳಲ್ಲೂ ಇಂತಹ ಚಲನಶೀಲತೆ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿರುತ್ತದೆ. ಆಯಾಕಾಲದ ಸಮಾಜಕ್ಕೆ ಪ್ರಸ್ತುತವಲ್ಲದ್ದು ಮರೆಯಾಗಿ ಅದರ ಜಾಗದಲ್ಲಿ ಹೊಸದು ಸೃಷ್ಟಿಯಾಗುತ್ತಿದ್ದರೂ ಚಾರಿತ್ರಿಕ ದೃಷ್ಟಿಯಿಂದ, ಮೌಲಿಕ ದೃಷ್ಟಿಯಿಂದ ಅದನ್ನು ಸಂಗ್ರಹಿಸಿಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಜ್ಞಾನದ ಕಣಜವಾಗಿರುವ ಜನಪದ ಸಾಹಿತ್ಯ ಹಾಗೂ ಕಲಾಪ್ರಕಾರಗಳ ಎಲ್ಲಾ ಆಯಾಮಗಳನ್ನು ಪ್ರತಿಬಿಂಬಿಸುವ **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ**ಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಆಕಾಡೆಮಿಯು ಹೊರತರುತ್ತಿರುವುದು ಸ್ತುತ್ಯಾರ್ಹ ಸಂಗತಿಯಾಗಿದೆ.

**ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್** ಎಂಬ ವ್ಯಾಖ್ಯಾನ ನಮ್ಮ ಜನಪದ ಸಾಹಿತ್ಯ ಮತ್ತಿತರ ಸಂಗತಿಗಳ ಸಾರವಾಗಿದೆ. ಕನ್ನಡ ನೆಲ, ಜಲ, ಸಂಸ್ಕೃತಿಯ ವಿರಾಟ್ ದರ್ಶನವನ್ನು ನೀಡುವ ಈ ಸಂಪುಟಗಳು

ನಿಜಕ್ಕೂ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿವೆ. **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ** ಯೋಜನೆಯ ಈ ಪುಸ್ತಕಗಳನ್ನು ನಾಡಿನ ಜನ ಸಮುದಾಯ ಆದರದಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನ್ನದು.

ಸುವರ್ಣ ಕರ್ನಾಟಕ ಮಾಲಿಕೆಯಲ್ಲಿ ಈ ಸಂಪುಟಗಳನ್ನು ಹೊರತರಲು ಕರ್ನಾಟಕ ಸರ್ಕಾರದ ಜೊತೆ ಜೊತೆಗೆ ಯೋಜನೆಯ ಯಶಸ್ಸಿಗಾಗಿ ಶ್ರಮಿಸುತ್ತಿರುವ ಯೋಜನೆಯ ಅಧ್ಯಕ್ಷರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡ ಹಾಗೂ ಸಂಪಾದಕ ಮಂಡಳಿಯ ಎಲ್ಲಾ ಸದಸ್ಯರನ್ನು ಅಭಿನಂದಿಸಲು ಇಚ್ಛಿಸುತ್ತೇನೆ.

ನೂರು ಸಂಪುಟಗಳ ಈ ಯೋಜನೆಯಲ್ಲಿ ಈಗಾಗಲೇ ೩೬ ಸಂಪುಟಗಳು ಹೊರಬಂದಿವೆ. ಇನ್ನೂ ೬೪ ಸಂಪುಟಗಳು ಸದ್ಯದಲ್ಲಿಯೇ ಪ್ರಕಟಗೊಳ್ಳಲಿವೆ. ಈ ಮಹತ್ವದ ಯೋಜನೆಗೆ ಸಹಕರಿಸಿದ ಎಲ್ಲಾ ಮಹನೀಯರಿಗೂ ನನ್ನ ಹೃತ್ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ.



**ಸಿದ್ಧರಾಮಯ್ಯ**

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು
ಹಿರಿಯ ನಾಗರಿಕರ ಸಬಲೀಕರಣ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ : ಕಛೇರಿ :
೨೨೨೫೫೨೮೨, ೨೨೦೩೩೪೬೯

ಕೊಠಡಿ ಸಂಖ್ಯೆ : ೨೫೨, ೨ನೇ ಮಹಡಿ
ವಿಧಾನಸೌಧ, ಬೆಂಗಳೂರು

ಸಂ. ಮಮಕಸಂಸ/೨೮೨/೨೦೧೪

ದಿನಾಂಕ: ೨೮–೦೧–೨೦೧೪

# ಸಂದೇಶ

ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಂಸ್ಕೃತಿ, ಭಾಷೆ, ಸಾಹಿತ್ಯಗಳನ್ನು ಸಂರಕ್ಷಿಸುವ, ಉದ್ದೀಪನಗೊಳಿಸುವ ಮಹತ್ವಾಕಾಂಕ್ಷೆಯಿಂದ ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಸ್ಥಾಪಿಸಿದೆ. ಕನ್ನಡ ಭಾಷೆ ಸಾಹಿತ್ಯ ಮತ್ತು ಇತರ ಎಲ್ಲಾ ಕಲೆಗಳ ಅಭಿವೃದ್ಧಿಗೆ ಅಂದಿನಿಂದ ಇಂದಿನವರೆಗೂ ಕ್ರಿಯಾಯೋಜನೆಗಳನ್ನು ರೂಪಿಸಿಕೊಂಡು ಇಲಾಖೆ ಕಾರ್ಯಪ್ರವೃತ್ತವಾಗಿದೆ. ಈಗ **"ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ"** ಎಂಬ ಬೃಹತ್ತಾದ ಯೋಜನೆ ರೂಪಿಸಿ ಜಾನಪದವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಜಾನಪದ ಮೌಖಿಕ ಪರಂಪರೆಯ ಮೂಲಕ ಮುಂದಿನ ತಲೆಮಾರಿಗೆ ವರ್ಗಾವಣೆಗೊಳ್ಳುವುದಾದರೂ ಕೆಲವು ಅಪರೂಪದ ಮಾಹಿತಿಗಳು, ಸಾಹಿತ್ಯಕ ಮಾದರಿಗಳು ಅದೇ ಪ್ರಮಾಣದಲ್ಲಿ ವರ್ಗಾವಣೆಯಾಗುವುದಿಲ್ಲ. ಒಬ್ಬ ಅಭಿಜಾತ ಕಲಾವಿದ ಹಾಡಿದಂಥ ರೂಪ ಮತ್ತು ಶೈಲಿಯನ್ನು ಆತನ ಸಂತತಿಯೇ ಅನುಸರಿಸಲಾಗಿರುವುದಿಲ್ಲ. ಆ ಒಂದು ಅನನ್ಯತೆ ಅವರಿಗೇ ಮೀಸಲಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಅಂಥ ಅಪರೂಪದ ಸಂಗತಿಯನ್ನು ಉಳಿಸಲು ಮತ್ತು ತೌಲನಿಕವಾಗಿ ಅಧ್ಯಯನ ಮಾಡಲು ದಾಖಲೀಕರಣಗೊಳಿಸುವುದು ಅನಿವಾರ್ಯವಾಗುತ್ತದೆ.

ಜಾನಪದ ಬದುಕಿನ ಅನಂತ ಮುಖಗಳನ್ನು ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ನಂಬಿಕೆ, ನಡವಳಿಕೆ, ಆಚರಣೆ, ಸಂಪ್ರದಾಯಗಳು, ಎಲ್ಲಕ್ಕಿಂತ ಹೆಚ್ಚಾಗಿ ಜೀವನ ಮೌಲ್ಯಗಳು ತುಂಬಿರುವ ಕ್ಷೇತ್ರ. ಅಪ್ರಸ್ತುತವಾಗಿರುವುದನ್ನು

ಇಂದಿನ ದಿನಮಾನಗಳಲ್ಲಿ ಅನುಸರಿಸಬೇಕಾಗಿರುವುದಿಲ್ಲ. ಅದು ಅಪ್ರಸ್ತುತವಾದುದು ಎಂದು ತಿಳಿದುಕೊಳ್ಳುವುದಕ್ಕಾದರೂ ಅದು ದಾಖಲೀಕರಣಗೊಳ್ಳಬೇಕು. ಯಾವುದೇ ಒಂದು ಮೌಲ್ಯ ಕೇವಲ ಒಬ್ಬರಿಂದ ಹೇರಲ್ಪಟ್ಟಿರುವುದಿಲ್ಲ. ಹಲವು ಜನ ಚಿಂತಕರು ಹಲವಾರು ವರ್ಷಗಳ ಕಾಲ ಅದನ್ನು ಜೀವನದಲ್ಲಿ ಅಳವಡಿಸಿ ಸಾಣೆ ಹಿಡಿದಿರುತ್ತಾರೆ. ಈ ಹಿನ್ನೆಲೆಯಲ್ಲಿಯೇ **"ವೇದ ಸುಳ್ಳಾದರೂ ಗಾದೆ ಸುಳ್ಳಾಗದು"** ಎಂಬ ಮಾತು ಬಂದಿರುವುದು.

ಇಂತಹ ಅಪರೂಪದ ಮಾಹಿತಿಯ ಜಾನಪದವನ್ನು ಅಕ್ಷರರೂಪದಲ್ಲಿ ಹಿಡಿದಿಡುವ ಕೆಲಸಕ್ಕೆ ಕೈಹಚ್ಚಿರುವ ಎಲ್ಲ ವಿದ್ವಾಂಸರಿಗೆ, ಎಲ್ಲ ಅಧಿಕಾರಿವರ್ಗದವರಿಗೆ ಅಭಿನಂದಿಸುತ್ತಾ ವಿದ್ವತ್‌ವಲಯ ಈ ಯೋಜನೆಯ ಸಂಪುಟಗಳನ್ನು ಸದುಪಯೋಗಪಡಿಸಿಕೊಳ್ಳಲೆಂದು ಆಶಿಸುತ್ತೇನೆ.

**ಉಮಾಶ್ರೀ**

# ಪ್ರಕಾಶಕರ ನುಡಿ

ಮನುಷ್ಯನ ಮೂಲ ಸಂಸ್ಕೃತಿಯ ಭಂಡಾರವಾದ ಜಾನಪದವು ಬದುಕಿನ ವಿವಿಧ ಮುಖಗಳನ್ನು ಅದರ ಸಹಜ ಸ್ವರೂಪದಲ್ಲಿ ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ಆಧುನಿಕ ಸಂದರ್ಭದಲ್ಲಿ ಆವಿಷ್ಕಾರಗೊಂಡಿರುವ ಎಲ್ಲಾ ವೈಜ್ಞಾನಿಕ ಸೃಷ್ಟಿಗಳ, ವಿವಿಧ ದೃಷ್ಟಿಕೋನದ ವಿಚಾರಗಳ ಮೂಲ ಹೊಳಹು ಜಾನಪದದಿಂದಲೇ ಬಂದದ್ದು. ಮನುಷ್ಯನ ಹುಟ್ಟಿನಿಂದ ಮೊದಲುಗೊಂಡು ಸಾವಿನವರೆಗೂ ತಬ್ಬಿ ಹಿಡಿದಿರುವ ಜನಪದ ಸಾಹಿತ್ಯವು ಅತ್ಯಂತ ಶ್ರೀಮಂತವಾದುದು ಮತ್ತು ವ್ಯಾಪಕವಾದುದು. ಕರ್ನಾಟಕವು ಇಂತಹ ಅಮೂಲ್ಯವಾದ ಜಾನಪದ ಸಂಪತ್ತಿನ ಆಗರವಾಗಿದೆ.

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ಧಾಳಿ ಮಾಡುತ್ತಿದ್ದು, ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗುತ್ತಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದ ಅಧ್ಯಯನ ಅಗತ್ಯವಾಗಿದೆ.

ಸಮೃದ್ಧ–ಸಮಗ್ರ ಜಾನಪದ ಸಾಹಿತ್ಯವನ್ನು ಕ್ರೋಢೀಕರಿಸಿ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಾನಪದ ವಿದ್ವಾಂಸರಾದ ಪ್ರೊ.ಹಿ.ಶಿ.ರಾಮಚಂದ್ರೇಗೌಡರವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ.ಎಚ್.ಜೆ. ಲಕ್ಕಪ್ಪಗೌಡ, ಡಾ. ತೀ.ನಂ. ಶಂಕರನಾರಾಯಣ, ಶ್ರೀಮತಿ ಶಾಂತಿನಾಯಕ, ಡಾ.ಎಂ.ಪ್ರಭಾಕರ ಜೋಶಿ, ಶ್ರೀ ಅರವಿಂದ ಮಾಲಗತ್ತಿ, ಡಾ. ಮ.ಗು.ಬಿರಾದಾರ, ಪ್ರೊ. ಎ.ವಿ. ನಾವಡ, ಡಾ. ವೆಂಕಟೇಶ ಇಂದ್ವಾಡಿ, ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಅಧ್ಯಕ್ಷರು ಅವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯ ನೇತೃತ್ವದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸಹಯೋಗದೊಂದಿಗೆ 'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ' ಪ್ರಕಟಣಾ ಯೋಜನೆಯನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

ಈ ಯೋಜನೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು ಹಾಗೂ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿತ್ತು. ಇವರೆಲ್ಲರ ಶ್ರಮ ಮತ್ತು ಸಹಕಾರ ಹೆಚ್ಚಿನದು, ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಯೋಜನೆಯ ಮುದ್ರಣಕ್ಕೆ ಸಹಕರಿಸಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳು ಈ ಯೋಜನೆಯ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರೂ ಆದ ಶ್ರೀ ಪಿ.ಎನ್. ಶ್ರೀನಿವಾಸಚಾರಿ ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಸಿದ್ಧಪಡಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಸಲಹೆ–ಸಹಕಾರ ಅಮೂಲ್ಯವಾದುವು. ಹಾಗೆಯೇ ಈ ಸಂಪುಟಗಳು ಹೊರಬರಲು ನೆರವಾದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪಿಚ್ಚಳ್ಳಿ ಶ್ರೀನಿವಾಸ ಮತ್ತು ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ಮತ್ತು ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದರಾದ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ನೆನಕೆಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ಸಹಕಾರದೊಂದಿಗೆ ಹೊರತರುತ್ತಿರುವ **'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ'**ಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

**ಕೆ.ಎ. ದಯಾನಂದ,** ಕ.ಆ.ಸೇ.,
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಅಕಾಡೆಮಿ ಅಧ್ಯಕ್ಷರ ನುಡಿ

ಜಾನಪದವೇ ಜಗತ್ತಿನ ಆದಿಮ ಉಸಿರು ಮತ್ತು ಸಂಸ್ಕೃತಿ. ಇಡೀ ಜಗತ್ತಿನ ಮೊಟ್ಟ ಮೊದಲ ಸಾಹಿತ್ಯ, ಸಂಗೀತ, ನೃತ್ಯ, ಕಲೆ ಮತ್ತು ಧರ್ಮವು ಕೂಡ ಜಾನಪದ ಮೂಲದ್ದೇ. ಜಗತ್ತಿನಾದ್ಯಂತ ಇಂದಿನ ಮುಖ್ಯ ಪ್ರವಾಹದ ಎಲ್ಲ ವೈವಿಧ್ಯಮಯ ಕಲೆ-ಧರ್ಮಗಳು ಕುಡಿಯೊಡೆದಿದ್ದು ಸಹ ಅಲ್ಲಲ್ಲಿನ ಜಾನಪದ ವೈಶಿಷ್ಟ್ಯಗಳಿಂದಲೇ ಎಂಬುದು ಎಲ್ಲ ಇತಿಹಾಸಕಾರರ ಮತ್ತು ಸಂಸ್ಕೃತಿ ಚಿಂತಕರ ಒಮ್ಮತಾಭಿಪ್ರಾಯವಾಗಿದೆ. ದುರಂತವೇನೆಂದರೆ ಜಾನಪದ ಪರಂಪರೆಯಲ್ಲಿನ ಅಲಿಪಿ ಮತ್ತು ಘೋಂಡಿ ಲಕ್ಷಣದ ಕಾರಣದಿಂದಾಗಿ ಜಾನಪದದ ಅನೇಕ ಸಾಂಸ್ಕೃತಿಕ ಮೂಲದ ಮಹತ್ವದ ಅಂಶಗಳು, ಆಚರಣಾತ್ಮಕ ಅಭಿವ್ಯಕ್ತಿಗಳು ಇಂದಿನವರೆಗೂ ಯಾವ ರೂಪದಲ್ಲೂ ದಾಖಲಾಗದೇ ಹೋದದ್ದು ಕೇವಲ ಜಾನಪದ ಜಗತ್ತು ಮತ್ತು ವಿದ್ವಾಂಸರಿಗಷ್ಟೇ ಅಲ್ಲದೆ ಸಾಂಸ್ಕೃತಿಕ ಅಧ್ಯಯನಕಾರರಿಗೂ ಆಗಿರುವ, ಎಂದೆಂದಿಗೂ ತುಂಬಲಾರದಂತಹ ಬಹುದೊಡ್ಡ ನಷ್ಟವಾಗಿದೆ. ಈ ಅಪಾಯ ಈ ಕ್ಷಣಕ್ಕೂ ಮುಂದುವರೆದಿದೆ ಯಲ್ಲದೇ ಇಂದಿನ ಅತ್ಯಾಧುನಿಕತೆಯ ವೇಗ ಮತ್ತು ಧಾವಂತದ ಸಂದರ್ಭದಲ್ಲಿ ಅಳಿದುಳಿದ ಮತ್ತೆಷ್ಟೋ ಸಾಹಿತ್ಯ, ಕಲೆ ಮತ್ತು ಆಚರಣೆಗಳು ಆಧುನಿಕತೆಯ ವೇಗ ಸಂಸ್ಕೃತಿಗೆ ಅನುಗುಣವಾದ ವೇಗದಲ್ಲೇ ನಮ್ಮಿಂದ ಶಾಶ್ವತವಾಗಿ ಕಣ್ಮರೆಯಾಗುತ್ತಿವೆ. ಇದು ಇಡೀ ಜಗತ್ತಿನ ಜಾನಪದ ವಲಯದ ಎದುರಿರುವ ಬಹು ದೊಡ್ಡ ಸಂದಿಗ್ಧ ಮತ್ತು ಸವಾಲಾಗಿದೆ. ಹಾಗಾಗಿ ಹಿಂದೆಂದಿಗಿಂತಲೂ ವರ್ತಮಾನದ ಈ ಕ್ಷಣದಲ್ಲಿ ಜಾನಪದೀಯ ಅಭಿವ್ಯಕ್ತಿಗಳನ್ನೆಲ್ಲಾ ದಾಖಲಿಸಿಡುವುದರ ಮೂಲಕವೇ ನಾವು ರಕ್ಷಿಸಿ, ಮುಂದಿನ ತಲೆಮಾರುಗಳಿಗೆ ದಾಟಿಸಬೇಕಾದ ತುರ್ತು ಇದೆ.

ಜನಪದ ಸಾಹಿತ್ಯವೆಂಬುದು ಅಲಿಪಿ ಸಾಹಿತ್ಯ. ಅದನ್ನು ಸಂಗ್ರಹಿಸಿ ಲಿಪಿಬದ್ಧಗೊಳಿಸುವುದರ ಮೂಲಕ ಕಾಪಿಡಬಹುದಾಗಿದೆ. ಆದರೆ ಜಾನಪದದ ಬಹುತೇಕ ಕಲೆ ಮತ್ತು ಆಚರಣೆಗಳು ಲಿಪಿಬದ್ಧಗೊಳಿಸಲಾಗದಂತಹವು. ಅವು ಬಹುತೇಕ ಧಾರ್ಮಿಕ ನೆಲೆಯ ಶ್ರದ್ಧಾವಂತಿಕೆಯ ಅಭಿವ್ಯಕ್ತಿಗಳು. ಅಂತಹ

ಆಚರಣೆಗಳನ್ನು ಜಾನಪದ ವಿದ್ವಾಂಸನೊಬ್ಬ ಪ್ರತ್ಯಕ್ಷವಾಗಿ ಕಂಡು ವಿವರಿಸಬಹುದು; ಇಲ್ಲವೇ ಅದನ್ನು ತನ್ನ ಗ್ರಹಿಕೆಯ ಅನುಸಾರವಾಗಿ ಸಾಂಸ್ಕೃತಿಕ ವಿಶ್ಲೇಷಣೆಗೆ ಒಳಪಡಿಸಬಹುದು. ಆದರೆ ಅಂತಹ ನಿರ್ದಿಷ್ಟ ವಿದ್ವಾಂಸನೊಬ್ಬನ ಗ್ರಹಿಕೆ, ವಿಶ್ಲೇಷಣೆಗಳು ಅಂತಿಮವಾಗಿ ಆತನ ತಿಳಿವಳಿಕೆಯ ಮಿತಿಯೊಳಗಿನವೇ ಆಗಿರಬಲ್ಲದೇ ಹೊರತು ಅಂತಿಮ ಸತ್ಯವಲ್ಲದಿರಬಹುದು. ಜಾನಪದ ಆಚರಣೆಯೊಂದನ್ನು ಗಮನಿಸುವ ಕ್ರಮದಲ್ಲಿನ ಅನೇಕ ಸೂಕ್ಷ್ಮಗಳು ವಿದ್ವಾಂಸರಿಂದ ವಿದ್ವಾಂಸರಿಗೆ ಭಿನ್ನವೂ ಆಗಿರಬಲ್ಲವು. ಹಾಗಾಗಿ ಆಯಾಯಾ ಕಾಲದ ಪ್ರತಿಯೊಬ್ಬ ಆಸಕ್ತ ಜಾನಪದ ವಿದ್ವಾಂಸನೂ ತನಗೆ ಸಾಂಸ್ಕೃತಿಕವಾಗಿ ಮುಖ್ಯ ಎನಿಸುವ ಆಚರಣೆ, ಕಲೆಯಂತಹ ವಿವಿಧ ಪ್ರಕಾರಗಳ ವೈಶಿಷ್ಟ್ಯವನ್ನು ಪ್ರತ್ಯಕ್ಷವಾಗಿಯೇ ಕಂಡು ಅನುಭವಿಸಿ ಬರೆದಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇದ್ದೇ ಇದೆ.

ಆದರೆ ಈಗಾಗಲೇ ನಾವು ಗಮನಿಸಿರುವಂತೆ ಅನೇಕ ಅನನ್ಯವೆಂಬಂತಹ ಜಾನಪದೀಯ ಆಚರಣೆಗಳು ಆಧುನಿಕತೆಯ ಅನ್ಯಾಕ್ರಮಣಶೀಲತೆಯಿಂದಾಗಿ ನೆನಪುಗಳಿಂದಲೂ ಮಾಸಿ ಹೋಗುವಷ್ಟು ವಿನಾಶದ ಹಾಗೂ ಅಳಿವಿನ ಅಂಚಿನಲ್ಲಿವೆ. ಕೆಲವು ಜನಪ್ರಿಯವಾದ ಕಲೆಗಳನ್ನು ಕಲಿಕಾ ಶಿಬಿರಗಳ ಮೂಲಕ ಆಸಕ್ತ ಯುವಕ/ಯುವತಿಯರಿಗೆ ಕಲಿಸುವುದರ ಮೂಲಕವಾದರೂ ಮುಂದುವರೆಯುವಂತೆ ಮಾಡಬಹುದಾಗಿದೆ. ಆದರೆ ನಿರ್ದಿಷ್ಟ ಪಂಗಡದ ನಿರ್ದಿಷ್ಟ ವ್ಯಕ್ತಿಗಳೇ ಪಾತ್ರವಹಿಸುವುದರ ಮೂಲಕವಷ್ಟೇ ಮಂದುವರೆಯಬೇಕಾದ ಅನಿವಾರ್ಯತೆಯ ಆಚರಣೆಗಳನ್ನು ನಾವು ಉಳಿಸಿಕೊಳ್ಳುವ ಬಗೆಯಾದರೂ ಯಾವುದು? ಉದಾಹರಣೆಗೆ; ಈ ನೆಲದ ಆದಿಮ ಧರ್ಮದ ಬಗ್ಗೆ ಅನೇಕ ರಹಸ್ಯಗಳನ್ನು ಉಸುರುವ ಜೇನುಕುರುಬರ ಕೊಂಟು ಪೂಜೆಯ ಆಚರಣೆ, ದಕ್ಕಲರು, ಮಾಸ್ತೀಕರು ಮತ್ತು ಸಿಂಧ್‌ಮಾದಿಗರ ತಂಗಡಿ ದ್ಯಾವ್ರದ ಆಚರಣೆ, ಮೋಡಿ ಹಾಕುವವರ ತಂತ್ರಗಳು, ಮೇರರ ಕಾಡ್ಯಾನಾಟ ಇತ್ಯಾದಿಗಳು ಅಪರೂಪವಾಗುತ್ತಿದೆಯಷ್ಟೇ ಅಲ್ಲದೆ ಕೊಂಟು ಪೂಜೆ, ತಂಗಡಿ ದ್ಯಾವ್ರದಂತಹ ವಿಶಿಷ್ಟವೂ, ಮಹತ್ವದವೂ ಆದ ಆಚರಣೆಗಳು ಈಗಾಗಲೇ ಕಣ್ಮರೆಯಾಗುತ್ತಿವೆ. ಇಂತಹುದೇ ಮತ್ತೆಷ್ಟೋ ಸಾಂಸ್ಕೃತಿಕ ಮಹತ್ವದ ಆಚರಣೆಗಳ ಬಗೆಗಂತೂ ಮಾಹಿತಿ ಕೂಡ ಸಿಗದಂತಾಗಿದೆ. ಬಾಲ್ಯದಲ್ಲಿ ಸ್ವತಃ ನಾವೇ ಪ್ರತ್ಯಕ್ಷವಾಗಿ ಕಂಡುಂಡ ಅನೇಕ ಕಲಾತ್ಮಕ ಜಾನಪದೀಯ ಆಚರಣೆಗಳು ಇಂದು ನಮ್ಮ ನಂತರದ ಪೀಳಿಗೆಯವರ ಪಾಲಿಗೆ ಇಲ್ಲದಂತಾಗಿರುವುದನ್ನು ನಾವೇ ಕಾಣುತ್ತಿದ್ದೇವಲ್ಲ? ಈ ಹಿನ್ನೆಲೆಯಲ್ಲಿ ಈಗಾಗಲೇ ಅಳಿವಿನ ಅಂಚಲ್ಲಿರುವ ಸಾಂಸ್ಕೃತಿಕ ಹಾಗೂ ಧಾರ್ಮಿಕ ಮೂಲದ ಕೆಲವಾದರೂ ಅತಿ ಮುಖ್ಯ ಆಚರಣೆಗಳನ್ನು ನಾವು

ಈ ಡಿಜಿಟಲ್ ಯುಗದಲ್ಲಿ, ಯಾವ ತಂತ್ರಜ್ಞಾನ ಜಾನಪದದ ಅಳಿವಿಗೆ ಕಾರಣವಾಗುತ್ತಿದೆಯೋ ಅದೇ ತಂತ್ರಜ್ಞಾನದ ನೆರವಿನಿಂದಲೇ ದೃಶ್ಯೀಕರಿಸಿ ಮುಂದಿನ ತಲೆಮಾರಿನ ಅಧ್ಯಯನಕಾರರ ಪಾಲಿಗೆ ರಕ್ಷಿಸಿಡಬೇಕಾದ ತುರ್ತು ಮತ್ತು ಒತ್ತಡವೇರ್ಪಟ್ಟಿದೆಯೆಂಬುದೇ ನನ್ನ ಸ್ಪಷ್ಟ ತಿಳಿವಳಿಕೆ. ಜನಪದ ಸಾಹಿತ್ಯ ಪ್ರಕಟಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತೋರಿರುವ ಕಾಳಜಿಯನ್ನೇ ವಿಸ್ತರಿಸಿ, ಜಾನಪದ ಆಚರಣೆಗಳ ದೃಶ್ಯ ದಾಖಲಾತಿಯ ವಿಚಾರದಲ್ಲೂ ಮುಂದುವರೆಸಬೇಕೆಂಬುದು ನನ್ನ ವಿನಮ್ರ ಮನವಿ.

ಈ ಹಿನ್ನೆಲೆಯಲ್ಲಿ ಮೌಖಿಕ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಜಾನಪದ ಪರಂಪರೆಯನ್ನು ಜೀವಂತವಾಗಿಡುವ ಒಂದು ಪಾರ್ಶ್ವ ಪ್ರಯತ್ನ ಮಾತ್ರ. ಆದರೆ ಈ ಪ್ರಯತ್ನವು ಕೂಡ ತನ್ನದೇ ಆದ ಮಹತ್ವವನ್ನು ಒಳಗೊಂಡಿದೆಯಲ್ಲದೇ ಅದರ ಕೊಡುಗೆಯನ್ನು ಯಾವ ರೀತಿಯಲ್ಲೂ ನಗಣ್ಯವಾಗಿಸಲು ಸಾಧ್ಯವಿಲ್ಲ. ಆದರೆ ಬದಲಾಗುತ್ತಿರುವ ಅತ್ಯಾಧುನಿಕ ತಾಂತ್ರಿಕಾವಿಷ್ಕಾರಗಳಿಗೆ ಅನುಗುಣವಾಗಿಯೇ ಸ್ಪಂದಿಸಿ ನಾವು ಇನ್ನು ಮುಂದಿನ ಜಾನಪದೀಯ ಯೋಜನೆಗಳಲ್ಲಿ ಕಲೆ, ಕಲಾವಿದರು ಮತ್ತು ಆಚರಣೆಗಳನ್ನು ದೃಶ್ಯ ರೂಪದಲ್ಲಿಯೂ ದಾಖಲಿಸಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇರುವುದನ್ನು ಮನಗಾಣಬೇಕಾಗಿದೆ. ಈ ಬಗ್ಗೆ ತಜ್ಞ ವಿದ್ವಾಂಸರು ಇನ್ನಾದರೂ ಗಮನ ಹರಿಸಬೇಕಿದೆ.

ಈ ಬಗೆಯ ಗ್ರಹಿಕೆಯ ಹಿನ್ನೆಲೆಯಲ್ಲಿಯೇ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಎಂಬ ಮಹತ್ವಾಕಾಂಕ್ಷೆಯ ಬೃಹತ್ ಯೋಜನೆ ಅಡಿಯಲ್ಲಿ ೧೦೦ ಸಂಪುಟಗಳನ್ನು ಸಂಪಾದಿಸಿ, ಪ್ರಕಟಿಸಲು ತೀರ್ಮಾನಿಸಿತು.

ಕರ್ನಾಟಕ ಜಾನಪದ ಅಕಾಡೆಮಿಯು ಸಹಜವಾಗಿಯೇ ಈ ಬೃಹತ್ ಯೋಜನೆಯ ಗುರುತರ ಜವಾಬ್ದಾರಿಯನ್ನು ಹೊತ್ತು ಅದನ್ನು ಕಾಲಾನುಕ್ರಮದಲ್ಲಿ ಅನುಷ್ಠಾನಗೊಳಿಸಿ, ಸಂಪುಟಗಳನ್ನು ಸಂಪಾದಿಸಿ ಕೊಡುವ ಕಾರ್ಯವನ್ನು ಯಶಸ್ವಿಯಾಗಿಯೇ ನಿರ್ವಹಿಸಿದೆ. ಜನಪದ ಸಾಹಿತ್ಯ ಪರಂಪರೆಯಲ್ಲಿನ ಪ್ರಕಾರ ವಿಶಿಷ್ಟತೆ, ಭೌಗೋಳಿಕ ವ್ಯಾಪ್ತಿ ಮತ್ತು ಇತಿಹಾಸವನ್ನು ಗಮನದಲ್ಲಿರಿಸಿಕೊಂಡೇ ನಿರ್ದಿಷ್ಟ ಸಂಪುಟಗಳ ವಿನ್ಯಾಸವನ್ನು ರೂಪುಗೊಳಿಸಲಾಗಿದೆ. ನಾಡಿನ ಹೆಸರಾಂತ ಜಾನಪದ ತಜ್ಞರು ಅಮೂಲ್ಯವಾದ ತಮ್ಮ ಸಮಯ ಮತ್ತು ಶ್ರಮಗಳೊಂದಿಗೆ ಈ ಸಂಪುಟಗಳನ್ನು ಸಿದ್ಧಪಡಿಸಿದ್ದಾರೆ. ಅವರೆಲ್ಲರ ಶ್ರಮ ಸಾರ್ಥಕವಷ್ಟೇ ಅಲ್ಲದೆ, ಸೃಜನಶೀಲ ಜಾನಪದ ಕ್ಷೇತ್ರಕ್ಕೆ

ಸಂದ ಅನನ್ಯ ಹಾಗೂ ಅಪರೂಪದ ಕೊಡುಗೆಗಳೆಂದೇ ನಾನು ಭಾವಿಸಿದ್ದೇನೆ. ಈ ಬೃಹತ್ ಯೋಜನೆಯನ್ನು ಆಗುಮಾಡಿಸುವಲ್ಲಿ ಹೀಗೆ ಹೆಗಲಿಗೆ ಹೆಗಲಾಗಿ ನಿಂತು ಸಹಕರಿಸಿದ ಎಲ್ಲ ಮಹನೀಯರಿಗೂ ಅಕಾಡೆಮಿ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದೆ.

ಈ ಯೋಜನೆಯ ಸಂಪಾದಕ ಸಮಿತಿ ಅಧ್ಯಕ್ಷರಾದ ಡಾ. ಹಿ.ಶಿ. ರಾಮಚಂದ್ರೇಗೌಡ ಅವರಿಗೂ ಹಾಗೂ ಸಂಪಾದಕ ಮಂಡಳಿಯ ಸದಸ್ಯರಿಗೂ ವಿಶೇಷ ಅಭಿನಂದನೆಗಳು ಸಲ್ಲಲೇಬೇಕು.

ತಮ್ಮ ಉಚಿತವೂ, ವಿದ್ವತ್ಪೂರ್ಣವೂ ಆದ ನುಡಿಗಳೊಂದಿಗೆ ಸಂಪುಟಗಳ ಮೌಲ್ಯ ಹೆಚ್ಚಿಸಿದ ಮಾನ್ಯ ಮುಖ್ಯಮಂತ್ರಿಗಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ಶಾಲಿನಿ ರಜನೀಶ್, ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ, ಸಂಚಾಲಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಈ ಯೋಜನೆಯ ನಿರ್ವಹಣೆಯಲ್ಲಿ ತೋರಿದ ಅಪಾರ ಆಸಕ್ತಿ ಮತ್ತು ಶ್ರದ್ಧೆಗಳಿಗೆ ಇಡೀ ಕನ್ನಡ ನಾಡಿನ ಜಾನಪದ ಜಗತ್ತು ಋಣಿಯಾಗಿದೆ.

ಈ ಬೃಹತ್ ಯೋಜನೆಯ ಅನುಷ್ಠಾನದ ಹೊಣೆಯನ್ನು ತಮ್ಮ ಹೆಗಲಿಗೇರಿಸಿಕೊಂಡು ತತ್ಪರತೆಯಿಂದ ಕಾರ್ಯ ನಿರ್ವಹಿಸಿದ ನಮ್ಮ ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ನೆನಕೆಗಳು.

ಮುಂದಿನ ತಲೆಮಾರಿನ ಸಂಸ್ಕೃತಿ ಚಿಂತಕರು, ಜಾನಪದ ಅಧ್ಯಯನಕಾರರ ಪಾಲಿಗೆ ಸಮೃದ್ಧ ಆಕರ ಗ್ರಂಥಗಳಾಗಬಲ್ಲ ಈ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಅಷ್ಟರ ಮಟ್ಟಿಗೆ ಜಾನಪದ ಅಕಾಡೆಮಿಯ ಆಶಯವನ್ನು ಈಡೇರಿಸಿದೆಯೆಂಬುದೇ ನನ್ನ ನಂಬಿಕೆ ಮತ್ತು ಅದೇ ನನ್ನ ನಿಜವಾದ ಸಂತೋಷಕ್ಕೆ ಕಾರಣವಾಗಿದೆ.

**ಪಿಚ್ಚಳ್ಳಿ ಶ್ರೀನಿವಾಸ**
ಅಧ್ಯಕ್ಷರು
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

# ಅಧ್ಯಕ್ಷರ ಮಾತು

## ಪೂರ್ವಾಪರ

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು ಸೋಲಿಸಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ

ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿ ಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ – ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ. ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು,

ಅದನ್ನು ಕೊಡುವ ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ – ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಫೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ–ಚಿಂತಕರಿಗೆ ಒಂದು ಹೆದ್ದಾರಿಯಾಯಿತು. ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ

ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು. ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟಿನ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೨೧ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

– ೨ –

## ಮಾತಿನ ಸರಣಿ : ಮುತ್ತಿನ ಬೆಲೆ

**ಬಿ. ಎಂ. ಶ್ರೀಕಂಠಯ್ಯ**

'ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ–ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ

ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು'. **(ಗರತಿಯ ಹಾಡು ೧೯೩೧)**

**ದ. ರಾ. ಬೇಂದ್ರೆ**

'.........ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ ?

'ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು !. **(ಗರತಿಯ ಹಾಡು ೧೯೩೧)**

**ಮಾಸ್ತಿ ವೆಂಕಟೇಶ ಅಯ್ಯಂಗಾರ್**

'ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ'. **(ಕರ್ನಾಟಕ ಜನಪದ ಸಾಹಿತ್ಯ ೧೯೫೮)**

**ಬೆಟಗೇರಿ ಕೃಷ್ಣಶರ್ಮ**

'ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ'. **(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

**ಬಿ. ಎಸ್. ಗದ್ದಿಗೀಮಠ**

'ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ 'ವಿಶ್ವಕೋಶ'ವೇ ಆಗಬಹುದೆಂದು ಹೇಳಬಹುದು'. **(ಕನ್ನಡ ಜನಪದ ಗೀತೆಗಳು ೧೯೬೩)**

**ದೇ. ಜವರೇಗೌಡ**

'ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ'. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ ೧೯೬೭).**

**ಎಚ್. ಎಲ್. ನಾಗೇಗೌಡ**

'ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು'. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೬೩)**

**ಜೀ.ಶಂ. ಪರಮಶಿವಯ್ಯ**

'ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು'. **(ಜನಪದ ಸಾಹಿತ್ಯ ಸಮೀಕ್ಷೆ ೧೯೬೭)**

**– ೩ –**

**ಕಟ್ಟುವ ಕನಸು ; ನೆಟ್ಟ ಸಸಿ**

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕ್ಷೆ, ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸ್ಕೃತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ

ಸಂಘರ್ಷ ಬ್ರಿಟಿಷ್ ವಸಾಹತುಶಾಹಿ ಆಗಮನ ಕಾಲದಿಂದ ಮಾತ್ರವಲ್ಲ; ಶಿಷ್ಟ ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ – ಜನಪದ – ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

೧ ಕನ್ನಡ ಭಾಷಾ ಅಭಿವೃದ್ಧಿಗಾಗಿ

೨ ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩ ಜಾನಪದ ಅಧ್ಯಯನಕ್ಕಾಗಿ

೪ ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: 'ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ: "ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ 'ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಆನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು: 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು.... ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ.....ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ; ಮನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ – ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ – ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯ ಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಹಿ.ಶಿ.ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯುಗಳು ಮೈಸೂರು ವಿಶ್ವವಿದ್ಯಾಲಯುದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯುವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ–ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಬಿ. ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವನ್ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು, ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ– ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ “ಜಾನಪದ ಸಾಹಿತ್ಯದರ್ಶನ” ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ – ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ

ಮಾಡಿದ್ದಾರೆ.. ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ – ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ , ಧವಳಶ್ರೀ, ಸಿ. ವೀರಣ್ಣ, ಬಿ.ಎಸ್. ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ. ಬೈರೇಗೌಡ, ಚಕ್ಕೆರೆ ಶಿವಶಂಕರ್, ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ ೧೯೬೭ರಲ್ಲಿ ತರೀಕೆರೆಯಲ್ಲಿ, ೧೯೬೯ರಲ್ಲಿ ಮಂಗಳೂರಿನಲ್ಲಿ ಹಾಗೂ ೧೯೭೧ ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ

ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿದ್ದಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇ ಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ

ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

### ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕ ಜಾನಪದವನ್ನು ಸಮಕಾಲೀನ ಜ್ಞಾನ – ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'

**– ರಾಘವಾಂಕ**

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ–ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ

ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಶಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಪುರದ ಪುಣ್ಯ ೬೧.೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿ ಕೊಳ್ಳಲಾಗದ ಕಿರುಸಮುದಾಯಗಳು, ತಳ – ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು ಸಮಕಾಲೀನವಾಗಿ ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೋಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ–ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು. ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತಃ ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು

ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ–ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು

ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವೃತ್ತಿಯಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ– ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೊ ಅಂದಿನಿಂದ ಜನಪದ

ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

## ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ–ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ

ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಅರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ

'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು–ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು..... ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಆಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು

ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ವಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ

ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ – ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ, ಹಳ್ಳಿಯ ಹಾಡು; ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦–೦೨–೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ.

ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರು ಹಾಗೂ ಸಾಹಿತಿಗಳಾದ ಶ್ರೀ ಕಾ.ತ.ಚಿಕ್ಕಣ್ಣರವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ.

ಈ ಸಂಪುಟಗಳು ಅಚ್ಚುಕಟ್ಟಾಗಿ ಹೊರಬರಲು ಜಾನಪದ ತಜ್ಞರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಅವಿರತ ಶ್ರಮ ನೆರವಾಗಿದೆ. ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಬಿ.ಎನ್. ಪರಡ್ಡಿ ಮತ್ತು ಅಕಾಡೆಮಿ ಸಿಬ್ಬಂದಿ ವರ್ಗ ಶ್ರದ್ಧೆವಹಿಸಿ ಬೆಂಬಲಿಸಿದ್ದಾರೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

**ಪ್ರೊ. ಹಿ. ಶಿ. ರಾಮಚಂದ್ರೇಗೌಡ**
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

# ಸಂಪಾದಕರ ಮಾತು

'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ' ಯೋಜನೆಗಾಗಿ ನಾಗಾರಾಧನೆಯ ಹಾಡು'ಗಳು ಸಂಗ್ರಹವನ್ನು ರೂಪಿಸಿದ್ದೇನೆ. ನಾಗಾರಾಧನೆ ದಕ್ಷಿಣ ಭಾರತದ ವಿಶಿಷ್ಟ ಆರಾಧನಾ ಸಂಪ್ರದಾಯವಾಗಿದ್ದು ಕರ್ನಾಟಕಾದ್ಯಂತ ವಿವಿಧ ಸಮುದಾಯಗಳ ನಡುವೆ ಬಹುರೂಪಗಳಲ್ಲಿ ಪ್ರದರ್ಶನಗೊಳ್ಳುತ್ತಿದೆ. ಕರಾವಳಿ ಕರ್ನಾಟಕದಲ್ಲಿ ನಾಗಾರಾಧನೆ ಮೂಲತಃ ಸ್ಥಳೀಯ ಜನರ ಆರಾಧನೆ ಆಗಿದ್ದಿರಬೇಕು ಎನ್ನುವ ಮಹತ್ವದ ಅಭಿಪ್ರಾಯವನ್ನು ರಾಷ್ಟ್ರಕವಿ ಗೋವಿಂದ ಪೈಯವರು ಬಹಳ ಹಿಂದೆಯೇ ಹೇಳಿದ್ದರೂ. ಸಾಮಾಜಿಕವಾಗಿ ಹಿಂದುಳಿದ ಜನವರ್ಗದ ನಡುವೆ ಕಾಡ್ಯನಾಟ, ನಾಗನ ಹುಟ್ಟು, ಸ್ವಾಮಿಕೋಲ ಮುಂತಾದ ಆಚರಣೆಗಳಲ್ಲಿ ನಾಗಾರಾಧನೆ ಅಭಿವ್ಯಕ್ತಗೊಳ್ಳುತ್ತಿದ್ದರೆ ವೈದಿಕ ಆಚರಣೆಗಳಾದ ಆಶ್ಲೇಷಬಲಿ, ನಾಗಮಂಡಲ ನಾಗದರ್ಶನ ಮುಂತಾದ ರೂಪಗಳಲ್ಲಿ ಪ್ರದರ್ಶನಗೊಳ್ಳುತ್ತಿವೆ. ನಾಗನ ಪ್ರೀತ್ಯರ್ಥವಾಗಿ ನಡೆಸುವ ಆಚರಣೆಗಳಿಗಾಗಿ ಕರಾವಳಿಯ ಸುಬ್ರಹ್ಮಣ್ಯ ಕ್ಷೇತ್ರ ಅಖಿಲ ಭಾರತ ಮಟ್ಟದಲ್ಲಿ ಜನಜನಿತವಾಗಿದೆ. ಕರಾವಳಿಯ ಮೇರರ ಕಾಡ್ಯನಾಟ, ವೈದ್ಯರ ಡಕ್ಕೆಬಲಿ, ಪಾಣರ ಪಾಣಾರಾಟಗಳಲ್ಲಿ ನಾಗನ ಕುರಿತು ವೈವಿಧ್ಯಮಯ ಹಾಡುಗಳು ದೊರೆಯುತ್ತವೆ. ಈ ಹಾಡುಗಳ ವಸ್ತು ಆಶಯಗಳು ಮಾನವಶಾಸ್ತ್ರೀಯ ಅಧ್ಯಯನಕ್ಕೆ ಸಮೃದ್ಧ ಆಕರಗಳಾಗುವ ಸಾಧ್ಯತೆಯಿದೆ. ಈ ಬಗೆಗೆ ಸಾಕಷ್ಟು ಅಧ್ಯಯನಗಳು ವಿದ್ವಾಂಸರಿಂದ ನಡೆದಿದೆ. ಪ್ರಸ್ತುತ ಸಂಗ್ರಹದಲ್ಲಿ ನಾಗನ ವಿವಿಧ ಆಚರಣೆಗಳಿಗೆ ಸಂಬಂಧಿಸಿದ ಹಾಡುಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಗಿದೆ. ಜುಂಜಪ್ಪನ ಆರಾಧನೆಯಲ್ಲಿ ಕೇಳಿಬರುತ್ತಿರುವ ಹಾಡುಗಳನ್ನು ಮಿತ್ರರಾದ ಡಾ. ಮೀರಾಸಾಬಿ ಹಳ್ಳಿ

ಶಿವಣ್ಣ ಅವರು ಸಂಗ್ರಹಿಸಿಕೊಟ್ಟಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು. ಈ ಗ್ರಂಥವನ್ನು ಪರಿಶೀಲಿಸಿ ಸೂಕ್ತ ಸಲಹೆ ಸೂಚನೆ ನೀಡಿ ಸಹಕರಿಸಿದ ಹಿರಿಯ ಜಾನಪದ ತಜ್ಞ ಡಾ. ತೀನಂ ಶಂಕರನಾರಾಯಣರಿಗೆ ನನ್ನ ನೆನಕೆಗಳು. ಇದನ್ನು 'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ' ಯೋಜನೆಯಡಿ ಪೋಷಿಸಿ ಪ್ರಕಟಿಸಿದ ಯೋಜನೆಯ ಪ್ರಧಾನ ಸಂಪಾದಕ ಡಾ. ಹಿ.ಶಿ. ರಾಮಚಂದ್ರೇಗೌಡರಿಗೆ ನನ್ನ ನೆನಕೆಗಳು.

ಕರ್ನಾಟಕ ತಿಯೊಲಾಜಿಕಲ್ ಸಂಶೋಧನೆ ಕೇಂದ್ರ
ಬಲ್ಮಠ, ಮಂಗಳೂರು – ೫೭೫ ೦೦೧

**ಪ್ರೊ. ಎ.ವಿ. ನಾವಡ**
ಪ್ರಾಧ್ಯಾಪಕ

# ಪರಿವಿಡಿ


**ಪುಟ ಸಂಖ್ಯೆ**

೧. **ಒಂದನೇ ಭಾಗ**
ನಾಗಮಂಡಲದ ಹಾಡುಗಳು ೧

೨. **ಎರಡನೇ ಭಾಗ**
ಕಾಡ್ಯನಾಟ : ಕಾಳಿಂಗಸರ್ಪಾರಾಧನೆಯ ಹಾಡುಗಳು ೫೭

೩. **ಮೂರನೇ ಭಾಗ**
ಡಕ್ಕೆ ಬಲಿಯ ಹೊಗಳಿಕೆಗಳು ಅಥವಾ
ಪಾಣರಾಟದ ಹಾಡುಗಳು ೨೨೯

೪. **ನಾಲ್ಕನೇ ಭಾಗ**
ಕಾಡುಗೊಲ್ಲರ ಹುತ್ತದ ಪೂಜೆಯ ಹಾಡುಗಳು ೨೩೩

## ಒಂದನೇ ಭಾಗ

# ನಾಗಮಂಡಲದ ಹಾಡುಗಳು

ನಾಗಮಂಡಲ–ಢಕ್ಕೆ ಬಲಿ ದಕ್ಷಿಣ ಕನ್ನಡ ಕರಾವಳಿಯಲ್ಲಿ ಉಳಿದು ಬಂದಿರುವ ಅತ್ಯಂತ ಸುಂದರ ಪ್ರಬುದ್ಧ ಕಲಾತ್ಮಕ ನೃತ್ಯಾಚರಣೆಗಳಲ್ಲಿ ಒಂದು. ನಾಗಮಂಡಲ ನಾಗನಿಗೆ ಹಾಗೂ ಢಕ್ಕೆ ಬಲಿ ಸ್ಥಳೀಯ ಆರ್ಯೇತರ ದೈವಗಳಿಗೆ ಸಂಬಂಧಿಸಿದ ನೃತ್ಯ ಉಪಚಾರ. ಇಂದು ನಾಗಮಂಡಲ ಶುದ್ಧ ವೈದಿಕ ಮತಾಚಾರವಾಗಿ ಬ್ರಾಹ್ಮಣ ಅರ್ಚಕ, ಬ್ರಾಹ್ಮಣ ನಾಗಪಾತ್ರಿ, ಬ್ರಾಹ್ಮಣ ನಾಗನರ್ತಕ, (ವೈದ್ಯ) ಕೂಡುವಿಕೆಯಿಂದ ಮಂತ್ರೋಕ್ತ ಹೋಮ ಹವನಾದಿಗಳ ಹಿನ್ನೆಲೆಯಲ್ಲಿ ನಡೆಯುತ್ತಿದೆಯಾದರೂ ಇದೊಂದು ಆರ್ಯೇತರ ವಿಧಿಯಾಗಿರಬೇಕು. ಇಲ್ಲಿನ ದಕ್ಷಿಣ ಉತ್ತರ ಕರಾವಳಿ ಪ್ರದೇಶಕ್ಕೆ ನಾಗರಖಂಡವೆಂದು ಹೆಸರಿತ್ತಲ್ಲದೆ, ಇಲ್ಲಿ ನಾಗರೆಂಬ ಆದಿವಾಸಿಗಳು ವಾಸಿಸುತ್ತಿದ್ದರು. ಸರ್ಪಕುಲ ಲಾಂಛನವಾಗಿದ್ದ ಈ ಜನರಲ್ಲಿ ಸರ್ಪಾರಾಧನೆ ಒಂದು ಸ್ಥಳೀಕ ಮತಾಚರಣೆಯಾಗಿ ಬಳಕೆಯಾಗುತ್ತಿದ್ದಿರಬೇಕು. ಮುಂದೆ ಈ ನೆಲಕ್ಕೆ ವೈದಿಕ ಧರ್ಮವು ಪ್ರವೇಶವಾಗಿ (ಪ್ರಾಯಶಃ ೭–೮ನೇ ಶತಮಾನ) ನಾಗನ ಆರಾಧನೆ ವೈದ್ಯರ (ಬ್ರಾಹ್ಮಣ) ಪಾಲಿಗೆ ಬಂದಿರಬೇಕು. ಅವರು ತಮ್ಮ ಆರ್ಯ ಪೂಜಾವಿಧಿಯನ್ನು ದೇಶೀಯ ನೃತ್ಯ ಮುಖದಿಂದ ನಡೆಸಿಕೊಂಡು ಬಂದು ಶ್ರೀಮಂತ ಕಲೆಯನ್ನು ಉಳಿಸಿಕೊಂಡು ಬಂದುದು ನಾಡಿನ ಪುಣ್ಯ.

ನಾಗಮಂಡಲ, ಬ್ರಹ್ಮ ಮಂಡಲ, ಢಕ್ಕೆ ಬಲಿಗಳ ನೃತ್ಯ ವಿಧಾನದಲ್ಲಿ ವಿಶೇಷ ವ್ಯತ್ಯಾಸವಿಲ್ಲ. ಅವುಗಳ ಆರಾಧನಾ ಉದ್ದೇಶ ಮಾತ್ರ ಬೇರೆ ಬೇರೆ. ನಾಗನ ಹಾಗೂ ಇತರ ಆರ್ಯೇತರ ದೈವಗಳ ಉಪಚಾರದ ಸಂದರ್ಭಗಳಲ್ಲಿ ಹಾಡುವ ಹಾಡುಗಳು ಹಿಂದೆ ಬೇರೆ ಬೇರೆ ಇದ್ದಿರಬಹುದಾದರೂ ಇಂದು ಬಹುಮಟ್ಟಿಗೆ ಒಂದೇ. ಈ ಪೂಜಾವಿಧಿ ಎಂದಿನಿಂದ ನಮ್ಮಲ್ಲಿ ಮೊದಲಿಟ್ಟಿತು ಎನ್ನುವುದಕ್ಕೆ ಖಚಿತವಾದ ಆಧಾರವಿಲ್ಲ. ಕ್ರಿ.ಶ. ೪೫೮ರ ಬಾರಕೂರಿನ ಶಾಸನದಲ್ಲಿ ಢಕ್ಕೆ ಬಲಿಯ ಉಲ್ಲೇಖ ಸಿಗುತ್ತದೆ. ೧೩ನೆಯ ಶತಮಾನಕ್ಕೆ ಅನ್ವಯಿಸಬಹುದಾದ ನಾಗಮಂಡಲದ ಶಿಲ್ಪವೊಂದು ನಂದಳಿಕೆಯಲ್ಲಿ ದೊರೆತಿದೆ. ಕ್ರಿ.ಶ. ೧೪೦೨ರ ಬಾರಕೂರಿನ ಶಾಸನವೊಂದರಲ್ಲಿ 'ಮಂಡಲ ಭಂಡಾರಿ' ಎಂಬ ಪದಬರುತ್ತದೆ. ಬಹುಶಃ ನಾಗಮಂಡಲ ಸೇವೆಯನ್ನು ನಡೆಸಿಕೊಟ್ಟ ಭಂಡಾರಿಯನ್ನು ಕುರಿತು ಈ ಶಾಸನ ಪ್ರಸ್ತಾಪಿಸಿದ್ದಿರಬೇಕು. ಹೀಗಾಗಿ ಸುಮಾರು ೫೦೦ ವರ್ಷಗಳಿಂದೀಚೆಗೆ ನಾಗಮಂಡಲ ನಡೆದು ಬರುತ್ತಿದೆ ಎಂದು ಖಚಿತವಾಗಿ ಹೇಳಬಹುದು.

ನಾಗಮಂಡಲ ಸಂತಾನದ ಬಯಕೆ ಹಾಗೂ ಕುಷ್ಠರೋಗ ನಿವಾರಣೆಯ ಉದ್ದೇಶದಿಂದ ನಡೆಸಲಾಗುವ ಒಂದು ಆಚರಣ ವಿಧಿ. ಇದನ್ನು ಮಾನವಶಾಸ್ತ್ರಜ್ಞರು ಸಂತಾನೋತ್ಪತ್ತಿಯ ವಿಧಿ ಎಂದು ಗುರುತಿಸುವುದುಂಟು. ನಾಗಮಂಡಲ

ಆಚರಣೆಯ ಅಂಗವಾಗಿ ಮೊದಲಲ್ಲಿ ಯಜಮಾನ ಪುರೋಹಿತರ ನೇತೃತ್ವದಲ್ಲಿ ಶಾಕಾ ಸಂಸ್ಕಾರ (ಹಿಟ್ಟಿನ ನಾಗ ಸಂಸ್ಕಾರ) ನಡೆಸಬೇಕು. ಮುಂದೆ ವಟುಗಳ ಆರಾಧನೆ, ದಾನ, ಸಂಸ್ಕಾರ ಇತ್ಯಾದಿ ನಡೆಯುತ್ತದೆ. ಮಂಡಲದ ದಿನ ಸರ್ವ ಪ್ರಾಯಶ್ಚಿತ್ತವಾಗಿ ಗಣಹೋಮ, ಚಂಡಿಕಾ ಹೋಮ, ಗೋದಾನ, ಭೂದಾನಾದಿಗಳು ನಡೆಯುವುದಿದೆ. ಜೊತೆಗೆ ಜಾತಿಮತ ಭೇದವಿಲ್ಲದೆ ಯಾವುದಕ್ಕೂ ಕೊರತೆಯೆನಿಸದಂತೆ ಬಂದವರೆಲ್ಲರಿಗೂ ಅನ್ನ ಸಂತರ್ಪಣೆ ನಡೆಯಬೇಕು.

ಅಲಂಕಾರಗೊಂಡ ರಂಗದ ಮಧ್ಯಭಾಗದಲ್ಲಿ ನಾಗಮಂಡಲದ ಪ್ರಮಾಣಕ್ಕನುಸರಿಸಿ (ನಾಲ್ಕು ಪವಿತ್ರ ಮಂಡಲ, ಎಂಟು ಪವಿತ್ರ ಮಂಡಲ, ಹನ್ನೆರಡು ಪವಿತ್ರ ಮಂಡಲ, ಹದಿನಾರು ಪವಿತ್ರ ಪೂರ್ಣ ಮಂಡಲ) ಪಂಚವರ್ಣದ ಹುಡಿಯಿಂದ ವೈದ್ಯರು ಏಳು ಹೆಡೆಯ ಸರ್ಪದ ಭೀಮ ಕಮನೀಯ ಆಕೃತಿಯನ್ನು ಸುರುಳಿ ಸುರುಳಿಯಾಗಿ ಪವಿತ್ರ ಗಂಟುಗಳ ಜೋಡಣೆಯಿಂದ ಅತ್ಯಾಕರ್ಷಕವಾಗಿ ಬರೆಯುತ್ತಾರೆ. ಹೆಡೆಯ ಕೆಳಗೆ ವಿಷ್ಣುಪಾದವನ್ನು ಕಪ್ಪು ಬಣ್ಣದಲ್ಲಿ ರೇಖಿಸುತ್ತಾರೆ. ಹೆಡೆಯಿಂದ ಮೇಲೆ ಪ್ರಭಾವಳಿಯ ಕೆಳಗೆ ಬ್ರಹ್ಮನ ಕಪಾಲಕ್ಕೆ ಗಣಪತಿಯ ರೂಪ, ಮಂಡಲದ ಸುತ್ತ ಸುಮಾರು ಮೂರು ಇಂಚು ಅಂಗುಲಕ್ಕೆ ಬಿಳಿ ಪಟ್ಟಿ ಹಾಕಿ ದ್ರಾಕ್ಷಿಯ ಬಳ್ಳಿ, ಎಲೆ ಇತ್ಯಾದಿಗಳನ್ನು ಕಪ್ಪುಬಣ್ಣದಲ್ಲಿ ರೇಖಿಸುತ್ತಾರೆ. ಜಂಗಮ ಸೊಪ್ಪಿನ ಹುಡಿಯಿಂದ ದಂಡೆಕಟ್ಟಿ ಅದರ ಮೇಲೆ ಸ್ವಸ್ತಿಕ ಇರಿಸುತ್ತಾರೆ. ಪಕ್ಕದಲ್ಲೇ ತೆಂಗಿನಕಾಯಿ, ಹಿಂಗಾರ, ಅಡಕೆ, ಬಾಳೆಹಣ್ಣು ಇರಿಸಲಾಗುವುದು. ಪವಿತ್ರಕ್ಕೆ ಒಂದರಂತೆ ಮಂಡಲದ ಸುತ್ತ ಕಾಲು ದೀಪವನ್ನು ಬೆಳಗಿಸಲಾಗುವುದು. ಬಿಳಿಬಣ್ಣದ ಹುಡಿಯಲ್ಲಿ ಮರಿಯ ಚಿತ್ರಣ. ಈ ಮೊಟ್ಟೆಯ ರೇಖೆಯ ಮೇಲೆ ಸೇವಂತಿಗೆ ಇರಿಸುವರು. ಹೆಡೆಯ ತಲೆಯ ಮೇಲೆ ಬಂಗಾರವನ್ನು ಇರಿಸುವುದು ಇದೆ.

ಸೂರ್ಯಾಸ್ತದ ಎರಡು ಮೂರು ಗಂಟೆಗಳ ಬಳಿಕ ನಾಗಮಂಡಲ ನಡೆಯುವ ಜಾಗಕ್ಕೆ ಸಮೀಪದಲ್ಲಿರುವ ನಾಗನ ಬನದಲ್ಲಿ ಹಾಲಿಟ್ಟು ಸೇವೆ ಜರುಗುವುದು. ಪಾತ್ರಿ ಹಾಗೂ ಪುರೋಹಿತರಿಗೆ ಇಲ್ಲಿ ಮುಖ್ಯ ಕಾರ್ಯಭಾಗ. ವೈದ್ಯರು ಡಮರು ನುಡಿಸುವ ಸಲುವಾಗಿ ಹೋಗುತ್ತಾರೆಯೇ ವಿನಾ ತಾಂತ್ರಿಕ ಕ್ರಿಯಾವಿಧಿಯಲ್ಲಿ ಪಾಲ್ಗೊಳ್ಳುವುದಿಲ್ಲ. ಅರಸಿನ, ಅಕ್ಕಿ ಹಿಟ್ಟು, ಹಾಲು ಇವುಗಳ ಮಿಶ್ರಣವನ್ನು ಬನದ ನಾಗನ ಕಲ್ಲಿಗೆ ಅಭಿಷೇಕ, ನೈವೇದ್ಯ, ಮಂಗಳಾರತಿ ಮಾಡುವಷ್ಟರಲ್ಲಿ ನಾಗಪಾತ್ರಿಗೆ ಆವೇಶ ಬಂದು ಥರಥರ ನಡುಗತೊಡಗುತ್ತಾನೆ. ಅಲ್ಲಿಂದ ತಂದ ಬೆಳಕಿಂದ ಮಂಡಲದ ದೀಪಗಳನ್ನು ಬೆಳಗಿಸಲಾಗುವುದು. ಮುಂದೆ ಸುಮಾರು ನಡುರಾತ್ರಿಯ ಹೊತ್ತು ಅರ್ಚಕರಿಂದ ವರ್ಣಮಯ ಮಂಡಲಕ್ಕೆ ಷೋಡಶೋಪಚಾರ ಪೂಜೆ ನಡೆಯುವುದು. ದರ್ಶನ ಪಾತ್ರಿ ನಾಗನನ್ನು ಮನಸ್ಸಿನಲ್ಲಿ

ನೆನೆದುಕೊಳ್ಳುತ್ತಾ ಕೈಯಲ್ಲಿ ಹಿಂಗಾರದ ರಾಶಿಯನ್ನು ಹಿಡಿದು ನಿಂತಿರುತ್ತಾನೆ. ಪಂಚವಾದ್ಯ, ನಾಗಸ್ವರ ಮೊಳಗಿ ಮಂಗಳಾರತಿ ಆಗುತ್ತಿದ್ದಂತೆ ನಾಗಪಾತ್ರಿಗೆ ಆವೇಶ ಬಂದು ಕೈಯಲ್ಲಿನ ಹಿಂಗಾರದ ರಾಶಿಗೆ ಅರ್ಚಕರಿಂದ ನೀರು ಎರೆಯಿಸಿಕೊಂಡು ಮುಖ ಮೈಗಳಿಗೆ ಉಜ್ಜಿಕೊಳ್ಳುತ್ತಾ ಥರಥರ ನಡುಗುತ್ತಾ ಬುಸುಗುಟ್ಟುವ ನಾಗನಾಗಿ ವ್ಯಕ್ತಗೊಳ್ಳುತ್ತಾನೆ. ನಾಗಯಕ್ಷಿಯಿಂದ ಮೈದುಂಬಿಕೊಂಡ ನಾಗಪಾತ್ರಿ ಥರಥರ ನಡುಗುತ್ತಾ ಚಲಿಸತೊಡಗಿದಾಗ ಢಕ್ಕೆ ಬಡಿಯುತ್ತಾ ವೈದ್ಯರ ಪ್ರವೇಶವಾಗುತ್ತದೆ. ವೈದ್ಯರ ಮೇಳದಲ್ಲಿ ಅರ್ಧನಾರಿ ವೇಷತೊಟ್ಟು ಕೈಯಲ್ಲಿ ಕಂಚಿನ ಡಮರು ಢಕ್ಕೆ ಹಿಡಿದವನು ಒಬ್ಬನು. ನಾಗರಿಕ ವೇಷದಲ್ಲಿರುವ ಇನ್ನಿಬ್ಬರಲ್ಲಿ ಒಬ್ಬನ ಕೈಯಲ್ಲಿ ಮರದ ಢಕ್ಕೆ ಇದ್ದರೆ ಇನ್ನೊಬ್ಬ ತಾಳ ಬಾರಿಸುತ್ತಿರುತ್ತಾನೆ.

ಹಿಮ್ಮೇಳದ ಹಾಡುಗಾರರು ಕೆಲವೊಮ್ಮೆ ಕನ್ನಡ ಹಾಡುಗಳನ್ನು ಇನ್ನು ಕೆಲವೊಮ್ಮೆ ಸಂಸ್ಕೃತದ ಶ್ಲೋಕಮಾದರಿಯ ಹೊಗಳಿಕೆಯನ್ನು ಢಮರುವಿನ ನುಡಿತದೊಂದಿಗೆ ಹಾಡತೊಡಗಿದಂತೆ ಅರ್ಧ ನಾರಿ ಅದನ್ನು ಪುನರುಚ್ಚರಿಸುತ್ತಾ ಬಗೆಬಗೆಯ ತಾಳಗತಿಯಲ್ಲಿ ಕುಣಿಯುತ್ತಾ ತನ್ನ ಕಂಚಿನ ಢಮರುವನ್ನು ನುಡಿಸತೊಡಗುತ್ತಾನೆ. ಢಕ್ಕೆಯ ನುಡಿತದ ನಡೆಗೆ ತಕ್ಕಂತೆ ಕುಣಿದು ಕುಪ್ಪಳಿಸುತ್ತಾ ಮಂಡಲಕ್ಕೆ ಸುತ್ತು ಬರುವ ಕುಣಿತವಂತೂ ಚಿತ್ತಾಕರ್ಷಕ. ಯಕ್ಷಗಾನದ ಬಹು ಬಗೆಯ ಕುಣಿತ ಮಣಿತ ಬಾಗು ಬಳುಕುಗಳನ್ನು ಇಲ್ಲಿ ಗುರುತಿಸಬಹುದು.

ಕೈಯಲ್ಲಿ ಡಮರು, ಅರ್ಧನಾರೀಶ್ವರ ಕಲ್ಪನೆ, (ರೌದ್ರರೂಪಿ ನಾಗ) ಪುರುಷನನ್ನು ಹಾಡಿ ಹೊಗಳಿ ಒಲಿಸಿಕೊಳ್ಳುವ ನರನಾರಿ ವೇಷದ ವೈದ್ಯ ಪ್ರಕೃತಿ ಎಲ್ಲವೂ ಸ್ಥಳೀಕ ದ್ರಾವಿಡ ಆಚರಣೆಯ ಮೇಲೆ ಆದ ಆರ್ಯ ಶೈವ ಧರ್ಮದ ಪ್ರಭಾವವಿರಬೇಕೆಂಬ ಡಾ. ಕೆ. ಶಿವರಾಮ ಕಾರಂತರ ಅಭಿಪ್ರಾಯ ಗಮನಾರ್ಹ ವಾದುದು. ಅವೈದಿಕ ಪ್ರವೃತ್ತಿಗೆ ಸಂಬಂಧಪಟ್ಟ ತಾಂತ್ರಿಕ ಪಂಥದಲ್ಲಿ ಪ್ರಕೃತಿಗೆ ಅಥವಾ ಸ್ತ್ರೀ ತತ್ವಕ್ಕೆ ಹೆಚ್ಚು ಒತ್ತು ಇರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಪ್ರಪಂಚದ ಆದಿಮಸಮಾಜದ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರು ಎಲ್ಲಾ ವಿಧಿ ಆಚರಣೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ತಾಂತ್ರಿಕರಲ್ಲಿ ಭೈರವಿಯರಿಗೆ ಮತ್ತು ಯೋಗಿನಿಯರಿಗೆ ಪ್ರಮುಖ ಸ್ಥಾನವಿದ್ದಿತು. ತಾಂತ್ರಿಕರಲ್ಲಿ ಅನೇಕ ಜನ ಪುರುಷರಿದ್ದರೂ ಕೂಡ ಅವರು ಯಾರೂ ತಾಂತ್ರಿಕ ಆಚರಣೆಯಲ್ಲಿ ಪುರುಷ ಸ್ವರೂಪದಲ್ಲಿ ಭಾಗವಹಿಸುತ್ತಿರಲಿಲ್ಲ. ಸ್ತ್ರೀಯ ಉಡುಗೆ ತೊಡುಗೆಯನ್ನು ತೊಡುವಮೂಲಕ ಆಚರಣೆಯನ್ನು ನಡೆಸುತ್ತಿದ್ದರು. ನಾಗಮಂಡಲ ಮೂಲತಃ ಒಂದು ತಾಂತ್ರಿಕ ವಿಧಿಯಾಗಿದ್ದು, ಫಲ ಸಮೃದ್ಧಿಯ ಆಚರಣೆ. ಇತರೆಡೆಯೂ ಈ ಬಗೆಯ ಸಂತಾನೋತ್ಪತ್ತಿಯ ಸಂಬಂಧಿ ಆಚರಣೆಗಳಲ್ಲಿ ಗಂಡಸರೇ ಹೆಂಗಸರ

ವೇಷತೊಟ್ಟು ಕುಣಿಯುವುದಿದೆ. ಸ್ತ್ರೀಯರೇ ಇದರಲ್ಲಿ (ಫಲ ಸಮೃದ್ಧಿ ಆಚರಣೆ) ಭಾಗವಹಿಸಿ, ಪೂಜಾರಿಣಿಯರಾಗಿ ಸೇವೆ ಸಲ್ಲಿಸುತ್ತಿದ್ದ ಕಾಲವು ಇದ್ದಿದ್ದು ಪುರುಷ ಪ್ರಪಂಚ ಈ ಹಕ್ಕನ್ನು ಸ್ತ್ರೀಯರಿಂದ ಕಸಿದುಕೊಂಡು ಅನುಕರಣೆಯನ್ನು ಮತಾಚಾರದ ಒಂದು ವಿಧಿಯಾಗಿ ಮಾಡಿಕೊಂಡಿರಬೇಕು.

ಕೊನೆಯಲ್ಲಿ ಪೂಜೆ ನಡೆದು ಪ್ರಸಾದ ವಿತರಣೆಯಾಗುತ್ತದೆ. ಮಾನವ ಭಾವದ ಪ್ರಕಾಶನ, ಮೊದಲು ಕುಣಿತ, ಬಳಿಕ ಮಾತಿನ ಮೂಲಕ ಆಗಿರಬೇಕು. ಮನುಷ್ಯನ ಬದುಕನ್ನು ತೀವ್ರ ಸಂವೇದನೆಗೊಳಗಾಗಿಸುವ ಹುಟ್ಟು ಸಾವು ಮತ್ತು ಇವುಗಳ ನಡುವೆ ಅವನಿಗೆ ಉಂಟಾಗುವ ನಾನಾ ತರಹದ ಅನುಭವಗಳಿಗೆ ಒಂದು ಸಮುದಾಯ ಚಲನೆಯ ಮೂಲಕ ವ್ಯಕ್ತ ಪಡಿಸುವ ಪ್ರತಿಕ್ರಿಯೆಯಾಗಿ ನೃತ್ಯ ಹುಟ್ಟಿಕೊಂಡಿತು. ಕುಣಿತದಿಂದ ಅವನು ಸಾಧಿಸಬಹುದಾದದ್ದು ವಿವಿಧ ಭಾವರಸಗಳ ಆವಿಷ್ಕಾರವನ್ನು ತರಂಗಿತತೆ ಇದಕ್ಕೆ ಮೂಲ ಬಂಡವಾಳ. ಅಂದರೆ ಈ ಕುಣಿತ ಆತ್ಮ ತೃಪ್ತಿಯ ಹಿಗ್ಗಿನ ಆಂತರಿಕ ಪ್ರೇರಣೆಯ ಅಭಿವ್ಯಕ್ತಿ. ಜನಪದ ರಂಗಭೂಮಿ ಮೂಲ ಸ್ವರೂಪವನ್ನು ಇಂತಹ ಕುಣಿತಗಳಲ್ಲಿ ವಿದ್ವಾಂಸರು ಗುರುತಿಸಿದ್ದು, ಸ್ಥಳೀಯ ಮತಾಚಾರಗಳೇ ಇಂತಹ ಕಲೆಗಳಿಗೆ ಪ್ರೇರಕವೆನ್ನುವ ಅಭಿಪ್ರಾಯ ಇದೀಗ ಸರ್ವಸಮ್ಮತ. ಆಯಾ ದೇವತೆಯನ್ನು ಒಲಿಸಿ, ನಲಿಸಿ, ಮೊರೆಯಿಡುವ ಸಂದರ್ಭದ ಭಾವ ವೈವಿಧ್ಯಗಳಿಗೆ ತಕ್ಕಂತೆ ನೃತ್ಯ, ಗೀತವಾದ್ಯಗಳ ನುಡಿತ ಬಡಿತಗಳಲ್ಲಿಯೂ ವೈವಿಧ್ಯ ತಲೆ ಹಾಕಿತು.

ನೈಸರ್ಗಿಕ ಶಕ್ತಿಗಳ ಗೂಢತೆಯು ಅನೇಕ ಮತಾಚಾರಗಳನ್ನು ಸೃಷ್ಟಿಸಿತು. ಪೀಡೆಕೊಡುವ ದೈವ ದೇವರುಗಳನ್ನು ಒಲಿಸುವ ಸಲುವಾಗಿ ಹಾಡು ಕುಣಿತಗಳನ್ನು ಬಳಸಿಕೊಂಡು ಊರೆಲ್ಲ ಒಂದಾಗಿ ಹಬ್ಬಗಳ ಆಚರಣೆಗೆ ಜನ ತೊಡಗಿರಬೇಕು. ಮುಂದೆ ತಮ್ಮಲ್ಲೇ ಆಚಾರವಂತನೂ ಅನುಕರಣಶೀಲನೂ ಆದ ಒಬ್ಬನನ್ನು ದೇವರ ಪಾತ್ರಿಯೆಂದೂ ಪೂಜಾರಿಯೆಂದೂ ಕರೆದು ಅವನಿಗೆ ದೈವದ ಗುಣಶೀಲವನ್ನು ಪ್ರತಿನಿಧಿಸುವಂತೆ ಅಲಂಕಾರ ಮಾಡಿ, ಗೀತ ನೃತ್ಯಗಳ ಮೂಲಕ "ದೈವ"ವನ್ನು ಒಲಿಸಿಕೊಳ್ಳುವ ಪ್ರಯತ್ನ ನಡೆದಿರಬೇಕು. ದೈವನನ್ನು ಕುಣಿಸಲು ತಮ್ಮಲ್ಲೇ ಒಬ್ಬ ಕುಣಿತಗಾರನನ್ನೂ ಹಾಡುಗಾರನನ್ನೂ ರೂಪಿಸಿಕೊಂಡಾಗ ಅದು ನಾಟಕದ ರೂಪಕ್ಕೆ ಹತ್ತಿರವಾಗುತ್ತ ಬಂತು. ಯಕ್ಷಗಾನದಲ್ಲಿ ಇರುವಂತೆ ಒಂದು ಕಥಾನಕವನ್ನು ಸಂಭಾಷಣೆಯಲ್ಲಿ ನಿರೂಪಿಸದೆ ಹೋದರೂ ಶೃಂಗಾರ, ಕರುಣ, ರೌದ್ರ ಮೊದಲಾದ ಬಗೆಬಗೆಯ ರಸಗಳನ್ನು ಪ್ರಕಾಶಗೊಳಿಸಿ, ನಾಗನಿಗೋ ಅಥವಾ ಇನ್ನೊಂದು ದೈವಕ್ಕೋ ಸಂಬಂಧಪಟ್ಟ ಸಾಹಿತ್ಯವಾಗಿ ಸಮೀಪವಾಗುತ್ತದೆ. ಡಾ. ಶಿವರಾಮ ಕಾರಂತರು ಒಂದೆಡೆ ಹೇಳಿದಂತೆ ಈ "ನೃತ್ಯದಲ್ಲಿ ನಟನ ಮುಖಭಾವವನ್ನು

ಕಾಣುತ್ತೇವೆ. ಶರೀರ ವಿನ್ಯಾಸದಲ್ಲಿ ವಿವಿಧ ಭಂಗಿಗಳನ್ನು ಕಾಣುತ್ತೇವೆ. ಪದಗತಿಗೆ ಹೊಂದಿಕೊಂಡು ಹಸ್ತಗಳಲ್ಲಿಯೂ, ತೋಳುಗಳಲ್ಲಿಯೂ ತರಂಗಿತಗತಿಯನ್ನು ಕಾಣುತ್ತೇವೆ. ಒಂದು ಬಗೆಯ ಭಾವ ಪ್ರದರ್ಶನವೂ ಇದೆ. ರಂಗಭೂಮಿಯ ಬಿಂಬವನ್ನು ಇಲ್ಲಿ ಕಾಣಬಹುದು. ಮೂಲತಃ ನಾಗಮಂಡಲ ಢಕ್ಕೆ ಬಲಿ ತುಳುನಾಡಿನ ಭೂತರಾಧನೆಯಂತೆಯೇ ಆರಾಧನಾ ರೂಪದ ತಾಂತ್ರಿಕ ವಿಧಿ. ಆದರೆ ಯಾವುದೇ ಲಿಖಿತ ರೂಪವನ್ನು ಪಡೆಯದೆ ಪ್ರಯೋಗದಲ್ಲೇ ತನ್ನ ಅಸ್ತಿತ್ವವನ್ನು ಕಾಣುವ ಇಲ್ಲಿ ರಂಗಸಜ್ಜಿಕೆ, ರಂಗ ಪರಿಕರ, ನಟನೆ, ಹಾಡು, ಕುಣಿತಗಳಿಂದ ಕಲಾಪ್ರಕಾರ ಸಂಪೂರ್ಣತೆಯನ್ನು ಪಡೆಯುತ್ತದೆ.

ಆಧುನಿಕ ನೃತ್ಯನಾಟಕದ ಎಲ್ಲ ಲಕ್ಷಣಗಳು ಇಲ್ಲಿ ಕಾಣಿಸದಿದ್ದರೂ ಕೇರಳದ, ಒಟ್ಟಂತುಳ್ಳಲ್, ಮೋಹಿನಿ ಅಟ್ಟಂ, ಕುಡಿಯಾಟಂ, ಕಥಕ್ಕಳಿಗಳಿಗೆ ನಾಗಮಂಡಲ ದಾಯಾದಿಯಾಗುತ್ತದೆ. ಇಲ್ಲಿ ತೀರಾ ಸಂಕೀರ್ಣವಾದ ಕಥಾನಕ ಇಲ್ಲವಾದರೂ ಹಾಡುಗಾರ ವಿವಿಧ ಭಂಗಿಗಳ ಕುಣಿತ, ಮಣಿತ, ನಾಗಪಾತ್ರಿಯ ಸೀಮಿತ ರೌದ್ರ ಭಾವಾಭಿನಯಗಳಿಂದಾಗಿ ನೃತ್ಯನಾಟಕವೇ ಆಗುತ್ತದೆ. ಭೂತಾರಾಧನೆ ಹಾಗೂ ಯಕ್ಷಗಾನಗಳಲ್ಲಿ ಕಾಣಿಸುವಂತೆ ಮಾತು ಮಾತ್ರ ಇಲ್ಲ. ಯಾವುದೇ ಜನಪದ ಕಲಾಪ್ರಕಾರಕ್ಕೆ ಮಾತು ಕೊನೆಗೆ ಅಂಟಿಕೊಂಡಿತು ಎಂಬುದನ್ನು ಇಲ್ಲಿ ಗಮನಿಸಬೇಕು.

ಒಂದು ಕಲೆಯ ಹಿರಿಮೆ ನಿಂತಿರುವುದು ಅದು ಸಾಧಿಸುವ ಭಾವ ಪ್ರಕಟಣೆಯ ಮೇಲೆ. ಮನಸ್ಸಿಗೆ ಅದು ಕೊಡುವ ನೆಮ್ಮದಿ, ಆನಂದ, ಮೇಲಾಗಿ ಹೃದಯ ಸಂಸ್ಕಾರ ಅದರ ಉದ್ದೇಶ. ಒಂದು ಕಾಲದ ಜನಕ್ಕೆ ಕಲೆ ಬರಿಯ ಹೊಟ್ಟೆಪಾಡಿನ ಮಾಧ್ಯಮವಾಗದೆ ತಮ್ಮ ಭಕ್ತಿ ಶ್ರದ್ಧೆ, ಅನುಭಾವ, ಸಾಹಿತ್ಯ ಶಕ್ತಿಗಳನ್ನು ಪ್ರಕಟಿಸುವ ಅನಿವಾರ್ಯ ಮಾಧ್ಯಮವಾಯಿತು. ಹೀಗಾಗಿ ಅದು ಮತ ಧರ್ಮಗಳಿಂದ ಪ್ರೇರಣೆ ಪಡೆಯಿತು. ನೃತ್ಯಗೀತ, ಮಾತು, ಚಿತ್ರಗಳ ಕೂಟದಿಂದ ಸಮ್ಮಿಶ್ರ ಕಲೆಯಾಗಿ ಸೌಂದರ್ಯಾಶಯವನ್ನು ರೂಢಿಸಿಕೊಂಡು ಬೆಳೆದುಬಂದಿತು. ಇನ್ನು ಕೆಲವರು ಅದರಲ್ಲಿ ಪಾಲುಗೊಂಡು ಸಹಸ್ರ ಸಹಸ್ರ ಜನ ವರ್ಷ ವರ್ಷವೂ ಇಂತಹ ಆಚರಣೆಗಳಿಗೆ ಪ್ರೇಕ್ಷಕರಾಗಿ, ಆತ್ಮ ಸಂತೃಪ್ತಿಯನ್ನೂ ಹಿಗ್ಗನ್ನೂ ಪಡೆದರು.

ಢಕ್ಕೆ ಬಲಿ ಸಾಮಾನ್ಯವಾಗಿ ದೈವದ ಮನೆಯ ಎದುರು ನಡೆದರೆ ನಾಗಮಂಡಲ ಇಂಥಲ್ಲೇ ನಡೆಯಬೇಕೆಂಬ ನಿಯಮವಿಲ್ಲ. ಸಹಸ್ರಾರು ಜನ ಕುಳಿತು ನೋಡಬಲ್ಲ ಸಾಮಾನ್ಯವಾಗಿ ಗದ್ದೆಯನ್ನೇ ರಂಗಸ್ಥಳವಾಗಿ ಮಾರ್ಪಾಡಿಸಿಕೊಳ್ಳ ಲಾಗುತ್ತದೆ. ಮನೆ ತನದ ತಂಬಿಲ, ಸಂಸ್ಕಾರ, ದೈವಗಳಿಗೆ ಭೋಗ ನಡೆಯುತ್ತಿದ್ದುದು ಮುಂದೆ ಗ್ರಾಮ ಮಟ್ಟದಲ್ಲಿ ನಾಗಮಂಡಲವಾಗಿ ಢಕ್ಕೆ ಬಲಿಯಾಗಿ ಬೆಳೆದಿರಬೇಕು. ದೈವದ ಪಾತ್ರಿ ಅಥವಾ ನಾಗನ ಪಾತ್ರಿಗೆ ದೇವಸ್ಥಾನಗಳಲ್ಲಿ, ನಾಗಬನಗಳಲ್ಲಿ

ಸೀಮಿತವಾಗಿದ್ದ ಆಚರಣೆ ಕಲಾಪರಿಣಿತ ಬೈದ್ಯನ ಅಥವಾ ಪಾಣನಂತಹ ವೃತ್ತಿ ಪರಿಣಿತರ ಕೈಯಲ್ಲಿ ಸಿಕ್ಕಿ ವೈಭವೀಕರಣಗೊಂಡಿತು. ಅಷ್ಟೆ ಅಲ್ಲ, ಜನಪದ ರಂಗಭೂಮಿಯಾಗಿ ಬೆಳೆಯಿತು. ಭಕ್ತರು ಬರಿಯ ಶ್ರದ್ಧೆ ಭಾವುಕತೆಗಳಿಂದ ನೋಡುವ ಈ ಬಗೆಯ ಮತಾಚಾರಗಳಲ್ಲಿ ರಂಗ ಪರಿಕರ, ವೇಷ ಭೂಷಣ, ನೃತ್ಯಗೀತೆಗಳು ಬೆಸೆದು ಸ್ವಯಂಪೂರ್ಣ ನೃತ್ಯನಾಟಕವನ್ನು ಹೋಲುವಂತಾಯಿತು.

**ರಂಗ ಸಜ್ಜಿಕೆ ರಂಗಪರಿಕರ :**

ವಿಶಾಲವಾದ ಬಯಲು. ನಡುವಿನಲ್ಲಿ ಎತ್ತರಿಸಿದ ವೇದಿಕೆ. ನಾಗಮಂಡಲದ ಪ್ರಮಾಣಕ್ಕನುಸರಿಸಿ ನೇರ್ಪಟ್ಟರಂಗ. (ಸುಮಾರು ೨೦ ಕೋಲು ಚಚ್ಚೌಕ) ರಂಗದ ನಡುವೆ ಕಂಬಾಕಾರದ ಚಪ್ಪರ. ಚಪ್ಪರದ ಕೆಳಗೆ ಮೇಲ್ಕಟ್ಟು ವಸ್ತ್ರದ ಜಾಲರಿ. ಇಳಿಬಿಟ್ಟ ನಿರಿಯೋಲಿ. ತಾಪ್ರಿಮಿಟ್ಟ (ತಾವರೆ ಮೊಗ್ಗು) ತಾಪ್ರಿ ಹೂಗಿಳಿ ಮುಂತಾದ ರಚನೆಗಳು ಮೇಲುಗಟ್ಟಿನಿಂದ ನೇತುಬಿಟ್ಟಿರುತ್ತವೆ. ಮಂಡಲದ ಮಧ್ಯಭಾಗದಲ್ಲಿ ವೈದ್ಯರು ಪಂಚವರ್ಣದ (ಕೆಂಪು, ಕಪ್ಪು, ಹಳದಿ, ಬಿಳಿ, ಹಸುರು) ಹುಡಿಯಿಂದ ಏಳು ಹೆಡೆಯ ಸರ್ಪದ (ಕೊಳನಾಗ, ಕುಳಿಕ, ಕಾಡ್ಯ) ಸುಂದರ ಆಕೃತಿಯನ್ನು ಸುರುಳಿ ಸುರುಳಿಯಾಗಿ ಪವಿತ್ರ ಗಂಟುಗಳ ಜೋಡಣೆಯಿಂದ ಅತ್ಯಾಕರ್ಷಕವಾಗಿ ಬರೆಯುತ್ತಾರೆ. ಎಂಟು ಅಥವಾ ಹದಿನಾರು ಎತ್ತರ ಕಾಲು ದೀಪಗಳನ್ನು ಬೆಳಗಿಸಲಾಗುವುದು. ಅದರ ಹಿಂದೆ ಅಕ್ಕಿ, ಸೀಯಾಳ. ಹಿಂಗಾರಗಳ ದೊಡ್ಡ ಗುಡ್ಡೆ ಬಿದ್ದಿರುತ್ತದೆ. ಹಿಂದೆ ರಂಗದ ನಾಲ್ಕು ಮೂಲೆಯ ಕಂಬಗಳಿಗೆ ಹೊನ್ನೆಣ್ಣೆಯ ದೀವಟಿಗೆಗಳನ್ನು ಕಟ್ಟುತ್ತಿದ್ದರಂತೆ. ಅದುವೆ ರಂಗವನ್ನು ಬೆಳಗುತ್ತಿದ್ದ ಬೆಳಕು. ಸುತ್ತೆಲ್ಲ ಕುಳಿತಿರುವ ಸಹಸ್ರ ಸಹಸ್ರ ಜನ ಪ್ರೇಕ್ಷಕರು, ಭಕ್ತರು.

**ವಾದ್ಯ :**

ರಂಗಕ್ರಿಯೆಗೆ ಪೂರಕವಾಗಿ ಭಾವಾಭಿವ್ಯಂಜನದಲ್ಲಿ ವಾದ್ಯಗಳ ಪಾತ್ರ ಹಿರಿದಾದುದು. ಜನಪದ ನೃತ್ಯ ನಾಟಕಗಳಲ್ಲಿ ಬಳಸುವುದು ಕೆಲವೇ ಕೆಲವು ಸರಳ ವಾದ್ಯಗಳಾದರೂ ಪರಿಣಾಮದಲ್ಲಿ ಅವೇನೂ ಕಡಿಮೆಯಿಲ್ಲ. ನಾಗಮಂಡಲಕ್ಕೆ ಬಲಿಯಲ್ಲಿ ಬಳಸುವ ವಾದ್ಯವೆಂದರೆ ಮರದ ಢಕ್ಕೆ. ಕುಣಿಸುವ ವೈದ್ಯನ ಕೈಯಲ್ಲಿ ಕಂಚಿನ ಢಕ್ಕೆ, ತಾಳ, ಚಕ್ರತಾಳ, ವೈದ್ಯನ ಕೈಯಲ್ಲಿರುವುದು, ಜೊತೆಗಿರುವ ಇಬ್ಬರು ಮೇಳದವರ ಕೈಯಲ್ಲಿ ತಾಳ ಹಾಗೂ ಚಕ್ರ ತಾಳಗಳಿರುತ್ತವೆ. ಢಕ್ಕೆ ತುಳುನಾಡಿನ ದುಡಿಯನ್ನು ಹೋಲುತ್ತದೆ. ಈ ಜನಪದ ವಾದ್ಯವು ಆಧುನೀಕರಣದ ಫಲವಾಗಿ ಶಿವನ ಕೈಯಢಮರಿನ ರೂಪ ತಾಳಿತೊ ಏನೋ. ಢಮರು ನಾದ ತರಂಗಗಳನ್ನು ಹೊಮ್ಮಿಸುತ್ತದೆ. ಇದುವೇ ಮುಂದೆ ಯಕ್ಷಗಾನದ ಮೃದಂಗಕ್ಕೆ ಪ್ರೇರಣೆಯಾಗಿರ ಬಹುದು. ಢಕ್ಕೆಯಲ್ಲಿ ಮದ್ದಲೆಯ ಎಲ್ಲಾ ನುಡಿತಗಳು ಸ್ಪಷ್ಟವಾಗಿ ಕಂಡುಬರದಿದ್ದರೂ,

ತಾಳಗಳ ವಸ್ತುಗಳು, ಬಿಡ್ತಿಗೆಗಳು, ಚಾಲುಗಳು, ಯಕ್ಷಗಾನದಲ್ಲಿದ್ದಂತೆಯೇ ಇವೆ. ವೈದ್ಯರು ಬಳಸುವ ಚಕ್ರತಾಳ ಹಾಗೂ ಅದನ್ನು ಬಾರಿಸುವ ಕ್ರಮಕ್ಕೂ ಸಾಮ್ಯ ಇದೆ. ಅಲ್ಲಿ ಚೆಂಡೆಯೊಡನೆ ಅದು ಮೇಳಗೊಂಡು ವಿಶೇಷ ನಾದ ತರಂಗಿತತೆಯನ್ನು ಸೃಷ್ಟಿಸುವಂತೆಯೇ ಇಲ್ಲಿ ಢಮರುವಿನೊಡನೆ ಇದು ವರ್ತಿಸುತ್ತದೆ.

**ವೇಷಭೂಷಣ :**

ನಾಗಮಂಡಲ ವೇಷಭೂಷಣ ತೀರಾ ಸಂಕೀರ್ಣವಲ್ಲ, ಅರ್ಧನಾರಿ ವೇಷದ ವೈದ್ಯನಾದವನು ಯಕ್ಷಗಾನ ಬಡಗುತಿಟ್ಟಿನ ಸ್ತ್ರೀವೇಷದ ಕೆಂಪು ಬಣ್ಣದ ಚೌಕುಳಿ ಸೀರೆ, ಕಾಲಿಗೆ ಪಾಡಗ ಗೆಜ್ಜೆ, ಎದೆಗೆ ತೋಳಿಲ್ಲದ ರವಕೆ, ಕೊರಳಿಗೆ ಗುಂಡುಸರ, ಸೊಂಟಕ್ಕೆ ಬೆಳ್ಳಿಪಟ್ಟಿ, ಚಿನ್ನದ ಕಡಗ, ತಲೆಗೆ ಮುಂಡಾಸು, ಅದರ ಸುತ್ತ ಜರಿ ರುಮಾಲು, ಅದರ ತುದಿಗೆ ಕೋರೆಬಂಗಾರ ಇದಿಷ್ಟು ಅವರ ವೇಷಭೂಷಣ. ಹಿಂದೆ ಮೈಮೇಲೆ ರವಿಕೆ ಹಾಕಿಕೊಳ್ಳದೆ ಬರಿಮೈ ಮೇಲೆ ಬ್ರಹ್ಮ ವಸ್ತ್ರವನ್ನು ಹಾಕಿಕೊಳ್ಳುತ್ತಿದ್ದರಂತೆ. ಈ ವೇಷವನ್ನು ಕಸೆವೇಷವೆಂದು ಕರೆಯುವುದೂ ಉಂಟು.

ನಾಗನನ್ನು ಆವಿರ್ಭವಿಸಿಕೊಳ್ಳುವ ಬ್ರಾಹ್ಮಣ ಪಾತ್ರಿಗಾಗಲೀ ದೈವವನ್ನು ತನ್ನಲ್ಲಿ ಮೈದುಂಬಿಕೊಳ್ಳುವ ಪಾತ್ರಿಗಾಗಲೀ ವಿಶೇಷ ವೇಷ ಭೂಷಣಗಳಿಲ್ಲ. ಮುಂಗೈಗೆ ಕಡಗ, ಮೈಗೆ ಕೆಂಪು ಪಟ್ಟಿ, ಕೆದರಿದ ಕೂದಲು ಕುಣಿತಕ್ಕೆ ಭಯಾನಕತೆಯನ್ನೂ ರೌದ್ರತೆಯನ್ನೂ ತುಂಬಿಕೊಡುತ್ತದೆ. ತೆಕ್ಕೆ ತುಂಬ ಒತ್ತಿಕೊಂಡಿರುವ ಹಿಂಗಾರದ ಹೂಗಳನ್ನು ಮುಖಕ್ಕೆ ಆಗಿಂದಾಗ್ಗೆ ತರುಬಿಕೊಳ್ಳುತ್ತಿರುವುದರಿಂದ ಅದರ ಕಾಳುಗಳು ಮುಖದಲ್ಲಿ ಒತ್ತೊತ್ತಾಗಿ ಅಂಟಿಕೊಂಡು ಪ್ರೇಕ್ಷಕ ವರ್ಗಕ್ಕೆ ನಾಗನ ಮುಖ ಗಾಂಭೀರ್ಯವನ್ನು ನೆನಪಿಗೆ ತರುವಲ್ಲಿ ಯಶಸ್ವಿಯಾಗುತ್ತದೆ. ಹಾಡುಗಾರ ವೈದ್ಯ (ಹಿಮ್ಮೇಳ) ಬಿಳಿ ಧೋತರವನ್ನು ಕಚ್ಚೆ ಹಾಕಿ ಉಟ್ಟು ಮೇಲೆ ಬಿಳಿ ಅಂಗಿ ತೊಟ್ಟು ಸಾಮಾನ್ಯ ನಾಗರಿಕನ ವೇಷಭೂಷಣದಲ್ಲೇ ಇರುತ್ತಾನೆ.

ನಾಗಮಂಡಲದಲ್ಲಿ ರಂಗದ ನಡುವೆ ಚಿತ್ತಾರದ ನಡುವೆ ಕುಣಿಯುವರಷ್ಟೇ. ಯಕ್ಷಗಾನದಲ್ಲೂ ಅದೇ ಬಗೆಯ ವೃತ್ತಮಂಡಲ ಚಲನೆ ಇರುವುದನ್ನು ಗಮನಿಸಬೇಕು. ನಾಗಮಂಡಲದ ಅರ್ಧನಾರಿ ಶೈವ ಧರ್ಮದ ಕಲ್ಪನೆ ಇರಬೇಕು. ಪ್ರಕೃತಿ ಎಂಬ ಹೆಣ್ಣು ಪುರುಷವೆಂಬ ಗಂಡನ್ನು ಒಲಿಸುವ ಬಗೆ ಇಲ್ಲಿ ನೃತ್ಯ ರೂಪವನ್ನು ತಾಳಿರಬೇಕು. ನಾಗಮಂಡಲ ಢಕ್ಕೆಬಲಿಗಳಲ್ಲಿ ಸಂಕೇತವಾಗಿರುವ ನಾಗ ಅಥವಾ ದೈವದ ಪಾತ್ರಿಯನ್ನು ಪುರುಷನಾಗಿ ಚಿತ್ರಿಸಿ, ಅದನ್ನು ಒಲಿಸುವ ಕೆಲಸ ಪ್ರಕೃತಿಗೆ ಅರ್ಧನಾರೀ ವೈದ್ಯನಿಗೆ ಒಪ್ಪಿಸುವ ಒಂದು ಕಲ್ಪನೆ ಇಲ್ಲಿದ್ದಂತೆ ಕಾಣುತ್ತದೆ. ಕಾರಂತರು ಹೇಳುವಂತೆ ಪ್ರಕೃತಿ ಸ್ತ್ರೀ ಸ್ವರೂಪ. ವಾತ್ಸಲ್ಯದಿಂದ ವಯ್ಯಾರ, ವಿಲಾಸ,

ರೌದ್ರ ಎಲ್ಲವನ್ನೂ ಅಳವಡಿಸಿಕೊಳ್ಳಬಲ್ಲ ತತ್ವಜ್ಞಾನದ ಸ್ವರೂಪವು ಅವಳ ಕಲ್ಪನೆಗೆ ಕಾರಣವಾಗಿದೆ. ಇದರಿಂದ ಭಾವನೆಯ ಸೂಕ್ಷ್ಮಕ್ಕೂ ವಿವಿಧ ಬೆಳವಣಿಗೆಗೂ ಅವಕಾಶವಿದೆ. ಪೌರಾಣಿಕ ಕಥಾವಸ್ತುವಿಗೂ ಅವಕಾಶವಿದೆ. ಕಲೆಯ ವಿಕಾಸಕ್ಕೆ ಬೇಕಾದಂಥ ಸಂಸ್ಕೃತಿಯ ವಿಸ್ತಾರವಿದೆ. (ಶಿವರಾಮ ಕಾರಂತ – ದ.ಕ. ಜಿಲ್ಲೆಯಲ್ಲಿ ನೃತ್ಯ ಕಲೆಯ ವಿಕಾಸ : ಬಿಡಿ ಬರಹಗಳು ಪುಟ : ೧೨೧೪೨)

ನಾಗಮಂಡಲ (ಹೊಡಿಸೇವೆ) ಅಥವಾ ಢಕ್ಕೆ ಬಲಿಯ ವೇದಿಕೆಯ ಮೇಲೆ ಬರೆದ ಚಿತ್ತಾರದ ಸುತ್ತ ಪಾತ್ರಿ ಮತ್ತು ವೈದ್ಯರು ಅಂದರೆ ಪುರುಷ ಮತ್ತು ಪ್ರಕೃತಿಯರ ನೃತ್ಯ ನಡೆಯುತ್ತದೆ. ನಾಗನನ್ನು ಮೈದುಂಬಿಕೊಂಡ ಪಾತ್ರಿ ಕುಪಿತನಾಗಿ ಸುತ್ತಿ ಸುಳಿದು ಶರೀರವನ್ನು ಸುರುಳಿಯಾಗಿ ಗಂಟಕ್ಕಿಕೊಂಡು ಹೂಂಕರಿಸುತ್ತ ಬುಸುಗುಟ್ಟುವ ನಟನೆ ಮಾಡುತ್ತಾನೆ. ಅನಂತರ ಎದುರು ಕುಣಿವ ಅರ್ಧನಾರಿ ವೇಷದ ವೈದ್ಯನ ಪ್ರಕೃತಿಯ ಭಕ್ತಿಗೆ, ಒಲಿದು ಬುಸುಗುಟ್ಟುವ ನಾಗ ತಣಿದು, ಮಣಿದು, ಸುತ್ತಿದ ಸುರುಳಿಯನ್ನು ಬಿಚ್ಚಿ ಮುಂದೆ ಪ್ರಕೃತಿಯ ಬೇಡಿಕೆಗೆ ಒಲಿಯುತ್ತಾನೆ. ಹೀಗಾಗಿ ಈ ಕುಣಿತ ಸುಂದರವಾದ ತರಂಗಬದ್ಧವಾದ ಅನೇಕ ಭಾವರಸಗಳ ಸಂಚಾರಕ್ಕೆ ಅನುವು ಮಾಡಿಕೊಡುತ್ತದೆ. ದೇಹದ ಎಲ್ಲಾ ಭಾಗಕ್ಕೂ ಇಲ್ಲಿ ಕೆಲಸವಿದೆ. ಕುಣಿತ, ಜಿಗಿತ, ಹಿನ್ನಡೆ, ಮುನ್ನಡೆ, ಕೈ ಬಳುಕು, ಮೈ ಬಳುಕು ಹೀಗೆ ಸುಸಂಬದ್ಧವಾದ ನೃತ್ಯಗತಿಗಳಿವೆ. ನವರಸಗಳ ಅಭಿವ್ಯಕ್ತಿಗೆ ಅವಕಾಶವಿದೆ. ಇಂತಹ ನಾಗನೃತ್ಯ ಮಾಡುತ್ತಿದ್ದ ವೈದ್ಯನ ವರದಹಸ್ತದಲ್ಲಿ ಪೌರಾಣಿಕ ಕಥಾನಕಗಳು ವಿವಿಧ ಭಾವರಸಗಳ ಅಭಿವ್ಯಕ್ತಿಯಾಗಿ ಒಂದು ಬಗೆಯ ನೃತ್ಯ ನಾಟಕವಾಗಿ ಬೆಳೆದಿರಬಹುದು. ಅದುವೇ ಯಕ್ಷಗಾನ ಬಯಲಾಟ ಇರುಬಹುದೇ ಎಂಬ ಕಾರಂತರ ಅಭಿಪ್ರಾಯ ವಿಚಾರಣೀಯ.

ಸಾಮಾನ್ಯವಾಗಿ ಜಾನಪದ ಕುಣಿತಗಳು ವ್ಯಕ್ತಪಡಿಸುವ ಹಿಗ್ಗು ಉತ್ಸಾಹ ವೀರಾವೇಶಗಳ ಭಾವ ಪ್ರಕಟವಷ್ಟೇ ನಾಗಮಂಡಲ ನೃತ್ಯದಲ್ಲಿ ಕಾಣಿಸದೆ, ಬಹುಬಗೆಯ ಭಾವರಸಗಳ ಅಭಿವ್ಯಕ್ತಿಗೆ ಇಲ್ಲಿ ಅವಕಾಶವಿದೆ. ಇಂದು ನಮಗೆ ದೊರೆವ ಹಾಡಿನ ವಸ್ತು ವಿಸ್ತಾರವನ್ನು ಗಮನಿಸಿಗಾದ "ಪ್ರಕೃತಿ" (ಅರ್ಧನಾರಿ) ಪುರುಷ "ನಾಗಪಾತ್ರಿ" ನಡುವೆ ಕಲಹದ ವಿವರ ದೊರೆಯುತ್ತಿಲ್ಲ. ಆದರೆ ಕುಣಿತದಲ್ಲಿ ಒಮ್ಮೆ ಕಲಹ. ಇನ್ನೊಮ್ಮೆ, ಸ್ನೇಹ, ಮಗದೊಮ್ಮೆ ದೀನತೆ, ಮತ್ತೊಮ್ಮೆ ಆಕ್ರೋಶ ಹೀಗೆ ಬಹು ಬಗೆಯ ಭಾವಪ್ರದರ್ಶನ ಕಂಡುಬರುತ್ತದೆ. ಈ ತೆರನಲ್ಲಿ ಸೌಂದರ್ಯ ವಿಸ್ತಾರವನ್ನು ಪಡೆದಿರುವ ವಿಶ್ವಭಾಷಿಯಾಗಬಲ್ಲ ನೃತ್ಯಗಳು ಬಹಳ ಅಪೂರ್ವ ವೆಂದೇ ಹೇಳಬಹುದು. ನಮ್ಮ ಬಯಲಾಟವು ಹುಟ್ಟಿಕೊಂಡ ಭೂಮಿಯಲ್ಲಿ ಈ

ದೇಶಿಯ ಸಂಪತ್ತು ಸಿದ್ದವಾಗಿ ಕಾದಿತ್ತು. (ಡಾ. ಕೆ.ಶಿವರಾಮ ಕಾರಂತ – ಯಕ್ಷಗಾನ ಬಯಲಾಟ: ಪುಟ : ೧೨೧)

ಯಕ್ಷಗಾನ ಸಭಾಲಕ್ಷಣದಲ್ಲಿ ಅದರ ರಚಕ ಗಣಪತಿ ಸ್ತುತಿಯಾದ ಬಳಿಕ ಮಂಡಲ ನಾಯಕನಾದ ಸುಬ್ಬರಾಯನಿಗೆ ಪೂಜೆ ಸಲ್ಲಿಸುವುದು ಕಾಣುತ್ತದೆ. ಈ ಹಾಡು ಹೀಗಿದೆ.

**ಕುಂಡಲ ಮಣಿಭೂಷಣಾ : ಸ್ವಾಮಿ ಸುಬ್ಬರಾಯ : ಮಂಡಲನಾಯಕನೇ ಕಂಡು ನಾ ವಂದಿಸುವೆನು : ದೇವ ಸುಬ್ಬರಾಯ : ಬೆಂಬಿಡದೆ ಸಲಹೆಮ್ಮನು.**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಗನನ್ನು ಸುಬ್ರಹ್ಮಣ್ಯನನ್ನು ಅಭೇದವಾಗಿ ಆರಾಧಿಸಲಾಗುತ್ತಿದೆ. ಹೀಗಾಗಿ ಗಣಪತಿಯ ಸ್ತುತಿಯ ಬಳಿಕ ಬರುವ ಈ ಸುಬ್ಬರಾಯನ ಸ್ತುತಿ ನಾಗಸ್ತುತಿಯೇ ಇರಬೇಕು. ಸಭಾಲಕ್ಷಣದ ಪ್ರಕಾರ ಮುಂದೆ ಈಶ್ವರನಿಗೆ ಪೂಜೆ ಸಲ್ಲುತ್ತದೆ. ಆಮೇಲೆ ಅರ್ಧನಾರಿ ರಂಗಸ್ಥಳ ಪ್ರವೇಶಿಸುವುದಾಗಿ ಹೇಳಿದೆ. ಈ ಅರ್ಧನಾರಿ ಯಾರು? ಇದು ನಾಗಮಂಡಲದ ಅರ್ಧನಾರೀಶ್ವರ ಇರಬಹುದೇ? ಮೇಲೆ ಹೇಳಿದ ವಿವರಣೆಗಳಿಂದ ಯಕ್ಷಗಾನವು ನಾಗಮಂಡಲದ ಕುಣಿತದಿಂದ ಬೆಳೆದು ಬಂದಿತೆಂದು ತೀರ್ಮಾನವಿಲ್ಲ.

ಜನಪ್ರಿಯ ಕಥಾನಕಗಳನ್ನೊಳಗೊಂಡ ರಾಮಾಯಣ ಮಹಾಭಾರತಗಳ ರೋಚಕ ಪ್ರಸಂಗಗಳು, ಘಟನಾವಳಿಗಳು ನಾಗವೈದ್ಯನ ನೃತ್ಯ ಪರಿಣಿತಿಯಿಂದ ನಾಟಕ ಸ್ವರೂಪವನ್ನು ಪಡೆದಿರಬಹುದು. ಒಬ್ಬ ನೃತ್ಯಕಾರನ ಕುಣಿತ ನಾಲ್ಕಾರು ಮಂದಿಯ ಕುಣಿತಕ್ಕೆ ತಿರುಗಿಸಬಹುದು (ಗ್ರೀಸ್ ದೇಶದಲ್ಲೂ ಮತಾಚರಣೆಯ ಸಂದರ್ಭದಲ್ಲಿ ಮೇಳ ನಾಯಕನು ತನ್ನ ಸಹಚರರೊಂದಿಗೆ ನಡೆಸುತ್ತಿದ್ದ ಮೇಳ ನೃತ್ಯ ಗೀತವೇ ಮುಂದೆ ನಾಲ್ಕಾರು ಪಾತ್ರಧಾರಿಗಳ ಬೆಳವಣಿಗೆಯೊಂದಿಗೆ ನಾಟಕ ಸ್ವರೂಪವನ್ನು ಪಡೆಯಿತು. ಎನ್ನುವುದನ್ನು ಗಮನಿಸಬೇಕು).

ತುಳುನಾಡಿನ ಭೂತಗಳ ಕಲೆಕಾರ್ಣಿಕ, ಉಕ್ಕುಸೊಕ್ಕುಗಳನ್ನು ವಿವರಿಸುವ ಪಾಡ್ದನ ಕಥಾನಕಗಳಿರುವಂತೆ ಬಡಗು ಭಾಗದ ದೈವಗಳಾದ ನಂದಿ. ಹಾಯ್ಗುಳಿ, ಬಾಲ್‌ಚಿಕ್ಕು, ಬಗ್‌ಚಿಕ್ಕು, ಮರ್ಲ್ ಚಿಕ್ಕು, ದೊಟ್ಟಿ ಕಾಲ್‌ಚಿಕ್ಕು, ಹಳೆಯಮ್ಮ ಇತ್ಯಾದಿಗಳ ಹುಟ್ಟು ಪ್ರಸರಣ ಶಕ್ತಿ ಸಾಧನೆಗಳನ್ನು ವಿವರಿಸುವ ಕಥಾನಕಗಳಿವೆ. ಇವುಗಳನ್ನು ಢಕ್ಕೆ ಬಲಿಯ ಸಂದರ್ಭದಲ್ಲಿ ಹಿಮ್ಮೇಳದ ವೈದ್ಯರು ಹಾಗೂ ಅರ್ಧನಾರಿ ವೇಷದ ವೈದ್ಯರು ಹಾಡುತ್ತಾ ಢಕ್ಕೆ ಬಡಿಯುತ್ತಾ ಎದುರಿನ ದೈವವನ್ನು ಕುಣಿಸುತ್ತಾರೆ. ನಾಗಮಂಡಲದಲ್ಲಿ ನಾಗನ ಮೂಲ, ಭೂಲೋಕಕ್ಕೆ ಅದರ ಆಗಮನ,

ಪ್ರಕೃತಿಯ ವಿಕೋಪದಿಂದ ನಾಗನನಾಶ, ಅದರಿಂದ ಲೋಕದ ಜನರಿಗೆ ಬಂದ ನಾನಾ ಬಗೆಯ ಕಷ್ಟಕಾರ್ಪಣ್ಯಗಳು, ನಾನಾ ಹಿರಿಮೆ ಸ್ತುತಿ ಮುಂತಾದವನ್ನು ವಿವರಿಸುವ ಅತ್ಯಂತ ಕಲಾತ್ಮಕ ಗೀತೆಗಳನ್ನು ವೈದ್ಯರು ಹಾಡುತ್ತಾರೆ. ಈ ಹಾಡುಗಳ ಧಾಟಿ, ಮಟ್ಟುಗಳು ಯಕ್ಷಗಾನ ರಾಗಗಳಂತೆಯೇ ಇವೆ. ಹೆಚ್ಚಾಗಿ ನಾಟಿ, ಮಧ್ಯಮಾವತಿ, ಸುರುಟಿ, ಆರಭಿ, ಅಠಾಣ, ಕಾನಡಾ, ಮೋಹನ, ಭೂಪಾಳಿ ರಾಗಗಳು. ಯಕ್ಷಗಾನದಲ್ಲಿದ್ದಂತೆಯೇ ಒಂದು ಪದವನ್ನು ಮೊದಲು ವಿಲಂಬಗತಿಯ ತಾಳದಲ್ಲಿ ಪ್ರಾರಂಭಿಸಿ, ನಡುವೆ ಮುಕ್ತಾಯ ಮುರಿದು ಮುಂದೆ ಚುರುಕು ಗತಿಯ ಬೇರೆ ತಾಳಕ್ಕೆ ಬದಲಾಯಿಸುವ ಕ್ರಮವು ಇದೆ. ಭರತನಾಟ್ಯದ ಮುದ್ರೆಯ ಬಳಕೆಯೂ ಇಲ್ಲಿದೆ.

# ನಾಗಮಂಡಲದ ಹಾಡುಗಳು

## ದರ್ಶನ ಬರಿಸುವ ಹಾಡು

ಶ್ರೀಯಶ್ರೀಯನಾಳ್ದವನೆ ।
ಶ್ರೀಯನಾ ಬಲಗೊಂಬೆನೋ ॥
ಶ್ರೀ ನಾರಾಯಣ ನಮಗೇ ಬೇಡಿದ ವರವೀಯೋ ॥

ಕರಿರಾಜವದನಗೊ ಪರಮ ಭಾರತಿಯಳಿಗೊ ।
ಶ್ರೀ ಗುರುವಿಗೊ ಬ್ರಹ್ಮ ವಿಷ್ಣು ಶಿವಗೋ ॥
ಕಡುಕೃತ ನಾನಿನ್ನ ಚರನಕೆರಗಿದೆ ಬಂದು ।
ತೆರೆಯ ಸೂಡಿದ ದೇವ ವರವನೆಗೋ ॥

ಶರಣಾಗು ಪುಂಡರಿ ।
ಶರಣಾಗು ಮಾತಂಗಿ ।
ಶರಣಾಗು ವಿಂಧ್ಯೇ ಪರ್ವತವಾಸಿನಿ ॥
ಶರಣು ಉನ್ನಂತ ದೈವ ಶರಣು ಪಂಕಜ ಲಂಬೋ ।
ದರ ದೇವ ಹರವಿಘ್ನ ।
ಏಕದಂತನು ॥

ವಂದ್ಯೇಕ ದಂತನೆ ।
ದಂತಸ್ವಾಮಿ ನೀವು ।
ಗಂದ ಸ್ವರೂಪಿಯೆ ।
ಮಂದರಗಿರಿಯಂಥಾ ।
ದೇಹದಾತನೋ ॥

ಅಂದು ದೇವತೆಗಳಿಗೆ ಆನಂದ ಪದವಿಯನಿತ್ತೆ ।
ಬಂದೆನ್ನ ಸ್ಮೃತಿನಿಲ್ಲೋ ಗಣನಾಯಕ ॥
ಅಂದ ಸಕ್ಕರೆ ಮೃದು ಉಂಡಿಯ ನೊರೆ ಹಾಲು ।
ಕೊಂಡು ಭಕ್ತರ ಕೈಯ್ಯ ಸೊಂಡಿಲಲಿ ಮೆಲುವಾತ ।
ಪ್ರಚಂಡ ಗಣನಾಯಕಾ ಬೇಡಿದ ವರವ ॥

ಬಲಗೊಂಬೆ ಆದಿಯನು ।
ಬಲಗೊಂಬೆ ವೇದವನು ।

ಬಲಗೊಂಬೆ ಬಲನಾ ತಾ ಜಲನುದಯ ॥
ಬಲಗೊಂಬೆ ಪೂರ್ವನ ।
ಬಲಗೊಂಬೆ ಪಶ್ಚಿಮ ।
ಬಲಗೊಂಬೆ ಉತ್ತರಾ ದಕ್ಷಿಣ ದಿಸೆಯ ॥

ಬಲಗೊಂಡು ಹಾಡುವೆನು ಅಷ್ಟದಿಕ್ಪಾಲಕರು ।
ಮೂವತ್ತುಮೂರು ಕೋಟಿ ದೇವತೆಗಳು ॥
ಕಾಶಿ ವಿಶ್ವನಾಥ ।
ಗೋಕರ್ಣ ಮಹಾಬಲೇಶ್ವರ ।

ಕಳಕಳೇಶ್ವರ ।
ಸಜ್ಜೇಶ್ವರ ।
ಕಶ್ಯಪ ಮುಖ್ಯ ಪ್ರಾಣೇಶ ।
ವರಹಲಿಂಗ ।
ವಿಷ್ಣುಮೂರ್ತಿ ।

ಭೂಮಿದೇವಿ ।
ಶಾರದಾಂಬ ।
ನಿರ್ವಿಘ್ನದಾಯಕ ॥
ಇಲ್ಲಿ ಶಾಸ್ತಾರದ ಕುಲ ಬ್ರಹ್ಮ ಸ್ವಾಮಿಯವರು ನೆನೆವ ಕಾರ್ಯವನೆಲ್ಲ ಲೇಸು ಮಾಡಿರೋ ॥

ಬ್ರಹ್ಮ ನಿನ್ನರಮನೆಗೆ ಮುನ್ನೂರು ದ್ವಾರಗಳು ।
ಚಿನ್ನದಲ್ಲಿ ತೋರಣ ಎಡೆಬಿಡದೇ ॥
ಚತುರ್ಮುಖ ಕುಲಬ್ರಹ್ಮ ಸ್ವಾಮಿಯವರು ಕಾಶ್ಮೀರದಿಂದ ಹೊರವಂಟಂತವರು

ಹಾರುಕುದ್ರೆಯನ್ನೆ ಏರಿಕೊಳ್ಳುವಂತವರು ।
ಕುರುಕ್ಷೇತ್ರ, ಗಯಕ್ಷೇತ್ರ, ಯಂಕ್ಟಾದ್ರಿ, ಶ್ರೀರಂಗ, ಮಲಯಾಳ, ಕೇರಳ ಸ್ಥಾನಾಧಿಪತಿಗಳಾಗಿ ।
ವಾಸವಾಗಿ ನೆಲೆಗೊಂಡನೆಂಬಂಥ ।

ಚತುರ್ಮುಖದ ಕುಲಬ್ರಹ್ಮ ।
ಅಜಬ್ರಹ್ಮ ।

ಮಾಂಶಿಬ್ರಹ್ಮ ।
ಜಡೆಬ್ರಹ್ಮ ।

ಕೊಡೆಬ್ರಹ್ಮ ।
ಕನಕಬ್ರಹ್ಮ ।
ಧೀರಬ್ರಹ್ಮ ।
ಸಂನ್ಯಾಸಿ ಬ್ರಹ್ಮರಾಯನ ಪರಿವಾರ ಸಹಿತವಾಗಿ ಈ ಹೊತ್ತಿನ
ಮಂಡ್ಲಭೋಗಕ್ಕೆ ತೆರಳಿ ಬರುವಂಥಾ ಕಾಲದಲ್ಲೀ ॥

## ನಾಗದರ್ಶನದ ಹಾಡು

ಇಲ್ಲಿ ಪಾತಾಳದ ಮಹಾ ನಾಗಸ್ವಾಮಿಯವರು ನೆನೆದ ಕಾರ್ಯವನೆಲ್ಲ ಲೇಸು
ಮಾಡಿರೋ ॥
ನಾಗ ನಿನ್ನರಮನೆಗೆ ನಾನೂರು ದ್ವಾರಗಳು ।
ಹೂವಿನಲ್ಲಿ ತೋರಣಾ ಯೆಡೆಬಿಡದೇ ॥
ಪಾತಾಳದ ಮಹಾ ನಾಗಸ್ವಾಮಿಯವರೆಂದು ।

ಭೂಲೋಕ ಸ್ಥಾನಾಧಿಪತಿಗಳಾಗಿ ವಾಸವಾಗಿ ನೆಲೆಗೊಂಡನೆಂಬಂಥಾ ।
ಪಾತಾಳದ ಮಹಾನಾಗ, ಹೆಣಗಿ ನಾಗ, ಗೋಧಿ ನಾಗ, ಶಂಖಪಾಲಕ,
ಗುಳಿಕ, ತಕ್ಷಕ, ಕನ್ನಾಗ, ಉನ್ನಾಗ, ಉನ್ನಂತ ಮಣಿನಾಗ, ಬಿನ್ನಾಣಿ,

ಕಾಳಿಂಗ, ಕಾರ್ಕೋಟಕ, ಧೃತರಾಷ್ಟ್ರ, ವಾಸುಕಿ, ಸರ್ಪ, ಶೇಷ, ಕಪಿಲ,
ಭೂಧರ, ಶಂಖಪಾಲಕನು ಪರಿವಾರ ಸಹಿತವಾಗಿ ಈ ಹೊತ್ತಿನ
ಮಂಡಲಭೋಗಕ್ಕೆ ತೆರಳಿ ಬರುವಂಥಾ ಕಾಲದಲ್ಲಿ..................॥

## ಹಾಲ್ಹಿಟ್ಟಿನ ಹಾಡು

ಶ್ರೀಗುರುವಿನ ಪಾದಕೆರಗಿ ಮಣಿವೆ ॥
ನಾಗನೆ ಗಿರಿಸುತ ಕಪಿಲಾಸನವೆ ॥

ಕೆಳದಿಯೊಳಗೆ ಬಂದು ನೀ ನೆಲಸಿರುವೆ ।
ಉಳಿಯದೆ ನಮಗೀಯೊ ರತಿಮತಿ ಶುಭವು ॥
ಯಡಗರವಿಲ್ಲದೆ ವಿಘ್ನಗಳನುಳುಹಿ ।
ಕಡು ಕೃಪೆಯಿಂದಲಿ ಬಕುತರ ಪೊರೆಯೊ ।

ಹುಣ್ಣಿಮೆಯಲಿ ಪೂರ್ಣತೇಜದಿ ಮೆರೆವ ।
ಪನ್ನಗ ಹರಿ ಪವಡಿಸುವನು ನೋಡೋ ॥
ವಿನಯದಿ ನರಹರಿಯನು ಪೂಜಿಸುವೆ ।
ಸಾಗರಸುತ ಹರಿಶಯನ ಮಾಡೋ ॥

ಯೋಗದೀಪವ ತಂದು ಗರುಡಗೆ ನೀಡೋ ।
ಧರಣಿಯ ಮುಡಿಯ ಮೇಲ್ ಶ್ರೀಮುಡಿ ಇರಿಸೋ ॥
ಕುಸುಮಾಕ್ಷತೆ ಗಂಧಂಗಳನೆ ತರಿಸೊ ।
ಹರಿಹರ ರಾಜಗೆ ನಿದ್ರೆಯ ಬರಿಸೋ ॥

ಬೀಸುವ ಗಾಳಿಯೊಳಾಲೋಚಿಸುವೆ ।
ವಾಸುಕಿ ಮೊದಲಾದವರನು ಕರೆವೆ ॥
ಕಡಲೊಳಗಣ ಪರೀಕ್ಷಿತುನನು ಕೊಂದೆ ।
ಜಡಿದು ಕಿರೀಟಿಯ ಮುಕುಟವ ತರಿದೆ ॥

ದೇವೇಂದ್ರನ ಸಿಂಹಾಸನವಾದೆ ।
ದೇವಕಿಗೊಲಿದು ಗಿರಿಸಖನಾದೆ ॥
ಹಸನದಿ ಕೊಡಿಸು ವರಮತಿ ಶುಭವು ।
ಹೊನ್ನದುಪ್ಪರಿಗೆಯಾದರಿಸಿದ ಶಿವನೆ ॥

ಯೋಜನ ಗಾವುದ ಬಾಲಕದವನೆ ।
ಸೂಜಿಯ ಗಾತ್ರದ ನಾಲಿಗೆಯವನೆ ॥
ಕರ್ರನೆ ಕಣ್ಣಿಗೆ ಕರಿಕುರುಳ್ವವನೆ ।
ಸುರ್ರನೆ ಉರಿವ ಉರಿಮುಖದವನೆ ॥

ಕೆರಳಿದಳುರಿಯನು ಉಗುಳುತಲಿರುವೆ ।
ಹರುಷಾಂಬರದಲ್ಲಿ ವರವ ನೀ ಕೊಡುವೆ ॥
ಪಾತಾಳದೊಳರಮನೆಗಳ ಕಟ್ಟಿಸಿ ।
ಭೂತಳದೊಳಗತಿ ಪೂಜಿಸಿಕೊಂಬೆ ॥

ನಾಲ್ಕು ಭುಜೆಂಗಲಿ ನಾಗನ ವನವೆ ।
ಉರಿ ತೋರಿ ದಳ್ಳುರಿ ಹುಣ್ಣೆ [=ಹವಣಿ] ಇರಲು ॥
ಹಿರಿದು ಪ್ರತಾಪದಿ ಹಿರಿದನೆ ಮಾಡಿ ।
ಪ್ರೀತಿಯಿಂದಲಿ ಶಂಖಪಾಲಕನು ॥

ಅಷ್ಟಮಿ ಹುಣ್ಣಿಮೆ ಪಂಚಮಿ ದಿನದಿ ।
ಸೃಷ್ಟಿಯ ಮನುಜರ ಸಲಹುತ ಬರುವೆ ॥
ಉದಕ ಕದಳೀಫಲ ಕ್ಷೀರವ ತಂದು ।
ಅಂಧರಿಗೆ ಶೃಂಗಾರವ ತಳಿರೋ ॥

ಕನ್ನಡಿ ಕನ್ನಡಿ ಕಲಶವ ನಿಲಿಸಿ ।
ಪನ್ನಗ ರಾಜನ ಭೋಗವಗೊಂಬೆ ॥
ಕದ್ರುವ ಮಕ್ಕಳ ಭಜಿಸಿದವರ್ಗೆ ।
ಇಷ್ಟಾರ್ಥ ವರಗಳನೀಯುತ ಬರುವ ಜಯ ಅಷ್ಟಕುಲದ ಪರಿವಾರಂಗಳಿಗೆ

ಪೋಗಲು ಭೋಗಕ್ಕೆ ತೆರಳಿ ಬರುವಂಥಾ ವ್ಯಾಳ್ಯದಲ್ಲಿ ॥ ....... (ಡಮರು ಬಾರಿಸುವುದು).

## ನಾಂದಿಯ ಹಾಡು

ಅರಳಿದ ಮಲ್ಲಿಗೆ ಅರಳಿದ ಜಾಜಿ ।
ಅರಳಿದ ಹೊಂಗ್ಯಾದಿಗೆ ಅರಳಿದುತ್ತಮವಾದ ಒಂದಾವರೆ । (ಹೊಂದಾವರೆ?)
ಒಂದಾವರೆ ಸ್ವಾಮಿ ನೀವು ಪದ್ಮದಲಿ ಬಂದು ನೆಲಸಿದಿರೀಗ ।
ನಿಂದು ವರಗಳನಿತ್ತೋ ಸಲಹಬೇಕು ॥

ಕಾಳಿಯೇ ಕಂಕಾಳಿ, ಅಮ್ಮ ನೀ, ನಿರಾಧಾರಿ ಭೈರವಿ ದುರ್ಗೆ ಕಾಳರಾಕ್ಷಸಿ ದೇವಿ ವಾಗೀಶ್ವರಿ ।
ಕಾಳಗದೊಳು ಅಸುರರನು, ಅಮ್ಮ ನೀ, ಶಿರವರಿದೇ ।
ಬಾಲೆ ಚಂಡಿಕೆ ದುರ್ಗೆ ತೆರಳಿ ಬಾರೋ ॥

ಖುಲ್ಲ ಮೂಕನ ಗೆಲಿದು, ಅಮ್ಮ ನೀ, ಕುರುವಿಗೆ–[ಹಿ] ನೆಲಸಿದೆ ।
ಕೊಲ್ಲೂರ ದೇವಿ ನಲಿದಾಡಿ ಬಾರೋ ॥
ಕೊಡಸೆಯ ಮಗಳೊಳು ಕೊಲ್ಲೂರೆಂಬ ಸ್ಥಳದೊಳು ।
ಒಡೆದು ಮೂಡಿದೆ ತಾಯೆ ತೆರಳಿ ಬಾರೋ ॥

ಕಡುಗದೊಳು ಮೈಷಾಸುರನ, ಅಮ್ಮ ನೀ, ಶಿರವಿದೆ ।
ಕಡು ಚೆಲ್ವ ರಂಭೇ ತೆರಳಿ ಬಾರೋ ॥
ಶೂಲವನು ನೆಲಕೂರಿ, ಅಮ್ಮ ನೀ, ಕಪಾಲವ ಪಿಡಿದಾಕೆ ।
ಬಾಲೆ ಚಂಡಿಕೆ ದುರ್ಗೆ ತೆರಳಿ ಬಾರೋ ॥

ಶುಂಭ ನಿಶುಂಭರನು ಕೊಂದು ಮಡುಹಿದೆ ತಾಯೆ।
ರಂಭೆ ಪಾರ್ವತಿದೇವಿ ಪಯಣ ಬಾರೋ ॥
ಚಂಡಮುಂಡರನು ಕೊಂದು ಮಡುಹಿದೆ ತಾಯೆ ।
ಚಂಡಿಕಾ ವನದುರ್ಗೆ ಪಯಣದಿ ಬಾರೋ ॥

ಚಂಡಿಕಾದೇವಿ ನಿಮಗೆ ವಂದಿಸಿ ನಮೊ ಎಂಬೆ ।
ಪ್ರಚಂಡ ಕೋಮಲೆ ತಾಯೆ ತೆರಳಿ ಬಾರೋ ॥
ದೇವಿ ದೇವರ ದೇವಿ ದೇವಿ ಶ್ರೀ ದುರ್ಗಾಪರಮೇಶ್ವರಿ ।
ದೇವಿ ಅಂಬಿಕೆ ತಾಯೆ ನಲಿದಾಡಿ ಬಾರೋ ॥

ಹಾರು ಕುದ್ರೆಯನ್ನೇ ಒಡೆಯ ವೀರಭದ್ರಸ್ವಾಮಿ ।
ನೀವು ಏರಿದ್ರಿ ಬೇಗ ತೋರಿದ್ರಿ ನೆಗಳ್ದಾ॥?
ಬಲ್ಲಿದ ಕೈಗಳನು ಅಡಿಗೆ ನೀಡಿರುವಿರೋ ಚತುರ್ಮುಖದ ಕುಲಬ್ರಹ್ಮ ಸ್ವಾಮಿ
ನೀವು ಕೊಂಡಾಡಿದರೆ ಮೆಚ್ಚುತಲಿದ್ರಿ ।
ಬೇಡಿದ ವರಗಳನೂ [–ನೀಯೊ] ಪಯಣ ಬಾರೋ ॥

ಕದ್ರುಗೆ ಕಂದನೆ ರುದ್ರನಿಗಾಭರಣನೆ ।
ನಿದ್ರೆಯೊಳು ಹರಿಗೆ ಹಾಸಿಗೆಯಾದನೆ ।
ನಿದ್ರೆಯೊಳು ಭುವನದಿಂದೆದ್ದು ಶೋಭಿಸುವಾಗ ।
ಸಮುದ್ರವನು ನೇಣಾಗಿ ಸುತ್ತಿದಾತನೆ ॥

ಸಾಸಿರ ವಿಷದಾಡೆ ಸಾವಿರ ಕೊಳದಾಡೆ ॥
ಬೀಸುವ ಹೆಡೆಯೋ ಪನ್ನಗ ಸಾಸಿರ ॥
ಸಾಸಿರ ಹೆಡೆಗಳನು ಹಸರಿಸುತ ಬಾರೊ ।
ವಾಸುಕಿ ಸುಬ್ರಹ್ಮಣ್ಯ ತೆರಳಿ ಬಾರೋ ॥

ಕುಂಬೆಗುರುಳಿನ ಬಾಲೆ ಹೆಣ್ಣು ಯಕ್ಷ ಅಮ್ಮ ನೀ, ರಂಭೆ ಪರಿಮಳದರಳೆ ।
ಬೊಂಬೆಯ ನೀ ಕೇಳೆ ಕಲಿಯುಗವು ॥
ಅಸಿಯೊಳು ರಕ್ತೇಶ್ವರಿ, ಅಮ್ಮ ನೀ, ಮಸಿನ ಚೆಲ್ಲೂರಾಕೆ ।
ವಸುಧೆಯ ಮೇಲೆ ಅತಿವಾಸವೂ ॥

ಕಲಿಗೆ ಖಡ್ಗವನಿಟ್ಟು ಹಿರೆ ನಂದಿಕೇಶ್ವರ ಸ್ವಾಮಿ ನೀವು ।
ಉದರಗಂಟೆಯ ಕಟ್ಟಿ ಛಲದಂಕರಾದಿರೀಗ ನಡೆತಾರೋ ॥
ಹಾಡಿದರೆ ಹಾರೈಸುವೆನು ಮಳೆಯಾಳ ಬಬ್ರ್ಯಸ್ವಾಮಿ ನೀವು ಕೊಂಡಾಡಿದ್ರೆ ।
ಮೆಚ್ಚುತಲಿದ್ರಿ ಬೇಡಿದ ವರಗಳನೋ ಪಯಣದಿ ಬಾರೊ ॥

ಬನ್ನಿ ಭೋಗಕ್ಕೆಂದು ಜಟ್ಟಿಗರಾಯ ಸ್ವಾಮಿ ನಿಮಗೇ ।
ಕೊಡುವರೊ ಗಂಧವನಿಡುವರೊ ಮುತ್ತಿನಾಕ್ಷತೆಗಳನು ॥
ಬನ್ನಿ ಭೋಗಕ್ಕೆಂದು ಕ್ಷೇತ್ರಪಾಲ ಸ್ವಾಮಿಯ ।
ಮನ್ನಿಸಿ ಕರೆವೆನು ಇನ್ನು ದೇವರ ದೇವ ।
ಪಯಣದಿ ಬಾರೊ ॥

ವನವೇನೆಂದರು ತಮ್ಮ ವನವೇ ನಂದನವನ ।
ವನದೊಳಗೆ ಇಲ್ಲಿ ಮಂತ್ರಸ್ಥಾನ ಹೊನ್ನರಮನೆಯೋ ।

ಇರವ ನೋಡಿದರೆ ಸ್ವಾಮಿ ಮಂದಿರವೆಲ್ಲ ನಿಮ್ಮರಮನೆ ಇರವಳಿತೋ ॥
ಎಲ್ಲಾ ದೇವತೆಗಳನು ಮುನ್ನ ಇಲ್ಲಿ ಹಾಡಿಕೊಂಬೆನು ।

ಇನ್ನಿಲ್ಲಿ ಗುತ್ತು ಕ್ಷೇತ್ರಾಧಿಪತಿಗಳನು ಕರದೋ ವರ್ಣಿಸುವೆನು ॥
ನಾಲ್ಕು ಸಮುದ್ರದೊಳಗೆಲ್ಲ ಪ್ರಸನ್ನ ದೇವತೆಯಾಗಿ, ಆದಿಯಾಗಿ, ಸಿರಿಯಾಗಿ ।
ಸಂಪತ್ತಾಗಿ, ಗ್ರಾಮ ದೇಶಾಧಿಪತಿಗಳನ್ನೆ ತಲೆಗಾಯ್ದೆನೆಂಬಂಥ ।
ದುರ್ಗೆ, ಮಹಾಕಾಳೀ, ಮಹಾಲಕ್ಷ್ಮೀ, ಮಹಾಸರಸ್ವತೀ ।
ವನದುರ್ಗೆ, ನವದುರ್ಗೆ, ನವಕೋಟಿ ದುರ್ಗಮ್ಮನವರು ಈ ಹೊತ್ತಿನ
ಮಂಡ್ಲ ಭೋಗಕ್ಕೆ ತೆರಳಿ ಬರುವಂಥಾ ಕಾಲದಲ್ಲಿ ..... ॥

ಈಶ್ವರನ ರೋಷದಲ್ಲಿ ಜಡೆಯಲುತ್ಪನ್ನನಾಗಿ ।
ದಕ್ಷಮುಖ ಭಂಜನನಾಗಿ ಶಿಕ್ಷಕೆಲ್ಲ ಸಜ್ಜನನಾಗಿ ।
ಕೈಯಲ್ಲಿ ಢಕ್ಕೆ, ಡಮರುಗ, ಶಂಖ, ಚಕ್ರ, ಗದಾ, ತ್ರಿಶೂಲ, ಬತ್ತೀಸ್–
ಮೂವತ್ತೆರಡು ಆಯುಧಗಳನ್ನು ಧರಿಸಿಕೊಂಡು ಪಯಣ ಬಂದೆನೆಂಬಂಥಾ ।
ಕೆಂಜಡೆ ವೀರಭದ್ರ ಸುಲಿಪಲ್ಲು ವೀರಭದ್ರ, ರಾಜೂಟಿ ವೀರಭದ್ರ, ಅಸ್ತಮೇ
ವೀರಭದ್ರ, ರೌದ್ರ ವೀರಭದ್ರ, ಕರಾಳ ವೀರಭದ್ರ, ವೀರಾಧಿವೀರಭದ್ರ
ಸ್ವಾಮಿಯವರು ತೆರಳಿ ಬರುವಂಥಾ ಕಾಲದಲ್ಲಿ..... ॥

ಚತುರ್ಮುಖದ ಕುಲಬ್ರಹ್ಮ ಸ್ವಾಮಿಯವರೆಂದು ಕಾಶ್ಮೀರದಿಂದ
ಹೊರವಂಟಂತವರು ॥
ಹಾರುಕುದ್ರೆಯನ್ನೆ ಏರಿಕೊಳ್ಳುವಂಥವರು ।
ಕುರುಕ್ಷೇತ್ರ, ಗಯಕ್ಷೇತ್ರ, ಯಂಕ್ಟಾದ್ರಿ, ಶ್ರೀರಂಗ, ಮಳೆಯಾಳ, ಕೇರಳ
ಸ್ಥಾನಾಧಿಪತಿಗಳಾಗಿ ವಾಸವಾಗಿ ನೆಲೆಗೊಂಡೆನೆಂಬಂಥಾ ।
ಚತುರ್ಮುಖದ ಕುಲಬ್ರಹ್ಮ, ಅಜಬ್ರಹ್ಮ, ವಾಣಿಬ್ರಹ್ಮ, ಜಡೆಬ್ರಹ್ಮ, ಕೊಡೆಬ್ರಹ್ಮ,
ಕನಕಬ್ರಹ್ಮ, ಧೀರಬ್ರಹ್ಮ, ಶೂಲಿಬ್ರಹ್ಮ, ಸಂನ್ಯಾಸಿ ಬ್ರಹ್ಮರಾಯ ಸ್ವಾಮಿಯವರು
ಈ ಹೊತ್ತಿನ ಮಂಡ್ಲಭೋಗಕ್ಕೆ ತೆರಳಿ ಬರುವಂಥಾ ಕಾಲದಲ್ಲಿ..... ॥

ಪಾತಾಳದ ಮಹಾಸ್ವಾಮಿಯವರೆಂದೂ ।
ಪಾತಾಳ ಲೋಕದಿಂದ ಭೂಲೋಕಕ್ಕೂ ಭೂಲೋಕದಿಂದ ಪಾತಾಳ ಲೋಕಕ್ಕೂ ।
ಈ ಹೊತ್ತಿನ ಮಂಡಲ ಭೋಗಕ್ಕೂ ಹರಿದಾಡಿಕೊಂಡು ಪಯಣ
ಬಂದೆನೆಂಬಂಥಾ ಪಾತಾಳದ ಮಹಾನಾಗ, ಹೆಣಗಿ ನಾಗ, ಗೋಧಿ ನಾಗ,
ಶಂಖಪಾಲಕ, ಗುಳಿಕ, ತಕ್ಷಕ, ಕನ್ನಾಗ, ಉನ್ನಾಗ, ಉನ್ನಂತ ಮಣಿನಾಗ,
ಬಿನ್ನಾಣಿ, ಕಾಳಿಂಗ, ಕಾರ್ಕೋಟಕ, ಧೃತರಾಷ್ಟ್ರ, ವಾಸುಕಿ, ಸರ್ಪ, ಶೇಷ,

ಕಪಿಲ, ಭೂಧರ, ಶಂಖಪಾಲ ಪರಿವಾರ ಸಹಿತವಾಗಿ ಈ ಹೊತ್ತಿನ
ಮಂಡಲಭೋಗಕ್ಕೆ ತೆರಳಿ ಬರುವಂಥಾ ಕಾಲದಲ್ಲಿ...... ॥

ಹೆಣ್ಣು ಯಕ್ಷೆ ಅಮ್ಮನವರೆಂದು ದೇವಲೋಕದಿಂದ ಭೂಲೋಕಕ್ಕೂ
ಭೂಲೋಕದಿದ ದೇವಲೋಕಕ್ಕೂ ।
ದೇವೇಂದ್ರನ ಒಡ್ಡೋಲಗಕ್ಕೂ ।
ಕೆಂಡಗೆಣಸು ।
ಉಂಡ ಊಟ ।
ಮಿಂದ ಮೀಯಣದ ಪರಿಯನ್ನೇ ಹೇಳಿಕೊಳ್ಳುತ್ತ ಪಯಣ
ಬಂದೇನೆಂಬಂಥಾ ।
ದೇವಲೋಕದ ಹೆಣ್ಣು ಯಕ್ಷೆ, ಗಂಡು ಯಕ್ಷೆ, ಭೂತ ಯಕ್ಷೆ, ಪ್ರೇತ ಯಕ್ಷೆ,
ನಾಗ ಯಕ್ಷೆ, ಜಲ ಯಕ್ಷೆ, ತಾಂಬೂಲ ಯಕ್ಷೆ ಅಮ್ಮನ ಪರಿವಾರಂಗಳು ॥
ಮುಂಭಾಗದಲ್ಲೀ ।
ರಕ್ತೇಶ್ವರಿ ಅಮ್ಮನವರೆಂದೂ ।
ಹೊತ್ತಾರೆ ನೆರಿಯವಳು ।
ಹೊನ್ನೋಲೆ ಕಿವಿಯವಳು ।
ಬಿನ್ನಾಣಿ ಮೊರ ಕಿವಿಯವಳು ।
ಮೊಲ್ಲೆಮಲ್ಲಿಗೆ, ಜಾಜಿ, ಕುಂದಮಂದಾರ, ಬಕುಳು ಪುಷ್ಪವನ್ನೆ
ಮುಡಿದುಕೊಂಡು ಪಯಣ ಬಂದೆನೆಂಬಂಥಾ ।
ಕೆಂಪು ರಕ್ತೇಶ್ವರಿ, ಶಾಂತ ರಕ್ತೇಶ್ವರಿ, ಸಂಹಾರ ರಕ್ತೇಶ್ವರಿ, ರಕ್ತಾಕ್ಷಿ,
ರಕ್ತಗಂಧೀ ಎಂಬಂಥಾ ಯೋಗಿನ ಗಣಂಗಳ ಪರಿವಾರಂಗಳೂ ॥
ಮುಂಭಾಗದಲ್ಲಿ

ಹಿರೇನಂದಿಕೇಶ್ವರ ಸ್ವಾಮಿಯವರೆಂದೂ ।
ಕೈಲಾಸ ಶಿಖರದಿಂದ ತೆರಳಿ ಬಂದು ।
ಇಲ್ಲಿ ಪಾರ್ವತಿ ಪರಮೇಶ್ವರ ದೇವರು ಏರುವಂಥಾ ಮೋಹದ ವಾಹನವಾಗಿ
ಕಾಲಿಗೆ ಗಗ್ರ ಕೋಡಿಗೆ ಚವಲ, ಹೊಕ್ಕಳ ಗಂಟೆ, ಸರಗಂಟೆ, ಕುಂಬುಗೈಲು
ಗಾಳಿವಾಹನದಿಂದ ಖೇಚರಕ್ಕೂ, ನಿಶಾಚರಕ್ಕೂ, ಈ ಹೊತ್ತಿನ ಮಂಡಲಭೋಗಕ್ಕೂ
ಹರಿದಾಡಿಕೊಂಡು ಪಯಣ ಬಂದೇನೆಂಬಂಥಾ ।
ಹಿರಿಯನಂದಿ, ಹಾರನಂದಿ, ಕೆಂಡನಂದಿ, ಧೀರನಂದಿ, ಪಕ್ಕದನಂದಿ, ಅಂತರನಂದಿ,
ಆಕಾಶನಂದಿ, ಏಕಮುಖನಂದಿ, ದ್ವಿಮುಖನಂದಿ, ತ್ರಿಮುಖನಂದಿ, ಚತುರ್ಮುಖನಂದಿ,

ಪಂಚಮುಖನಂದಿ, ದಶಮುಖನಂದಿ, ಎಪ್ಪತ್ತೇಳು ತಲೆ ಹಿರೇನಂದಿಕೇಶ್ವರ
ಸ್ವಾಮಿಯವರು ತೆರಳಿ ಬರುವಂಥಾ ವ್ಯಾಳ್ಯದಲ್ಲೀ ॥

ಮಳೆಯಾಳ ಬಬ್ರ್ಯಸ್ವಾಮಿಯವರೆಂದು ।
ಮಳೆಯಾಳ, ಕೇರಳ, ಸ್ಥಾನಾಧಿಪತಿಗಳಾಗಿ ವಾಸವಾಗಿ
ನೆಲೆಗೊಂಡೆನೆಂಬಂಥಾ ।
ಮಳೆಯಾಳ ಬಬ್ಬರ್ಯ, ಧ್ಯಾನಿಬಬ್ರ್ಯ, ಜಡೆಬಬ್ರ್ಯ, ಕೊಡೆ ಬಬ್ರ್ಯ,
ಕನಕಬಬ್ರ್ಯ, ಧೀರಬಬ್ರ್ಯ, ಹೋರಿಬಬ್ರ್ಯ, ಸನ್ಯಾಸಿಬಬ್ರ್ಯ ಸ್ವಾಮಿಯವರು ॥
ಮುಂಭಾಗದಲ್ಲಿ ॥
ಜೆಟ್ಟಿಗರಾಯ ಸ್ವಾಮಿಯವರೆಂದು ।
ನೇತ್ರಣಿಯಿಂದ ತೆರಳಿ ಬಂದು ।
ಊರೂರು ಸ್ಥಾನಾಧಿಪತಿಗಳಾಗಿ ।
ವಾಸವಾಗಿ ನೆಲೆಗೊಂಡೆನೆಂಬಂಥಾ ನೇತ್ರಣಿ ಜಟ್ಟಿಗ, ವರಾಂಗದ ಜೆಟ್ಟಿಗ,
ಹಟ್ಟಿಯಂಗಡಿ ಜಟ್ಟಿಗರಾಯ ಸ್ವಾಮಿಯವರು ॥ ಮುಂಭಾಗದಲ್ಲಿ ॥

ಕ್ಷೇತ್ರಕ್ಷೇತ್ರಕ್ಕೆಲ್ಲಾ ಅಧಿಪತಿಯಾಗಿ ।
ಈಶಾನ್ಯ ಕರ್ತನಾಗಿ ।
ಈಶ್ವರನ ವರಕುಮಾರನಾಗಿ ।
ಸದ್ಯೋಜಾತ, ವಾಮದೇವ, ಅಘೋರ, ಈಶಾನ, ತತ್ಪುರುಷನೆಂಬ
ಕಟ್ಟಲೆಯಲ್ಲಿ ಮೆರೆದಾಡಿಕೊಂಡು ಪಯಣ ಬಂದೇನೆಂಬಂಥಾ ।
ಮೋಡಮನೆ ಕ್ಷೇತ್ರಪಾಲ ಬಣ್ಣದಟ್ಟಿನ ಕ್ಷೇತ್ರಪಾಲ, ಬ್ರಹ್ಮಸ್ಥಾನದ ಕ್ಷೇತ್ರಪಾಲ,
ನಾಗ್ರಾಡಿ ಕ್ಷೇತ್ರಪಾಲ ಸ್ವಾಮಿಯವರೂ ॥ ಮುಂಭಾಗದಲ್ಲಿ ॥

ಚಿಕ್ಕಲ್ತಿ, ಮಾಯಲ್ತಿ, ಉಮ್ಮಲ್ತಿ, ಬೊಬ್ಬರ್ತಿ, ಬೈಕಾಡ್ತಿ, ಕಿರುಮಾಯದವಳು,
ಧೂಮಾವತಿ, ಬಕುಳಮುಖಿ, ದ್ವಾರಪಾಲಕರು, ಬಾಗಲು ಬಬ್ರ್ಯ, ಮುಂಡಾಸ್‌ರಾಯ,
ಅಡ್ಕಂತಾಯ, ಸರ್ಜಾಂತಾಯ, ಗಾಳೆರಾಯ, ಗಂಟೇರಾಯ, ಕೊಡಮಣ್ತಾಯ,
ಕಡ್ಗೇಶ್ರ, ಕಡ್ಗರಾವಣ, ಕೇಚರಾವುತ, ಗೂಟ್ರಮಲ್ಲ, ಸಪರಿವಾರಂಗಳು
ಮುಂಭಾಗದಲ್ಲಿ ॥

ಉಳ್ಳಾಲ ಕೇರಳ ಸ್ಥಾನಾಧಿಪತಿಗಳಾಗಿ ।
ವಾಸವಾಗಿ ನೆಲೆಗೊಂಡೆನೆಂಬಂಥಾ ।
ಹಳೆಯಮ್ಮ, ಬಾಲಚಿಕ್ಕು, ಬಗ್ಗುಚಿಕ್ಕು, ಮಲ್ರ್ಯಚಿಕ್ಕು, ಅವತಾರಚಿಕ್ಕು,

ದೊಟ್ಟೆಕಾಲ್‌ಚಿಕ್ಕು, ವೀರಮಾಸ್ತಿ, ರೌದ್ರಮಾಸ್ತಿ, ಕೆಂಡಮಾಸ್ತಿ, ಮೂಡೂರ್
ಹ್ಯಾಗುಳಿ, ಮೂಕ ಹ್ಯಾಗುಳಿ, ಕೆಪ್ಪ ಹ್ಯಾಗುಳಿ, ತಿರುಗಣೆ ಹ್ಯಾಗುಳಿ,
ಜೈನಹ್ಯಾಗುಳಿ, ಹಣಾರಹ್ವಾಗುಳಿ, ಶೂಲದಹ್ವಾಗುಳಿ, ಕೆಂಡದಹ್ವಾಗುಳಿ,
ಪರಿವಾರಂಗಳು । ಮುಂಭಾಗದಲ್ಲೀ ॥

ಧರ್ಮಸ್ಥಳ ಅತ್ತಲಾಗಿಂದ ಪಯಣ ಬಂದೆನೆಂಬಂತಹ ।
ಕಲ್ಲುಕುಟಿಗ, ಕುಟ್ಟಿಜಾತ, ಧೂಮಾವತಿ, ಪಂಜುರ್ಲಿ, ಹಾದಿವೀರ್ರು,
ಬೀದಿವೀರ್ರು, ಸುಂಕದ ವೀರ್ರು, ಸರಳವೀರ್ರು, ಬೇಟೆವೀರ್ರು, ಕೋಟೆವೀರ್ರು,
ಕರವರ್ ವೀರಾದಿ ಗಣಂಗಳ ಪರಿವಾರಂಗಳು ಮುಂಭಾಗದಲ್ಲಿ ॥

ಹುಲಿಚೌಂಡಿ, ಘೋರಚೌಂಡಿ, ಶೂಲಚೌಂಡಿ, ದೇವಚೌಂಡಿ, ಕೀಳುಭೂತ,
ಕೀಳುಪರಿವಾರ, ಮೇಲದೂತ, ಮೇಲ್ ಪರಿವಾರ, ಎಂಟುದಿಕ್ಕು ಹದಿನಾರು
ದೆಸೆಯೊಳಗಣ ಸಕಲ ದೇವಾದಿದೇವ ಗಣಂಗಳು ।
ಭೂತಾಧಿಭೂತ ಗಣಂಗಳು ।
ರುದ್ರಗಣಂಗಳು ।
ಮಹಾ ರುದ್ರಗಣಂಗಳೂ ।
ವಿಷ್ಣು ಗಣಂಗಳು ।
ಪಡೆಪರಿವಾರಂಗಳೂ ಸಹಿತವಾಗಿ ಈ ಹೊತ್ತಿನ ಮಂಡ್ಲಭೋಗಕ್ಕೆ ತೆರಳಿ
ಬರುವಂಥಾ ಕಾಲದಲ್ಲೀ.......... ॥ (ಡಮರು ಬಾರಿಸುವುದು)

# ಧ್ಯಾನದ ಹಾಡುಗಳು

## ಗಣಪತಿಯ ಹಾಡು

ವಿಘ್ನೇಶಂ ವಿಶ್ವವಂದ್ಯಂ ವಿಮಲ ಚರಿತಂ ।
ಶಶಿ ಪ್ರಾದಿಮಾನಂ ।

ಸುರಂ ಸಾಕ್ಷಾತ್ ಸರ್ವಾಧಿ ದೇವಂ
ಗಮತಿ ಮಡೀ ಪಾರ್ವತೀ ಪ್ರಾಣಸೂನೂ ।

ಪಾಯಾಸುರೇಂದ್ರಂ ।
ಸಸುರ ಮಣಿಗಣಪಾದುಕೇ ಸಿದ್ಧದಂತಂ? ಕಾರುಣ್ಯಯಂತ್ರರತ್ನಂ ।

ಮಮಹರೆ? ನಿರುತಂ ।
ಶ್ರೀ ವಿಘ್ನರಾಜಂ ನಮಾಮಿ ॥ (ಈ ಶ್ಲೋಕದ ಮೂಲರೂಪ ಏನೆಂದೇ ತಿಳಿಯುವುದಿಲ್ಲ)

ಅಂದ ಸಕ್ಕರೆ ಮೆದು ಉಂಡಿಯ ನೊರೆಹಾಲು ।
ಕೊಂಡು ಭಕ್ತರ ಕೈಯ ಸೊಂಡಿಲಲಿ ಮೆಲುವಾತ ।
ಪ್ರಚಂಡ ಗಣನಾಯಕ ಸ್ವಾಮಿಯವರು ಈ ಹೊತ್ತಿನ ಮಂಡ್ಲಭೋಗಕ್ಕೆ ತೆರಳಿ ಬರುವಂಥ ಕಾಲದಲ್ಲಿ ಬಾರ್ಸಿಕೊಳ್ಳುವಂರ್ಥಾ ಮಹಾಗಣೇಶ್ವರನ ಕಾಲ್ಮಾನವಾಯ್ತು ॥
(ಇಲ್ಲಿಗೆ ಡಮರುವನ್ನು ಬಾರಿಸುವುದು. ಈ ರೀತಿಯ ಬಾರಿಸುವಿಕೆಗೆ 'ಕಾಲ್ಮಾನ'ವೆನ್ನುತ್ತಾರೆ).

## ಅರ್ಧನಾರೀಶ್ವರನ ಧ್ಯಾನ

ಅಳಿನೀಲಾಲಕಾಗ್ನಿ ಭಾಸುರ ಜಟಂ ।
ಲೀಲೇಷು ರುದ್ರೇಶ್ವರಂ ॥

ತಿಲಕಾದ್ರಿ ನಯನಾದ್ರಿ ಕುಚಂ ।
ರಮ್ಯೋರು ವಕ್ಷಸ್ಥಳಂ ।

ವಲಯಾಂಕಂ ಫಣಿಕುಂಡಲಂ ಶಿವತನುಂ ।
ವಿಭ್ರಾಜಿತಂ ಲೀಲಯಾ ॥

ವಿಲಸದ್ದೂಳಿತ ಅರ್ಧನಾರಿ ಲಲಿತಂ ।
ರೂಪಂ ಶುಭಂ ಧ್ಯಾಯತೇ ॥

## ಅಷ್ಟದಿಕ್ಪಾಲಕರ ಧ್ಯಾನ

ಇಂದ್ರಸ್ಯ ದೇವರಾಜಸ್ಯ ಅಗ್ನಿಯೋ ತೇಜಾಧಿಪತೇ ।
ಯಮಸ್ಯ ದಂಡರಾಜಸ್ಯ ನೈಋತ್ಯೋ ಮಾನುಷಂ ಶ್ರೀಯೋ ।
ವರುಣಂ ಜಲರಾಜಸ್ಯ ವಾಯುವ್ಯೋ ಪ್ರಾಣಪತಯೋ ।
ಕುಬೇರಂ ಧನರಾಜಸ್ಯ ಈಶಾನ್ಯಂ ಸರ್ವದೇವತಾ ॥

ಇಂತೀ ಅಷ್ಟದಿಕ್ಪಾಲಕರು ತಮ್ಮ ತಮ್ಮ ವಾಹನಗಳನೇರಿ, ಆಯುಧಗಳನ್ನೇ ಪಿಡಿದು, ಶಕ್ತಿದೇವತೆಯುಕ್ತವಾಗಿ ಗ್ರಹಗಣ ಸಹಿತವಾಗಿ ಈ ಹೊತ್ತಿನ ಮಂಡಲಭೋಗಕ್ಕೆ ತೆರಳಿ ಬರುವಂಥಾ ಕಾಲದಲ್ಲಿ ॥

ಇಂದ್ರಂಗೆ ಸಮತಾಳಾಂತು ।
ಅಗ್ನಿಗೆ ಮಂದರಾರ್ಪಣಂ ।
ಭವಶಮಸ್ಯ ಬ್ರುಗಿನೀ ತಾಳಾಂತು ।
ನೈಋತ್ಯೋ ಮಲತಾಳಕೋ ।

ವರುಣಸ್ಯ ನವತಾಳಾಂತು ವಾಯವ್ಯಾಯ ಧ್ವನಿತಾಳಕೋ ।
ಕುಬೇರಂ ಕೋಟಿತಾಳಸ್ಯ ಈಶಾನ್ಯಂಗೆ ಶೆಯೋಡಕರಿಃ? (ಷೋಡಶವು?) ॥
ಇಷ್ಟೊತ್ತನಕ ನಡೆದದ್ದೆಲ್ಲಾ ಅಷ್ಟದಿಕ್ಪಾಲಕರ ವಾದ್ಯವಾಯ್ತು ॥
ಇನ್ನು ಇಂದ್ರದೇವ ದಿಕ್ಕು ಮೊದಲಾಗಿ ಕ್ಷೇತ್ರಪಾಲ ದಿಕ್ಕು ತರುವಾಗಿ
ಏಕಾಂಗಾನ ಬಾರಿಸಿಕೊಳ್ಳುವಂಥಾ ಅಷ್ಟದಿಕ್ಪಾಲಕರ ಕಾಲ್ಮಾನವಾಯ್ತು ॥

## ಭೈರವ ಧ್ಯಾನ

ಪಾಶಾಲೋ ಢಕ್ಕೆ ಢಮರುಗ ।
ವಾಸುರನ ಕೈಯ್ಯ ಕಿತ್ತ ಕಪಾಲವೋ ಈಶ್ವರನ ತೇಜದೊಡೆಯನೆ ಭಾಸ್ಕರನೆ ।
ವರ್ಧನನಾಗು ಭೈರವ ಮೂರ್ತಿಯೆ ನಮಾಮಿ ॥

ಬಾಲಭೈರವ ಕೃತಿಯಲ್ಲಿ ಮೆರೆದಾಡಿಕೊಂಡು ಪಯಣ ಬಂದೇನೆಂಬಂಥಾ ।
ಕುರುಭೈರವ, ಕ್ರೋಧನಭೈರವ, ಭಿಷಣಭೈರವ, ಉನ್ನತಭೈರವ,
ಕಟ್ವಾಂಗಭೈರವ, ಸ್ವಾಮಿಯವರು ಈ ಹೊತ್ತಿನ ಮಂಡ್ಲಭೋಗಕ್ಕೆ ತೆರಳಿ
ಬರುವಂಥಾ ಕಾಲದಲ್ಲಿ ಬಾರಿಸಿಕೊಳ್ಳುವಂತಾ ಭೈರವನ ಕಾಲ್ಮಾನವಾಯ್ತು ॥

## ಬ್ರಹ್ಮಧ್ಯಾನ

ಉದ್ಯದ್ಭಾಸ್ಕರ ಸನ್ನಿಭಂ ತ್ರಿಣಯನಂ ।
ನಾಗೇಂದ್ರ ಹಾರೋಜ್ವಲಂ । (=ಭೂಷೋಜ್ವಲಂ।)
ಹಸ್ತೇದ್ಯಸ್ತ ದಂಡ ಖಡ್ಗ ಕಪಾಲ ಹಸ್ತಂ ।
ಶ್ವೇತಾಬ್ಜ ಢಕ್ಕಾಯುಧಂ ॥

ವಿದ್ಯುತ್ಕಾಂಚನ ಕಿಂಕಿಣೀಸಪೂರಿತಂ ।
ಭೂತೇಶಂ ಚತುರಾನನಂ ಭಯಹರೋ ।
ಬ್ರಹ್ಮಾಭಿಧಾನಂ ಭಜೇ ॥ (ಹಿಂದೆಯೇ ಬಂದಿರುವ ಬ್ರಹ್ಮನ ವಿವರ ಹೇಳಿ ಕಾಲ್ಮಾನ ಬಾರಿಸುವುದು)

## ನಾಗ ಧ್ಯಾನ

ಅನಂತಶೀರ್ಷಂ ಜಗದೇಕ ಕುಂಡಲಂ ।
ಪೀತಾಂಬರಂ ಧೂಮ್ರ ಸಹಸ್ರ ಲೋಚನಂ ।

ಉದಾರ ವೀರ್ಯಂ ವಿಷದಂಷ್ಟ್ರಕಾರಿಣಂ ।
ನಮಾಮ್ಯನಂತಂ ಭೂವನೈಕ ನಾಥಂ ॥ (ನಾಗನ ವಿವರ, ಕಾಲ್ಮಾನವಾಗಿ, ಪದ ಹೇಳುವುದು)

## ಯಕ್ಷಿ ಧ್ಯಾನ

ಬ್ರಹ್ಮಾನಂದ ಸ್ವರೂಪೇ ಸಕಲಗುಣನಿಧಿ ಪ್ರದಾಯೇ ।
ಬ್ರಹ್ಮೇಂದ್ರಾರ್ಚಿತ ರೌದ್ರಕೋಟಿ ಮುಕುಟಂ ।

ತತ್ವಾಂಗಿರೇಕಾಂಗಿತೋ ಬ್ರಹ್ಮಾಂಡಾಂಡ ದಶಾಂಡ ಪದ್ಮಜಗನಿಲಯೇ ।
ತ್ರಿಶಕ್ತಿನೀಲಾಕೃತೀ ।

ಬ್ರಾಹ್ಮೀ ಬಾಲೇಂದು ಚೂಡಂ ।
ನವಕನಕಮಯಾಂ ।

ನಳಿನಾಕ್ಷೀ ಪರಬ್ರಹ್ಮರೂಪನ್ನಮಾಮೀ ॥ (......ಯಕ್ಷಿ ವಿವರ..... ಗಂಧರ್ವ ಕನ್ನೆ, ಅತುತಕನ್ನೆ, ನಾಗಕನ್ನೆ, ಜಲಕನ್ನೆ.......)

## ರಕ್ತೇಶ್ವರಿ ಧ್ಯಾನ

ರಕ್ತೋಡಂಬರ ಮಂಬರಾಂಗ ವಿಲಸೇ ।
ಸಂಹಾರವೇಷೋಜ್ವಲೇ ।

ಜಿಹ್ವಾನಾದ ಕರೀಂ ಮಧುರಾಂ ಮಾಂಸಾಹಾರಿಣೀ ।
ಸ್ಥೂಲಾಶೂಲ ವಿಶಾಲ ರಕ್ತನಯನಂ ।

ಕಂಕಾಳ ವೇಣೋದರೀಂ ।
ದೇವಿ ಭೂತಳನಾಥ ಭಕ್ತ ಶತ್ರುಹರಣಂ ।
ಸಂಹಾರ ರಕ್ತೇಶ್ವರೀಂ ಭಜೇ ॥ (ಕಾಲ್ಮಾನ........)

## ನಂದಿ ಧ್ಯಾನ

ಊರ್ಧ್ವಶೃಂಗಂ ಚತುಷ್ಪಾದಂ ರಕ್ತನೇತ್ರೊ ಭಯಂಕರಂ ।
ದೇಹತೋ ಪರ್ವತಾಕಾರಂ ದೀರ್ಘಶ್ವಾಸಂ ಮಹಾದ್ಭುತಂ ನಮಾಮಿ ॥
(ನಂದಿ ವಿವರ..... ಹಿರೇ ನಂದಿ । ಕೊಡನಂದಿ । ಕುಂಡನಂದಿ.... ಇತ್ಯಾದಿ, ಕಾಲ್ಮಾನ ಬಾರಿಸುವುದು)

## ಬೊಬ್ಬರ್ಯನ ಧ್ಯಾನವು

ಅಶ್ವ ಸಮಾರೂಢೋ ।
ಯಮನೇಚರಂತಂ ।
ನಾರಾಜ್ಯಂ ।

ಕೃತಂಕರಾಢ್ಯಂ ।
ಶಾಸ್ತ್ರ್ಯರ್ಮಸ್ಯ ಫಣಿಭೂಷಿತಾಂಗಂ ।
ದೇಹಸ್ಯವೀರಂ ಸುಕುಮಾರ ರೂಪಂ ನಮಾಮಿ ॥

## ಜಟ್ಟಿಗನ ಧ್ಯಾನವು

ಜಟಾಜೂಟಿ ಸಮುತ್ಪನ್ನಂ ।
ಶ್ಯಾಮಲಂ ರತ್ನ ಕಿರೀಟ ಕುಂಡಲಧರಂ ।
ಬಹು ಯೋಜನ ವಿಸ್ತೀರ್ಣಂ ದೀರ್ಘಮಾಯುತಂ ।
ಚತುರ್ಭುಜ ಮುದರಾಂಗಂ ।
ದಿವ್ಯರೂಪಂ ನಮಾಮಿ ॥

## ಅಮ್ಮನವರ ಧ್ಯಾನವು

ಮಾತರ್ಮೇಮಧುಕೈಟಭಘ್ನ ಮಹಿಷಃ ಪ್ರಾಣಾಪಹಾರೋದ್ಯಮೇ ।
ಹೇಲಾಲಂಬಿತ ಧೂಮ್ರಲೋಚನ ವಧೇ ಹೇ ಚಂಡಮುಂಡಾಮರ್ದಿನಿ ॥
ನಿಶೇಷೀಕೃತ ರಕ್ತಬೀಜಧನುಜೇ ನಿತ್ಯೇ ನಿಶುಂಭಾಪಹೇ ।
ಶುಂಭಧ್ವಂಸಿ ವಿನಾಶಯಾಸು ದುರಿತೇ ದುರ್ಗೇ ನಮಸ್ತೇಂಬಿಕೇ ॥

ದುರ್ಗಾಚ ಆರ್ಯಾ ಕೌಮಾರೀ ಅಂಬಿಕಾಸ್ತತಃ ।
ಮಹಿಷ ಮರ್ದಿನಿಶ್ಚೈವ ಚಂಡಕೇಚ ಸರಸ್ವತೀ ।
ವಾಗೀಶ್ವರೀ ಅಮ್ಮನವರೆಂದು ಕೊಲ್ಲೂರಿಗೂ, ಕೊಲ್ಲಾಪುರಕ್ಕೂ, ಅಬ್ಯಾಡಿಗೂ,
ಪಂಚ್ಮೀಕಾನಿಗೂ, ಈ ಹೊತ್ತಿನ ಮಂಡಲಭೋಗಕ್ಕೂ ಪಯಣ
ಬಂದೇನೆಂಬಂಥಾ – (ದುರ್ಗೆ, ಮಹಾಕಾಳೀ...... ಬಾರ್ಸಿಕೊಳ್ಳುವಂತಹಾ
ದುರ್ಗಾ ವಿನೋದವಾಯ್ತು. ಇಲ್ಲಿಗೆ ರೂಪಕ ತಾಳದ ಪದ ಹಾಡುವುದು)

## ವೀರಭದ್ರನ ಧ್ಯಾನ

ಶ್ರೀನಾಥಂ ಬ್ರಹ್ಮರುದ್ರಂ ।
ದಿನಕಿರಣಂ ।
ಚಂದ್ರ ಬಿಂಬಂ ಲಲಾಟಂ ।
ಆನಂದಂ ದಿವ್ಯಪೀಠಂ ।

ಬಹುವಿಧ ಚರಿತಂ ।
ಸರ್ವ ಮಂತ್ರಾದಿಕಾರಂ ।
ನಾದಂ ಪ್ರತ್ಯಕ್ಷ ಯೋಗಂ ।
ಪ್ರಹಗಣ ಸಹಿತಂ ।

ಪಾವಕಂ ।
ಕ್ರೂರದಂಷ್ಟ್ರಂ ।
ನಾನಾ ರೌದ್ರಾವತಾರಂ ।
ತ್ರಿಭುವನ ನಮಿತಂ ।

ಊರ್ಧ್ವಕೇಶಂ ಶ್ಯಾಮಳಂ ।
ಶ್ರೀ ವೀರಭದ್ರಂ ನಮಾಮಿ ॥ (ವಿವರ ಹೇಳಿ ಕಾಲ್ಮಾನ ಬಾರಿಸುವುದು)

## ಕ್ಷೇತ್ರಪಾಲ ಧ್ಯಾನ

ಏಕಂ ಖಟ್ವಾಂಗ ಹಸ್ತಂ ।
ಭುಜಗಪರಿಮಿತಂ ಪಾಶಮೇಕಂ ತ್ರಿಶೂಲಂ ವಾಮಹಸ್ತೇಪಿನಾಶಂ ।

ಚಂದ್ರಾರ್ಧಕೇತು ಮೂಲಂ ।
ನರಶರ ಮುಕುಟಂ ।

ಸರ್ಪ ಯಜ್ಞೋಪವೀತಂ ।
ಕಾಳಕಾರಾಂಧಕಾರಂ ಮಮದುರಿತ ಹರಂ ।

ಭೈರವಂ ।
ಕ್ಷೇತ್ರಪಾಲಂ ನಮಾಮಿ ॥ (ವಿವರ ಹೇಳಿ ಕಾಲ್ಮಾನ ಬಾರಿಸುವುದು)

## ಗಂಧರ್ವ ಧ್ಯಾನ

ಭುಜಂಗವಾಹನ ರೂಢ ।
ತ್ರಿಕಂ ಚಾರಣಪುರಿ ।
ಪಾಶಾಲವಿನಕೆ ಬಬ್ರಕೇಶ ಪಾತುಮಾಂ ॥

ಎಂಟು ದಿಕ್ಕು ಹದಿನಾರು ದೆಸೆಯೊಳಗಣ ಸಕಲ ಭೂತಾದಿ ಭೂತಗಣಂಗಳು ।
ದೇವಾದಿ ದೇವಗಣಂಗಳು ।
ಮಹಾರುದ್ರ ಗಣಂಗಳು ।
ವಿಷ್ಣು ಗಣಂಗಳು ।
ಪಡೆ ಪರಿವಾರಂಗಳೂ ।

ಸಹಿತವಾಗಿ ಈ ಹೊತ್ತಿನ ಮಂಡ್ಲಭೋಗಕ್ಕೆ ತೆರಳಿ ಬರುವಂಥಾ ಕಾಲದಲ್ಲಿ
ಬಾರ್ಸಿಕೊಳ್ಳುವ ಸರ್ವಾದ್ಯ ಕ್ರಮವಾಯ್ತು ॥
"ಹಾ । ಹೀ । ಹೂ ॥' ಉಚ್ಚರಿಸಿದ ನಂತರ (ಹಾ । ಹೀ । ಹೂ ।)

## ಮುರಹರನ ಧ್ಯಾನ

ಸ್ಮರಿಸಿರೋ ಮರೆಯದೆ ಮುರಹರನ ।
ದೇವ ।
ಕರುಣದಿ ಶರಣರ ಪೊರೆವವನ ॥

ದೇವಕಿಯುದರದಿ ಜನಿಸಿದನ ।
ನಂದಗೋಪಗೆ ಸುತನೆಂದೆನಿಸಿದನ ॥
ತೀವಿದ್ದ ಮೊಲೆಯನುಂಡು ತೇಗಿದನ ।
ಮಾಯಾಪೂತನಿ ಅಸುವನ್ನೆ ಸೆಳೆದವನ ॥

ಕಾಲಲ್ಲಿ ಶಕಟನ್ನ ಒದೆದವನ ।
ಧೀರ ಪ್ರಲಂಬನ ಮುರಿದವನ ॥
ನವಕ್ರೈಕ ದಾನವರ ಕೆಡಹಿದನ ।
ಧರೆಗೆ ದೊಪ್ಪನೆ ಬಂದು ಬಿದ್ದವನ ॥

ನಿದ್ರೆ ಮಾಡುತ್ತ ಮಲಗಿರ್ದವನ ।
ಮೊಸ್ರು ।
ಕಡೆವ ಹದನ ಕೇಳುತೆದ್ದವನ ॥
ಸದ್ದು ಮಾಡದೆ ಬೆಣ್ಣೆಯ ಕದ್ದವನ ।

ಅದರ ।
ಮುದ್ದೆ ಮುದ್ದೆಯ ಮಾಡಿ ಮೆದ್ದುವನ ॥
ಮೊಸರ ಭಾಂಡವ ಜರಿದೋಡಿದನ ।
ಹಸನದಿ ಕರುಗಳ ಬಿಡಿಸಿದನ ॥

ವೃಂದಾವನದೊಳಗಾಡಿದನ ।
ಚಂದದಿ ಕೊಳಲೂದಿ ಪಾಡಿದನ ॥
ಮಡದಿಯರನ್ನೆ ಮರುಳು ಮಾಡಿದನ ।
ಅವರುಡುವ ಸೀರೆಯ ಸೆಳೆದೋಡಿದನ ॥

ಕಡಹದ ಮರನೇರಿ ನಲಿದವನ ।
ಅದರ ।
ಮಡುವಿಂದ ಮಡುವಿಗೆ ಧುಮುಕಿದನ ॥
ಪೆಡೆಯ ಕಾಳಿಂಗನ ತುಳಿದವನ ।

ಘೋರ ।
ವಿಷದ ಮಡುವ ಹೊಕ್ಕು ಕಲಕಿದನ ॥

## ಮಹಾಲಿಂಗನ ಧ್ಯಾನ

ಶಿರದೊಳು ಗಂಗೆಯ ಪೊತ್ತವನ ।
ಕರದಿ ಕಪಾಲವ ಪಿಡಿದವನ ॥
ಗಜಚರ್ಮಾಂಬರಧರಹರನ ।
ಉರಗಾಭರಣದಿ ಮೆರೆದವನ ॥

ಮನೆಮನೆ ಭಿಕ್ಷವ ಬೇಡಿದನ ।
ತರತರದಲಿ ಸಂಚರಿಸಿದನ ॥
ಬಿಜಿಶೇಖರನೆಂದೆನಿಸಿದನ ।
ಬಿಸಿನೇ ಭಸ್ಮಾಂಗ ವಿಲೇಪಿತನ ॥

ಗರಳ ಪಾನವ ಮಾಡಿ ಸೈರಿಪನ ।
ದುರುಳ ಗಜೇಂದ್ರನ ಮಡುಹಿದನ ॥
ಬಾಣನ ಬಾಗಿಲ ಕಾಯ್ದವನ ।
ತ್ರಾಣದಿ ತ್ರಿಪುರರ ಕೆಡಹಿದನ ॥

ಮಾಣದೆ ಸುರಗಣ ಸೇವಿಪನ ।
ಗೀರ್ವಾಣ ಮುನಿಗಳ ಸಲಹಿದನ ॥
ಗಂಧ ಕರ್ಪೂರ ಪುನುಗು (ಜಿ?) ವಾಜಿಯ ತಂದು ।
ಇಂದಿನೊಳು ಮೈಮೇಲೆ ಬೀಸುವೆನೆಂದು ॥

ವರವ ಬೇಡುವರೆಲ್ಲ ಇಲ್ಲಿಗೇ ಬನ್ನಿ ।
ವರವ ಕೊಡುವಾ ದೇವ ಮಹಾಲಿಂಗೇಶಾನೂ ॥
ಮಾಲಿಂಗೇಶಾ ದೇವ ಮಹಾಗಹೇಶ ।
ಉಮಾ ಮಹೇಶ ದೇವ ವೀರಭದ್ರೇಶಾ ॥

ವೀರೇಶ ವಿಘ್ನೇಶ ನಂದೀಶ ಭೃಂಗೀಶ ।
ಷಣ್ಮುಖ ಭೈರವನೊಡನಾಡುತ ॥
ಮಹಕಾಳಿ ಮಹಾಲಕ್ಷ್ಮೀ ಸರಸ್ವತಿ ವನದುರ್ಗೆ ।
ಚಂಡಿಚಾಮುಂಡಿಯರೊಡನಾಡುತ ॥

ಮಹಿಷಮರ್ದಿನಿ ಬಂದು ಸೇವೆಯೊ ದೇವಾ ।
ವೀರೇಶನೂ ಬಂದು ವರವೊ ನಿಮಗೆ ॥

ಬ್ರಹ್ಮಲಿಂಗ ಮಹನಾಶ ಹೆಣ್ಣ ಯಕ್ಷೆ ರಕ್ತೇಶ್ವರಿ ।
ಹಿರೆನಂದಿ ಮಳ್ಯಾಳ ಬಬ್ರ್ಯ ಜೆಟ್ಟಿಗದೇವನು ॥

ಸುತ್ತಣ ಪರಿವಾರ ವಿಸ್ತಾರದಿಂದ ಕೂಡಿ ।
ಪ್ರತ್ಯಕ್ಷದಿಂದ ದೇವ ತೆರಳಿ ಬಾರೋ ॥

## ಬ್ರಹ್ಮಲಿಂಗನ ಹಾಡು

ಹಾಡು ವಾದ್ಯವ ತಿಳಿದು ಕೇಳಬೇಕು ।
ಬೇಡಿಕೊಂಬೆನು ನಲಿದಾಡಬೇಕು ॥
ಮಹಾ ಗಣೇಶ ದೇವ ಮಹಾಲಿಂಗೇಶ ।
ಉಮಾ ಮಹೇಶ ದೇವ ವೀರಭದ್ರೇಶ ॥

ವೀರೇಶ ವಿಘ್ನೇಶ ನಂದೀಶ ಭೃಂಗೀಶ ।
ಷಣ್ಮುಖ ಭೈರವರೊಡನಾಡುತ ॥
ಮಹಕಾಳಿ ಮಹಾಲಕ್ಷ್ಮಿ ಸರಸ್ವತಿ ವನದುರ್ಗೆ ।
ಚಂಡಿಚಾಮುಂಡಿಯರೊಡನಾಡುತ ॥
ಇವರೆಲ್ಲರ ಒಡನಾಟದಿಂದ ಶಾಸ್ತಾರ ಕುಲಬ್ರಹ್ಮ ದೇವ ತೆರಳಿ ಬನ್ನಿ ॥
(ಬ್ರಹ್ಮನಿಗೆ....)

ಕಾಶ್ಮೀರದಿಂದ ದೇವ ಹೊರ್ಡುತಲಿದ್ರಿ ।
ಹಾರು ಕುದುರೆ, ಬ್ರಹ್ಮದೇವ, ಏರಿಕೊಂಡು ॥
ಕುರುಕ್ಷೇತ್ರ ಗಯಕ್ಷೇತ್ರ ಯಂಕ್ಟಾದ್ರಿ ಶ್ರೀರಂಗ ।
ಮಳಯಾಳ ಕೇರಳ ಕಳಿದೇ ಬಂದೂ ॥
ಇದು ಸ್ಥಳವೂ ದೇವ ಘನವಿದೆಂದು ವಾಸವಾದನು ದೇವ ಕಮಲಜನು ॥

ಬ್ರಹ್ಮಸ್ವವೋ ಸ್ವಾಮಿ ಪಡೆಯಲು ಸುಖ ಬಂದು ।
ನಿರ್ಮಿಸಿದೆ ನರದೇಹವನು ॥
ಕರವು ಎಂಟು ನಿಮಗೆ ಶಿರವು ನಾಲ್ಕು ।
ಹಿರಿದಪ್ಪಂತ ದೇಹ ಬ್ರಹ್ಮರಾಯರೆ ॥

ಹರಿದ ತಲೆ ನಿಮಗೆ ಮುರಿದ ಮೀಸೆ ।
ನಾಭಿಯಲಿ ಚಕ್ರ ಅರವಿಂದ ಪದ್ಮ ॥
ಹಿಂಬಲ್ಲಿ ಬ್ರಹ್ಮರಾಯ ಹಿಂಬಾಗಿ ನಸುನಗುತ ।
ಜಂಬು ದೀಪಗಳಿಂದ ಹೊರಟು ಬಾರೋ ॥

ಹಗಲಿನಲ್ಲಿ ನಿಮಗೆ ಪೂಜೆಯ ಮಾಡಿ ।
ರಾತ್ರಿಯಲ್ಲಿ ಕೊಡುವರು ಭೋಗಸೇವೆಯ ॥
ಪಂಚವರ್ಣದ ಪುಡಿಯ ಹಿಂಗದೆ ಕೊಂಡು ।
ಪಂಚ ದಾರದಲಿ ದೇಹವ ನಿರ್ಮಿಸುತ ॥

ನಿಮ್ಮರು ವಾರವ ನಿರ್ಮಿಸಿ ಬರಕೊಂಡು ।
ನಿಮ್ಮಾದ್ಯಂತರ ಪೂಜಿಸುತ ॥
ಹಿಂಗದ ಧೂಪದೀಪ ಮಾಡಿಕೊಂಡು ।
ಮಂಗಳಾರತಿಯೆತ್ತಿ ಪ್ರಾರ್ಥಿಸುತ ॥

ವಿಧವಿಧದಲ್ಲಿ ಕರೆದಾಡುವಾಗ ।
ಮುದದಿ ಘೋಷದಿ ದೇವ ಬರುತಲಿದ್ರೀ ॥
ಮಂಡ್ಲಭೋಗಕ್ಕೆ ದೇವ ಬಂದರ ಮೇಲೆ ।
ಅಂದವುಳ್ಳ ವಿಸ್ತಾರ ತಿಳಿದೆ ಕೇಳೋ ॥

ಹೊನ್ನ ಕವಚವ ತಂದು ಹೊಳಹಿದಂತೆ ।
ಹುಸಿ ನಡುವಿನ ಚಂದ ಶಾಸ್ತಾರಗೆ ॥
ಮದಗಜನೂ ತೂಗುವ ಸೊಂಡಿಲಂತೇ ।
ತೂಗುತಿರ್ಪ ನಳಿತೋಳೆರಡು ॥

ಪೌರ್ಣಮೆಯ ಪೂರ್ಣಚಂದ್ರನಂತೆ ।
ಮುಖದ ಕಾಂತಿಯು ಚಂದ್ರ ಬ್ರಹ್ಮದೇವಗೆ ॥
ತರಣಿಯ ಕಿರಣದ ತಂಪಿನಂತೆ ।
ಅರನೊಸಲಿನ ಬೆಳಕು ಕಮಲಜಗೆ ॥

ತಾವರೆಯ ಕಿರುಯೆಸಳಿನಂತೆ ॥
ಕಣ್ಣಡವಳಾರವು ಚಂದ ಶಾಸ್ತಾರಗೆ ॥
ಕೋಲ್ ಸಂಪ್ಗೆಯ ಕೋಲು ಮೊಗ್ಗೆಯಂತೆ ।
ಮೂಗಿನ ಕೋಲು ಚಂದ ಬ್ರಹ್ಮದೇವಗೆ ॥

ಕರ್ಪೂರದ ಕಿರುಕರಡ್ಕೆಯಂತೆ ।
ಒಪ್ಪಿ ಬಂದವು ನಿಮ್ಮ ಬಾಯ್ದಾರೆಯು ॥
ದಾಳಿಂಬದ ಕಿರುಬೀಜದಂತೆ ।
ದಂತಪಂಗ್ತಿಯು ಚಂದ ಬ್ರಹ್ಮದೇವಗೆ ॥

ಅಜಬ್ರಹ್ಮ, ವಾಣಿಬ್ರಹ್ಮ, ಜಡೆಬ್ರಹ್ಮ, ಕೊಡೆಬ್ರಹ್ಮ, ।
ಕನಕಬ್ರಹ್ಮ, ಧೀರಬ್ರಹ್ಮ, ಶೂಲಿಬ್ರಹ್ಮ ।
ಅಚ್ಚ ಬ್ರಹ್ಮನೆ ನಿಮ್ಮ ।
ಅರಸಿಯರೊಡನಾಡಿ ।
ಅತಿ ಹರುಷದಿ ಬಾರೋ ಭೋಗಸೇವೆಗೆ ॥

ಶೂಲಿ ಬ್ರಹ್ಮನೆ ನಿಮ್ಮ ಶೂಲಿಯರೊಡನಾದಿ ।
ಶೂರತ್ವದಲಿ ಬಾರೊ ಭೋಗಸೇವೆಗೆ ॥
ಜಡೆಯ ಬ್ರಹ್ಮಯ್ಯ ನಿಮ್ಮ ಮಡದಿಯರೊಡನಾಡಿ ।
ಕಡುಹರುಷದಿ ಬಾರೋ ಭೋಗಸೇವೆಗೆ ॥

ವಾಣಿಬ್ರಹ್ಮನೆ ನಿಮ್ಮ ರಾಣಿಯರೊಡಗೂಡಿ ।
ಜಾಣತನದಿ ಬಾರೋ ಭೋಗಸೇವೆಗೆ ॥
ಶಾಸ್ತಾರನ ಕುಲಬ್ರಹ್ಮ ನಲಿದ ಮೇಲೆ ।
ಪಾತಾಳದ ಮಹಾನಾಗ ತೆರಳ ಬನ್ನಿ ॥

ಅಂದು ಅರ್ಜುನ ದೇವ ಬಂದು ಕಾಂಡವ ವನವ ।
ನಿಂದು ಕಾಲಾಗ್ನಿಗೆ ಕೊಡಿಸುವಾಗ ॥
ಚಂದದಿ ಕಾಲಾಗ್ನಿ ವನವನ್ನು ಸುಡುವಾಗ ।
ಅಂದು ಸಾಯದ ನಾಗ ತೆರಳಿ ಬಾರೊ ॥

ಪಾಡಿ ಪೊಗಳಿ ವರವ ನೀಡಿ ಮುಗಿದು ವರವ ।
ಬೇಡುವೆ ದಯ ಮಾಡೋ ಮಹಾಶೇಷನೆ ॥
ಸರ್ಪ ರಾಜನೆ ನಾಗ ಕಲ್ಪಭೋಜನೆ ಶಿರದಿ ।
ಪುಷ್ಪ ಮಾಲೆಯನು ಧರಿಸಿದವನೆ ॥

ಕಪ್ಪು ಕಂಟನ ಕೊರಳೊಳೊಪ್ಪಿದ ಭುಜಗನೆ ।
ಶೂರ್ಪಕರ್ಣನ ಸೊಂಟಕೊಪ್ಪಿದನೆ ॥
ಜನನಿಯ ಶಾಪಕ್ಕೆ ಮನದಿ ಯೋಚಿಸಿ ಶೇಷ ।
ವನದೊಳು ತಪಸಿಗೆ ನಿಂದವನೆ ॥

ಚಿನುಮಯಾತ್ಮಕನನ್ನು ಮನದಲ್ಲಿ ಯೋಚಿಸಿ ।
ಅನುದಿನದಲ್ಲಿ ಧ್ಯಾನಿಸುತ್ತಿಹನೆ ॥
ವಾರಿಜಾಸನನು ಮೈದೋರಲು ಸಮಯದಿ ।
ಚಾರುಭಕ್ತಿಗಳಿಂದ ಸ್ತುತಿಸಿದನೆ ॥

ಕರುಣದಿ ವರವಿತ್ತು ತೆರಳಿದ ಕಮಲಜ ।
ಭರದಿ ಪಾತಾಳಕ್ಕೆ ಇಳಿದವನೆ ॥
ಪಾತಾಳದೊಳು ಸಂಪ್ರೀತಿಯೊಳಿರುವನೇ ಭೂತಳದೊಳು ಖ್ಯಾತಿ ಪಡೆದವನೆ॥
ಮಹನಾಗನ ಪರಿವಾರ ನಲಿದಾ ಮೇಲೆ ।
ದೇವಲೋಕದ ಹೆಣ್ಣು ಯಕ್ಷೆ ತೆರಳಿ ಬಾರೋ ॥

ಹಾಲು ವರ್ಣದ ಯಕ್ಷೆ ಲೀಲೆ ಪಟ್ಟೆಯನುಟ್ಟು ।
ಹಾಲೊಳಗೆಂಬ ಮುತ್ತನೆ ಬಿಗಿದು ॥
ಹಾಲೊಳರಾಗಿಯೆ ಭಾಮೆಯರೊಡನಾಟ ।
ಲೋಲನಯನೆ ದೇವಿ ಹೆಣ್ಣು ಯಕ್ಷೆಯು ॥
ಹೆಣ್ಣುಯಕ್ಷೆ ಗಂಡುಯಕ್ಷೆ ಭೂತಯಕ್ಷೆ ಪ್ರೇತಯಕ್ಷೆ ।
ತಾಂಬೂಲಯಕ್ಷೆ ನಾಗಯಕ್ಷೆ ನಲಿದಾ ಮೇಲೆ ॥

ರಕ್ತೇಶ್ವರಿ ರಕ್ತಗಂಧಿಯರೊಡನಾಡುತ ।
ಕ್ಷಿತಿಯೊಳು ಹಿರೆನಂದಿನಿ ತೆರಳಿ ಬಾರೋ ॥
ಅಂತರನಂದಿ ಆಕಾಶನಂದಿ ಕೆಂಡನಂದಿ ಕುಂಡ ನಂದಿ ।
ಪಂಚಮುಖದ ನಂದಿಕೇಶ್ವರ ನಲಿದ ಮೇಲೆ ಮಳೆಯಾಳ ಬಬ್ರ್ಯ,
ಧಾನಿಬಬ್ರ್ಯ, ಧೀರಬಬ್ರ್ಯ, ಹೋರಿಬಬ್ರ್ಯ ।
ಅಂತ್ರಬಬ್ರ್ಯ, ಅಕಾಶಬಬ್ರ್ಯ ನಲಿದ ಮೇಲೆ ।
ಜಡೆಬಬ್ರ್ಯ, ಕೊಡೆಬಬ್ರ್ಯ, ಕನಕಬಬ್ರ್ಯ, ಶೂಲಿಬಬ್ರ್ಯ ಸ್ವಾಮಿಯವರು ।
ಮೋಟ್‌ಕಾಲ್ ಬಬ್ರ್ಯ ಸಪರಿವಾರ ತೆರಳಿ ಬಾರೋ ॥

ನೇತ್ರಣಿ ಜೆಟ್ಟಿಗರಾಯ ವರಂಗದ ಜೆಟ್ಟಿಗರಾಯ, ಹಟ್ಟಿಯಂಗಡಿ ಜೆಟ್ಟಿಗರಾಯ
ನಲಿದ ಮೇಲೆ ಖಂಡಪರಶು ನಿಮಗೆ ರುಂಡಮಾಲವು ।
ಹೊನ್ನದಂಡಿಗೆಯನೇರಿ ತೆರಳಿ ಬನ್ನಿ ॥
ಉಡೆಯೆಲ್ಲಿಯೇ ನಿಮಗೆ ಉಡೆ ಚರ್ಮವೂ ।
ಉರಗಾಭರಣವು ಕೊರಳೊಳಗೆ ॥
ಮೋಡಮನೆ ಕ್ಷೇತ್ರಪಾಲ ನಾಗ್ರಾದಿ ಕ್ಷೇತ್ರಪಾಲ ನಲಿದ ಮೇಲೆ ॥

ಚಿಕ್ಕಲ್ತಿ ಮಾಯಲ್ತಿ ಉಮ್ಮಲ್ತಿ ಬೊಬ್ಬರ್ತಿ ।
ಬೈಕಾಡ್ತಿ ಪರಿವಾರ ನಲಿದ ಮೇಲೆ ॥
ಅನಂತಾಯ ಗಾಳೆರಾಯ ಗಂಟೆರಾಯ ಕುಡ್ಮಣ್ಣಾಯ ।
ಕಡ್ಗೇಶ ಕಡ್ಗ ರಾವಣರೊಡನಾಡುತ ॥

ಮೈಷಂದಾಯ ಭೂತರಾಜ ದ್ವಾರಪಾಲಕ್ರು, ಬಾಗಿಲು ಬಬ್ರ್ಯ ।
ಮುಂಡಾಸ್‌ರಾಯನ ಪರಿವಾರ ನಲಿದ ಮೇಲೆ ॥
ಕೇಚರಾವುತ ಗೂಟ್ರಮಲ್ಲರೊಡನಾಡುತ ।
ಅಡ್ಕಂತಾಯನ ಪರಿವಾರ ನಲಿದ ಮೇಲೆ ॥

ಹಳೆಯಮ್ಮ ಬಾಲಚಿಕ್ಕು ಬಗ್ಗು ಚಿಕ್ಕು ಮರ್ಲುಚಿಕ್ಕು ।
ಅವತಾರ ಚಿಕ್ಕು ದೊಟ್ಟಿಕಾಲ್ ಚಿಕ್ಕು ಪರಿವಾರವು ॥
ವೀರ ಮಾಸ್ತಿ ರೌದ್ರ ಮಾಸ್ತಿ ಹೊನ್ನ ಮಾಸ್ತಿ ಕೆಂಡ ಮಾಸ್ತಿ ।
ಕಾಗಮಾಸ್ತಿ ಜೈನಮಾಸ್ತಿ ತೆರಳಿ ಬಾರೋ ॥

ಮೂಡೂರ್ ಹ್ವಾಗುಳಿ ಮೂಕ ಹ್ವಾಗುಳಿ ಕೆಪ್ಪ ಹ್ವಾಗುಳಿ ಜೈನಹ್ವಾಗುಳಿ ।
ತಿರುಗಣೆ ಹ್ವಾಗುಳಿ ಶೂಲದಹ್ವಾಗುಳಿ ತೆರಳಿ ಬಾರೋ ॥
ಹಣಾರಹ್ವಾಗುಳಿ ಕೆಂಪಹ್ವಾಗುಳಿ ಕೆಂಡದಹ್ವಾಗುಳಿ ಕುಇಾಡಿಹ್ವಾಗುಳಿ ।
ಹೊರಸುತ್ತಿನ ಹ್ವಾಗುಳಿ ಪರಿವಾರ ನಲಿದ ಮೇಲೆ ॥

ಕಲ್ಲುಕುಟಿಗ ಕುಟಿಜಾತ ಧೂಮಾವತಿ ಪಂಜುರ್ಲಿ ।
ಹಾದಿವೀರ್ರು ಬೀದಿವೀರ್ರು ಸುಂಕದ ವೀರ್ರು ಸರಳವೀರ್ರು ।
ಬೇಟೆವೀರ್ರು ಕೋಟೆವೀರ್ರು ಕರವರ್ ವೀರರು ॥
ಹುಲಿಚೌಂಡಿ ಘೋರಚೌಂಡಿ ನೆತ್ತರಚೌಂಡಿ ಶೂಲಚೌಂಡಿ ।
ದೇವಚೌಂಡಿ ಪರಿವಾರ ನಲಿದ ಮೇಲೆ ॥

ಈಳುಗುತ್ತಾ ಕೀಳು ಪರಿವಾರವೂ ।
ಮೇಲ್ ಭೂತ ಮೇಲ್ ಪರಿವಾರವೂ ।
ಎಂಟು ದಿಕ್ಕಿನೊಳಗುಳ್ಳ ಹೊರಗಣ ಪರಿವಾರ ।
ಕರೆದಿರಿಸಿರೆ ಬನ್ನಿ ಭೋಗಕಾಗಿ ॥

## ನೀರಾಟದ ಹಾಡು

ಬೆಳಗಾಗುವ ಜಾವದಲ್ಲಿ ದೇವರ ಬಳಿ ನಂದಿಯನ್ನೇರಿ ಜಗದೊಡೆಯ
ಬರುವನೆಂದೋ ವರವ ಕಂಡಿರೇ ॥
ಕುದುರೆ ಏಳನೆ ಕಟ್ಟಿ ಅರುಣ ಸಾರಥಿಯಾದರೆ ।
ಕಿರಣದಲಿ ರವಿಯೂ ಮೂಡುತಲಿದ್ದನು ॥

ಕತ್ತಲೆ ಮರಳಿದವು ನಕ್ಷತ್ರ ಮುಳುಗಿದವು ।
ಸುತ್ತಲೂ ಜಗಪಕ್ಷಿ ಸದ್ದುಗೈವ ಸಮಯದಲಿ ಪ್ರತ್ಯಕ್ಷದಲಿ
ರವಿಯೋ ಮೂಡುತಲಿದ್ದನು ॥
ತಾವರೆ ಅರಳಿದವು ನವಿಲುಗಳು ಪಾಡಿದವು ।
ಮನುಮುನಿಗಳು ಅರ್ಘ್ಯ ಕೊಡುತಿರುವ ಸಮಯವು ಉದಯಕಾಲವು ॥
ಆರದೆನ್ನಯ (ಆರನೆನ್ನಯ) ತೋಟದೀರನೆಂದು ಮಮಾನಾಗೋ ರನ್ನೇರಿ
ತಂದು ಹೊಸಜಲದ ಮಧ್ಯದಲಿ ನೀರಾಟವಾಡುವಳು ಕನ್ನೇ ನಿನ್ನ ಮಗಳು ॥

ಅರಿಶಿನದ ಭೋಗವನು ವರಿಸಿಕೊಂಡಲು ಕನ್ನೆ ।
ಅರಳಿದಾ ಚಂಚಲ ಕನ್ನೆ ನೋಡಾ ॥
ಅರಸ ಬ್ರಹ್ಮನ ರಾಣಿ ಸರಸ ಮಾಡಲಿಕೆಂದು ।
ಸರಸಿಜಮುಖ ಬಂದು ನೀರಾಟಕ್ಕೆ ॥

ದೇವಲೋಕದೊಳಗುಳ್ಳ ದೇವಕನ್ಯೆಯರು ।
ನಾಗಲೋಕದೊಳಗುಳ್ಳ ನಾಗಕನ್ಯರು ॥
ಇಂದ್ರಲೋಕದೊಳಗುಳ್ಳ ಇಂದ್ರಕನ್ಯರು ।
ಚಂದ್ರಲೋಕದೊಳಗುಳ್ಳ ಚಂದ್ರಕನ್ಯರು ॥
ಮೂರ್‌ನಾಕೆಂಟು ಮಂದಿ ಕನ್ಯರಾಣಿಯರು ।
ಶ್ರೀ ಮುಡಿಯನು ಬಾಚಿ ಕಟ್ಟಿಕೊಂಡು ॥

ಮರುಗಮಲ್ಲಿಗೆ ಜಾಜಿ ತುರುಬಿಕೊಂಡು ।
ಮರುಗ ಮಲ್ಲಿಗೆ ಜಾಜಿ ಮುಗುಳು ಶ್ಯಾವಂತಿಗೆ ।
ಅರಳಮಲ್ಲಿಗೆ ಬಕುಲಪುಷ್ಪ ತುರುಬಿಕೊಂಡು ॥
ಸಸ್ತಿಗೆ (=ಸತ್ತಿಗೆ) ಹಿಡಿವಳು ವೀರಮಲ್ಲಿಗೆ ।
ಚಾಮರದಲ್ಲಿ ಕೂಡೆ ಮುಖದ ಮುಂದೆ ॥

ವಾದ್ಯದಿಂದ ।
ಹೊಡೆವ ।
ರಭಸದಿಂದ ।
ನಡೆಹೋದ್ರಿ ಮೂಡಣ ಜಲತಡಿಗೆ ॥

ಒಂದು ಮುಂಡದಲಿ ದೇವರು ಇಳಿದು ಮಿಂದು ।
ಎರಡು ಮುಂಡದಲಿ ದೇವರು ಮುಳುಗಿ ಮಿಂದು ॥
ಎಂಟೊಂಬತ್ತು ಹತ್ತು ಮುಂಡದಲ್ಲಿ ।
ಸುತ್ತಿ ಬಂದ ದೇವರು ಸುಳಿದೆ ಬಂದು ॥

ಇಂದ್ರಜಲ ಎಂಬ ತಡುಹಿನಲ್ಲಿ ।
ಹೂವಿನಲ್ಲಿ ಮನೆಮೋಡ ಕಟ್ಟಿಸಿ ಬ್ರಹ್ಮ ॥
ಹಾರಿ ಮೋಡವ ಹತ್ತಿ ಕುಳಿತುಕೊಂಡು ।
ದಿಕ್ಪಾಲಕರಿಗೆ ವಂದನೆ ಮಾಡುತಲಿದ್ರು ॥

ಇಂದ್ರಾಗ್ನಿಯವ ನಿಋತಿ ವರುಣ ವಾಯು ।
ಕುಬೇರ ಈಶಾನಗೆ ಬಾಲೆ ನಮೋ ಎಂದಳು ॥
ಈಶ್ವರನ ಬಲದಿಕ್ಕಿನೊಳು ಜಗದೀಶನಿಗೆ ಬಾಲೆ ನಮೋ ಎಂದಳು ॥

ಗಂಗೆಯಿಂದಲಿ ತಂದ ತೀರ್ಥಂಗಳ ।
ತಂದೆರೆದರು ತಮ್ಮ ಶಿರದ ಮೇಲೆ ॥
ಚಂದದಿಂದಲಿ ತಂದು ವಾಜಿಕೊಡುವ ನೀರ ।
ತಂದೆರೆದರು ತಮ್ಮ ಶಿರದ ಮೇಲೆ ॥

ಬೇಡಿಕೊಂಬೆನು ಹೊಸ ಬಂಗಾರ ।
ನಲಿನಲಿದಾಡೀ ನೀರಾಟದಿ ॥
ಗಂಗೆ ಗೋದಾವರಿ ತುಂಗಭದ್ರೆ ಸರಸ್ವತಿ ನೀವೆಲ್ಲ ಆಡಿಹೋದಿರಿ ನಿಮ್ಮ
ನಿಮ್ಮ ಸ್ವಸ್ಥಾನಕ್ಕಾಗಿರೆ ॥

ಉರುಳಿತು ಗುಣವಂತೆ ನಿರವಳಿತು ಇಲ್ಲಿ ।
ಚಲಗುಂಡಿ ಆಸ್ತಾನದಾ ॥
ಆದಿಯಲ್ಲೊಂದಪ್ಪ ಹೋದ ಪಾತಾಳಕ್ಕೆ ।
ಮೇದಿನಿಯೊಳಗ್ಯಾರು ಅರಿತವರಿಲ್ಲ ॥

ಆದಿದೈತ್ಯನ ಕೊಂದು ವೇದವನು ತಂದಾತ ।
ಮಾಧವಗೆ ಶರಣಾಗು ನಾರಾಯಣೀ ॥
ನಾಲ್ಕು ಸಮುದ್ರದೊಳಗೆಲ್ಲ ಪ್ರಸನ್ನ ದೇವತೆಯಾಗಿ ।
ಆದಿಯಾಗಿ ಸಿರಿಯಾಗಿ ಸಂಪತ್ತಾಗಿ ॥

ಗ್ರಾಮದೇಶಾಧಿಪತಿಗಳನ್ನೆ ತಲೆಗಾಯ್ದೆನೆಂಬಂಥ ।
ದುರ್ಗೆ ಮಹಾಕಾಳಿ ಮಹಾಲಕ್ಷ್ಮೀ ಸರಸ್ವತಿ ।
ವನದುರ್ಗೆ ನವದುರ್ಗೆ ನವಕೋಟಿ ದುರ್ಗಮ್ಮನವರು ಬಲಭಾಗದಲ್ಲಿ ॥

ಈಶ್ವರನ ರೋಷದಲ್ಲಿ ಜಡೆಯಲುತ್ಪನ್ನನಾಗಿ ।
ದಕ್ಷ ಮುಖಭಂಜನನಾಗಿ ।
ಶಿಕ್ಷಕೆಲ್ಲ ಸಜ್ಜನನಾಗಿ ।
ಕೈಯಲ್ಲಿ ಢಕ್ಕೆ ಢಮರು ಶಂಖ ಚಕ್ರ ಗದಾ ತ್ರಿಶೂಲ ।

ಬತ್ತಿಸ್ ಮೂವತ್ತೆರಡು ಆಯುಧಗಳನ್ನೆ ಧರಿಸಿಕೊಂಡು ।
ಪಯಣ ಬಂದೇನೆಂಬಂತಹ ಕೆಂಜೆಡೆ ವೀರಭದ್ರ ಸುಲಿಪಲ್ಲು ವೀರಭದ್ರ,
ರಾಜೂಟಿ ವೀರಭದ್ರ ।
ಅಸ್ತಮ ವೀರಭದ್ರ, ರೌದ್ರ ವೀರಭದ್ರ, ಕರಾಳ ವೀರಭದ್ರ ।
ವೀರಾದಿ ವೀರಭದ್ರನ ಪರಿವಾರಂಗಳು ।
ಮುಂಭಾಗದಲಿ ॥

ಅರ್ಧನಾರೀಶ ಅನಂತೇಶ ವೀರೇಶ ವಿಘ್ನೇಶ ।
ನಂದೀಶ ಭೃಂಗೀಶ ಷಣ್ಮುಖ ಭೈರವ ।
ಭದ್ರಕಾಳಿ ಅಮ್ಮನವರು ಮುಂಭಾಗದಲ್ಲಿ – ॥
ಚತುರ್ಮುಖದ ಕುಲಬ್ರಹ್ಮ ।

ಮಹಾನಾಗ ।
ಹೆಣ್ಣು ಯಕ್ಷೆ ।
ರಕ್ತೇಶ್ವರಿ ।
ಹಿರೇನಂದಿ ।

ಬಬ್ರ್ಯದೇವ ।
ಜೆಟ್ಟಿಗರಾಯ ।
ಕೀಳುಭೂತ ಕೀಳು ಪರಿವಾರ ।
ಮೇಲ್‌ಭೂತ ಮೇಲು ಪರಿವಾರ ।

ಎಂಟು ದಿಕ್ಕು ಹದಿನಾರು ದೆಸೆಯೊಳಗಣ ಸಕಲ ದೇವಾಡಿ ದೇವಗಣ ।
ಭೂತಾದಿಭೂತಗಣ ।
ರುದ್ರಗಣಂಗಳು ।
ಮಹಾ ರುದ್ರಗಣಂಗಳು ।

ವಿಷ್ಣು ಗಣಂಗಳು ।
ಪಡೆ ಪರಿವಾರಗಳು ಸಹಿತವಾಗಿ ।
ನೀರಾಟದ ಹಾಡನ್ನೆ ಕೇಳಿ ಚಿತ್ತ ಸಂತೋಷವಾದ ಮೇಲೆ ।
ಮತ್ತೆ ನಿಮ್ಮರಮನೆಗೆ ತೆರಳಿರಿ ।

ಕಟ್ಟಿದಲ್ಲಿ ಕರುವಾಗಲಿ ।
ಬಿತ್ತಿದಲ್ಲಿ ಬೆಳೆಯಾಗಲಿ ।
ಬೆಳೆಮಳೆ ಪೈರಿಗೆಲ್ಲ ।
ಲೇಸನ್ನೆ ಕೊಟ್ಟು ।

ನಾಗಯ್ಯ ಹೋದನಾಗಲೋಕಕ್ಕೆ ।
ಬ್ರಹ್ಮಯ್ಯ ಹೋದ ಬ್ರಹ್ಮಲೋಕಕ್ಕೆ ।
ವಟಯಕ್ಷೆ ಹೋದ್ಲು ವಟವೃಕ್ಷದಡಿಗಾಗಿ ।
ನೀರ ಕನ್ನೆಯರು ಹೋದ್ರು ಜಲಧಿಯ ತಡಿಗಾಗಿರೆ ॥
ಓಂ ನಮೋ ಗುರುವಿಗೂ ವರ್ಣಮಂತ್ರಗಳಿಗೂ ॥

ಎಲ್ಲಕಿಂತ ನೆಲ್ಲಕ್ಕಿ ಹಿರಿದಾಗಲಿ ।
ಕಲ್ಲು ಮೇಲಾದರೂ ಧಾನ್ಯ ಬೆಳೆಯುತ್ತಿರಲಿ ॥
ಮಂಡಲಭೋಗವನ್ನು ಕೊಡಿಸಿದ ಕರ್ತರಿಗೆ ।
ಶುಭವಾಗಲಿ ॥

ಮಂತ್ರಿಗೆ ಶುಭವಾಗಲಿ, ತಂತ್ರಿಗೆ ಶುಭವಾಗಲಿ ।
ಎಂಬಂತೆ ।
ಹಾಡಿದ ಹಾಡುಗಳು, ಹಿಡಿದ ವಾದ್ಯಂಗಳು ।
ಜಡೆಯ ಶಂಕರಗೆ ಹೋಗಿ ಅರ್ಪಿತವಾಗಲಿ ॥
ಬರೆದ ಮಂಡಲ ಹೋಗಿ ಶ್ರೀಹರನ ಕೈಲಾಸದಲ್ಲಿ ಸ್ಥಿರವಾಗಿ ನಿಲ್ಲಲಿ ॥

ಈ ಹೊತ್ತಿನ ಮಂಡಲ ।
ಇಲ್ಲಿ ಕೊಟ್ಟಂತ ಢಕ್ಕೆ ಬಲಿ ।
ಹೋಮ ಚೆರು ।
ದೀಪಾರಾಧನೆ ।

ಬ್ರಾಹ್ಮಣ ಸಂತರ್ಪಣೆ ।
ರಂಗೋತ್ಸವ ।
ಮಂಡಲೋತ್ಸವಗಳಿಂದ ।
ಇತ್ತಲು ಚೆನ್ನಾಗಿ ಸ್ವಸ್ಥಾನಕ್ಕೆ ಮುಖವಾಗಿ ಚಿತ್ತೈಸಿ ನಿಮ್ಮ ನಿಮ್ಮ ಮಂದಿರಕಾಗಿರೆ ॥
ರಾಯ ಕೋಟಿನಾಥ ।

ಕೊಡಿಗೆ ಶಂಕ್ರನಾರಾಯಣ ।
ಕೊಲ್ಲೂರ ಮೂಕಮರ್ದಿನಿ ।
ವಿಷ್ಣುಮೂರ್ತಿ ।
ಭೂಮಿದೇವಿ ।
ಶಾರದಾಂಬ ।

ನಿರ್ವಿಘ್ನದಾಯಕ ।
ಇಲ್ಲಿ ಶಾಸ್ತಾರದ ಕುಲಬ್ರಹ್ಮಸ್ವಾಮಿ ।
ನಮಗೂ ನಿಮಗೂ ದೀರ್ಘಾಯುಷ್ಯ, ದೇವತಾ ಉತ್ಸವವು ನಿತ್ಯದಲಿ
ನಡೆಯುತ್ತಿರಲಿ ॥

## ನಾಗನ ಹಾಡು

ಪಾತಾಳವು ನಾಗನರಮನೆಯೂ ।
ಪ್ರೀತಿಯಿಂದಲಿ ವಾಸವಿರುತಾಲಿದ್ರೀ ॥
ಭೂತಳಕ್ಕೆ ತಾನು ಬರಬೇಕೆಂದು ।
ಸಂಪ್ರೀತಿಯೊಳ್ ಮರಿಮಟ್ಟೆ ಕೂಡಿಕೊಂಡು ॥
ನಾಗರಥ ನಾಗವಾಜಿ ಏರಿಕೊಂಡು ।
ನಾಗಾಭರಣವ ಧರಿಸಿಕೊಂಡು ॥

ಹಿಡಿವ ಕಹಳೆಯು ಕೊಂಬು ।
ಬಡಿವ ಭೇರಿಯು ವಾದ್ಯ ।
ಅಡಿಗಡಿಗೆ ಹೊಡೆವ ತಮ್ಮಟೆ ಹೆಗ್ಗಾಳೆ ॥
ತುಡುಗು ಗಡಬಡೆ ಭೇಡಿ ಹೊಡೆಸಿಕೊಂಡು ।
ಕಡುಹರುಷದಿ ಪಯಣ ಬರುತಾಲಿದ್ರೀ ॥

ಲೋಕ ಲೋಕವ ಕಳೆದು ಬರುವಾಗ ।
ಭೂಕಾಂತೆಯು ಮಾರ್ಗವ ಬಿಡದಿರಲು ॥
ಕಡುಸಿಟ್ಟು ಮಹಾಶೇಷ ತಾಳಿಕೊಂಡು ।
ಕೊಡಿಬಾಲ ಪಾತಾಳಕ್ಕೂರಿಕೊಂಡು ॥
ಹೆಡೆಯೆತ್ತಿ ಮೇಲ್ಮೊಗ ನೋಡುವಾಗ ಬಿಡದೆ ವಿಷವು ಬಂದು ಸುಡುತಲಿತ್ತು ॥

ವಿಷಜ್ವಾಲೆಯಾ ದೇವಿ ತಾಳಲಾರದೆ ।
ಸುರಿವ ಕಂಬನಿಯಿಂದ ಮರೆಸಾರ್ದಳು ॥
ಧರಿಣಿಯ ಮನ್ನಿಸಿ ಮಹಶೇಷನು ।
ತರಣಿ ಪ್ರಕಾಶದಿ ಹೊರ್ಡುತಲಿದ್ರೀ ॥

ಭೂಲೋಕಕ್ಕೆ ತೆರಳಿ ಬರುತಾಲಿದ್ರಿ ।
ವಾಲ್ಮೀಕ ಗೃಹ ಸೇರಿ ಇರುತಾಲಿದ್ರೀ ॥
ವನದೊಳು ಸಂಚಾರ ಮಾಡಬೇಕೆಂದು ।
ವನಕಾಗಿ ತೆರಳಿ ಹೊರ್ಡುತಲಿದ್ರಿ ॥

ಕಾರೆಂಬಂಥ ಘೋರ ಆಟವಿಯಲ್ಲಿ ।
ಗೋರೆಂಬಂಥ ಮಳೆ ಹೊಯ್ಯುತಲಿತ್ತು ॥
ಕಾಳುಕಿಚ್ಚು ಬಂದು ಕಟ್ಟುತಾಲಿತ್ತು ।
ಗಾಳಿಪಲ್ಲಟ ಬಹಳ ಏರುತಾಲಿತ್ತು ॥

ಸುತ್ತಮುತ್ತಾ ಉರಿಕಟ್ಟುವಾಗ ।
ಅತ್ತ ಇತ್ತ ಸುಳಿದಾಡುತಲಿದ್ರೀ ॥
ಬಲವಂತ ಉರಿಜ್ವಾಲೆ ತಾಳಲಾರದೆ ।
ಜಲದೊಳಗೇ ಬಿದ್ದು ಮಡಿದ್ಯೋ ನಾಗ ॥

ಈ ರೀತಿಯಲಿ ಮಡಿದ ಪರಿವಾರಕ್ಕೆ ।
ಪರದಲ್ಲಿ ಮೋಕ್ಷಾರ್ಥವಿಲ್ಲದಿರಲು ॥
ಸುಬ್ರಹ್ಮಣ್ಯೇಶನ ಕೀಳು (=ಕಿರಿದು–) ಪರಿವಾರವು ।
ನಿರ್ಭೀತಿಯಲಿ ವಾಸವಿರುತಾಲಿದ್ರಿ ॥

ಧರಣಿಯೊಳಗೆ ಇರುವ ದುರುಳಾತ್ಮರು ।
ನಿಮ್ಮ ಮರಿಮಟ್ಟೆಯನು ಗಾಸಿ ಮಾಡುತಲಿದ್ರು ॥
ಸಂತತಿಯೂ ನಷ್ಟವಾದ್ದು ನೋಡಿ ।
ಚಿಂತಿಸಿ ಸುಬ್ರಹ್ಮಣ್ಯ ಕೋಪಿಸುತ ॥

ನಷ್ಟವ ಮಾಡಿದ ದೃಷ್ಟ (=ದುಷ್ಟ) ಮನುಜರಿಗೆ ।
ಕಷ್ಟವ ತೋರಿ ನಾವು ದಣಿಸಬೇಕೆಂದು ॥
ಇಂತೆಂದು ಯೋಚಿಸಿ ಕಂಡು ರೋಷವ ತಾಳಿ ।
ಮುಂತಾದ ಪರಿವಾರ ಕೂಡಿಕೊಂಡು ॥

ಕೊಳನಾಗನ ಮುಂದೆ ಮಾಡಿಕೊಂಡು ।
ಇಳೆಯ ಮನುಜರಿಗೆ ಕಾಡುತಲಿದ್ರಿ ॥
ಬೆಂಕಿ ಜ್ವಾಲೆಯು ನಿಮಗೆ ತಾಗಿದ ಹಾಗೆ ।
ಬಿಂಕದಿ ಉರಿಜ್ವಾಲೆ ಇಕ್ಕುತಾಲಿದ್ರಿ ॥

ಹೊಗೆಯು ಸುತ್ತಿಯ ನಯನ ಜಾರಿದ ಹಾಗೆ ।
ಬಗೆ ಬಗೆ ಕಣ್ಣು ಶೂಲೆ ಇಕ್ಕುತಾಲಿದ್ರಿ ॥
ಜಲದೊಳಗೆ ಬಿದ್ದು ಕೊಳೆತ ಹಾಗೆ ।
ಚಲದಿಂದ ಕೊಳಕೋಷ್ಟ್ರ (=ಕುಷ್ಟ) ಇಕ್ಕುತಾಲಿದ್ರಿ ॥

ಕೊಳೆತ ಅಸ್ಥಿಯು ಬಿಳಿದಾದ ಹಾಗೆ ।
ಗಳಿಲ್ಲನೆ ಬಿಳಿಕೋಷ್ಟ್ರ ಇಕ್ಕುತಾಲಿದ್ರಿ ॥
ಹೊಡಿಕಜ್ಜಿ ಪುಡಿವ್ರಣ ಹಾಕುತಲಿದ್ರಿ ।
ಬಿಡದೆ ನಾನಾ ಪರಿ ದಣಿಸುವಾಗ ॥

ಉರಗ ಪಾಶದಿ ಕಟ್ಟಿ ಎಳೆಯುವಾಗ ।
ನರಗಳು ಸುರುಟಿಕ್ಕಿ ಸರಿಯುತಲಿತ್ತು ॥
ನಿನ್ನ ಉಪತಿಯ (=ಉಪಹತಿ) ನರರು ತಾಳಲಾರದೆ ।
ಅಲೆಹ್ಯೊಸಿಯೆ ನೋಟ ನೋಡುತಲಿದ್ರು ॥
(=ನಿಮಿತ್ತ ಮೂಲದ ಪ್ರಶ್ನೆ ಕೇಳುವುದು) ।

ಕದ್ರುಪುತ್ರರಿಗೆ ಭೋಗ ಕೊಡುವ ತನಕ ।
ಬಿದ್ದ ಉಪಹತಿ ಶಾಂತವಾಗದೆಂದರು ॥
ಕೊಳನಾಗಗೆ ಮೋಕ್ಷ ಮಾಡುತಲಿದ್ರು ।
ಗಳಿಲನ್ನೆ ಪೂಜೆ ಭೋಗ ನಡ್ಸುತಲಿದ್ರು ॥

ಹಗಲಿನಲ್ಲಿ ನಿನಗೆ ಪೂಜೆಯ ಮಾಡಿ ।
ರಾತ್ರೇಲಿ ಕೊಡುವರು ಭೋಗಸೇವೆಯ ॥
ಪಂಚವರ್ಣದ ಪುಡಿಯ ತೆಗೆದುಕೊಂಡು ಪಂಚದಾರದಲಿ ದೇಹ
ನಿರ್ಮಿಸುತ ॥

ನಿಮ್ಮ ರೂವಾರವ ನಿರ್ಮಿಸಿ ಬರಕೊಂಡು ।
ನಿಮ್ಮಾದ್ಯಂತರ ಪೂಜಿಸುತ ॥
ಹಿಂಗಾದೆ ಧೂಪದೀಪ ಮಾಡಿಕೊಂಡು ।
ಮಂಗಳಾರತಿಯೆತ್ತಿ ಪ್ರಾರ್ಥಿಸುತ ॥

ವಿಧವಿಧದಲಿ ಕರೆದಾಡುವಾಗ ।
ಮುದದಿ ಘೋಷದಿ ದೇವ ಬರತಾಲಿದ್ರಿ ॥
ಮಂಡಲ ಭೋಗಕ್ಕೆ ದೇವ ಬಂದರ ಮೇಲೆ ।
ಅಂದವುಳ್ಳ ವಿಸ್ತಾರ ತಿಳಿದೆ ಕೇಳೋ ॥
ಬಾಲದಿಂದ ನಿಮ್ಮ ಶಿರ ಪರಿಯಂತರ ।
ಲೀಲೆಯಿಂದಲಿ ಕರೆದೋರ್ಣಿಸುವೆ ॥

ಕಡಿದಿರಿಸಿದ ಹೊನ್ನ ಸರಳಿನಂತೆ ।
ಕೊಡಿಬಾಲವು ಚಂದ ಮಹಶೇಷಗೆ ॥
ಪುಟ್ಟ ಬಾಳೆಯ ದಿಂಡು ಹೊಳಹಿದಂತೆ ।
ಹೊಟ್ಟೆ ಬಾಮ ಚಂದ ಮಹಶೇಷಗೆ ॥

ಸುವರ್ಣದಾ ಪ್ರಭೆ ಹರಡಿದಂತೆ ।
ಮೈಯ ಕಾಂತಿಯು ಚಂದ ಮಹಾಶೇಷಗೆ ।
ಹವಳ ಕೆತ್ತಿಸಿದ ಪದಕದಂತೆ ।
ಕೊರಳ ಕಂಟವು ಚಂದ ಮಹಾಶೇಷಗೆ ॥
ಸಾಗರದಾ ತೆರೆ ಮಡುಹಿದಂತೆ ।
ತೂಗ್ಯಾಡುವ ನಿಮ್ಮ ಹೆಡೆಯ ಬಾಮ ॥
ಪೌರ್ಣೋಮಿಯ ಪೂರ್ಣಚಂದ್ರನಂತೆ ।
ಮುಖದ ಕಾಂತಿಯು ಚಂದ ಸುಬ್ರಹ್ಮಣ್ಯಗೆ ॥

ತರಣಿಯ ಕಿರಣದ ಶಶಿವೋಲು ।
ಅರೆನೊಸಲಿನ ಬೆಳಕು ಮಹಾಶೇಷಗೆ ॥
ಕಾಮದೇವನು ಹಿಡಿದ ಬಿಲ್ಲಿನಂತೆ ।
ಬಾಗಿ ಬಂದವು ಕಣ್ಣ ಹುಬ್ಬೆರಡು ॥

ತಾವರೆಯ ಕಿರುಯೆಸಳಿನಂತೆ ।
ಕಣ್ಣಡವಳಾರವು ಚಂದ ಮಹಾಶೇಷಗೆ ॥
ಕರ್ಪೂರದ ಕಿರುಕರ್ಡ್ಕೆಯಂತೆ ।
ಒಪ್ಪಿ ಬಂದವು ನಿಮ್ಮ ಬಾಯ್ದಾರೆಯು ॥

ಮಹಾವಿಷ್ಣುವಾ ನಳಿನಪಾದಂಗಳು ।
ಮೋಹದ ಹೆಡೆಮೇಲೆ ತೋರುತಿದೆ ॥
ಕಾಳಿಕರಾಳಿಯು ಕಾಯುತಲಿತ್ತು ।
ದೂತಿ ಯಮದೂತಿಯು ಕೊಲುತಾಲಿತ್ತು ॥

ದೂತಿ ಯಮದೂತಿಯು ಕೊಲುವಷ್ಟಕ್ಕೇ ।
ಕೊಡಿಸಿದರೂ ನಿನಗೆ ಮಂಡಲಭೋಗವೂ ॥
ಕೊಡಿಸುವಂಥ ಮಂಡ್ಲಭೋಗದಲ್ಲಿ ।
ಅಷ್ಟಕುಲದ ಪರಿವಾರ ಕರೆದೋರ್ಣಿಸುವೆ ॥

ಮಹನಾಗ ಹೆಣಗಿನಾಗ ಗೋನಾಗ ಶಂಕಪಾಲಕ ।
ಗುಳಿಕ ತಕ್ಷಕ ಕನ್ನಾಗ ತೆರಳಿ ಬಾರೋ ॥
ಬಿನ್ನಾಣಿ ಕಾಳಿಂಗ ಕಾರ್ಕೋಟಕ ಧೃತರಾಷ್ಟ್ರ ।
ವಾಸುಕಿ ಅನಂತ ಪದ್ಮ ತೆರಳಿ ಬಾರೋ ॥

ನಾಗ ಬೆನ್ನಲಿ ನಾಗ ನಾಗ ಹುಂತಿನೊಳಿರ್ಪ ।
ನಾಗ ಹುಂತಿನ ಹೂವ ಕೊಯ್ದವರಿಲ್ಲ ॥
ಯಳನಾಗ ಹೊಳನಾಗ ಹೊಳೆವ ಪುಮ್ಮರಿನಾಗ ।
ಮಿರಿಮಿರಿ ಮಿಂಚುವ ಶಂಖಪಾಲ ॥

ಶಂಕಪಾಲಕನೆ ನೀ ಸೊಂಕಿದವರುಗಳ ।
ಜೆಂಕಿಪ ಧ್ವನಿ ಕೇಳಿ ನಲಿದಾಡುವೆ ॥
ಆರೇಳು ಹೆಡೆಗಳು ತೋರಿದ ಮರಿ ಮಚ್ಚೆ ।
ವಾರುದಿ ತೆರೆಯಂತೆ (=ವಾರಿಧಿ) ಹೆಡೆ ನಿನಗೆ ಸಾಗರ ಶಯನನೆ ಮಣಿನಾಗ ನೀ ಕೇಳೊ ।
ವಾಸುಕಿ ಸುಬ್ರಹ್ಮಣ್ಯ ತೆರಳಿ ಬಾರೋ ॥

ಅಂದು ದೇವಾಸುರರು ಬಂದರು ಕ್ಷೀರಾಂಬುಧಿಗೆ ।
ಮಂದರವ ತಂದ ಮೃತ ಕಡೆವಾಗ್ಳಿಗೆ ॥
ಅಮೃತದ ಕಡೆವ ಕಡಗೋಲಿಗೆ ನೇಣಾಗಿ ।
ಪೊಡವಿ ಎಲ್ಲವ ಸುಟ್ಟೆ ವಿಷದೊಳಗೆ ॥

ಸಾಸಿರ ವಿಷ ದಾಡೆ ಸಾಸಿರ ಕೊಳ ದಾಡೆ ।
ಬೀಸುವ ಹೆಡೆಯು ಪನ್ನಗ ಸಾಸಿರ ॥
ಸಾಸಿರ ಹೆಡೆಗಳ ಹಾಸರಿಸುತ ಬಾರೋ ।
ವಾಸುಕಿ ಸುಬ್ರಹ್ಮಣ್ಯ ತೆರಳಿ ಬಾರೋ ॥

ಅಂದು ಅರ್ಜುನದೇವ ಬಂದು ಖಾಂಡವನವ ।
ನಿಂದು ಕಾಲಾಗ್ನಿಗೆ ಕೊಡಿಸುವಾಗ ॥
ಚಂದದಿ ಕಾಲಾಗ್ನಿ ವನವನ್ನು ಸುಡುವಾಗ ಅಂದು ಸಾಯದ ನಾಗ ತೆರಳಿ ಬಾರೋ ॥
ಪಾಡಿ ಪೊಗಳಿ ಕರವ ನೀಡಿ ಮುಗಿದೆ ವರವ ।
ಬೇಡುವೆ ದಯಮಾಡೊ ಮಹಾಶೇಷನೆ ॥

ಸರ್ಪರಾಜನೆ ನಾಗ ಕಲ್ಪಭೋಜನೆ ಶಿರದಿ ।
ಪುಷ್ಪಮಾಲೆಯಂ ಧರಿಸಿರ್ಪವನೆ ॥
ಕಪ್ಪು ಕಂಟನ ಕೊರಳೊಳೊಪ್ಪಿದ ಭುಜಗನೆ ।
ಶೂರ್ಪಕರ್ಣನ ಸೊಂಟಕೊಪ್ಪಿದನೆ ॥

ಜನನಿಯ ಶಾಪಕ್ಕೆ ಮನದಿ ಯೋಚಿಸಿ ಶೇಷ ।
ವನದೊಳು ತಪಸಿಗೆ ನಿಂದವನೆ ॥
ಚಿನುಮಯಾತ್ಮಕನನ್ನು ಮನದಲ್ಲಿ ಯೋಚಿಸಿ ।
ಅನುದಿನದಲಿ ಧ್ಯಾನಿಸುತ್ತಿಹನೆ ॥

ವಾರಿಜಾಸನನು ಮೈದೋರಲು ಸಮಯದಿ ।
ಚಾರು ಭಕ್ತಿಗಳಿಂದ ಸ್ತುತಿಸಿದನೆ ॥
ಕರುಣದಿ ವರವಿತ್ತು ತೆರಳಿದ ಕಮಲಜ ।
ಭರದಿ ಪಾತಾಳಕ್ಕೆ ಇಳಿದವನೆ ॥

ಪಾತಾಳದೊಳ ಸಂಪ್ರೀತಿಯೊಳಿರುವನೆ ।
ಭೂತಳದೊಳು ಕ್ವಾತಿ (=ಖ್ಯಾತಿ) ಪಡೆದವನೆ ॥
ಪೀತವರ್ಣನೆ ಸಂಗೀತ ಸಂಪನ್ನನೆ ।
ವಾತಾರನೆ ವಿಹಿದೂತರನೇ ॥

ವ್ಯಾಳನೆ ಸದ್ಗುಣಶೀಲ ಫಣೀಂದ್ರನೆ ।
ಕಾಳಿಂಗನೆ ಕಾಳೋರಗನೆ ॥
ನಾಲಿಗೆ ಸಾಸಿರ ಸೀಳಾಗಿರುವನೆ ।
ನೀಲಮಣಿಯ ಪ್ರಭೆ ಹೋಲುವನೆ ॥

ರತ್ನದ ಮಣಿಯನ್ನು ಮಸ್ತಕದಲಿ ಸೂಡಿ ।
ಸುತ್ತಲು ಬೆಳಕು ತೋರುತ್ತಿಹನೆ ॥
ಪೃಥ್ವಿಯ ಬಾಲದಿ ಸುತ್ತಿ ಬಿಗಿದು ನಡುನೆತ್ತಿಯೊಳವನಿಯ ಪೊತ್ತವನೆ ॥

ಸತ್ವ ಸಾಹಸಿ ನಿನ್ನ ಉತ್ತಮ ಮಹಿಮೆಯ ।
ಪ್ರತ್ಯಕ್ಷದಿಂದ ತೋರುತ್ತಿಹನೆ ॥
ಶೇಷನೆ ಶಶಿಧರ ಭೂಷ ಭುಜಂಗನೆ ।
ವಾಸುಕಿ ವಿಷವಾದ ವರ್ಜಿತನೆ ॥

ವಾಸುದೇವಗೆ ಮೃದು ಹಾಸಿಗೆಯಾದನೆ ।
ಸಾಸಿರ ಪೆಡೆಯುಳ್ಳ ಸಹಸಿಗನೆ ॥
ತಕ್ಷಕ ರಾಜನೆ ಅಕ್ಷಯವೀವನೆ ।
ನಕ್ಷತ್ರಪತಿಯನ್ನು ಪೊತ್ತಿಹನೆ ॥

ಚಕ್ಷುಶ್ರುತನೆ ಪರೀಕ್ಷಿತ ಮಹಿಮನೆ ।
ರಾಕ್ಷಸರನ್ನು ಶಿಕ್ಷಿಪನೆ ॥
ಯಕ್ಷ ಗಂಧರ್ವ ಶೋಭಿಪ ಲಾವಣ್ಯನೆ ।
ಲಕ್ಷ್ಮಣರೂಪನೆ ಲಕ್ಷಣನೆ ॥

ಉದ[ಯ] ಗಿರಿ ಪರ್ವತ ಸದನಂಗಳೆಡೆಯಲ್ಲಿ ।
ಜನಿಸಿದೆ ಕದ್ರುಗೆ ಕಂದನಾಗಿ ॥
ಕದ್ರುಗೆ ಕಂದನೆ ರುದ್ರನಿಗಾಭರಣನೆ ।
ನಿದ್ರೆ ಮಾಡುತ ಮಲಗಿರ್ದವನೆ ॥

ನಿದ್ರೆಯನ್ನೆ ತಿಳಿದೆದ್ದು ಶೋಭಿಸುವಾಗ ।
ಸಮುದ್ರವ ನೇಣಾಗಿ ಸುತ್ತಿದನೆ ॥
ಅದ್ರಿಯ ಬಿಗಿದುಕೊಂಡಬ್ಧಿಯ ಕಡೆವಾಗ ।
ಕ್ಷುದ್ರ ದೈತ್ಯನ ಮುರಿದಟ್ಟಿದನೆ ॥

ದಂತದಿ ಗರಳಾವ ಸಂತತ ಧರಿಸಿದ ।
ವಂಚನೆ ಮುನಿದರಿಗಂತಕನೆ ॥
ಕಾಂತಾರದಿ ದಮಯಂತಿಗೊಲಿದೆ ದಯ ।
ವಂತನೆ ಸಜ್ಜನ ಸಂತಕನೆ ॥

ಆಸ್ತೀಕ ಮಾವನ ಶಾಸ್ತ್ರದಿ ಬಾವನೆ (ಭಾ?) ।
ಮೃತ್ತಿಕೆ ಮನೆಯೊಳಗರ್ತಿಪನೆ ॥
ಸತ್ರಾಜಿತನ ಸುತನ ಸತ್ತ ಸತಿಯ ನಿಜ ।
ಪುತ್ರಿಯ ಮಾಡಿಕೊಂಡಿರ್ದವನೆ ॥

ಚಿತ್ರಾಂಗದೆಯ ಸುಪುತ್ರನ್ನ ಬಾಣದಿ ।
ಬತ್ತಳಿಕೆಯೊಳಸ್ತ್ರವಾದವನೆ ॥
ಪಾರ್ಥನ್ನ ಶಿರವನ್ನು ಕತ್ತರಿಸಲು ಜೀವ ।
ರತ್ನದ ಮಣಿಯ ತಂದೆತ್ತಿದನೆ ॥

ಶಂಖಪಾಲಕನೆ ನೀ ಶಂಖಪದ್ಮನೆ ಬಿರಿ ।
ದಾಂಕ ಗುಳಿಕನೆ ಭಯಂಕರನೆ ॥
ಶಂಕರನ ಕೈಗೆ ಕಂಕಣವಾದನೆ ।
ಪಂಕಜನಾಭನ ಕಿಂಕರನೆ ॥

ಗರುಡನ ಭಯಕಂಜಿ ತಿರುಗಿ ವಾಸುಕಿ ಬಂದು ।
ಭರದಿ ಬಿಲದ್ವಾರ ಹೊಕ್ಕವನೆ ॥
ಹರನ ಕರುಣದಿಂದ ವೈರಿ ಬಾಧೆಯ ಗೆಲಿದು ।
ಮೆರೆವ ಷಣ್ಮುಖನನ್ನು ಸೇರಿದನೆ ॥

ವೀರವಾಸುಕಿಯು ಕುಮಾರ ಪರ್ವತದಲ್ಲಿ ।
ಸೇರಿ ಷಣ್ಮುಖ ಸಹ ಇರುತಿಹನೆ ॥
ವಾರನದಿಯ ಕೀರಪಾರ ಮಹಿಮನೆಂದು ।
ಭೂರಿ ಹರುಷದಿಂದ ಮೆರೆದವನೆ ॥

ಅಂದು ಜನಮೇಜಯನಿಂದ ಯಾಗವ ಮಾಡೆ ।
ಬಂದು ಇಂದ್ರನ ಪೀಠ ಸ್ತುತಿಹನೆ ॥
ಕಂದಸ್ಮಿತ (?) ನಿನ್ನ ಬಂಧನಗಳ ಬಿಟ್ಟು ।
ಮುಂದೆ ಸಂತೋಷದೊಳಿರುತಿಹನೆ ॥

ಅನ್ನದಾನದ ಸುಬ್ರಹ್ಮಣ್ಯನೆ ಪುತ್ಥಳಿ ।
ಚಿನ್ನದಂತ್ಹೊಹೆವೆಯ ಚಿನುಮಯನೆ ॥
ಕರ್ಣರಹಿತದೇವ ಕರ್ಣದ ವಚನವ ।
ಕಣ್ಣಲ್ಲಿ ಕೇಳುವೆಯೊ ಪನ್ನಗನೆ ॥

ಪಾತ್ರಿಯ ಮೇಲೆ ಬಂದರ್ತಿಯೊಳ್ ಕುಣಿವಾನೆ ।
ರಾತ್ರೆಯೊಳ್ ಮಂಡ್ಲಭೋಗಗೊಂಬವನೆ ॥
ಧಾತ್ರಿಗುತ್ತುಮನಾದ ಭಕ್ತನಾದ ನರಹರಿ ।
ಭಕ್ತರಿಗೆ ಇಷ್ಟಾರ್ಥ ವರವೀವನೆ ॥

ಪೊಡವಿಯೊಳಗೆ ಹೆಡೆ ಶಿಲೆಗಲ್ಲು ಇಟ್ಟರೆ ।
ಪಿಡಿದ ದ್ರೋಹವ ತಲೆಗಡಿದವನೆ ॥
ಬಿಡದೆ ಭಕ್ತರು ಬಂದು ಹೊಡಿಸೇವೆ ಮಾಡಲು ।
ತಡೆಯದಿಷ್ಟಾರ್ಥವ ಕೊಡುತಿಹನೆ ॥

ಪರಿಪರಿ ಸೇವೆಯ ವಿರಚಿಸಿ ಮಾಡಲು ।
ಕನಕ ಸಮ್ಮೃದ್ಧಿಯನೀವವನೆ ॥
ಮಹಾನಾಗ ಸಪರಿವಾರ ನಲಿದ ಮೇಲೆ ।
ಮರಿಮಟ್ಟೆ ವಿಸ್ತಾರ ಪೊಗಳಿಕೊಂಬೆ ॥

ಅಂಡಗಳು ಮತ್ತೆ ಪಿಂಡದಂತೆ ।
ಹೊರ್ಡ್ಯಾಡುವ ನಿಮ್ಮ ಮರಿಯ ಚಂದ ॥
ಮಂಡಲಭೋಗಕ್ಕೆ ದೇವ ಬಂದರ ಮೇಲೆ ।
ಚಿತ್ತಸಂತೋಷವ ಮಾಡಬೇಕು ॥

## ಅಭಿನಯದ ಹಾಡುಗಳು

### ಬಾರೋ ವಾರಣವದನ ಎಂಬಂತೆ

ರಾಗ : ಆರಭಿ ತಾಳ : ಆದಿತಾಳ

ಬಾರೋ ವಾರಣವದನ ।
ತ್ರೈಲೋಕ್ಯ ಸಂಮೋಹನ ।
ತೋರೋ ನಿನ್ನಯ ಚರಣ ॥ ಪ ॥

ಮಾರಹರನ ಪರಿವಾರಕ ಧೀರನೆ ।
ನಾರಿಗಿರಿಜೆ ಸುಕುಮಾರನೆ ಶೂರನೆ ॥ ಬಾರೋ ॥ ॥ ಅಪ ॥

ಪೊಡಮಡುವೆನು ನಿನ್ನಯ ।
ಪಾದಕ್ಕೆ ದೇವಾ ।
ಯೆಡೆಬಿಡದೀಗಲೆನ್ನಯ ॥
ತೊಡಕಿನ ಅಡವಿಯ ಕಡಿಕಡಿದಡಸುವ ।
ಕಡುಬಡವಗೆ ಕರಪಿಡಿದ್ವೊರ ಕೊಡುವಡೆ ॥ ಬಾರೋ ॥ ॥ ೧ ॥

ಜಗಜಗಿಸುವ ಪೀಠದಿ ।
ಮಂಡಿಸಿಕೊಂಡು ।
ಸೊಗಸೊಗಸಾದ ಭೋಜ್ಯದಿ ॥
ಬಗೆಬಗೆ ಭಕ್ಷ್ಯವ ತೆಗೆತೆಗೆದು ಮಾಗೆವಂಥ ।
ಭೃಗುಧೃಗು ಯುಗಳವ ನಗೆಮುಖ ಸುಗುಣನೆ ॥ ಬಾರೋ ॥ ॥ ೨ ॥

ಫಣಿಶಾಯಿ ಗೋವಿಂದನ ।
ದಾಸರ ವಂದ್ಯ ।
ತ್ರಿರಾಯನ ಮೂರ್ತಿ ನಂದನ ॥
ಕಣುದಣಿ[ಯೆ] ನೋಡುವೆ ಮಣಿಗಣ ಭೂಷಣ ।
ಜಣಜಣ ಕುಣಿಯುವ ಗಣಗಣ ಗಣಪತೀ ॥ ಬಾರೋ ॥ ॥ ೩ ॥

## ಶ್ರೀನಿಕೇತನಾ

ರಾಗ : ಆರಭಿ ತಾಳ : ಆದಿತಾಳ

ಶ್ರೀನಿಕೇತನಾ ಪಾಲಯಮಾಂ ಶ್ರೀನಿಕೇತನಾ ॥ ಪ ॥

ಜ್ಞಾನಗಮ್ಯ ಕರುಣಾನಿಧಿ ನಿನ್ನಡಿ ।
ನಾ ವಂದಿಪೆ ಪೊರೆ ದೀನದಯಾಳು ॥ ಶ್ರೀ ॥ ಅ.ಪ. ॥

ಜ್ಞಾನಮಾನದಾ ।
ಶರಣರ ಸುರ ।
ಧೇನು ಸರ್ವದಾ ॥
ನೀನೆಂದರಿತು ಸದಾನುರಾಗದಲಿ ।
ಧ್ಯಾನಿಪೆ ಮನದಲಿ ಮಾನವ ಕಳೆಯೋ ॥ ೧ ॥

ತ್ರೀಕರಾರ್ಚಿತಾ ।
ಪದಾಬ್ಜ ।
ಪರಾಕು ವಂದಿತ ॥
ಶೋಕನಾಶನ ವಿಶೋಕ ಸುಲಭ [ಮ–] ।
ದ್ವ್ಯಾಕುಲ ಕಳೆಯೊ ಕೃಪಾಕರನೊಲಿದು ॥ ೨ ॥

ಪನ್ನಗಾಚಲಾ ।
ನಿಶಾ (?) ಸುಪ್ರ ।
ಸನ್ನ ವತ್ಸಲಾ ॥
ಬಿನ್ನಪ ಕೇಳ್ ಜಗನ್ನಾಥ ವಿಠ್ಠಲನೆ ।
ಧನ್ಯ ಮಾಡೊ ಶರಣ್ಯರ ಶರಸಾ ॥ ೩ ॥

(ಗಣಪತಿ, ವಿಷ್ಣು, ದೇವಿ ಪರವಾದ ತುಂಬಾ ಕೀರ್ತನೆಗಳಿವೆ. ಉದಾಹರಣೆಗೆ ಕೆಲವನ್ನು ಮಾತ್ರ ಇಲ್ಲಿ ಬರೆಯುತ್ತಿರುವೆ)

## ಬಸವನ ಮೇಲೇರಿ ಬರುತಿಹನ

ರಾಗ : ಪೂರ್ವಿ ತಾಳ : ಆದಿತಾಳ

ಬಸವನ ಮೇಲೇರಿ ಬರುತಿಹನ ।
ಕೈಯ ।
ತ್ರಿಶೂಲ ಢಮರುಗಧರ ಹರನ ॥ ಪ ॥

ಅಸುರರ ಕ್ಷಣದಲಿ ಕೊಂದವನ ।
ಘೋ–ರ್ವಿಷವನು ಬಾಯೊಳನುಗುಳಿದನ ।
ಕಣ್ಣಾರೆ ಕಂಡೆ ಪರಶಿವನ ।
ಶಾಂತೇಶ್ವರನ । ಕಣ್ಣಾರೆ ಕಂಡೆ ಪರಶಿವನ ॥ ॥ ೧ ॥

ಬಾಣಾಸುರನಿಂಗೊಲಿದವನ ।
ತ್ರಾಣದಿ ತ್ರಿಪುರರ ಗೆಲಿದವನ ।
ಮಾಣದೆ ಸುರಗಣ ಸೇವಿಪನ ।
ನಿರ್ವಾಣದಿ ಮುನಿಗಳ ಸಲಹಿದನಾ ॥
ಕಣ್ಣಾರೆ ಕಂಡೆ ಪರಶಿವನಾ ।
ಶಾಂತೇಶ್ವರನ ।
ಕಣ್ಣಾರೆ ಕಂಡೆ ಪರಶಿವನ ॥ ೨ ॥

ಅಂತಕನಂತಕನಾಗಿಹನ ।
ಕಣ್ಣುರಿಯಲಿ ಕಾಮನ ಸುಟ್ಟವನ ।
ಚಿಂತೆಯೊಳಿರ್ಪರ ಕಾಯ್ದವನ ।
ಶಾಂತ ಮೂರುತಿ ಶಾಂತೇಶ್ವರನಾ ॥ ಕಣ್ಣಾರೆ ಕಂಡೆ ಪರಶಿವನಾ ॥ ೩ ॥

## ಕೊಡು ಬೇಗ ದಿವ್ಯಮತಿ

ರಾಗ : ಭೂಪಾಳಿ ತಾಳ : ಆದಿತಾಳ

ಕೊಡು ಬೇಗ ದಿವ್ಯಮತಿ ।
ಸರಸ್ವತೀ ।
ಕೊಡುಬೇಗ ದಿವ್ಯಮತೀ ॥

ಮೃಡಹರಿ ಹಯಮುಖ ಸುರರೊಡೆಯಳೆ ನಿನ್ನ ।
ಅಡಿಗಳಿಗೆರುಗುವೆ ಅಮ್ಮ ಬೊಮ್ಮನ ರಾಣಿ ॥ ೧ ॥

ಇಂದಿರೆ ರಮಣನ ಹಿರಿಯ ಸೊಸೆಯು ನೀನೆ ।
ಬಂದೆನ್ನ ಹೃದಯದಿ ನಿಂದು ನಾಮವ ನುಡಿಸೆ ॥ ॥ ೨ ॥

ಅಖಿಲ ವಿದ್ಯಾಭಿಮಾನಿ ಅಜನ ಪಟ್ಟದ ರಾಣಿ ।
ಸುಖ ಪೊರೆ ಸುಶ್ರೇಣಿ ।
ಸುಜನರ ಶಿರೋಮಣಿ ॥ ೩ ॥

## ಈಸು ವಸಂತಾಗಮಾ

ರಾಗ : ಮಧ್ಯಮಾವತಿ ತಾಳ : ಆದಿತಾಳ

ಈಸು ವಸಂತಾಗಮಾ ।
ಈಸು ವಸಂತಾಗಮಾ ॥
ಅಳಿಝೇಂಕಾರಕ್ಕೆ ಗಿಳಿಗಳು ಕೂಗಲು ।
ಇಳಿಯುವುದಾಗಲೆ ಕೋಗಿಲೆಯೂ ॥ ಪ ॥

ಮೆಲ್ಲನೆ ಮಾರುತವಿಲ್ಲನೆ ಬೀಸಲು ।
ಮಲ್ಲಿಗೆ ಮಗ್ಗೆಗಳು ಚೆಲ್ಲಿದುವೋ ॥ ೧ ॥

ಸೋಮಕಿರಣವು ಕಾಮಿನಿಯರ ಮನ ।
ಕಾಮವು ಪೂರ್ತಿಸಿ ಕಾಮಿಪುದೋ ॥ ೨ ॥

## ನಂಬಿದೆ ನಾಗೇಂದ್ರನ ಎಂಬಂತೆ

ರಾಗ : ಶಂಕರಾಭರಣ ತಾಳ : ಆದಿತಾಳ

ನಂಬಿದೆ ನಾಗೇಂದ್ರನ । ನಂಬಿದೇ ॥
ನಂಬಿದೆ ನಿನ್ನ ಬೆಂಬಿಡದೆ ॥

ಕರುಣಾಂಬುಧಿಯನ್ನು ಕಂಗೆಡದೇ ।
ಸ್ವಾಮಿ ಜಂಭಾರಿಯ ಪಿತ ।
ಅಂಬುಜಾಕ್ಷಿಯ ಸುತ ।
ಹಿಂಬಾಗಿ ನೆಲಸಿರ್ದ ಕಂಬು ಸನ್ನಿಭ ಕಾಯ ॥ ಪ ॥

ಭೂತಮಾತ್ರದಿ ದಯದೋರಿ ।
ಬಂದು ।
ಭೂತಳದೊಳಗೆ ಮೈಯ ದೋರಿ ॥
ತನ್ನ ನೀತಿ ಬಿಟ್ಟವರ ವಿಚಾರಿ ।
ಸರ್ವಘಾತುಕ ಜನರನ್ನು ।
ಭೀತಿಯ ಬಿಡಿಸುವ ।
ಪಾತಾಳದೊಡೆಯ ಶ್ರೀ ಕೌತುಕ ಮಹಿಮನೇ ॥ ೧ ॥

ಧರಣಿಯ ಧರಿಸಿರ್ಪ ।
ಪುಣ್ಯ ।
ವಿತ್ತು ವರ(ವಿ) ಪುರುಷನ (?) ಲಾವಣ್ಯ ।
ದಿವ್ಯ–ಪರಿಮಳ ಪ್ರಿಯ ಸುರಗಣ್ಯ ।
ಗುಣ–ಭರಿತ ಸಲಹೋ ಸುಬ್ರಹ್ಮಣ್ಯ ॥
ನಾವು ವಿರಚಿಸುವ ಸಿದ್ಧ ಅಪರಾಧ ಪರಿಹರಿಸಿದನೆಲ್ಲ ।
ಪರಮಗಾನವಿಲೋಲ ಸಕಲ ಸದ್ಗುಣ ಶೀಲ ॥ ೨ ॥

ಕಿಂಕರಾಜನ ಚಿಂತಾಮಣಿಯೆ ।
ಹರಿಣಾಂಕ ಶೇಖರನು ನಿಮ್ಮೆಣೆಯೇ ।
ಹಸ್ತಕಂಕಣ ನಿಮ್ಮ ಸಂದಣಿಯೇ ।
ಸ್ವರ್ಗಾಲಂಕಾರಾಧಿಪ ನಿಮ್ಮೆಣೆಯೇ ॥
ಪಂಕಜಾಕ್ಷಿಯರ್ಬಲ ತಂಕದಿ ಧರಿಸಿರ್ಪ ।
ವೆಂಕಟೇಶನ ಶ್ರೀ ವೆಂಕಟೇಶನ ಪ್ರಿಯ ॥ ನಂಬಿದೆ ನಾಗೇಂದ್ರನ ॥ ೩ ॥

## ಉಟ್ಟ ಕಲಶದಾ ಪಣೆಯೊಳಿಟ್ಟ ತಿಲಕದಾ

ರಾಗ : ಪೂರ್ವಿ ತಾಳ : ರೂಪಕ

ಉಟ್ಟ ಕಲಶದಾ ।
ಪಣೆಯೊಳಿಟ್ಟ ತಿಲಕದಾ ॥
ಬಟ್ಟು ಮುತ್ತಿನಾ ।
ಹೊಳೆವ ನಾಸಿಕಾಗ್ರದಾ ॥

ಕರ್ಣದೋಲೆಯಾ ।
ಕೊರಳೊಳ್ ಪದಕ ಹಾರವಾ ॥
ಪೂರ್ಣಚಂದ್ರನಾ ।
ಪೋಲ್ವ ಮುಖದ ಕಾಂತಿಯಾ ॥

ಮದನ ಜನನಿಯಾ ।
ಪೋಲ್ವ ಮಂದರಾದ್ರಿಯಾ ॥
ಸುರರಿಗಮೃತಾ ।
(ಸುಧೆಯ)ವೀವ ಲಕ್ಷ್ಮಿದೇವಿಯಾ ॥

ಭಕ್ತವತ್ಸಲೇ ।
ಭಯ ನಿವಾರಿಣೀ ॥
ಶಕ್ತಿಶಾಂಭವೀ ।
ಅಂಬ ಮಹಿಷಮರ್ದಿನಿ ॥

ಕಂಡು ರೋಷದೀ ।
(ಮಹ) ಕಾಳಿಕಾಂಬೆಯೇ ॥
ಚಂಡಮುಂಡರಾ ।
ರುಂಡ ಹಾರಿಸಿ ॥

ಶುಂಭದೈತ್ಯನಾ ।
ಕೂಡೆ ರಣದೊಳೂ ॥
ಶುಂಭಜಾದ್ಯರ ।
ಕೆಡಹಿ ರಣದೊಳೂ ॥

ಹರನ ಪಟ್ಟದಾ ।
ಮೋಹದಾ ರಾಣಿಯಾ ॥
ಹರಿಸೋದರೀ ।
ಪನ್ನಂಗವೇಣಿಯಾ ॥

## ಭರದಿ ಮತ್ಸ್ಯರೂಪದಿಂದ ತಮನ ಗೆಲಿದನ

ರಾಗ : ಪೂರ್ವಿ ತಾಳ : ರೂಪಕ

ಭರದಿ ಮತ್ಸ್ಯರೂಪದಿಂದ ತಮನ ಗೆಲಿದನ ।
ಬಳಿಕ ಕೂರ್ಮನಾಗಿ ಗಿರಿಯನೆತ್ತಿದಾತನ ॥
ಧರೆಯ ಕದ್ದ ಅಸುರನುರವ ಬಗೆದ ಧೀರನ ।
ಹರುಷದಿಂದ ನರಹರಿಯ ವೇಷ ತಂದನ ॥

ವಾಮನನಾಗಿ ಬಲಿಯ ವಂಚಿಸಿ ಮೆಟ್ಟಿದಾತನ ।
ಕೊಡಲಿ ಪಿಡಿದು ರಣದಿ ಕ್ಷತ್ರಿಯರನ್ನು ಗೆಲಿದನ ॥
ಶರದಿ ಸೇತು ಕಟ್ಟಿ ಲಂಕೆಯ ಮುತ್ತಿದಾತನ ।
ಭರದಿ ಶಕಟಾಸುರನ ಧರೆಗೆ ನಿಳುಹಿದಾತನ ॥

ಬತ್ತಲೆಯಾಗಿ ತುರಗವೇರಿ ರಾವುತನಾದನ ।
ಕುದುರೆ ಏಳ ಕಟ್ಟಿದ ರಥಕೆ ಒಂದೆ ಗಾಲಿಯೋ ॥ ತೈಥ । ತೈಥ ॥

## ಸಾಸಿರ ಪೆಡೆಯೆತ್ತಿ ನಲಿದವಗೇ

ರಾಗ : ಆರಭಿ ತಾಳ : ಆದಿತಾಳ

ಸಾಸಿರ ಪೆಡೆಯೆತ್ತಿ ನಲಿದವಗೇ ।
ಭೂಸುರ ಭೋಜನಪ್ರಿಯನಿಗೆ ।
ಮೂಷಿಕ ವಾಹನ ಉದರ ಬಂಧಿಸಿದಗೆ ।
ವಾಸುಕಿ ಸರ್ಪ ಅನಂತನಿಗೇ ॥ ಮಂಗಲಂ ॥ ॥ ೧ ॥

ಮಂದರಗಿರಿಗೆ ನೇಣಾದವಗೆ ।
ಚಂದದಿ ವಿಷಗಳನುಗುಳಿದಗೆ ।
ಹಿಂದಸುರರ ಬೆನ್ನಟ್ಟಿ ಮರ್ದಿಸಿದಗೆ ।
ಸುಂದರ ಕಾಳಿಂಗ ನಾಗನಿಗೆ ॥ ೨ ॥

ಹರಿಗೆ ಹಾಸಿಗೆಯಾದ ಫಣಿರಾಜಗೆ ।
ಧರಣಿಯ ಶಿರದಲಿ ಧರಿಸಿದಗೆ ।
ಗಿರಿಜೆಯ ರಮಣನ ಕೊರಳಲಿ ಮೆರೆದಗೆ ।
ವರ ಕುಮಾರಾದ್ರಿ ಮಹಶೇಷನಿಗೆ ॥
ಮಂಗಲಂ ಜಯ ಶುಭ ಮಂಗಲಂ ॥ ३ ॥

## ನೀಲಮೇಘಾಂಗನಿಗೆ ನಿಜಶರಣ ಸಾಂಗನಿಗೆ

ರಾಗ : ಮೋಹನ ತಾಳ : ಝಂಪೆ

ನೀಲ ಮೇಘಾಂಗನಿಗೆ ನಿಜಶರಣು ಸಾಂಗನಿಗೆ ।
ಕಾಲಭಯ ಹರನಿಗೆ ಕಮಲಾಕ್ಷಗೇ ॥
ಬಾಲಾರ್ಕ ಚಂದ್ರಾಗ್ನಿ ಬಹುಕೋಟಿ ತೇಜನಿಗೆ ।
ಮೂಲೋರ್ಕದೊಡೆಯನಿಗೆ ಮುರವೈರಿಗೇ ॥ ಜಯಮಂಗಳಂ ॥ ೧ ॥

ಕಾಮಪಿತನಾದವಗೆ ಕಡು ಚೆಲ್ವ ಮಾಧವಗೆ ।
ಸಾಮಗಾನ ವಿಲೋಲ ಸರ್ವೇಶಗೇ ॥
ವಾಮದೇವನ ಮಿತ್ರ ವಸುದೇವ ಪುತ್ರನಿಗೆ ।
ಶ್ರೀಮಹಾ ಗೋವಿಂದ ಗೋಪಾಲಗೇ ॥ ಜಯಮಂಗಳಂ ॥ ೨ ॥

ವರಾಹಾವತಾರನಿಗೆ ದುರಿತಸಂಹಾರನಿಗೆ ।
ಪರಮ ಪಾವನಗೆ ಪಾಪವಿನಾಶನಿಗೆ ॥
ಧರೆಯೊಳುತ್ತಮವೆನಿಪ ವರ ಕಣ್ವಪುರದೊಳಗೆ ।
ಸ್ಥಿರವಾಗಿ ನೆಲೆಸಿರುವ ಶ್ರೀಕೃಷ್ಣಗೇ ।
ಜಯಮಂಗಳಂ ನಿತ್ಯ ಶುಭ ಮಂಗಲಂ ॥ ३ ॥

## ಅಚ್ಚಮುತ್ತಿನ ಗಾಲಿ ಮೇಲೊಪ್ಪುತಿರುವ ಮಣಿಯು

ರಾಗ : ಮೋಹನ ತಾಳ : ಝಂಪೆ

ಅಚ್ಚಮುತ್ತಿನ ಗಾಲಿ ಮೇಲೊಪ್ಪುತಿರುವ ಮಣಿಯು ।
ಸಾಲೈದು ಮದನಮಂತ್ರಾದಿ ಕೀಲೋ ॥
ಅಚ್ಚ ಕಾಳಿಂಗನ ಕಟ್ಟುಮಿಳಿಗಳ ಮಾಡಿ ।
ಕಟ್ಟಾಳು ಸೂರ್ಯಾರೊ ಉದಯಾದರೋ ॥ ಜಯಮಂಗಲಂ ॥ ॥ ೧ ॥

ಊರ ಕೇರಿ ಹಿಂದಾಗಿ ಮೂಡಲೊ ಮುಂದಾಗಿ ।
ಧಾರುಣಿಯ ಗಂಗೆಯಲಿ ಮುಖವ ತೊಳೆದೋ ॥
ಈರೈದು ಬೆರಳಿನಿಂ ಸಮಗೊಂಡು ಭಾಸ್ಕರಗೆ ।
ಶರಣು ಶರಣೆಂದಿರಲು ।
ಮುಕ್ತಿ ದಯದೋರೋ ॥ ಜಯ ಮಂಗಲಂ ॥ ॥ ೨ ॥

ಲೋಕಕಾನಂದನೇ ಏಕಸ್ವರೂಪನೇ ।
ಶ್ರೀಕಂಠ ಕೈಲಾಸವಾಸ ಹರನೇ ।
ಏಕೋದೇವಾ ಎಂದು ಪಂಚಾಕ್ಷರಿ ಜಪಿಸುವೆನು ।
ಗೋಕರ್ಣಪುರ ವರದ ಮಹಾಬಲೇಶಾ ॥
ಜಯ ಮಂಗಳಂ ನಿತ್ಯ ಶುಭಮಂಗಳಂ ॥ ೩ ॥

## ಗಂಗೆಯನು ಪೊತ್ತವಗೆ ಕಂಗಳು ಮೂರುಳ್ಳವಗೆ

ರಾಗ : ಭೂಪಾಳಿ ತಾಳ : ಝಂಪೆ

ಗಂಗೆಯನು ಪೊತ್ತವಗೆ ಕಂಗಳೂ ಮೂರುಳ್ಳವಗೆ ।
ಭೃಂಗೀಶ ನಾಟ್ಯಕ್ಕೆ ಮನವೊಲಿದಗೆ ॥
ಸಂಗೀತ ಪ್ರಿಯನಿಗೆ ಭೂಜಗಾಭರಣಾಂಗನಿಗೆ ।
ಹಿಂಗದರ್ಚಿಸಿದ ದೇವೋತ್ತುಂಗಗೇ ॥ ಜಯ ಮಂಗಲಂ ॥ ॥ ೧ ॥

ತ್ರಿಪುರ ಸಂಹಾರನಿಗೆ ಅಪರಿಮಿತ ಶೌರ್ಯನಿಗೆ ।
ಕಪಟನಾಟಕಗೆ ಪಾರ್ವತಿಕಾಂತಗೆ ॥
ಚಪಲಾಕ್ಷಿಯರಿಗೆ ಮನ ಸಿಲುಕದ ಶ್ರೀಶಂಕರಗೆ ।
ಅಪಹರಿಸಿ ದೃಷ್ಟರನು ಗೆಲಿದ ಶಿವಗೆ ॥ ಜಯ ಮಂಗಲಂ ॥ ॥ ೨ ॥

ಧರೆಗಧಿಕ ಸುರಪುರದಿ ನೆಲೆಯಾದ ದೇವನಿಗೆ ।
ಕರಿಚರ್ಮ ಭೂಷಣಗೆ ಉರಿ ನಯನಗೆ ॥
ಪರಮಭಕ್ತರನೆಲ್ಲ ಪೊರೆವ ಕರುಣಾಕರಗೆ ।
ಗುರು ಚಿದಾನಂದಮೂರ್ತಿ ಮಹಲಿಂಗಗೇ ॥
ಜಯ ಮಂಗಲಂ ನಿತ್ಯ ಶುಭ ಮಂಗಲಂ ॥ ೩ ॥

# ಎರಡನೇ ಭಾಗ

# ಕಾಡ್ಯನಾಟ : ಕಾಳಿಂಗಸರ್ಪಾರಾಧನೆಯ ಹಾಡುಗಳು

ಕಾಡ್ಯ ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡ ಪ್ರದೇಶದ ಮೇರ ಹರಿಜನರ ಆರಾಧ್ಯ ದೈವ. ಹೀಗಾಗಿ ಮೇರರ ವಾಸಸ್ಥಾನವಿರುವ ಎಡೆಗಳಲ್ಲೆಲ್ಲ ಕಾಡ್ಯನ ಮನೆ – ಕಾಡ್ಯನ ಆರಾಧನಾ ಕೇಂದ್ರಗಳು ಗೋಚರಿಸುತ್ತವೆ. ಮೇರರ ಜಾತಿಗೆ ಸೇರಿದ ನನ್ನ ಅನೇಕ ವಕ್ತೃಗಳು[೧] ಹಾಗು ಕಾಡ್ಯನ ಆರಾಧನೆಯ ಸಂದರ್ಭದಲ್ಲಿ ಅವರ ಜಾತಿಯ ಬೈದ್ಯ[೨] ನಿರೂಪಿಸಿದ ಹಾಡುಗಳ ಪಠ್ಯದ ಆಧಾರದ ಮೇಲೆ ಕಾಡ್ಯನೆಂದರೆ ಕರಿನಾಗರ ಹಾವು (King Cobra) ಕಾಳಿಂಗ ಸರ್ಪ. ಕಾಡ್ಯನ ಮನೆಗಳಲ್ಲಿರುವ ಹುತ್ತ, ಸರ್ಪನ ಸಂಕೇತವಿರುವ ಕಲ್ಲುಗಳು. ಮಣ್ಣಿನ ಕಲಶಗಳು, ಅವುಗಳ ಮೇಲೆ ರೇಖಿಸಿರುವ ಸರ್ಪನ ಉಬ್ಬುಚಿತ್ರ, ಕಾಡ್ಯನಾಟದ ಸಂದರ್ಭದಲ್ಲಿ ಮೇರರು ಬರೆದ ಮಂಡಲದ ರೇಖೆ, ಮೇರರು ತಮ್ಮ ಜನಾಂಗದ ಮೂಲಸ್ತ್ರೀ ಎಂದು ಹೇಳುವ ಹೊನ್ನಿಗೆ ಕಲಶ ದೊರೆತ ಬಗ್ಗೆ ಹಾಡುವ (ಬೈದ್ಯ) ಕಥಾನಕ–ಎಲ್ಲವೂ ಕಾಡ್ಯನಾಟ ಒಂದು ಸರ್ಪಾರಾಧನೆ ಎನ್ನುವುದನ್ನು ದೃಢೀಕರಿಸುತ್ತವೆ.

## ೧.೧ ನಾಗ ಪರಿಕಲ್ಪನೆ

ಕರಾವಳಿ ಕರ್ನಾಟಕದ ಗೋಕರ್ಣದಿಂದ ಕನ್ಯಾಕುಮಾರಿವರೆಗೂ ಸಹ್ಯಾದ್ರಿಯಿಂದ ಸಮುದ್ರ ತೀರದ ತನಕವೂ ಚಾಚಿಕೊಂಡಿರುವ ಭೂಭಾಗದಲ್ಲಿ ಸರ್ಪಾರಾಧನೆಯು ಸ್ಥಳೀಯ ಮತಾಚಾರವಾಗಿತ್ತು. ಈ ಕರಾವಳಿಯಲ್ಲಿ ಇತಿಹಾಸ ಪೂರ್ವದಿಂದಲೂ ಅಪಾಯಕಾರಿ ಕಾಡುಗಳಿದ್ದುವು[೩]. ಇಂತಹ ಭೂಭಾಗದ ಆದಿವಾಸಿಗಳಲ್ಲಿ ನಾಗನ ಭಯ ಹುಟ್ಟಿ ಬಂದಿರುವುದು ಸಹಜ. ಗೋಕರ್ಣ ಪರಿಸರವನ್ನು ಹಿಂದಿನಿಂದಲೂ ಅಹಿಕ್ಷೇತ್ರವೆಂದು ಕರೆಯುತ್ತಿದ್ದರು. ಇದಕ್ಕೆ ಪೂರಕವಾಗಿ ಟಾಲೆಮಿ ಹೇಳಿದ ಅಯೋರಂ ರಿಜಿಯೊ (Aiorum Regio) ಅಹಿಕ್ಷೇತ್ರವನ್ನೇ ಹೇಳುತ್ತಿರಬೇಕು. (ಮುಂಡ್ಕೂರು ೧೯೭೭ ಪು. ೧೪೦) ಈ ಭೂಭಾಗದಲ್ಲಿ ನಾಗರೆಂಬ ಜನರಿದ್ದರೆಂದು 'ನಾಗಾನಂದ' 'ಅವಧಾನ ಕಲ್ಪಲತಾ' ಗ್ರಂಥಗಳಲ್ಲಿ ಹೇಳಿದೆ. ಇಲ್ಲಿ ಶಂಖಕುಲದ ನಾಗರೆಂಬ ಜನಾಂಗ ವಾಸಿಸುತ್ತಿತ್ತೆಂದೂ ಹೀಗಾಗಿ ಈ ಪ್ರದೇಶವನ್ನು ನಾಗರಖಂಡವೆಂದು ಕರೆಯಲಾಗುತ್ತಿತ್ತು. ಸರ್ಪಕುಲ ಲಾಂಛನವಾಗಿದ್ದ ಈ ಜನರಲ್ಲಿ ಸರ್ಪಾರಾಧನೆ ಒಂದು ಸ್ಥಳಿಕ ಮತಾಚರಣೆಯಾಗಿ ಬಳಕೆಯಾಗುತ್ತಿರಬೇಕು. (ಪೈ ೧೯೪೮). ಕರಾವಳಿಯ ಖ್ಯಾತ ಪ್ರಾಚೀನ ಅರಸು ಮನೆತನಗಳಲ್ಲಿ ಒಂದಾದ 'ಅಳುವ' ಎನ್ನುವ ಮಾತು ಶೇಷನಿಗೆ ಪರ್ಯಾಯ ಪದವಾದ ಅಲುಕ ಎನ್ನುವುದರ ತದ್ಭವ ಆಗಿರುವ ಸಾಧ್ಯತೆಯಿದೆಯೆಂದು ವಿದ್ವಾಂಸರು

ಅಭಿಪ್ರಾಯ ಪಡುತ್ತಾರೆ. (ಭಟ್ ೧೯೬೩ ಪು. ೭೪[೪]) ಶ್ರೀ ಸೋಮವಂಶದ ಅಳುಪ ದೊರೆಗಳ ಶಿಲಾಶಾಸನ ಒಂದರಲ್ಲಿ ಮೇಲ್ಗಡೆ ಸುರುಳಿಹಾಕಿ ಕುಳಿತು ಹೆಡೆಬಿಚ್ಚಿದ ಹಾವಿನ ನಕ್ಷೆಯಿದೆ.

ಕರಾವಳಿಯ ಉಪಾಸನಾಪಂಥದ ಇತಿಹಾಸವನ್ನು ಗಮನಿಸಿದಾಗ ಆ ಪ್ರದೇಶದ ಆದಿಮೂಲ ದೈವ ನಾಗನೇ ಇರಬೇಕು. ಎಲ್ಲ ಜನವರ್ಗದವರೂ ನಾಗನನ್ನು ಬೇರೆಬೇರೆ ರೂಪಗಳಲ್ಲಿ ಭಿನ್ನಭಿನ್ನ ಆರಾಧನಾ ಪ್ರಕ್ರಿಯೆಗಳಿಂದ ಪೂಜಿಸುತ್ತಾ ಬಂದಿರುವುದು ಕಂಡು ಬರುತ್ತದೆ. ತುಳುವ ಪ್ರದೇಶದ ಆಲಡೆ (ಬೆರ್ಮೆರ ಗುಂಡ. ತುಳು) ನಾಗನನ್ನು ಒಳಗೊಂಡಿರುವ ಒಂದು ದೈವಸಂಕೀರ್ಣ. ಇಲ್ಲಿ ನಾಗ, ಬೆರ್ಮೆರ್, ನಂದಿಗೋಣ, ಲೆಕ್ಕೆಸಿರಿ ಮತ್ತು ಕ್ಷೇತ್ರಪಾಲರಿಗೆ ಆರಾಧನೆ ನಡೆಯುತ್ತದೆ. ಕನ್ನಡ ಪ್ರದೇಶದಲ್ಲಿ ಇದಕ್ಕೆ ಸಂವಾದಿಯಾದ ಚಿತ್ತೇರಿ ಎಂಬ ದೈವ ಸಂಕೀರ್ಣವಿದ್ದು ಅಲ್ಲಿ ನಾಗ, ಬ್ರಹ್ಮ, ನಂದಿ, ಚಿಕ್ಕು, ಮತ್ತು ಕ್ಷೇತ್ರಪಾಲ ಮತ್ತಿತರರಿಗೆ ಆರಾಧನೆ ನಡೆಯುತ್ತದೆ.

ನಾಗನು ವಿಭಿನ್ನ ದೇವತೆಗಳೊಂದಿಗೆ ಸಮಾವೇಶಗೊಂಡು ಪೂಜಿತನಾಗುವುದು ಒಂದು ವಿಶಿಷ್ಟ ಸಂಗತಿ. ವಿಷ್ಣು (ಅನಂತಪದ್ಮನಾಭ) ಶಿವ (ಅನಂತೇಶ್ವರ), ಶಕ್ತಿ, ಗಣಪತಿ, ಯಕ್ಷಿ, ಬೊಬ್ಬರ್ಯನೊಂದಿಗೆ ಸಮಾವೇಶಗೊಂಡು ಆರಾಧ್ಯನಾಗಿರುವುದು ಕಂಡು ಬರುತ್ತದೆ. ನಾಗ ಮತ್ತು ಸ್ಕಂದರು ಕರಾವಳಿಯ ಜಿಲ್ಲೆಗಳಲ್ಲಿ ಅಭಿನ್ನರಾಗಿ ಆರಾಧನೆಗೊಳ್ಳುವುದನ್ನು ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯ (ಪುತ್ತೂರು ತಾಲೂಕು) ಕುಡುಪು (ಮಂಗಳೂರು ತಾಲೂಕು) ಕಾಳಾವರ (ಕುಂದಾಪುರ ತಾ.) ಮತ್ತಿತರೆಡೆಗಳಲ್ಲಿ ಗುರುತಿಸಬಹುದು. (ಜಿಲ್ಲೆಯ ಕನ್ನಡ ಪ್ರದೇಶದ ನಾಡವರ ಮನೆಯ ಆವರಣದೊಳಗೆ ಅವರ ಆರಾಧ್ಯದೈವ ಸ್ವಾಮಿ (ನಾಗ)ಯನ್ನು ಹಾಗೂ ಮೇರರ 'ಕಾಡ್ಯನ ಮನೆ'ಗಳಲ್ಲಿ ಕಾಡ್ಯನನ್ನು ಹುತ್ತದ, ಕಲಶದ ರೂಪದಲ್ಲಿ ಗುರುತಿಸಿ ಆರಾಧಿಸಲಾಗುತ್ತದೆ.)

ಕರಾವಳಿ ಕರ್ನಾಟಕದ ತುಳುನಾಡು ಹಾಗೂ ಕನ್ನಡ ಪ್ರದೇಶಗಳೆರಡರಲ್ಲೂ ನಾಗ ಬಹು ಜನಪ್ರಿಯ ಆರಾಧ್ಯದೈವ. ತುಳುವ ಪ್ರದೇಶದ ಆಲಡೆ/ಬೆರ್ಮೆಸ್ಥಾನ/ಬೆರ್ಮೆರ್ ಗುಂಡಗಳಲ್ಲಿ ಬೆರ್ಮೆರ್ ಆದಿಮೂಲ ದೈವವಾಗಿದ್ದು ಸಂತಾನಾಭಿಮಾನಿ ದೇವತೆ ಎಂದು ತಿಳಿಯಲಾಗಿದೆ. ಇಲ್ಲಿಯೇ ತುಳುವರು ತಮ್ಮ ಪಿತೃಪೂಜೆಯನ್ನು ನಡೆಸುತ್ತಾರೆ. ಈ ಬ್ರಹ್ಮನನ್ನು ನಾಗಬ್ರಹ್ಮನೊಂದಿಗೆ ಸಮೀಕರಿಸುವುದೂ ಉಂಟು. ನಾಗಬ್ರಹ್ಮನ ಚಿತ್ರಣಗಳಲ್ಲಿ ಆತನನ್ನು ದೇಹದ ಕೆಳಭಾಗದಲ್ಲಿ ಸರ್ಪರೂಪಿಯಾಗಿಯೂ, ಮೇಲ್ಭಾಗದಲ್ಲಿ ರಾಜದಂಡ ಅಥವಾ ಖಡ್ಗವನ್ನು ಹಿಡಿದ ಮನುಷ್ಯನಾಗಿಯೂ ರೂಪಿಸಿದೆ. ಈ ನಾಗ ಹಾಗೂ ಬ್ರಹ್ಮನ ಚಿತ್ರಣಗಳು ಅರಸನಿಗಿರುವ

ಎರಡು ಪರಸ್ಪರ ಪೂರಕ ಕರ್ತವ್ಯಗಳಾದ ರಕ್ಷಣೆ ಹಾಗೂ ಸಂಪದಭಿವೃದ್ಧಿಯನ್ನು ಸೂಚಿಸುತ್ತಿರಬೇಕು. (ಕ್ಲಾಸ್ ೧೯೮೭ ಪು. ೧೧೭–೧೫೮). ಕರಾವಳಿಯ ನೆಲದಲ್ಲಿ ಆಲುಪರ ಅರಸೊತ್ತಿಗೆಯ ಕೊನೆಯ ಅಂದರೆ ಸುಮಾರು ೧೪ನೇ ಶತಮಾನದ ಕೊನೆಯ ತನಕವೂ ಬ್ರಹ್ಮನು ವೈದಿಕ ಸ್ವರೂಪದ ಚತುರ್ಮುಖ ಬ್ರಹ್ಮನಾಗಿ ಹಾಗೂ ನಾಗನು ಸುಬ್ರಹ್ಮಣ್ಯನೊಂದಿಗೆ ಐಕ್ಯಗೊಂಡು ಚಿತ್ರಿತನಾದಂತೆ ಕಾಣುತ್ತಿಲ್ಲ. ಇದು ವೈದಿಕವರ್ಗದವರಿಂದ ನಡೆದ ದೇವರುಗಳ ಪುನರ್‌ವರ್ಗೀಕರಣ ಹಾಗೂ ನಾಗನನ್ನು ಪೂಜಿಸುವ ಅಧಿಕಾರವನ್ನು ಬ್ರಾಹ್ಮಣರು ಪಡೆದುದರ ಸಂಕೇತವಿರಬೇಕು. ತುಳುನಾಡಿನ ಅನೇಕ ಬೆರ್ಮರಗುಂಡಗಳಲ್ಲಿ ಆರಾಧನೆಯು ಬ್ರಾಹ್ಮಣೇತರ ಅರ್ಚಕರಿಂದಲೇ ನಡೆಯುತ್ತಿದೆ. ಪೀಟರ್ ಕ್ಲಾಸ್ ಹೇಳುವಂತೆ "…..ಬೆರ್ಮೆರ್ ಮೂಲತಃ ರಾಜನಾಗಿದ್ದ ಒಬ್ಬ ವನದೇವತೆ. ಆದರೆ ಆತ ಲೌಕಿಕ ಅರಸನೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದನು. ರಾಜ್ಯದ ಜೀವಕಳೆ, ಸಂಪದಭಿವೃದ್ಧಿ ಹಾಗೂ ನಿಯಾಮಕ ವ್ಯವಸ್ಥೆಗಳನ್ನು ನೇಮಕಗೊಳಿಸಲು ರಾಜನು ಬೆರ್ಮೆರನ್ನು ಆರಾಧಿಸಿ ಸಂತೃಪ್ತಿಗೊಳಿಸಬೇಕಾಗಿತ್ತು. ಬೆರ್ಮರ ಆವಾಸಸ್ಥಾನ ಕಾಡು. ಅಲ್ಲಿನ ಪ್ರಾಣಿಗಳ ಮತ್ತು ಅಲೌಕಿಕ ಜೀವಿಗಳ ಮೇಲೆ ಈ ವನಾಧಿಪತಿಯ ಹತೋಟಿಯಿಂದಾಗಿ ಇದು ಭಯಾನಕ ಪ್ರದೇಶವಾಗಿದೆ. ಇಲ್ಲಿನ ಪ್ರಾಣಿಗಳಲ್ಲಿ ಸರ್ಪವು ಸಂತಾನಭಿವೃದ್ಧಿಗೆ ಸಂಬಂಧಿಸಿದ್ದಾಗಿದೆ. (ಕ್ಲಾಸ್ ೧೯೮೭ ಪು. ೧೧೭–೧೫೮)

ಆಲಡೆ ಅಥವಾ ಬ್ರಹ್ಮ ಸ್ಥಾನಗಳು ಮುಂದೆ ಕಾಲಾನುಕ್ರಮದಲ್ಲಿ ವೈದಿಕೀಕರಣಕ್ಕೆ ಒಳಗಾಗಿ ಶೈವ ದೇವಲಯಗಳಾಗಿ ಬ್ರಾಹ್ಮಣ ಪೂಜೆಗೊಳಗಾದುದನ್ನು ಗಮನಿಸಬೇಕು. ಉದಾಹರಣೆಗೆ ಹಿರಿಯಡಕದ ವೀರಭದ್ರ ದೇವಾಲಯ, ನಂದಳಿಕೆ ಹಾಗೂ ಕವತ್ತಾರಿನ ಮಹಾಲಿಂಗೇಶ್ವರ ದೇವಾಲಯ.

ಜಿಲ್ಲೆಯ ಕನ್ನಡ ಪ್ರದೇಶಗಳಲ್ಲಿ ತುಳುನಾಡಿನ ಆಲಡೆ ಅಥವಾ ಬೆರ್ಮರಗುಂಡಕ್ಕೆ ಸಂವಾದಿಯಾಗಿ ಚಿತ್ತೇರಿ ಎಂಬ ದೈವಸಂಕೀರ್ಣ ಕಂಡು ಬರುತ್ತದೆ. ಇಂತಹ ಚಿತ್ತೇರಿಗಳು ಸಮೀಪದ ಬಂಟ ನಾಡವರ ಮನೆತನಗಳ ಆಡಳಿತಕ್ಕೆ ಒಳಪಟ್ಟಿರುತ್ತವೆ. ಆದರೆ ಬ್ರಾಹ್ಮಣ ಅರ್ಚಕರಿಂದಲೇ ಪೂಜೆ ನಡೆಯುತ್ತಿರುವುದು ಕಂಡುಬರುತ್ತದೆ. ಚಿತ್ತೇರಿಯಲ್ಲಿ ಇಷ್ಟೇ ದೈವಗಳಿರಬೇಕೆಂದು ನಿಗದಿಯಿಲ್ಲ. ನಾಗ, ಬ್ರಹ್ಮ, ಹಾಯ್ಗುಳಿ, ಚಿಕ್ಕು, ಕ್ಷೇತ್ರಪಾಲ, ಕಲ್ಕುಡ, ಚೌಂಡಿ ಮುಂತಾದ ದೈವಗಳು ಇಲ್ಲಿ ನೆಲೆಸಿರುತ್ತವೆ. ಇವುಗಳಲ್ಲಿ ಪ್ರಧಾನ ನಾಗ ಹಾಗೂ ಬ್ರಹ್ಮ. ಕೆಲವು ಚಿತ್ತೇರಿಗಳಲ್ಲಿ ವರ್ಷಕೊಮ್ಮೆ 'ನಾಗಮಂಡಲ' ನಡೆಸುವುದೂ ಉಂಟು[೫]. ಕುಟುಂಬದ ಸಂತಾನಫಲ ಸಮೃದ್ಧಿಯಲ್ಲಿ ಈ ಚಿತ್ತೇರಿಯ ನಾಗ ಹಾಗೂ ಬ್ರಹ್ಮನ ಪಾತ್ರ ಮಹತ್ವದ್ದು ಎಂದು ಜನ ತಿಳಿಯುತ್ತಾರೆ. ಮಾರಣಕಟ್ಟೆ,

ಮಂದರ್ತಿ, ಪಡುಬಿದ್ರಿ, ಹಿರಿಯಡ್ಕ, ಮುಂತಾದೆಡೆ ವೈದ್ಯರು ನಾಗಮಂಡಲ ಡಕ್ಕೆ ಬಲಿಯನ್ನು ಹೋಲುವ ಬ್ರಹ್ಮಮಂಡಲ ಎಂಬ ಆಚರಣೆಯನ್ನು ನಡೆಸುತ್ತಾರೆ. ಶ್ರೀ ಶಂಬಾ ಜೋಷಿಯವರ ಪ್ರಕಾರ "........ಭರಮ/ಬ್ರಹ್ಮ ಇವನು ಅಂತರಂಗದಲ್ಲಿ ನಾಗನೆ" (ಜೋಷಿ ೧೯೭೧ಪು. ೬೫-೬೬) ಕರಾವಳಿಯ ಬ್ರಹ್ಮ/ಬೆರ್ಮೆ ನಾಗನೊಂದಿಗೆ ಸಮೀಕರಣಗೊಂಡ ಫಲೀಕರಣ ದೇವತೆ ಎಂಬುದು ಮೇಲಿನ ಎಲ್ಲ ವಿವರಗಳಿಂದ ತಿಳಿಯಬಹುದು.

## ೧.೨ ನಾಗ-ಯಕ್ಷ

ಯಕ್ಷ(ಕ್ಷಿ)ನಾಗ ಹಾಗೂ ಇವೆರಡರ ನಂಟು ಆಪ್ತವಾದದು. ದೊಡ್ಡ ದೊಡ್ಡ ಮರಗಳ ಬುಡಗಳಲ್ಲೇ ನಾಗಬನಗಳು. ಕಾಡ್ಯನ ಮನೆಗಳು, ಹುತ್ತಗಳಿರುವುದು ಕಂಡುಬರುತ್ತದೆ. ಮರಗಳಲ್ಲಿ ವಾಸಮಾಡುವ ವೃಕ್ಷವಾಸಿ ದೇವತೆ (ನಾಗ ಯಕ್ಷ/ಕ್ಷಿ)ಗಳನ್ನು ಆರಾಧಿಸುವುದರಿಂದ ಸಂತಾನಸಿದ್ಧಿಯಾಗುತ್ತದೆ ಎಂಬ ನಂಬಿಕೆಯಿದೆ.) (Ananda Coomar swamy 1980 pp 61) "ಯಕ್ಷಿಯೆನ್ನುವುದು ಹೆಣ್ಣುತನದ ಪ್ರತೀಕ. ಹೆಂಗಸಿನ ಸ್ವಭಾವಕ್ಕೆ, ಪ್ರಕೃತಿಗೆ ಸಹಜವಾದುದು ತಾಯ್ತನ. ಗರ್ಭಧಾರಣ. ಇದನ್ನು ಗಮನಿಸಿಯೇ ಮಾತೃದೇವತೆಯ ಕಲ್ಪನೆಯನ್ನು ಜನ ರೂಢಿಸಿಕೊಂಡು ಬಂದರು. ತಾಯ್ತನವೆಂದರೆ ಪ್ರಸವಸಾಮರ್ಥ್ಯ, ಫಲವತ್ತಾಗಿರುವುದು. ಪುಷ್ಟವಾದ ಮೈಕಟ್ಟು, ಉನ್ನತ ಸ್ತನಗಳು, ಪೂರ್ಣೋದರ, ನಗುಮೊಗ ಇವೆಲ್ಲ ದೋಹದಶಂಕಿನಿಯಾದ ಹೆಂಗಸಿನ ಲಕ್ಷಣಗಳೇ. ಪ್ರಾಚೀನ ಧರ್ಮದಲ್ಲಿ ಅವಂಧ್ಯತೆಯ ಕಲ್ಪಗಳು (Fertility rites) ತುಂಬಾ ಮುಖ್ಯವಾಗಿದ್ದುವು. ಅದೂ ಬೇಸಾಯವೇ ಪ್ರಮುಖವಾಗಿದ್ದ ನಮ್ಮ ಸಮಾಜದಲ್ಲಿ ಈ ಕಲ್ಪಗಳು ಬಹುಬಗೆಗಳಲ್ಲಿ ಬೆಳೆದು ಬಂದುವು. ಪೂರ್ಣಕುಂಭ, ಕಲಶ, ವೃಕ್ಷಪೂಜೆ, ನಾಗಾರಾಧನೆ, ಯಕ್ಷಿಯರ ಪೂಜೆ-ಇವೆಲ್ಲವೂ ಇದರ ಫಲಗಳೇ (ರಾಮಚಂದ್ರ ರಾವ್ ೧೯೭೫ ಪು.೨೪-೨೫).

ದಕ್ಷಿಣಕನ್ನಡದ ನಾಗಾರಾಧನೆಯ ಮುಖ್ಯ ಆಚರಣೆಗಳಾದ ನಾಗಮಂಡಲ ಹಾಗೂ ಕಾಡ್ಯನಾಟಗಳಲ್ಲಿ ಯಕ್ಷೋಪಾಸನೆಯ ಬೀಜಗಳು ಕಾಣಿಸುತ್ತವೆ. ನಾಗನನ್ನೂ ಯಕ್ಷಿಯನ್ನೂ ಸಮೀಕರಿಸಿ ನಾಗಯಕ್ಷಿಯ ರೂಪದಲ್ಲಿ ಆವೇಶಬರಿಸಿ ಕೊಂಡು ಪೂಜಿಸುವ ಕ್ರಮ ನಾಗಮಂಡಲ, ಡಕ್ಕೆಬಲಿಗಳಲ್ಲಿ ಕಾಣಬಹುದು (ಅಮೃತ ೧೯೭೭ ಪು. ೫೨). ಉಡುಪಿ ತಾಲೂಕಿನ ಕಾರ್ಕಡ ಗ್ರಾಮದ ಯಕ್ಷಿ ಗುಡಿಯಲ್ಲಿ ವೈದ್ಯರಿಂದ ಡಕ್ಕೆಬಲಿ ಜರಗುವುದಾಗಿ ತಿಳಿದು ಬಂದಿದೆ. ಇದು ಬರಿಯ ಯಕ್ಷಿಯಾಗಿರದೆ ನಾಗಯಕ್ಷಿಯಾಗಿರಬೇಕು. (ಅಮೃತ ೧೯೭೭ ಪು. ೫೨).

ನಾಗಮಂಡಲ, ಡಕ್ಕೆಬಲಿ (ಬ್ರಹ್ಮ ಮಂಡಲ)ಗಳು ಮೂಲತಃ ತಾಂತ್ರಿಕ ಸ್ವರೂಪದಲ್ಲಿದ್ದಿರಬೇಕು. ಡಕ್ಕೆಬಲಿಯಲ್ಲಿಂದು ವೈದ್ಯರು ತಾವು ಬರೆಯುತ್ತಿರುವುದಾಗಿ ಹೇಳುವ ಬ್ರಹ್ಮಯಕ್ಷ, ನಾಗಯಕ್ಷ, ನಾಗಯಕ್ಷಿ ತ್ರಿಶೂಲ, ಗಣಪತಿಯ ಮೂಲರೂಪ ಬೇರೆಯಿದ್ದಿರಬೇಕೆಂಬ ಅಭಿಪ್ರಾಯವಿದೆ. (ರಾಜಗೋಪಾಲ್ ೧೯೮೨ ಪು. ೯೪–೧೧೫) ಇವು ಮೂಲತಃ ತಾಂತ್ರಿಕ ಸಂಕೇತಗಳಾಗಿರಬೇಕು. ಈ ಆಚರಣೆಗಳಲ್ಲಿ ತಂತ್ರಕ್ಕೆ ಸಂಬಂಧಿಸಿದಂತೆ ಮೂರು ನಾಲ್ಕು ಹಂತಗಳನ್ನು ಗುರುತಿಸಬಹುದೆನ್ನುವ ಅವರು ಅಲ್ಲಿ ಧಾರ್ಮಿಕತೆ (Ritualistic tone) ಯನ್ನು ಸಾಧಿಸುವುದಕ್ಕಾಗಿ 'ಗಣಪತಿ' ಎಂದು ಕರೆದಿರಬೇಕು ಎಂದು ಹೇಳುತ್ತಾರೆ.

ನಾಗಮಂಡಲ, ಡಕ್ಕೆಬಲಿಗಳಂತಹ ತಾಂತ್ರಿಕ ಮೂಲದ ಆಚರಣೆಗಳ ಹಿಂದಿನ ಅರಿವು ಮರೆಯಾಗಿದ್ದರೂ ಭಕ್ತವರ್ಗ ಪರಂಪರೆಯ ಬಲದಿಂದ ಅದನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ಆಚರಣೆಯ ಸಂದರ್ಭದಲ್ಲಿ ನಾಗಪಾತ್ರಿಯ ಮೈದುಂಬುವುದು ನಾಗಯಕ್ಷನೇ ಹೊರತು ನಾಗನಲ್ಲವೆಂದೂ ಹೇಳುತ್ತಾರೆ. (ವೈದ್ಯ ೧೯೮೫, ಉಪಾಧ್ಯಾಯ ೧೯೯೧) ಡಕ್ಕೆಬಲಿ ಎನ್ನುವ ಪದದಂತೆ ಅದರೊಳಗೆ ಪ್ರಾಣಿಬಲಿಯು ಸೇರಿದ್ದು ರಕ್ತಾಹಾರವನ್ನು ಅದರ ಆರಾಧಕರು ಜೈನ ಮತ್ತು ವೈದಿಕ ಧರ್ಮಗಳ ಪ್ರಭಾವದಿಂದ ಈಗ ಬಿಟ್ಟುಕೊಟ್ಟಿರಬೇಕು.[೬] (ರಾಜಗೋಪಾಲ್ ೧೯೮೨ ಪು. ೯೪–೧೧೫) ತ್ರಿಕೋನವನ್ನು ಮೇಲು ಕೆಳಗು ಮಾಡಿ ಜೋಡಿಸಿದಾಗ ಆ ಸಂಕೇತರೂಪವು ತಾಂತ್ರಿಕ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ತಾಂತ್ರಿಕರು ಇದನ್ನೇ ಶ್ರೀಚಕ್ರ ಎಂದು ಕರೆದರು. ಇದು ಹೆಣ್ಣು–ಗಂಡುಗಳ ಲೈಂಗಿಕ ಸಂಕೇತ ಎನ್ನಲಾಗಿದೆ. ಡಕ್ಕೆಬಲಿಯ ಸಂದರ್ಭದಲ್ಲಿ ಇದನ್ನು ಗಣೇಶ ಎಂದರು. ಡಕ್ಕೆಬಲಿ ನಾಗಮಂಡಲಗಳಲ್ಲಿ ವೈದ್ಯರು ಪಂಚವರ್ಣದ ಹುಡಿಗಳಿಂದ ರೇಖಿಸುವ ಕೈಕಾಲುಗಳಿಲ್ಲದ ತಲೆಯ ಚಿತ್ರವನ್ನು ಬ್ರಹ್ಮಯಕ್ಷೆ ಎನ್ನುತ್ತಾರೆ. ಈ ಬ್ರಹ್ಮ ವೈದಿಕರ ಚತುರ್ಮುಖ ಬ್ರಹ್ಮನಲ್ಲ. ಈ ಹಿಂದೆ ಹೇಳಿದ ಬೆರ್ಮೆರ್ ಅಥವಾ ಸಂತಾನಾಧಿದೇವ ಬ್ರಹ್ಮ[೭]. ನಾಗನ ಹೆಡೆಯನ್ನು ಹೋಲುವ ರೂಪವು ಶಂಖವನ್ನು ಹೋಲುತ್ತಿದ್ದು ಇದನ್ನು ನಾಗಯಕ್ಷಿ ಎಂದು ಕರೆಯುತ್ತಾರೆ. ಇದು ಆದಿಮ ಕಾಲದ ಯಕ್ಷಾರಾಧನೆಯ ನೆನಪನ್ನು ತರುತ್ತದೆ. ಈ ಯಕ್ಷಾರಾಧನೆ ಆರ್ಯ–ದ್ರಾವಿಡರ ನಡುವಣ ಆತ್ಮೀಯತೆಯ ಬೆಸುಗೆ ಏರ್ಪಟ್ಟುದರ ಸಂಕೇತವಾಗುತ್ತದೆ. (ಹಂಪನಾ ೧೯೭೬ ಪು.). ಡಕ್ಕೆಬಲಿ/ಬ್ರಹ್ಮಮಂಡಲದ ನಾಗರ ಹಾವಿನ ಚಿತ್ರವನ್ನು ನಾಗಯಕ್ಷ ಎಂದು ಕರೆಯುತ್ತಾರೆ. ಇದು ತಾಂತ್ರಿಕರು ಹೇಳುವ ಪುರುಷ. ತ್ರಿಶೂಲಗಳು ಶೈವ ಸೂಚಕವಿರಬೇಕು.

ನಾಗಮಂಡಲ/ಡಕ್ಕೆಬಲಿಗಳಲ್ಲಿ ವೈದ್ಯ, ಅರ್ಧನಾರಿ ವೇಷವನ್ನು ತೊಡುವುದರ ಔಚಿತ್ಯವನ್ನು ವಿವರಿಸಬೇಕಾಗಿದೆ. ಈ ವೇಷ (ಕಸೆವೇಷ) ಮಂಡಲದಲ್ಲಿ ಬರೆದ ಗಣಪತಿ (ಶ್ರೀಚಕ್ರ) ಯಪ್ರತಿನಿಧಿ. ಹೆಣ್ಣು ಗಂಡುಗಳ ಮಿಲನದ ಈ ಸಂಕೇತವೇ ಅರ್ಧನಾರಿ ವೇಷಕ್ಕೆ ಇಂಬುಕೊಟ್ಟಿರಬೇಕು. ನಾಗನನ್ನು ತನ್ನ ಹಾಡು, ಕುಣಿತಗಳ ಮೂಲಕ ಸಂತೃಪ್ತಿಗೊಳಿಸುವುದು ಈ ವೇಷದ ಕೆಲಸ. ನಾಗಪಾತ್ರಿಯು ಮಂಡಲದಲ್ಲಿ ಬರೆದ ನಾಗ ಅಥವಾ ನಾಗಯಕ್ಷನನ್ನು ಪ್ರತಿನಿಧಿಸುತ್ತಾನೆ. ಇದು ಪುರುಷ ಸಂಕೇತವಿರಬಹುದು. (ರಾಜಗೋಪಾಲ್ ೧೯೮೨ ಪು. ೯೪–೧೧೫).

ನಾಗಮಂಡಲ/ಢಕ್ಕೆಬಲಿಗಳು ತಾಂತ್ರಿಕವಿಧಿಗಳಾಗಿದ್ದು ವೈದಿಕವಿಧಿಗಳಷ್ಟೇ ಪ್ರಾಚೀನವಾದುದಾಗಿರಬೇಕೆಂಬ ಅಭಿಪ್ರಾಯವಿದೆ. ಅವೈದಿಕ ಮೂಲದ ತಂತ್ರಪಂಥ ಪ್ರಕೃತಿ ಅಥವಾ ಸ್ತ್ರೀತ್ತ್ವಕ್ಕೆ ಹೆಚ್ಚು ಒತ್ತನ್ನು ನೀಡುತ್ತದೆ. ಜಗತ್ತಿನಲ್ಲಿ ಕೃಷಿ ಪದ್ಧತಿಗೆ ಹೆಣ್ಣೇ ಮೂಲವೆಂದೂ ಅದರಿಂದಲೇ ಈ ತಂತ್ರಪಂಥ ವಿಕಾಸವಾಗಿರಬೇಕೆಂದೂ ತಿಳಿಯಲಾಗಿದೆ. (ವೇಣುಗೋಪಾಲ ೧೯೮೨ ಪು. ೨೬) ನಾಗಮಂಡಲ/ ಡಕ್ಕೆಬಲಿಗಳು ಫಲವಂತಿಕೆಯ ಮಾಂತ್ರಿಕ ಕ್ರಿಯೆಗಳಾಗಿದ್ದು ಮೂಲತಃ ಸ್ತ್ರೀಯೇ ಎಲ್ಲಾ ಆರಾಧನಾ ವಿಧಿಗಳಲ್ಲಿ ಪಾಲ್ಗೊಳ್ಳುತ್ತಿದ್ದಿರಬೇಕು. ಅಷ್ಟೇ ಅಲ್ಲ ತಂತ್ರ ಪಂಥದಲ್ಲಿ ಪಾಲ್ಗೊಳ್ಳುತ್ತಿದ್ದವರು ಕೆಳ ಜಾತಿಯ ಸ್ತ್ರೀಯರು[೮]. ಕಾಲಕ್ರಮೇಣ ಪಿತೃಪ್ರಧಾನಕುಟುಂಬ ವ್ಯವಸ್ಥೆ ನೆಲೆಗೊಳ್ಳುತ್ತಾ ಬಂದು ಪುರುಷ ಪ್ರಧಾನತೆ ಏರ್ಪಟ್ಟ ಹಿನ್ನೆಲೆಯಲ್ಲಿ ಮಹಿಳೆಯರ ಕೆಲಸಗಳು ಪುರುಷರಿಗೆ ವರ್ಗಾವಣೆಗೊಂಡಿರಬೇಕು. ಆದರೆ ಪುರುಷ ಪುರುಷನಾಗಿ ಈ ಕಾರ್ಯನಿರ್ವಹಿಸುವಂತಿಲ್ಲ. ಅವರು ತಮ್ಮ ಸ್ವರೂಪವನ್ನು ಸ್ತ್ರೀಯನ್ನಾಗಿ ಮಾರ್ಪಡಿಸಿಕೊಂಡಾಗ ಮಾತ್ರ ಈ ವಿಧಿಗಳಲ್ಲಿ ಪಾಲ್ಗೊಳ್ಳುವಂತಿತ್ತು. ಈ ಬಗೆಯ ಬದಲಾವಣೆಯನ್ನು ಅವರು ಸ್ತ್ರೀಯ ಉಡುಗೆಯನ್ನು ಧರಿಸುವ ಮೂಲಕ ಮಾಡಿಕೊಳ್ಳುತ್ತಿದ್ದರು. ಈ ತತ್ತ್ವವನ್ನು ನಾಗಮಂಡಲ/ಡಕ್ಕೆಬಲಿಗಳ ಅರ್ಧನಾರಿ ವೇಷದಲ್ಲಿ (ಕಸೆವೇಷ) ಗುರುತಿಸಬಹುದು.

ನಾಗಮಂಡಲದ ಕಲ್ಪನೆಯಲ್ಲಿ ಡಾ. ಶಿವರಾಮ ಕಾರಂತರು ದ್ರಾವಿಡ ಆರ್ಯ ಸಂಪ್ರದಾಯಗಳ ಸಮ್ಮಿಲನವನ್ನು ಗುರುತಿಸುತ್ತಾರೆ. ದ್ರಾವಿಡ ಸಂಸ್ಕೃತಿಯ ಪ್ರತಿನಿಧಿಯಾದ ತುಳುನಾಡಿನ ಭೂತಮಾಧ್ಯಮನು ಪ್ರಾಚೀನ ಕಾಲದ ದ್ರಾವಿಡ ಸಂಪ್ರದಾಯದವನಾಗಿದ್ದಾನೆ. ಮುಂದೆ ಈ ನೆಲಕ್ಕೆ ಬಂದ ಭಿನ್ನ ಸಂಸ್ಕೃತಿ (ಆರ್ಯ ಸಂಸ್ಕೃತಿ)ಯ ಫಲವಾಗಿ ಹೊಸ ಬಗೆಯಲ್ಲಿ ರೂಪವಿಕಾಸ ಪಡೆದಿರಬೇಕು. ದೆವ್ವದ ಘೋರ ಸ್ವರೂಪವನ್ನು ಪುರುಷನಾಗಿ ಚಿತ್ರಿಸಿ ಅದನ್ನು ಒಲಿಸುವ ಕೆಲಸ 'ಪ್ರಕೃತಿ'ಗೆ ಒಪ್ಪಿಸುವ ರೂಪಾಂತರ ಅನಂತರ ಬಂದ ಆರ್ಯ ಸಂಸ್ಕೃತಿಯಿಂದ ಉಂಟಾಗಿರಬೇಕು. (ಕಾರಂತ ೧೯೭೨ ಪು. ೨೩೬–೨೪೫) ಸುಂದರವಾಗಿ ಬರೆದ ಮಂಡಲದ

ಸುತ್ತಲೂ ಪಾತ್ರಿ ಮತ್ತು ವೈದ್ಯ ಅಂದರೆ ಕ್ರಮವಾಗಿ ಪುರುಷ (ನಾಗ ಪಾತ್ರಿ) ಮತ್ತು ಪ್ರಕೃತಿ (ಅರ್ಧನಾರಿ ವೇಷದ ವೈದ್ಯ)ಯರು ಕುಣಿಯುತ್ತಾರೆ. ವೈದ್ಯ ಹಾಡುತ್ತ ಕುಣಿಯುತ್ತ ಎದುರಿನ ನಾಗನನ್ನು ಸ್ತುತಿಸುತ್ತ, ಛೇಡಿಸುತ್ತ ಒಲಿಸುತ್ತಾನೆ. ಇಲ್ಲಿನ ಹಾಡು, ಕುಣಿತಗಳಲ್ಲಿ ವಿವಿಧ ರಸಾವಿಷ್ಕಾರಕ್ಕೆ ಅವಕಾಶವಿದೆ. ಇಲ್ಲಿನ ಹಾಡುಗಳು ನಾಗನಿಗೆ ಅಥವಾ ನಾಗನಿಗೆ ಸಂಬಂಧಪಟ್ಟ ದೈವಗಳನ್ನು ಕುರಿತಿರುತ್ತವೆ.

## ೧.೩ ನಾಗ–ಸ್ವಾಮಿ

ನಾಗನನ್ನೊಳಗೊಂಡ ಸ್ಥಳೀಯ ದೈವ ಸಮುದಾಯಗಳಿಗೆ ಜಿಲ್ಲೆಯ ಪ್ರಧಾನ ಭೂತಮಾಧ್ಯಮ ಜನಾಂಗಗಳಲ್ಲಿ ಒಂದಾದ ಪಾಣರು ಗ್ರಾಮ ಮಟ್ಟದಲ್ಲಿ ಅಥವಾ ಮನೆತನದ ಮಟ್ಟದಲ್ಲಿ ನಡೆಸುವ ಒಂದು ವೈದಿಕೇತರ ಆಚರಣೆ–ಪಾಣಾರಾಟ. ಸ್ಥಳೀಯ ಬ್ರಾಹ್ಮಣೇತರ ಜನವರ್ಗದ ದೃಷ್ಟಿಯಲ್ಲಿ ನಾಗರೂಪಿಯಾದ ಸ್ವಾಮಿ ಒಂದು ಆರ್ಯೇತರ ದೈವ. ಕರಾವಳಿಯ ಅತ್ಯಂತ ಪ್ರಭಾವಿ ಕೃಷೀಮೂಲದ ಜನಾಂಗ ನಾಡವರು (ಬಂಟರು) ತಮ್ಮ ಮನೆಯ ಆವರಣದೊಳಗಿರುವ ನಾಗನಿಗೆ ಬ್ರಾಹ್ಮಣರಿಂದ ಉಪಚಾರ ನಡೆಸಿದರೆ ತಮ್ಮ ಮನೆದೈವವಾದ ಸ್ವಾಮಿಗೆ ನಿತ್ಯದಲ್ಲಿ ಹೂನೀರು ಹಾಕಿ ತಾವೇ ಪೂಜೆ ನಡೆಸುತ್ತಾರೆ. ಗ್ರಾಮ ಮಟ್ಟದಲ್ಲಿ ಪಾಣರ ಮೂಲಕ ನಡೆಸುವ ವಾರ್ಷಿಕ ಆರಾಧನೆಯೇ ಪಾಣರಾಟ. (ನಾವಡ ೧೯೮೯ ಪು. ೨೭೩) ಸ್ವಾಮಿಯ 'ಹೊಗಳಿಕೆ'ಯ ಹಾಡುಗಳನ್ನು ಕಸೆವೇಷ ತೊಟ್ಟ ಪಾಣ ಹಾಡುತ್ತಿರುವಾಗ ಮತ್ತೊಬ್ಬ ಯಕ್ಷಗಾನದ ಕೇದಗೆಮುಂದಲೆ ಕಿರೀಟವನ್ನು ಹೋಲುವ ವೇಷ ತೊಟ್ಟು ಒಂದೆರಡು ನಿಮಿಷ ಕುಣಿದು ಹೋಗುತ್ತಾನೆ. ಇದು ಅವರ ಪಾಲಿಗೆ 'ಸ್ವಾಮಿಕೋಲ', ಸ್ವಾಮಿಯೊಂದಿಗೆ ಹಾಯ್ಗುಳಿ, ಮಾಂಕಾಳಿಯಮ್ಮ, ಹಳೆಯಮ್ಮ, ಎಳೆಯಮ್ಮ, ಚಿಕ್ಕಮ್ಮ, ಮಂತ್ರಿಗಣ, ಕ್ಷೇತ್ರಪಾಲ ಹೀಗೆ ಹಲವಾರು ದೈವಗಳಿಗೆ ಕೋಲ, ಡಕ್ಕೆಬಲಿಗಳ ರೂಪದಲ್ಲಿ ನಡೆವ ಈ ಉಪಚಾರದಲ್ಲಿ ಸಮಾಜದ ವಿಭಿನ್ನ ವರ್ಗದವರು ಅರ್ಚಕರಾಗಿ, ಪಾತ್ರಿಯಾಗಿ, ದೈವಮಾಧ್ಯಮರಾಗಿ, ಇನ್ನಿತರ ಸೇವಾಕಾರ್ಯ ನಡೆಸುವವರಾಗಿ ಪಾಲ್ಗೊಳ್ಳುತ್ತಾರೆ.

## ೨.೧ ಕಾಡ್ಯ–ಕಾಡ್ಯನಾಟ

ಕಾಡ್ಯನೆಂದರೆ ಕಾಳಿಂಗಸರ್ಪ ಎಂಬುದಾಗಿ ಈ ದೈವವನ್ನು ಆರಾಧಿಸುವ ಮೇರ ಹರಿಜನವರ್ಗದವರು ಹೇಳುತ್ತಾರೆ. ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಹರಿಜನವರ್ಗಕ್ಕೆ ಸೇರಿದ ಇವರು ಮಾತ್ರ ನಂಬುವ ಕಾಡ್ಯನಿಗೆ (ಇತ್ತೀಚೆಗೆ ಇತರ ಜಾತಿಯವರು ತೆಳುವಾಗಿ ಹರಕೆ ಕೊಡುವುದುಂಟು) ಕಾಡ್ಯನಾಟ ನಡೆಸುತ್ತಾರೆ. ಆರ್ಥಿಕ ಬಲ ಅವರಿಗಿಲ್ಲದ ಕಾರಣ ಹಲವು ವರ್ಷಗಳಿಗೊಮ್ಮೆ

ಕಾಡ್ಯನ ಮನೆಗಳಲ್ಲಿ ಕಾಡ್ಯನಾಟ ಜರಗುವುದುಂಟು. ಹೀಗಾಗಿ ಇದೊಂದು ಮರೆಯಾಗುತ್ತಿರುವ ವಿಶಿಷ್ಟ ಸರ್ಪಾಚರಣೆ.

**೨.೧.೧ ಪ್ರಕೃತ ಅಧ್ಯಯನಕ್ಕೆ ಮುಖ್ಯವಾಗಿ ಮೂರು ಆಕರಗಳು :**

೧. ೧೯೮೧ನೇ ಇಸವಿಯಲ್ಲಿ ಕುಂದಾಪುರತಾಲೂಕು ಯೆಡಾಡಿ ಮತ್ಯಾಡಿ (ನಾಲ್ತೂರು ಗ್ರಾಮ)ಯಲ್ಲಿ ಜರಗಿದ ಕಾಡ್ಯನಾಟದಲ್ಲಿ ಭಾಗಿಯಾದ ವ್ಯಕ್ತಿಗಳ ಜತೆ ನಡೆಸಿದ ಸಂದರ್ಶನ (೩.೬.೧೯೯೦).

೨. ಕಾಡ್ಯನಾಟದ ಎಲ್ಲ ವಿಧಿ ಆಚರಣೆಗಳನ್ನು ನಡೆಸಿಕೊಡುವ ಬೈದ್ಯ ಬಚ್ಚಮೇರರೊಂದಿಗೆ ಹಲವು ಬಾರಿ ನಡೆಸಿದ ಸಂದರ್ಶನ. ಹಾಗೂ ಕಾಡ್ಯನಾಟದ ಸಂದರ್ಭದಲ್ಲಿ ಹಾಡಲಾಗುವ ಹಾಡುಗಳ ಪಠ್ಯದಲ್ಲಿ ದೊರೆವ ಮಾಹಿತಿ (೧೯೮೬–೧೯೯೧ರ ನಡುವಣ ಕಾಲಾವಧಿ)

೩. ಇತ್ತೀಚೆಗೆ ೧೯೯೧ ಮಾರ್ಚ್ ೩೦ರಿಂದ ಏಪ್ರಿಲ್ ೨ರ ತನಕ ನಾಲ್ತೂರಿನ ಯೆಡಾಡಿ ಮತ್ತ್ಯಾಡಿಯಲ್ಲಿ ಜರಗಿದ ಕಾಡ್ಯನಾಟದಲ್ಲಿ ಸಂಪೂರ್ಣ ಭಾಗಿಯಾಗಿ ದಾಖಲಿಸಿಕೊಂಡ ಮಾಹಿತಿಗಳು.

ನಾಗನಿಗೆ ಇಂದು ನಡೆಯುವ ಉಪಚಾರಗಳಲ್ಲಿ ವೈದಿಕಧರ್ಮದ ಪ್ರಭಾವವನ್ನು ನಿಚ್ಚಳವಾಗಿ ಗುರುತಿಸಬಹುದು. ಪರಿಶಿಷ್ಟರ ಆಚರಣೆ, ಕಲೆಗಳಲ್ಲಿ, ವೈದಿಕ ರಹಸ್ಯವನ್ನು ಅರಸುವ, ಅದರೊಂದಿಗೆ ಸಮೀಕರಿಸುವ ಪ್ರವೃತ್ತಿ ಇಂದು ಸಾಮಾನ್ಯ ವಾಗಿದೆ. ಆರ್ಥಿಕವಾಗಿ ಸಾಮಾಜಿಕವಾಗಿ ಸಮಾಜದ ಅಂಚುವಾಸಿಗಳಾಗಿರುವ ಇಂತಹ ಜನಾಂಗಗಳ ವಿಧಿ ಆಚರಣೆಗಳನ್ನು, ಆಲೋಚನೆಗಳನ್ನು, ಹಾಡು ಕುಣಿತಗಳನ್ನು ವೈದಿಕ ಪರಿಕಲ್ಪನೆಗಳಿಂದ ಮುಕ್ತವಾಗಿ ನೋಡುವ ದೃಷ್ಟಿ ತೀರಾ ಅವಶ್ಯ. ಕರಾವಳಿಯ ನಾಗಾರಾಧನೆ ಮೂಲತಃ ಆರ್ಯೇತರ ವಿಧಿಯಾಗಿರಬೇಕು. ಇಲ್ಲಿನ ಮತಾಚಾರಗಳಲ್ಲಿ ನಾಗನು ಆರಾಧ್ಯದೈವವಾಗಿದ್ದು ಅಥವಾ ಇಲ್ಲಿನ ಜನಾಂಗಗಳ ಕುಲಲಾಂಛನವಾಗಿದ್ದು ಮನ್ನಣೆಯನ್ನು ಪಡೆದಿದ್ದಾಗ ಶಿಷ್ಟ ಧರ್ಮಗಳು ಇಲ್ಲಿ ಪ್ರವೇಶಿಸಿರಬೇಕು. (ಪೈ ೧೯೪೮). ಕಾಡ್ಯನಾಟ ಎನ್ನುವ ಹರಿಜನವರ್ಗದವರ ಈ ಮತಾಚಾರ ಇತರ ಆರಾಧನಾ ಸಂಪ್ರದಾಯಗಳಂತೆ ವಿಶೇಷ ಸಂಸ್ಕೃತಾನುಸರಣ ಪ್ರಕ್ರಿಯೆಗೆ ಒಳಗಾಗಿರುವುದು ಕಾಣಿಸುತ್ತಿಲ್ಲ.

**೩.೧ ಪ್ರದರ್ಶನ**

ಪ್ರಸ್ತುತ ಕಾಡ್ಯನಾಟವು ಕುಂದಾಪುರ ತಾಲೂಕಿನ ಕೋಟೇಶ್ವರ ಹಾಲಾಡಿ ರಸ್ತೆಯಲ್ಲಿ ೧೨ ಕಿಲೋಮೀಟರ್ ದೂರದ ನಾಲ್ತೂರು ಗ್ರಾಮದ ಪಟೇಲ್

ವಾಸುದೇವ ಹೆಬ್ಬಾರರ ಬೋಗಿ ಮರದ ಕಾಡಿನೊಳಗಿರುವ ಕಾಡ್ಯನ ಮನೆಯ ಪರಿಸರದಲ್ಲಿ ಜರಗಿತ್ತು. (ಮಾರ್ಚ್ ೩೦ರಿಂದ ಏಪ್ರಿಲ್ ೨) ನಾವು ಉಡುಪಿ, ಕುಂದಾಪುರ ತಾಲೂಕುಗಳಲ್ಲಿ ೪೬ ಕಾಡ್ಯನ ಮನೆಗಳನ್ನು ವಕ್ತೃಗಳ ಸಹಾಯದಿಂದ ಗುರುತಿಸಿದ್ದು ಅವುಗಳಲ್ಲಿ ಆರನ್ನು ಪ್ರತ್ಯಕ್ಷ ಕಂಡು ಬಂದಿದ್ದೇವೆ. ಸಾಮಾನ್ಯವಾಗಿ ಕಾಡ್ಯನ ಮನೆಗಳು ಊರ ಹೊರಗೆ ಕಾಡಿನ ನಡುವೆಯೇ ಇರುತ್ತವೆ.

## ೩.೧.೧ ಕಾಡ್ಯ–ಕಾಡ್ಯನ ಮನೆ

ಈ ಕಾಡ್ಯನ ಮನೆಗಳಲ್ಲಿ 'ಆಟದ ಕಾಡ್ಯನ ಮನೆ', 'ಮುಂಡು ಕಾಡ್ಯನ ಮನೆ' ಎಂದು ಎರಡು ಬಗೆ. ಆಟದ ಕಾಡ್ಯನ ಮನೆಯಲ್ಲಿ ಮಾತ್ರ ಕಾಡ್ಯನಾಟ ಜರಗುತ್ತದೆ. ಕಾಡ್ಯನ ಮನೆ ಸಾಮಾನ್ಯವಾಗಿ ಜನವಸತಿಯಿಂದ ದೂರ ಕಾಡಿನೊಳಗೆ ಅಥವಾ ಊರ ಹೊರಗಿರುತ್ತದೆ. ಕಾಡ್ಯನ ಮನೆಯೆಂದರೆ ಬರಿಯ ಗುಡಿಯಲ್ಲ. ಕಾಡ್ಯನು ಪ್ರಧಾನವಾಗಿದ್ದು ಹಲವು ದೈವಗಳ ಒಂದು ಸಂಕೀರ್ಣ. ಇಂತಹ ಗುಡಿಗಳು ಸಾಮಾನ್ಯವಾಗಿ ಗೋಡೆಗಳಿಂದ ಆವೃತವಾಗಿರುವುದಿಲ್ಲ. ಹಂಚು ಅಥವಾ ಕಾಂಕ್ರಿಟಿನ ಛಾವಣಿಯೂ ಇಲ್ಲ. ಸುಮಾರು ಎರಡು ಅಡಿ ಎತ್ತರದ. ಹತ್ತರಿಮದ ಹನ್ನೆರಡು ಅಡಿ ಉದ್ದಳತೆಯ ವೇದಿಕೆಯ ಮೇಲೆ ನಾಲ್ಕು ಮೂಲೆಗಳಲ್ಲಿ ನಿಂತ ಕಂಬಗಳ ಮೇಲೆ ಹುಲ್ಲು ಹಾಸಿನ ಛಾವಣಿ ಇರುತ್ತದೆ. ಇಂತಹ ಕಾಡ್ಯನ ಮನೆಯ ಮಧ್ಯಭಾಗದಲ್ಲಿ ಸುಮಾರು ೧೦ ರಿಮದ ೧೫ ಅಡಿ ಎತ್ತರಕ್ಕೆ ಬೆಳೆದ ಹುತ್ತವಿರುತ್ತದೆ. ಕರಾವಳಿಯಲ್ಲಿ ಹುತ್ತ ಸರ್ಪದ ಸಂಕೇತ. ಈ ಹುತ್ತದ ಬುಡದಲ್ಲಿ ನಾಗನ ಕಲ್ಲುಗಳಿರುತ್ತವೆ. ಸುತ್ತಲೂ ನೂರಾರು ಸಂಖ್ಯೆಯ ವಿವಿಧ ಗಾತ್ರದ ಮಣ್ಣಿನ ಕಲಶಗಳಿರುತ್ತವೆ. ಈ ಕಲಶಗಳ ಹೊಟ್ಟೆಯ ಭಾಗದಲ್ಲಿ ಒಂದರಿಂದ ತೊಡಗಿ ಹನ್ನೊಂದು ಸಂಖ್ಯೆಯ ಸರ್ಪನ ಆಕೃತಿಯನ್ನು ರೇಖಿಸಲಾಗಿರುತ್ತದೆ. ಇಂತಹ ಕಾಡ್ಯನ ಗುಡಿಯೊಳಗೆ ಇರುವ ದೈವದ ಸಂಕೇತಗಳು ಒಂದಲ್ಲ ಒಂದು ರೀತಿಯಲ್ಲಿ ನಾಗನನ್ನು ಸಂಕೇತಿಸುತ್ತವೆ. ಹುತ್ತ. ನಾಗನ ಹೆಡೆಯಿರುವ ಕಲಶಗಳು, ನಾಗನ ಕಲ್ಲುಗಳು ಹಾಗೂ ಹಾಯ್ಗುಳಿಯನ್ನು ಪ್ರತಿನಿಧಿಸುವ ಕಲ್ಲಿನ ಕಂಬ. ಜಿಲ್ಲೆಯ ಕನ್ನಡ ಪ್ರದೇಶದ ಹಾಯ್ಗುಳಿಯು ಕರಾವಳಿಯುದ್ದಕ್ಕೂ ಇರುವ ಗುಳಿಗ (ಕೇರಳದ ಗುಳಿಕ್ಕನ್–ಕುಳಿಕ್ಕನ್) ಒಂದೇ ದೈವ ಎಂಬ ಅಭಿಪ್ರಾಯವಿದೆ. (ಕಾರಂತ ೧೯೭೭ ಮುನ್ನುಡಿ ಪು. I-iv) 'ಗುಳಿಗ ದೈವದ ಬನದಲ್ಲೂ ನಾಗನಿಗೆ ಎಡೆಯಿದೆ. ಗುಳಿಗನ ವಾಹನ ನಾಗ ಎನ್ನಲಾಗಿದೆ. ಅಷ್ಟಕುಲ ನಾಗರಾಜರಲ್ಲಿ ಒಬ್ಬನ ಹೆಸರು ಗುಳಿಗ ಎಂದಾಗಿದೆ. (ಅಮೃತ ೧೯೮೭ ಪು. ೧೨೫–೧೨೯) ಹೀಗಾಗಿ ಹಾಯ್ಗುಳಿ/ ಗುಳಿಗ ಒಂದೇ ದೈವದ ಭಿನ್ನ ಹೆಸರುಗಳೆಂದೂ ಕಾಳಿಂಗನ (ಕಾಡ್ಯ) ಗುಡಿಯೊಳಗೆ ಹಾಯ್ಗುಳಿಯ ನೆಲೆ ಇರುವುದು ಸಹಜ ಎಂಬ ನಿರ್ಧಾರಕ್ಕೆ ಬರಬಹುದು.

ಕಾಡ್ಯನ ಮನೆಯ ಪರಿಸರದಲ್ಲಿ ಹಲವಾರು ದೈವಗಳು ನೆಲೆಗೊಂಡಿವೆ. ರೂಪವಿಲ್ಲದ ಶಿಲೆಯ ಚೂರುಗಳೇ ಈ ದೈವಗಳ ಸಂಕೇತ. ಸ್ವಾಮಿ, ಬ್ರಹ್ಮ, ಯಕ್ಷಿ, ಉಮ್ಮಳ್ತಿ, ಬೊಬ್ಬರ್ಯ, ಗಾಮ, ಜಟ್ಟಿಗ, ಮಂತ್ರಿಗಣ, ಕಾನ್‌ಪಂಜುರ್ಲಿ, ಕಲ್ಕುಡ್ಕ, ನೆತ್ರ್ ಹಾಯ್ಗುಳಿ–ಕಾಡ್ಯನ ಮನೆ ಸಂಕೀರ್ಣದ ದೈವಗಳು. ಇವುಗಳಲ್ಲಿ ಸ್ವಾಮಿ, ಬ್ರಹ್ಮ, ಯಕ್ಷಿ, ಬೊಬ್ಬರ್ಯ, ಕಾಡ್ಯ, ಮುಂಡಿಗೆಯ ಹಾಯ್ಗುಳಿಗೆ ಸಾತ್ವಿಕ ಪೂಜೆ. ಉಳಿದವುಗಳಿಗೆ ರಕ್ತಾಹುತಿ ಉಂಟು. ಇಲ್ಲಿ ನಿತ್ಯಪೂಜೆ ಇಲ್ಲ. ಸಂಕ್ರಾತಿಯ ದಿನ ಪಾತ್ರಿ ಬಂದು ತೆಂಗಿನಕಾಯಿ ಒಡೆದು ಹಾಲು ಹಣ್ಣಿನ ಪೂಜೆ ಸಲ್ಲಿಸಿ ಹೋಗುತ್ತಾನೆ. ವರ್ಷಕ್ಕೊಮ್ಮೆ ಹೊರಸುತ್ತಿನ ದೈವಗಳಿಗೆ ರಕ್ತಾಹುತಿ ನೀಡಲಾಗುತ್ತದೆ. ಮಾರಿಪೂಜೆ ವರ್ಷಕ್ಕೊಮ್ಮೆ ಜರುಗುತ್ತದೆ.

ಮುಂಡುಕಾಡ್ಯನ ಮನೆಗಳ ರಚನೆ ಹಾಗೂ ಸ್ವರೂಪ ಆಟದ ಕಾಡ್ಯನ ಮನೆಯಂತೆಯೇ ಇರುತ್ತದೆ. ಆದರೆ ಕೆಲವು ಮುಂಡುಕಾಡ್ಯನ ಮನೆಗಳಲ್ಲಿ ನಾಗನಕಲ್ಲುಗಳಿರುವುದಿಲ್ಲ. ಮುಖ್ಯ ಸಂಗತಿಯೆಂದರೆ ಇಲ್ಲಿ ಕಾಡ್ಯನಾಟ ಜರಗುವುದಿಲ್ಲ. ಚರ್ಮರೋಗ, ಕಣ್ಣುಬೇನೆ ಸಂತಾನಹೀನತೆ ಮುಂತಾದ ಸಂದರ್ಭಗಳಲ್ಲಿ ಕಲಶ (ಮಣ್ಣಿನ) ಮಾಡಿಸಿ ಹಾಕುವುದಾಗಿ ಹರಕೆ ಹೇಳಿಕೊಳ್ಳುವುದುಂಟು. ಅಂತಹ ಕಲಶಗಳನ್ನು ಅವರು ಸಂಕ್ರಾತಿಯ ದಿನ ಕಾಡ್ಯನ ಮನೆಗೆ ತಂದು ಒಪ್ಪಿಸುತ್ತಾರೆ. ಆಟದ ಕಾಡ್ಯನ ಮನೆಗಳಲ್ಲಿ ಇಂತಹ ಕಲಶಗಳನ್ನು 'ಆಟ'ದ ಸಂದರ್ಭದಲ್ಲಿ ಮಾತ್ರ ಒಪ್ಪಿಸಬೇಕು.

ಆಟದ ಕಾಡ್ಯನ ಮನೆಯ ಕಾಡ್ಯನನ್ನು ಹೆಣ್ಣು ಕಾಡ್ಯನೆಂದೂ ಮುಂಡು ಕಾಡ್ಯನ ಮನೆಯ ದೈವವನ್ನು ಗಂಡು ಕಾಡ್ಯನೆಂದೂ ನಮ್ಮ ಪ್ರಧಾನ ವಕ್ತೃಬಚ್ಚ ಹೇಳಿದ್ದಾರೆ. ನಾಲ್ಕೂರಿನಲ್ಲಿ ಜರಗಿದ ಕಾಡ್ಯನಾಟದ ಸಂದರ್ಭದಲ್ಲಿ ಅಲ್ಲಿಗೆ ಬಂದಿದ್ದ ಅನೇಕ ಸ್ವಜಾತೀಯ ಭಕ್ತವರ್ಗದವರು ಅಮ್ಮ, ತಾಯಿ, ಕಾಳಿಕಾಂಬ, ವನದುರ್ಗೆ ಇಂತಹ ಪರ್ಯಾಯ ನಾಮಗಳಿಂದ ಕಾಡ್ಯನನ್ನು ಕರೆಯುತ್ತಿದ್ದರು. ಹುತ್ತವನ್ನು ಅಮ್ಮನ ಸಾನ್ನಿಧ್ಯವೆಂದು ಗುರುತಿಸುತ್ತಿದ್ದರು. ಹರಕೆಯ ರೂಪದಲ್ಲಿ ಬಂದ ಕೆಂಪು ಪಟ್ಟೆ ಸೀರೆಯನ್ನು ಅಮ್ಮನಿಗೆ ಉಡಿಸುವುದಾಗಿ ಹೇಳಿ, ಹುತ್ತಕ್ಕೆ ಸುತ್ತುವುದನ್ನು ನಾವು ಪ್ರತ್ಯಕ್ಷ ಕಂಡಿದ್ದೇವೆ. ಅಂದರೆ ಕಾಡ್ಯನನ್ನು ಶಕ್ತಿಯ ರೂಪದಲ್ಲಿ ಆರಾಧಿಸುತ್ತಾರೆ. ಎಂದಾಯಿತು. ನಾಗನನ್ನು ಶಕ್ತಿಯೊಂದಿಗೆ ಸಮೀಕರಿಸಿ ಆರಾಧಿಸುವುದು ಕರಾವಳಿ ಜಿಲ್ಲೆಯಲ್ಲಿ ಹೊಸದಲ್ಲ. ಶಕ್ತಿಗೂ ಸರ್ಪಕ್ಕೂ ಗಾಢವಾದ ನಂಟು ಜಾನಪದ ನೆಲೆಯಲ್ಲಿ ಕಾಣಿಸುತ್ತದೆ. ಸರ್ಪನಿಗೆ ಪುರುಷ ಸ್ವಭಾವವೂ ಉಂಟು. ಸ್ತ್ರೀ ಸ್ವಭಾವವೂ ಉಂಟು ಎಂಬ ಅಭಿಪ್ರಾಯವಿದೆ. (ರಾಮಚಂದ್ರರಾವ್ ೧೯೮೧ ಪು.೭೮) ದಕ್ಷಿಣ ಕನ್ನಡದ ಅನೇಕ ಶಕ್ತಿಕ್ಷೇತ್ರಗಳಲ್ಲಿ ನಾಗ ಮತ್ತು ದುರ್ಗಾ ಅಭೇದ್ಯರಾಗಿ

ಆರಾಧನೆಗೊಳ್ಳುವ ಕುತೂಹಲಕರ ವಿಚಾರವನ್ನು ಗಮನಿಸಬಹುದು. (Gururaj Bhat/1975)

ಬಸರೂರಿನ (ಕುಂದಾಪುರ ತಾ.) ನೀಲಾವರ (ಉಡುಪಿ ತಾ.)ದ ದುರ್ಗಾ ಭಗವತಿ ಕಣ್ಣೂರಿನ (ಮಂಗಳೂರು ತಾ.) ದುರ್ಗಾಲಯ, ಮಂದರ್ತಿಯ ದುರ್ಗಾಪರಮೇಶ್ವರಿ (ಉಡುಪಿ ತಾ.) ಇಲ್ಲೆಲ್ಲ ಹುತ್ತವನ್ನೇ ದುರ್ಗೆಯೆಂದು ಆರಾಧಿಸಲಾಗುತ್ತದೆ. ಇದೇ ಪರಿಕಲ್ಪನೆಯನ್ನು ಕಾಡ್ಯನ ಮನೆಯ ಹುತ್ತದಲ್ಲಿ ಗುರುತಿಸಬಹುದು. ಈ ನಾಗ–ಶಕ್ತಿಯ ಅಭೇದತೆಯನ್ನೇ ಅಲ್ಲಿನ ಭಕ್ತವರ್ಗ ಹೆಣ್ಣು ಕಾಡ್ಯ ಎಂಬ ಹೆಸರಲ್ಲಿ ಸಂಕಲ್ಪಿಸಿಕೊಂಡಿದ್ದಾರೆ ಎಂದು ತಿಳಿಯಬಹುದಾಗಿದೆ.

ಕಾಡ್ಯನ ಆರಾಧನೆಯಲ್ಲಿ ಮಣ್ಣಿನ ಮಡಕೆಗಳಿಗೆ ಅತ್ಯಂತ ಮಹತ್ವದ ಪಾತ್ರವಿದೆ. ಈ ಕಲಶಗಳ ಹೊರಮೈಯಲ್ಲಿ ಹೆಡೆಬಿಚ್ಚಿದ ಸರ್ಪನ ಶಿಲ್ಪವಿರುತ್ತದೆ. ಮಣ್ಣಿನ ಮಡಕೆಗಳ ಬಾಯಲ್ಲಿ ಮಾವಿನ ಎಲೆಗಳನ್ನು ಇರಿಸಿ, ಕುಂಕುಮಹಚ್ಚಿ, ಹೂವಿನಸರ ಹಾಕಿ ಕೆಂಪು ಪಟ್ಟೆ ಸೀರೆಯಿಂದ ಮುಚ್ಚಿ ಬೈದ್ಯ ಪೂಜೆ ಮಾಡುತ್ತಾನೆ. ಇದನ್ನೇ ತಂತ್ರಶಾಸ್ತ್ರದಲ್ಲಿ 'ಪೂರ್ಣಘಟ' ಎಂದು ಕರೆಯುತ್ತಾರೆ. ಅಲ್ಲಿ ಮಡಕೆಯು ಗರ್ಭದ ಸಂಕೇತ. ತಾಂತ್ರಿಕರು ಮಡಕೆಯ ಹೊರಮೈಯಲ್ಲಿ ಮಗುವಿನ ಚಿತ್ರಬರೆದರೆ ಇಲ್ಲಿ ಕಾಡ್ಯನ ಆರಾಧಕರು ಸರ್ಪನ ಉಬ್ಬುಶಿಲ್ಪವನ್ನು ರೂಪಿಸಿಕೊಂಡರು. ಗರ್ಭದ ಸಂಕೇತವಾಗಿರುವ ಕಲಶಪೂಜೆಯ ಮೂಲಕ ಸಂತಾನಾಭಿವೃದ್ಧಿಯನ್ನು ತಾಂತ್ರಿಕರು ಉದ್ದೇಶಿಸಿದಂತೆ ಕಾಣುತ್ತದೆ. ಈ ಆಚರಣೆಯ ಮೂಲಕ ಸಸ್ಯಾಭಿವೃದ್ಧಿಯೂ ಆಗುತ್ತದೆ ಎಂದು ಅವರು ನಂಬಿದ್ದರು. (Chattopadhyaya 1978 pp 294-296) ದೇವಿಪ್ರಸಾದ ಚಟ್ಟೋಪಾಧ್ಯಾಯರ ಪ್ರಕಾರ ಪೂರ್ಣಘಟದ ಪೂಜೆಯಲ್ಲಿ ಆಧ್ಯಾತ್ಮಿಕ–ಧಾರ್ಮಿಕ ಎನ್ನುವಂತಹದೇನೂ ಇಲ್ಲ. ಅದು ಕೇವಲ ಕೃಷಿ ಸಂಬಂಧಿ ಮಾಟಕ್ರಿಯೆ. ಪ್ರಸಿದ್ಧ ಭಾರತೀಯಶಾಸ್ತ್ರ ವಿದ್ವಾಂಸರಾದ ದಿ. ಆನಂದ ಕುಮಾರ ಸ್ವಾಮಿಯವರ ಪ್ರಕಾರ ಪೂರ್ಣಕಲಶ ಅಥವಾ ಘಟವು ಸಮೃದ್ಧಿಯ ಹಾಗೂ ಸ್ತ್ರೀದೇವತೆ ಶ್ರೀ ಲಕ್ಷ್ಮೀಯ ಸಂಕೇತ. ಮಾವಿನ ಎಲೆಯಿಂದ ಮುಚ್ಚಲಾಗುವ ಪೂರ್ಣಕುಂಭ ಜೀವದ ಸಂಕೇತ. ಅದನ್ನು ಪೂಜಿಸುವ ಮೂಲಕ ಜೀವಿಗೆ ದೀರ್ಘಾಯುಷ್ಯ ಆರೋಗ್ಯ, ಸಂತಾನ ಸಮೃದ್ಧಿ ದೊರೆಯುವುದಾಗಿ ತಿಳಿಯಲಾಗುತ್ತದೆ. (Ananda Coomarswamy 1980 pp 60-61).

## ೩.೧.೨ ಮೇರರು

ಕಾಡ್ಯನಾಟವನ್ನು ನಡೆಸುವ ಹಾಗೂ ಅದರಲ್ಲಿ ಪೂರ್ಣವಾಗಿ ಭಾಗಿಯಾಗುವ ಮೇರರು ದಕ್ಷಿಣ ಕನ್ನಡದಲ್ಲಿ ಹರಿಜನವರ್ಗಕ್ಕೆ ಸೇರುತ್ತಾರೆ. ತುಳು ಮಾತನಾಡುವ

ದಕ್ಷಿಣ ಕನ್ನಡದ ಭೂ ಪ್ರದೇಶದಲ್ಲಿ ಇವರನ್ನು ಮುಗ್ಗೇರರೆಂದು ಕರೆಯುತ್ತಾರೆ. ಆದರೆ ತುಳು ಪ್ರದೇಶದ ಹಾಗೂ ಕನ್ನಡ ಪ್ರದೇಶದ ಮೇರರ ನಡುವೆ ರಕ್ತಸಂಬಂಧ ಏರ್ಪಡುತ್ತಿಲ್ಲ. ಮಾತೃಮೂಲೀಯತೆ ಎರಡೂ ವರ್ಗಗಳಲ್ಲಿನ ಸಾಮಾನ್ಯಾಂಶ.

ಕುಂದಾಪುರ, ಉಡುಪಿ ತಾಲೂಕುಗಳ ಕನ್ನಡ ಪ್ರದೇಶಗಳಲ್ಲಿ ಹರಿಜನ ವರ್ಗಕ್ಕೆ ಸೇರಿದವರನ್ನೆಲ್ಲಾ ಒಟ್ಟಾಗಿ ಕೂಸಾಳು ಎಂಬ ಪದದಿಂದ ಗುರುತಿಸಲಾಗುತ್ತದೆ. ಪಾಣಾರ. ಉಪ್ಪಾರ, ಬತ್ತಾಡ, ಹಸ್ಲ, ಮೇರ–ಇವು ಇಲ್ಲಿನ ಹರಿಜನರ ವಿವಿಧ ಪ್ರವರ್ಗಗಳು. ಕುಂದಾಪುರ ತಾಲೂಕಿನಲ್ಲಿ ೬೦೦೦ ಮೇರರಿದ್ದಾರೆಂದು ಸರಕಾರಿ ದಾಖಲೆಗಳು ಹೇಳುತ್ತವೆ.

ಮೇರರು ಹಿಂದೆ ಸ್ಥಳೀಯ ಜಮೀನ್ದಾರ ನಾಡವ (ಬಂಟ)ರ ಮನೆಗಳಲ್ಲಿ ಮೂಲದ ಒಕ್ಕಲಾಗಿ ದುಡಿಯುತ್ತಿದ್ದರೇ ಹೊರತು ಒಕ್ಕಲುಗಳಾಗಿ ಉಳುವ ಹಕ್ಕು ಪಡೆದಿರಲಿಲ್ಲ. ಹೀಗಾಗಿ ಭೂಮಸೂದೆಯ ಫಲವಾಗಿ ಈ ಜನಾಂಗದವರಿಗೆ ಸ್ವಂತ ಭೂಮಿಯ ಒಡೆತನ ಬರಲಿಲ್ಲ. ಇತ್ತೀಚೆಗೆ ಸರಕಾರಿ ಜಮೀನುಗಳನ್ನು ಒತ್ತುವರಿ ಮಾಡಿಕೊಂಡು ಆ ಜಮೀನುಗಳಲ್ಲಿ ಕೃಷಿ ಮಾಡಲು ತೊಡಗಿದ್ದಾರೆ. ಆದರೆ ಅವರ ಪ್ರಧಾನ ಉದ್ಯೋಗ ದಿನಕೂಲಿ ದುಡಿತ.

ಮೇರರ ಮದುವೆ ವಧುವಿನ ಮನೆಯಲ್ಲಿ, ಮದುವೆ ಮುಂತಾದ ಎಲ್ಲಾ ಸಾಮಾಜಿಕ ಆಚರಣೆಗಳು ಜಾತಿಯ ಗುರುವಿನ (ಗುರಿಕಾರ?) ಹಿರಿತನದಲ್ಲೇ ನಡೆಯುತ್ತದೆ. ಮದುವೆ ನಿಶ್ಚಯದ ದಿನ ಗಂಡು ಹೆಣ್ಣಿನ ಕಡೆಯವರಿಗೆ ತೆರದ ರೂಪದಲ್ಲಿ ೧೦೧ ರೂಪಾಯಿ ಕೊಡಬೇಕು. ವರದಕ್ಷಿಣೆ ಈ ಸಮಾಜದಲ್ಲಿ ತಲೆಹಾಕಿಲ್ಲ. ಸೋದರಿಕೆ ವಿವಾಹ ಇವರಲ್ಲಿ ಇಲ್ಲವೇ ಇಲ್ಲ. ತಾಯಿಯ ಮೂಲಕ 'ಬಳಿ' ಇಳಿದು ಬರುತ್ತಿದ್ದು ಹೊರಗಿನ 'ಬಳಿ'ಗಳಿಂದ ಮದುವೆ ಮಾಡಿಕೊಳ್ಳುತ್ತಾರೆ.

ಮೇರರ ಒಳಾಡಳಿತದಲ್ಲಿ ಗುರುವಿನ ಪಾತ್ರ ಮಹತ್ವದ್ದು. ಮದುವೆ, ಹುಟ್ಟು, ಸಾವುಗಳಿಂದ ತೊಡಗಿ ಜಾತಿಬಹಿಷ್ಕಾರ ಮುಂತಾದ ಎಲ್ಲಾ ವಿಧಿವಿಧಾನಗಳಲ್ಲೂ ಅವನದೇ ಕೊನೆಯ ಮಾತಾಗಿತ್ತು. ಆದರೆ ಸ್ವಾತಂತ್ರ್ಯಾನಂತರ ಬದಲಾದ ಪರಿಸರದಲ್ಲಿ 'ಗುರು'ವಿನ ಸ್ಥಾನಚ್ಯುತಿಯಾಗಿದೆ.

ಮೇರರಿಗೆ ಅವರದೇ ಆದ ಪ್ರತ್ಯೇಕ ಧಾರ್ಮಿಕ ವ್ಯವಸ್ಥೆಯಿದೆ. ಇಲ್ಲಿನ ಮೇರರು ಮೂಡೂರು ಹಾಯ್ಗುಳಿ, ನಾಲ್ಕು ಪಾದದ ಹಾಯ್ಗುಳಿಗಳನ್ನು ತಮ್ಮ ಮನೆ ದೈವ ಎಂದು ಹೇಳುತ್ತಾರೆ. ವರ್ಷಕ್ಕೊಮ್ಮೆ ಈ ದೈವಕ್ಕೆ ರಕ್ತಾಹುತಿ ನೀಡಿ ಉಪಚರಿಸುತ್ತಾರೆ. ಇದನ್ನು 'ಮಂಜಮಾಡುವುದು' ಎನ್ನುತ್ತಾರೆ. ಕಾಡ್ಯ ಇವರ ಕುಲದ

ದೈವ. ಆ ನೆಲೆಯನ್ನು ತಮ್ಮ ಮೂಲಸ್ಥಾನ ಎಂದು ಭಾವಿಸುತ್ತಾರೆ. ಯಾವುದೇ ಕಾರಣಕ್ಕಾಗಿ ಪರವೂರಿಗೆ ಹೋದರೂ ತಮ್ಮ ತಮ್ಮ ಕಾಡ್ಯನಮನೆಗಳಿಗೆ ಹರಕೆ ಒಪ್ಪಿಸಬೇಕಾಗಿದೆ. ಅಷ್ಟಮಿ, ಚೌತಿ, ಶಿವರಾತ್ರಿ ಮುಂತಾದ ಹಬ್ಬಗಳ ಆಚರಣೆ ಅವರಲ್ಲಿಲ್ಲ. ದೀಪಾವಳಿಯ ಸಂದರ್ಭದಲ್ಲಿ ತೈಲಾಭ್ಯಂಜನ ಅವರಿಗೆ ಗೊತ್ತಿಲ್ಲ. ಹಟ್ಟಿಹಬ್ಬ, ಗದ್ದೆಯಲ್ಲಿ ಬಲೀಂದ್ರನಿಗೆ ದೀಪ ಇಟ್ಟು ಕರೆವ ಆಚರಣೆ ಮಾತ್ರ ಗೊತ್ತು.

ಕುಂದಾಪುರ ತಾಲೂಕಿನಲ್ಲಿ ಮೇರರಲ್ಲಿ ಶಿಕ್ಷಣದ ಎಚ್ಚರ ಇನ್ನೂ ಬಂದಿಲ್ಲ. ಹೀಗಾಗಿ ಯಾವುದೇ ರಾಜಕೀಯ ಪ್ರಜ್ಞೆ ಅವರನ್ನು ಕಲಕಿಲ್ಲ. ಇತ್ತೀಚೆಗೆ ಯುವಕರು ಕೆಂಪುಕಲ್ಲು (ಮುರಕಲ್ಲು) ಕಡಿವ, ಗಾರೆಮಾಡುವ ಕೆಲಸಗಳಿಗೆ ಇಳಿದಿದ್ದಾರೆ.

ನಾವು ನೋಡಿದ ಬಹುತೇಕ ಮೇರರ ಗುಡಿಸಲುಗಳು ಮುಳಿಹುಲ್ಲಿನ ಛಾವಣಿಯವು. (ಸರಕಾರದ ೫ ಸೆಂಟ್ಸ್ ಜಾಗದಲ್ಲಿ ಮನೆಪಡೆದವರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ). ಇವರ ಗುಡಿಸಲುಗಳ ಸ್ವರೂಪ ತೀರ ಸರಳವಾಗಿದ್ದು, ಒಂದೇ ಕೋಣೆಯನ್ನು ಹೊಂದಿರುತ್ತವೆ. ಅದರೊಳಗೇನೇ ಅಡುಗೆ ಮನೆಯನ್ನು ಪ್ರತ್ಯೇಕಿಸಲು ತಗ್ಗಿನ ಅಡ್ಡಗೋಡೆಯಿರುತ್ತದೆ. ಮನೆಗೆ ಒಂದೇ ಒಂದು ಕಿಟಕಿ ಇಲ್ಲದಿರುವುದು ನಾವು ಕಂಡ ಮನೆಗಳ ವೈಶಿಷ್ಟ್ಯ. ಹೊರಗೆ ಒಂದು ಜಗಲಿಯಿರುತ್ತದೆ. ಮಳೆಯಿಂದ ರಕ್ಷಣೆಗಾಗಿ ಅಡಿಕೆ. ತೆಂಗಿನ ಸೋಗೆ ಇಳಿಬಿಟ್ಟಿರುತ್ತಾರೆ. ಹೆಚ್ಚಿನ ಮನೆಗಳಲ್ಲಿ ಬಾವಿ ಇಲ್ಲ. ಸಾರ್ವಜನಿಕ ಬಾವಿ ಅಥವಾ ಚಿಕ್ಕಪುಟ್ಟ ಹೊಂಡ (ಗುಮ್ಮಿ)ಗಳಿಂದಲೇ ನೀರು ತೆಗೆಯುತ್ತಾರೆ. ಕಾಡ್ಯನನ್ನು ತಮ್ಮ ಕುಲದೈವವೆಂದು ನಂಬುವ ಇವರು ಕುಂದಾಪುರ ತಾಲೂಕಿನ ನಾಲ್ಲೂರು. ಹಾಲಾಡಿ, ಹುಯ್ಯಾರು, ಆಲೂರು, ಕೊರ್ಗಿ, ಮೊಳಹಳ್ಳಿ, ಗಾವಳಿ, ಹಾರ್ದಳ್ಳಿ, ಆಲೂರುಗಳಲ್ಲಿ ಹಾಗೂ ಉಡುಪಿ ತಾಲೂಕಿನ ಮಂದರ್ತಿ, ಶಿರೂರುಗಳಲ್ಲಿ ಗುಂಪು ಗುಂಪಾಗಿ ವಾಸಿಸುತ್ತಾರೆ.

### ೩.೨.೧ ಮೊದಲ ದಿನ

ಕಾಡ್ಯನಾಟವನ್ನು ಸಾಮಾನ್ಯವಾಗಿ ಸ್ಥಳೀಯ ಹೇಳಿಕೆಯಂತೆ ಹಗ್ಗು ಅಥವಾ ಬೇಸೆ ತಿಂಗಳುಗಳಲ್ಲಿ (ಮಾರ್ಚ್ ಅಥವಾ ಏಪ್ರಿಲ್) ನಡೆಸುತ್ತಾರೆ. ಕೃಷಿ ಆಧಾರಿತ ಸಮಾಜದ ಒಂದು ಅಂಗವಾಗಿರುವ ಮೇರರಿಗೆ ಅದರಿಂದ ಬಿಡುವು ದೊರೆತಾಗಲೇ ಈ ಆಚರಣೆಯನ್ನು ನಡೆಸಬೇಕಾಗಿದೆ. ಊರ ಹೊರಗೆ ಕಾಡಿನ ನಡುವೆ ಬಟ್ಟಂಬಯಲಲ್ಲೆ ಗಂಡಸರು, ಹೆಂಗಸರು ಮಕ್ಕಳೆನ್ನದೆ ಎಲ್ಲರೂ ವಾಸಮಾಡಬೇಕಾಗಿರುವುದರಿಂದ ಮಳೆಗಾಲ ಆರಂಭವಾಗುವ ಮೊದಲೇ ಈ ಆಚರಣೆ ಕೊನೆಗೊಳ್ಳಬೇಕಾಗಿದೆ.

ಕಾಡ್ಯನಾಟ ಶನಿವಾರ ರಾತ್ರಿಯಿಂದ ಮಂಗಳವಾರ ಮಧ್ಯರಾತ್ರಿಯ ತನಕ ಸತತವಗಿ ನಡೆಯುತ್ತದೆ. ನಡುನಡುವೆ ಸ್ವಲ್ಪವಿರಾಮವೂ ಇರುತ್ತದೆ.

ಕಾಡ್ಯನಾಟ ಮಾಡಿಸುವ ಬಗ್ಗೆ ಕುಟುಂಬದ (ನಾಲ್ಡೂರಿನಲ್ಲಿ ಕುಟುಂಬದ ಎರಡು ಕವಲಿನವರು) ಸದಸ್ಯರು. ಬೈದ್ಯ, ಪಾತ್ರಿ ಹಾಗೂ ಸ್ಥಳದ ಯಜಮಾನರು ಸೇರಿ ಕೆಲವು ತಿಂಗಳುಗಳ ಹಿಂದೆಯೇ ನಿರ್ಧಾರ ಕೈಗೊಂಡರು. ತಮಗೆ ಅನುಕೂಲವಾದ ಒಂದು ಶನಿವಾರದಿಂದ ಮಂಗಳವಾರ ತನಕ ನಿರ್ಧರಿಸಿ ಅದಕ್ಕೆ ಎಂಟುದಿನ ಮೊದಲು 'ನಂಬುಗೆಯ ಶಾಸ್ತ್ರ'ಕ್ಕಾಗಿ ಕಾಡ್ಯನ ಮನೆಯಲ್ಲಿ ಸೇರಿದರು. ಅಂದು ಶನಿವಾರವೇ ಆಗಿತ್ತು. ಆ ದಿನ ಕುಟುಂಬದ 'ಹೆರಿಬುಡ' ಹಗೂ 'ಕಿರಿಬುಡ'ದ ಪ್ರತಿನಿಧಿಗಳು ಕಾಡ್ಯನಿಗೆ ಪೂಜೆ ಮಾಡುವಷ್ಟರಲ್ಲಿ ಹಾಯ್ಗುಳಿ ಪಾತ್ರಿಗೆ ದೈವ ಮೈದುಂಬಿತು. ಮೈಗೆ ಕೆಂಪು ಪಟ್ಟೆ ಬಟ್ಟೆ ಉಟ್ಟು, ಸಿಂಗಾರದ ಹೂಗಳಿಂದ ಮುಖವನ್ನು ಉಜ್ಜಿಕೊಳ್ಳುತ್ತಾ ಉದ್ರಿಕ್ತ ಆವೇಶಕ್ಕೊಳಗಾದನು. ದೊಡ್ಡದನಿಯಲ್ಲಿ ಅಟ್ಟಹಾಸ ಮಾಡುತ್ತಾ ಕುಣಿಯುತ್ತಾ ಕಾಡ್ಯನ ಮನೆಯಿಂದ ಹೊರಬಂದು ನೆರೆದಿರುವ ಸ್ಥಳದ ಯಜಮಾನರಿಗೆ, ಬೈದ್ಯರಿಗೆ, ಕುಟುಂಬದ ಸದಸ್ಯರಿಗೆ, ಕಲಶಮಾಡುವ ಹಾಂಡರಿಗೆ ಪ್ರಸಾದ ನೀಡಿದನು. ವೀಳೆಯ ಹಂಚಿ ಮುಂದಿನ ಶನಿವಾರದಿಂದ ಕಾಡ್ಯನಾಟ ಆಡುವ ಬಗ್ಗೆ ವಿಧ್ಯುಕ್ತವಾಗಿ ದಿನ ಇಡಲಾಯಿತು. ಕಾಡ್ಯನ ಮನೆಯಲ್ಲಿ 'ಆಟಕ್ಕೆ' ದಿನ ಇರಿಸಿದಂದಿನಿಂದ ಮುಂದಿನ ಎಂಟುದಿನ ಕುಟುಂಬದ ಸದಸ್ಯರ, ಬೈದ್ಯರ, ಕಲಶ ಮಾಡಿಕೊಡುವ ಹಾಂಡತ ಹಾಗೂ ದರ್ಶನ ಪಾತ್ರಿಗಳ ಮನೆಯಲ್ಲಿ ಮಾಂಸ, ಮೀನು ಭಕ್ಷಣೆ ನಿಷಿದ್ಧ. ದಿನಾ ಸ್ನಾನ ಮಾಡಿಯೇ ಆಹಾರ ಸೇವನೆ. ಇದಕ್ಕೆ 'ಚೌತ' ಎಂದು ಅವರು ಹೇಳುತ್ತಾರೆ.

ಕಾಡ್ಯನಾಟದ ದಿನ ಶನಿವಾರ ಸಂಜೆ ಊರು–ಪರವೂರುಗಳಿಂದ ಬಂದ ಜಾತಿ ಮಂದಿಗೆ ಮನೆಗಳಲ್ಲಿ ಊಟದ ಏರ್ಪಾಟಾಯಿತು. ನಾಲ್ಡೂರಿನಲ್ಲಿ ಕಾಡ್ಯನಾಟ ಆಡಿಸಿದ ಕುಟುಂಬದಲ್ಲಿ ಎರಡು ಕವಲುಗಳಿದ್ದವು. ಅದನ್ನು ಅವರು 'ಹಿರಿಬುಡ' ಹಾಗೂ 'ಒತ್ತುಬುಡ' ಎಂದು ಗುರುತಿಸಿಕೊಂಡಿದ್ದರು. ಈ ಎರಡು ಕವಲುಗಳ ಸದಸ್ಯರು ಆಚರಣೆಯಲ್ಲಿ ಕಾಡ್ಯನಿಗೆ ಪೂಜೆ, ಕಂಬ ಕಡಿಯುವುದು, ಗೂಡು ತರುವುದು ಮುಂತಾದ ಸೇವಾ ಕಾರ್ಯಗಳನ್ನು ನಡೆಸಿದರು. ಸುಮಾರು ರಾತ್ರಿ ಹತ್ತರ ಹೊತ್ತಿಗೆ ಎರಡೂ ಕವಲುಗಳ ಹಿರಿಯರು ತಮ್ಮ ತಲೆ ಮೇಲೆ ಅಲಂಕರಿಸಿದ ಗೂಡುಗಳನ್ನು ಹೊತ್ತುಕೊಂಡು ಬಂದು ಕಾಡ್ಯನ ಮನೆಯ ಸಮೀಪ ಒಂದು ನಿಗದಿತ ಸಂಧಿಸ್ಥಾನದಲ್ಲಿ ಒಟ್ಟಾದರು. ಕಾಡ್ಯನ ಮನೆಯಿಂದ ಬಂದ ದರ್ಶನಪಾತ್ರಿ, ಬೈದ್ಯ ಹಾಗೂ ನೂರಾರು ಸ್ವಜಾತಿಬಾಂಧವರು ಕುಟುಂಬದ ಸದಸ್ಯರನ್ನು ಸಂಧಿಸ್ಥಾನದಲ್ಲಿ ಭೇಟಿಯಾಗಿ ಗೂಡುಸಹಿತ ಶಂಖಜಾಗಟೆಗಳ ಮೊಳಗಿನೊಂದಿಗೆ

ಕಾಡ್ಯನ ಮನೆಯ ಆವರಣ ಸೇರಿದರು. ಕಾಡ್ಯನ ಮನೆಯ ಆವರಣದೊಳಗೆ ಈ ಗೂಡುಗಳನ್ನಿರಿಸಲು ಪ್ರತ್ಯೇಕ ಚಪ್ಪರ ಹಾಕಿದ್ದರು. ಬೈದ್ಯ ನೆರೆದ ಸಮುದಾಯದ ಅನುಮತಿ ಪಡೆದು ಗೂಡುಗಳನ್ನು ಹಂದರದೊಳಗೆ ಇಳಿಸಿದನು. ಬೈದ್ಯ ತನಗೆ ಹಾಗೂ ತನ್ನ ಸಹವಂದಿಗರಿಗೆ ರಚಿಸಿಕೊಟ್ಟ ಬೈದ್ಯರ ಹಂದರದೊಳಗೆ 'ಮಂಡಲ' ಬರೆದು ಅದಕ್ಕೆ ಪೂಜೆ ಮಾಡಿ ಕುಟುಂಬದ ಹಿರಿಯರ, ಸ್ಥಳದ ಯಜಮಾನರ ಹಾಗೂ ಗ್ರಾಮಸ್ಥರ ಅನುಮತಿ ಪಡೆದು 'ಹಸೆಮಣೆ' ಹಿಡಿಯುತ್ತಾನೆ. ಕೊರಳಿಗೆ ಸರ, ಕೈಗೆ ಬಳೆ ತೊಟ್ಟುಕೊಳ್ಳುವ ಮೂಲಕ ದೀಕ್ಷಾಬದ್ಧನಾಗುತ್ತಾನೆ. ಬೈದ್ಯ ಕೆಂಪು ಪಟ್ಟೆಬಟ್ಟೆ, ತಲೆಗೆ ಮುಂಡಾಸು, ಕೈಗೆಬಳೆ, ಕೊರಳಿಗೆ ಸರ ತೊಟ್ಟು ಇತರರಿಂದ ಪ್ರತ್ಯೇಕಗೊಳ್ಳುತ್ತಾನೆ. ತಾನು ಪ್ರತ್ಯೇಕವಾದ ಚಪ್ಪರದೊಳಗೆ, ಕುಟುಂಬದವರು ಕೊಟ್ಟ 'ಹಸೆಮಣೆ'ಯ ಮೇಲೆ ಕುಳಿತುಕೊಳ್ಳುವ ಮೂಲಕ ಬೈದ್ಯನಿಗೆ ಸ್ಥಾನಿಕವಾಗಿ ಬೇರ್ಪಡಿಸುವಿಕೆ (Separation) ಕೂಡಾ ಉಂಟಾಗುತ್ತದೆ. ಆಚರಣೆಯ ಉದ್ದಕ್ಕೂ ಮಹತ್ವದ ಪಾತ್ರವಹಿಸುವ ಎರಡು ಡೋಲುಗಳನ್ನು 'ಹಿರಿಯ' ವಿಧಿಪೂರ್ವಕ ಬೈದ್ಯನಿಗೆ ಹಸ್ತಾಂತರಿಸಿದರು. ಕಾಡ್ಯನ ಮನೆಯೊಳಗೆ ಪೂಜೆ ನಡೆವಷ್ಟರಲ್ಲಿ ಪಾತ್ರಿಗೆ ಮೈದುಂಬಿತು. ಆತನ ಸೂಚನೆಯಂತೆ ಬೈದ್ಯ ತನ್ನ ಸ್ವಜಾತಿ ಬಾಂಧವರ ಸಹಕಾರದಿಂದ ಒಳಗಿದ್ದ ಹಳೆಯ ಕಲಶಗಳನ್ನೆಲ್ಲಾ ಒಂದೊಂದಾಗಿ ತಂದು ಎದುರಿಗೆ ನಿಗದಿಪಡಿಸಿದ ಚಿಟ್ಟೆ (ವೇದಿಕೆ)ಗೆ ಸ್ಥಳಾಂತರಿಸಿದನು. ಚಿಟ್ಟೆಯ ಮೇಲೆ 'ಇರುಮಾಡಿದ' ಹಳೆಯ ಐದು ಕಲಶಗಳನ್ನು ಕುಟುಂಬದ ಗಂಡಸರು ತಲೆಮೇಲೆ ಹೊತ್ತುಕೊಂಡು ಶಂಖ ಜಾಗಟೆಯೊಂದಿಗೆ ಸಮೀಪದ ಕೆರೆಗೆ ಕೊಂಡೊಯ್ದರು. ಬೈದ್ಯ ನೀರಿಗಿಳಿದು ಆ ಹಳೆಯ ಕಲಶಗಳನ್ನು ತೊಳೆದು ಕೆರೆಯ ದಂಡೆಯ ಮೇಲೆ ಸಾಲಾಗಿ ಇರಿಸಿ ಧೂಪ ದೀಪಗಳಿಂದ ಪೂಜೆ ಮಾಡಿದನು. ಅದೇ ಗಂಡಸರು ಅವುಗಳನ್ನು ಹೊತ್ತು ಚಿಟ್ಟಿಗೆ ತಂದಿರಿಸಿದರು. ಈ ಆಚರಣೆಗೆ 'ಮೈಲಿಗೆ ತೊಳೆವುದು' – ಎಂದು ಅವರು ಹೇಳಿದರು.

ಕಾಡ್ಯನಾಟದಲ್ಲಿ ಬೈದ್ಯರ ಹಾಡಿಗೆ ಪ್ರಾಶಸ್ತ್ಯ. ಹಗಲು ರಾತ್ರಿಯೆನ್ನದೆ ಬೈದ್ಯರ ಬಳಗದಿಂದ ಡೋಲಿನ ಹಿಮ್ಮೇಳದೊಂದಿಗೆ ಹಾಡು ಸಾಗುತ್ತಿತ್ತು. ವಿಶೇಷವಾಗಿ ಹೆಂಗಸರು ಮಕ್ಕಳು ಈ ಹಾಡುಗಳನ್ನು ಕೇಳಲು ಹಂದರದ ಸಮೀಪ ಗುಂಪು ಗುಂಪಾಗಿ ಬಂದು ನೆರೆಯುತ್ತಿದ್ದರು. ಆ ದಿನ ರಾತ್ರಿ ಬೈದ್ಯ 'ಗುರುಶಾಸ್ತ್ರ'ದಿಂದ ತೊಡಗಿ 'ಕಾಡ್ಯನ ಹುಟ್ಟು', ಮುಂತಾದ ಹಾಡುಗಳನ್ನು ತನ್ನ ಸಹಾಯಕರೊಂದಿಗೆ ಹಾಡಿದನು. ಕೊನೆಯಲ್ಲಿ ಬೈದ್ಯ ಸರ್ವರ ಅನುಮತಿ ಮೇರೆಗೆ ಅಡುಗೆ ಮನೆಯಲ್ಲಿ ಶಂಖಜಾಗಟೆಯ ನಡುವೆ 'ಅಗ್ನಿಸ್ಥಾಪನೆ' ಮಾಡಿದನು.

### ೩.೨.೨ ಎರಡನೆ ದಿನ

ಕಾಡ್ಯನಾಟದ ಕ್ರಿಯಾವಿಧಿಗಳ ಕ್ರಮಾನುಗತಿಯ ಬಗ್ಗೆ ಅವರೊಳಗೆ ಗೊಂದಲವಿದ್ದಂತೆ ಕಂಡಿತು. ಈ ಆಚರಣೆ ವರ್ಷಕ್ಕೊಮ್ಮೆ ಜರಗದೆ ಹತ್ತೋ ಹದಿನೈದು ವರ್ಷಗಳಿಗೊಮ್ಮೆ ಜರಗುತ್ತಿರುವುದರಿಂದ ಯಾವುದಾದ ಮೇಲೆ ಯಾವುದು ಎನ್ನುವ ಬಗ್ಗೆ ಅವರೊಳಗೆ ಭಿನ್ನಾಭಿಪ್ರಾಯವಿದೆ. ಇದು ಸಹಜ. ಇಡಿಯ ಆಚರಣೆ ವಿಧ್ಯುಕ್ತವಾಗಿ ಆರಂಭಗೊಂಡುದರ ಸಂಕೇತವಾಗಿ ಕಂಬ ಕಡಿವ ಕಾಲದ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯ ಕಂಡು ಬಂದಿತು. ಕೆಲವರು ಬೆಳಗ್ಗೆಯೇ ಕಡಿದು ಆ ಬಳಿಕವೇ ಎಲ್ಲಾ ವಿಧಿ ಆಚರಣೆಗಳು ನಡೆಯಬೇಕು ಎಂದರೆ ಇನ್ನು ಕೆಲವರು ಸಂಜೆಯ ಹೊತ್ತಿಗೆ ಕಡಿಯತಕ್ಕುದೆಂದು ವಾದಿಸಿದರು.

ಮರುದಿನ ಬೆಳಗ್ಗೆ ವೈದ್ಯನಿಂದ ಚಿಟ್ಟೆಯ ಹಳೆಯ ಕಲಶಗಳಿಗೆ ಪೂಜೆ ನಡೆಯಿತು. ಕಾಡ್ಯನ ಗುಡಿಯೊಳಗೆ ಪೂಜೆ ಆಗಿ ಮೈದುಂಬಿದ ಪಾತ್ರಿ ಬೈದ್ಯರ ಡೋಲಿನೊಂದಿಗೆ ಸಮುದಾಯದ ಜೊತೆಗೆ ಸಮೀಪದ ಕುಂಬಾರ (ಹಾಂಡ)ರ ಮನೆಗೆ ಹೊಸ ಕಲಶಗಳನ್ನು ತರುವ ಸಲುವಾಗಿ ಹೋದರು. ಕಾಡ್ಯನಾಟಕ್ಕೆ ಎಂಟು ದಿನ ಹಿಂದೆ ಪ್ರಸಾದ ಹಿಡಿದು ಮಣ್ಣು ಕಲಸಿ ಸಿದ್ಧಪಡಿಸಿದ ಕಲಶಗಳನ್ನು ಆವಿಗೆಯೊಳಗೆ ಇರಿಸಿ ಉರಿ ಹಾಕಿದ್ದರು. ಬೈದ್ಯ ಹಾಗೂ ಪಾತ್ರಿಯ ಸಮಕ್ಷಮ ಕುಂಬಾರರ ಬಳಗದವರು ಕಲಶಗಳನ್ನು ಆವಿಗೆಯಿಂದ ತೆಗೆದು ತಮ್ಮ ಮನೆಯ ತುಳಸಿಕಟ್ಟೆಯ ಇದಿರು ಹಾಸಿದ ಮಡಿಬಟ್ಟೆಯ ಮೇಲೆ ಸಾಲಾಗಿ ಜೋಡಿಸಿದರು. ಹಾಂಡರು ಕಲಶಗಳೊಳಗೆ ಸ್ವಲ್ಪ ನೀರು ತುಂಬಿ ಅದರ ಬಾಯಿಗೆ ಮಾವಿನ ಚಿಗುರುಗಳನ್ನಿರಿಸಿ ಗಂಧ, ಕುಂಕುಮ ಹಚ್ಚಿ ಪೂಜೆ ನಡೆಸಿದರು. ಆಗ ಮೇರರ ಹೆಂಗಸರು 'ಕಲಶದ' ಹಾಡುಗಳನ್ನು ಹೇಳಿದರು. ಆ ಬಳಿಕ ಕಲಶಗಳನ್ನು ಕುಟುಂಬದ ಹೆಣ್ಣುಗಳು ಹೊತ್ತು ಕಾಡ್ಯಮನೆಗೆ ಬಂದರು. ದಾರಿಯುದ್ದಕ್ಕೂ ಮಹಿಳೆಯರಿಂದ ಹಾಡು ಕೇಳಿಸಿತು. ಚಿಟ್ಟೆಯ ಮೇಲೆ ಈ ಕಲಶಗಳನ್ನು ಇಳಿಸಿದ ಮಹಿಳೆಯರು ಪಾತ್ರಿಯಿಂದ ಪ್ರಸಾದ ಸ್ವೀಕರಿಸಿದರು. ಬೈದ್ಯ ಈ ಕಲಶಗಳಿಗೆ ಕೆಂಪು ಬಣ್ಣದ ಪಟ್ಟೆಯನ್ನು ಹೊದಿಸಿ, ಸರತೊಡಿಸಿ ಧೂಪ ದೀಪಗಳಿಂದ ಪೂಜೆ ನಡೆಸಿದರು.

ಆ ದಿನ ಸಂಜೆ ಸುಮಾರು ೫.೩೦ರ ಹೊತ್ತಿಗೆ 'ಮುಹೂರ್ತದ ಕಂಬ' ಕಡಿವ ವಿಧಿ. ಅದರ ಮೊದಲು ಬೈದ್ಯ ತನ್ನ ಹಂದರದೊಳಗೆ ಈ ವಿಧಿಯನ್ನು ಕುರಿತ ಹಾಡನ್ನು ಹೇಳಬೇಕು. ಮರಕಡಿಯಲು 'ಹಿರಿಬುಡ'ದ ಹಿರಿಯ ಸದಸ್ಯನೇ ಆಗಬೇಕು. ಆತ ಸ್ನಾನ ಮಾಡಿ ಮಡಿಬಟ್ಟೆ ಉಟ್ಟು, ಕೆಂಪು ಮುಂಡಾಸು ಸುತ್ತಿ, ಸಿದ್ಧನಾದನು. ಮೈದುಂಬಿದ ಪಾತ್ರಿಯಿಂದ ಪ್ರಸಾದ ಹಿಡಿದ ಕಂಬದ ಮದುಮಗನಿಗೆ

ಪಾತ್ರಿ ಕೈಯೆತ್ತಿ ಕೊಡಲಿ ನೀಡಿದನು. ಬೈದ್ಯ, ಪಾತ್ರಿ, 'ಕಂಬದ ಮದುಮಗ', ನೂರಾರು ಜನ ಸ್ವಜಾತಿಯ ಪ್ರೇಕ್ಷಕರು (ಮಹಿಳೆಯರು ಅಲ್ಲಿಗೆ ಬರುವಂತಿಲ್ಲ) ಆಯ್ಕೆ ಮಾಡಿಟ್ಟ ಮಾವಿನ ಮರದೆಡೆಗೆ ಹೋದರು. ಪಾತ್ರಿ ಮರಕ್ಕೆ ತೀರ್ಥಜಲ ಹನಿಸಿ. ಸಿಂಗಾರದ ಎಳೆಯನ್ನು ಬಿಸಾಡಿ ಮರವನ್ನು ಶುದ್ಧ ಮಾಡಿಕೊಟ್ಟನು. ಆ ಬಳಿಕ ಬೈದ್ಯ ಮಾವಿನ ಮರಕ್ಕೆ ಗಂಧಸವರಿ, ಸಿಂಗಾರದ ಎಳೆಯೊಂದನ್ನು ಕಟ್ಟಿ, ನೆರೆದ ಜನಮಂದಿಯ ಅಪ್ಪಣೆಯ ಮೇರೆಗೆ ಮರಕಡಿಯಲು 'ಮದುಮಗ'ನಿಗೆ ಅನುಮತಿ ನೀಡಿದನು. ಮೊದಲ ಕೊಡಲಿ ಏಟನ್ನು 'ಮದುಮಗ'ನೇ ಹಾಕಿದನು. ಆ ಬಳಿಕ ಇತರರು ಏಟು ಹಾಕಿದರು. ಅದು ನೆಲಕ್ಕೆ ಉರುಳದಂತೆ ಎಚ್ಚರಿಕೆ ವಹಿಸಿದರು. ಕೈಯಲ್ಲಿ ಎತ್ತಿ ಹಿಡಿಯುತ್ತಲೇ ಅದರ ತೊಗಟೆ ಸುಲಿದರು. 'ಮದುಮಗ'ನನ್ನು ಮುಂದಿರಿಸಿಕೊಂಡು ಕಂಬವನ್ನು ಭುಜದ ಮೇಲಿರಿಸಿಕೊಂಡು ಅದನ್ನು ಬೈದ್ಯರ ಹಂದರಕ್ಕೆ ತಂದರು. ಬೈದ್ಯನ ಬಳಗದವರು ಈ ಆಚರಣೆಯ ಉದ್ದಕ್ಕೂ ಉಚ್ಚ ಸ್ವರದಲ್ಲಿ ಡೋಲು ಬಡಿಯುತ್ತಾ ವಾತಾವರಣಕ್ಕೆ ಗಂಭೀರ ಹಿನ್ನೆಲೆ ಕಲ್ಪಿಸಿದ್ದರು. ತಂದ ಕಂಬವನ್ನು ಬೈದ್ಯರ ಹಂದರದ ಮಧ್ಯದಲ್ಲಿ ಸ್ಥಾಪಿಸಿದರು. ಕುಟುಂಬದ ಸದಸ್ಯರು ಕಂಬಕ್ಕೆ ಧೂಪದಾರತಿ ಮಾಡಿ ಬೈದ್ಯರಿಗೆ ಬಿಟ್ಟು ಕೊಟ್ಟರು. ಈ ಮೂಹೂರ್ತದ ಕಂಬವನ್ನು ಬೈದ್ಯರ ಹಂದರದೊಳಗೆ ಸ್ಥಾಪನೆ ಮಾಡಿದುದು ಆಚರಣೆಯ ಆರಂಭದ ಸಂಕೇತವಿರಬೇಕು. ಉಜ್ಜನಿಯ ಚೌಡಮ್ಮನ ದೇವಸ್ಥಾನದ ಹಬ್ಬದಲ್ಲೂ (ತುಮಕೂರು ಜಿಲ್ಲೆ) ಹೊರಗಿನ ಅತ್ತಿಮರದಿಂದ ಮೂರುಕವಲುಗಳಿರುವ ಒಂದು ಗೆಲ್ಲು ಕಡಿದು ತಂದು ದೇವಸ್ಥಾನದ ಎದುರು ನೆಟ್ಟು ಪೂಜೆ ಮಾಡುತ್ತಾರೆ. ಇಲ್ಲಿ ಕಂಬ ಇಕ್ಕುವುದೆಂದರೆ ಹಬ್ಬ ಪ್ರಾರಂಭವಾಗುವ ಸಂಕೇತ. (ಬೋರಲಿಂಗಯ್ಯ ೧೯೭೯ ಪು. ೨೦) ಕಾಡ್ಯನಾಟದಲ್ಲೂ ವಾಸ್ತವಿಕವಾಗಿ ಈ 'ಕಂಬ ಮೂಹೂರ್ತ' ಆಚರಣೆಯು ಆರಂಭದ ಸಂಕೇತವಾಗಿ ನಡೆಯುತ್ತಿರಬೇಕು. ಆದರೆ ಪ್ರಕೃತ ಸಂದರ್ಭದಲ್ಲಿ ಅರಿವಿನ ಕೊರೆಯಿಂದ ಕ್ರಮಾನುಗತಿಯಲ್ಲಿ ವ್ಯತ್ಯಾಸವಾಗಿದೆ.

ಮುಸ್ಸಂಜೆಯ ಹೊತ್ತಿಗೆ ಬೈದ್ಯರ ಹಂದರದೊಳಗೆ ಸ್ವಾಮಿ, ಬ್ರಹ್ಮರಿಗೆ ನಡೆದ ಡಕ್ಕೆಬಲಿ ಆಚರಣೆ ಬಹುಮಟ್ಟಿಗೆ 'ಹಗಣ'ವನ್ನು ಹೋಲುತ್ತಿತ್ತು. ಇದನ್ನು ಆ ಜನವರ್ಗ 'ಬ್ರಾಹ್ಮಣಕೋಲ' ಎಂದು ಹೇಳಿದರು. ಮೂಹೂರ್ತದ ಕಂಬದ ಸುತ್ತ ಸರಳ ಮಂಡಲ–ಮನುಷ್ಯಾಕೃತಿ ಹಾಗೂ ಸ್ವಸ್ತಿಕ (ಗಣಪತಿ)ವನ್ನು ಹೋಲುವ ಚಿತ್ರವನ್ನು ಬರೆದರು. ಈ ಮೊದಲೇ ದರ್ಶನ ಪಾತ್ರಿ 'ನಾಗಪಾತ್ರಿ' ಹಾಗೂ 'ನಾಗಪಾತ್ರಿಯ ಮಾಣಿ' ಎಂಬೆರಡು ವೇಷಗಳಿಗೆ ತಕ್ಕ ವ್ಯಕ್ತಿಯನ್ನು ತೀರ್ಥಹನಿಸಿ ಆಯ್ಕೆ ಮಾಡಿದ್ದನು. ಹೀಗೆ ಆಯ್ಕೆಯಾದ ಮೇರ ಯುವಕರು ಸ್ನಾನಮಾಡಿಕೊಂಡು

ಬಂದು ಬ್ರಾಹ್ಮಣರನ್ನು ಹೋಲುವಂತೆ ವೇಷತೊಟ್ಟರು. ಹಲವಾರು ಎಳೆಯ ಜನಿವಾರ, ಮೈಗೆ ಕೈಗೆ ಬಳಿದುಕೊಂಡ ಭಸ್ಮ, ಬ್ರಾಹ್ಮಣಿಕೆಯ ಲಾಂಛನಗಳಾಗಿ ಹೊಡೆದು ಕಾಣಿಸುತ್ತಿತ್ತು. ಅವರಿಬ್ಬರಿಗೆ ತಾತ್ಕಾಲಿಕವಾಗಿ ಬ್ರಾಹ್ಮಣ ಮೂಲದ ಹೆಸರುಗಳನ್ನು ಕೊಡಲಾಯಿತು. ಈ ವೇಷ ತೊಟ್ಟ ಮೇಲೆ ಅವರು ತಮ್ಮವರನ್ನು ಮುಟ್ಟುವುದಿಲ್ಲ. ಬೈದ್ಯ ನಾಗಮಂಡಲ/ಡಕ್ಕೆ ಬಲಿಯ ವೈದ್ಯರು ತೊಡುವ ಅರ್ಧನಾರೀ ವೇಷವನ್ನು ತೊಟ್ಟುಕೊಂಡು. 'ನಾಗಪಾತ್ರಿಯ ಮಾಣಿ' ಕಾಡ್ಯನ ಮನೆಯೊಳಗೆ ಪೂಜೆ ಮಾಡಿ ನಾಗಪಾತ್ರಿಗೆ ಹೂನೀರು ಕೊಟ್ಟಾಗ ಆತ ಮೈಮೇಲೆ ಆವೇಶ ಬಂದಂತೆ ನಟಿಸುತ್ತಾ ಬೈದ್ಯನೊಂದಿಗೆ ಮಂಡಲಕ್ಕೆ ಪ್ರದಕ್ಷಿಣೆ ಬಂದನು. ಬೈದ್ಯ, ಸ್ವಾಮಿ, ಬ್ರಹ್ಮರನ್ನು ಕುರಿತಂತೆ ಕಲ್ಪಿತ ಭಜನೆ ಹಾಡುಗಳನ್ನು ಡೋಲಿನ ವಾದನದೊಂದಿಗೆ ಗುಣುಗುಟ್ಟಿದುದು ಕೇಳಿತು. ನೋಟಕರಿಗೆ ಇದು ನಾಗಮಂಡಲದ ಅಣಕದಂತೆ ಕಂಡಿತು. ಕೊನೆಯಲ್ಲಿ ಪ್ರೇಕ್ಷಕರು 'ನಾಗಪಾತ್ರಿ'ಯಲ್ಲಿ ಕಷ್ಟ ಸುಖಗಳನ್ನು ಕುರಿತಂತೆ ಕಲ್ಪಿತ ಪ್ರಶ್ನೆಗಳನ್ನು ಕೇಳುವ ಮೂಲಕ ಒಂದು 'ಆಶುಪ್ರಹಸನ' ಜರಗಿತು.

'ಬ್ರಾಹ್ಮಣ ಕೋಲ'ಕ್ಕೆ ಬರೆದ ಮಂಡಲವನ್ನು ಅಳಿಸಿ ಅಲ್ಲೆ ಬೈದ್ಯರ ಬಳಗದವರು ಪಂಚವರ್ಣದ ಹುಡಿಯಿಂದ ಮಂಡಲ ಬರೆದರು. ಈ ಮಂಡಲದ ರಚನೆಗೆ ಸುಮಾರು ಎರಡು ಗಂಟೆಗಳ ಕಾಲ ತಗಲಿತು. ಮಂಡಲದಲ್ಲಿ ಹೊನ್ನರಳಿ, ಐರ್‌ಮೀನು, ಒನಕೆ, ಗೆರಸೆ, ಹೊನ್ನಬಸವ, ಕುದುರೆ, ಕಾಗೆ, ಗುಬ್ಬಿ, ಸರ್ಪ (ಹಳದಿ ಬಣ್ಣ) ಕಾಡ್ಯ, (ಕಪ್ಪು ಬಣ್ಣ) ಚೆನ್ನೆಮಣೆ, ಗಣಪತಿ ಹಾಗೂ ದೇವತೆಗಳ ಚಿತ್ತಾರಗಳನ್ನು ಬರೆದರು. ಆ ದಿನ ಬರೆದ ಮಂಡಲದ ಚಿತ್ರಗಳೆಲ್ಲವೂ ಮಂಡಲದ ಕೇಂದ್ರಕ್ಕೆ (ಮೂಹೂರ್ತ ಕಂಬ) ಅಭಿಮುಖವಾಗಿತ್ತು. ಆ ದಿನ ಬೈದ್ಯರ ಆಹ್ವಾನದಂತೆ ಪರಿಸರದ ದೇವಾನುದೇವತೆಗಳೆಲ್ಲ ಆ ಮಂಡಲದಲ್ಲಿ ಬಂದು ನೆಲೆಸಿದುದರ ಸಂಕೇತ ಇದು ಎಂದು ವಕ್ತೃಗಳು ಹೇಳಿದರು. ಆ ಮಂಡಲದ ಕೇಂದ್ರದಲ್ಲಿ ಕಾಡ್ಯನ ಸಂಕೇತವಾಗಿರುವ 'ತಾಯಿಕಳಸ'ವನ್ನು ಇರಿಸಲಾಯಿತು. ಇನ್ನೆರಡು ಕಲಶಗಳನ್ನು ಮಂಡಲದ ಮೇಲೆ ಇಡಲಾಯಿತು. ಆ ಬಳಿಕ ಬೈದ್ಯರು ಮಂಡಲದ ಮೇಲಿರಿಸಿದ ಕಲಶವನ್ನು ಹೇರಿಸಿ ಮಂಡಲದ ನಡುವೆ ನಿಲ್ಲಿಸಿದರು. ಆಕೆ ಹೊತ್ತ ಕಲಶಕ್ಕೆ ಅಕ್ಕಿ ಚೆಲ್ಲುತ್ತಾ ಕಾಡ್ಯನಾಟ ಚೆನ್ನಾಗಿ ನಡೆಸಿಕೊಡುವಂತೆ ಬೈದ್ಯ ಪ್ರಾರ್ಥಿಸಿದ. ಇಲ್ಲಿ ಕಲಶ ಹೊತ್ತ ಆಕೆ ಮೇರರ ಮೂಲಸ್ತ್ರೀಯಾದ ಹೊನ್ನಿಯ ಸಂಕೇತವಂತೆ, ಆಕೆಯನ್ನು ಕುರಿತ ಬೈದ್ಯ ಹೇಳುವ 'ಕಾಡ್ಯನ ಹುಟ್ಟು' ಹಾಡು ಇಡಿಯ ಆಚರಣೆಗೆ ಸನ್ನದು ಇರುವಂತಿದೆ. ಇಲ್ಲಿಗೆ ಎರಡನೆಯ ದಿನದ ಆಚರಣೆ ಕೊನೆಗೊಳ್ಳುತ್ತದೆ.

### ೩.೨.೩ ಮೂರನೆ ದಿನ

ಮೂರನೆಯ ದಿನ ಬೆಳಗ್ಗಿಂದ ನಡು ಮಧ್ಯಾಹ್ನದ ತನಕ ತುಲಾಭಾರ. ಸಾಮಾನ್ಯವಾಗಿ ಈ ಆಚರಣೆಯನ್ನು ನಡೆಸುವ ಮೇರರು ಮಾತ್ರ ತುಲಾಭಾರದಲ್ಲಿ ಪಾಲ್ಗೊಳ್ಳುವುದಂತೆ. ಆದರೆ ಈ ಬಾರಿ ಈ ಕಾಡ್ಯನ ಮನೆಗೆ ಸಂಬಂಧಿಸಿದ ಕುಂಬಾರರ ಮನೆಯವರೂ ತುಲಾಭಾರದಲ್ಲಿ ಪಾಲ್ಗೊಂಡಿದ್ದಾರೆ. ನಾಲ್ಕೂರಿನಲ್ಲಿ ಅಕ್ಕಿ ತೆಂಗಿನಕಾಯಿಯಲ್ಲಿ ತುಲಾಭಾರ ನಡೆಯಿತು.

ತುಲಾಭಾರದ ಬಳಿಕ ವಿಧಿಕ್ರಿಯೆಗಳ ಅಂಗವಾಗಿ ಎರಡು ಕ್ರೀಡೆಗಳು ಜರಗಿತು. ಒಂದು 'ಹಿಡ್ಗಾಯಿ ಹಾಕುವುದು', ಇನ್ನೊಂದು 'ಅಂಬೋಡಿ ಆಡುವುದು', ಕಾಡ್ಯನ ಮನೆಯಿಂದ ಸುಮಾರು ನೂರುಗಜದಲ್ಲಿ ದರ್ಶನಪಾತ್ರಿ ಕೈಯಲ್ಲೊಂದು ತೆಂಗಿನಕಾಯಿ ಹಿಡಿದು ನಿಂತನು. ಮೇರ ಜಾತಿಯ ಯುವಕರನ್ನು 'ಸಂಸಾರ' ದವರು ಹಾಗೂ 'ನೆಂಟರು' ಎಂಬುದಾಗಿ ವಿಭಾಗಿಸಿ ಮೊದಲಿಗೆ ಸಂಸಾರದ ಮಕ್ಕಳ ಇದಿರು ಪಾತ್ರಿ ತೆಂಗಿನಕಾಯಿಯನ್ನು ಹಾರಿಸಿದನು. ಆ ಮಕ್ಕಳಲ್ಲಿ ಅದನ್ನು ಹಿಡಿವ ಬಗ್ಗೆ ಮೇಲಾಟ ಏರ್ಪಡುತ್ತದೆ. ಈ ಸೆಣಸಾಟದಲ್ಲಿ ಯಶಸ್ವಿಯಾದಾತನು ಓಡಿ ಹೋಗಿ ಕಾಡ್ಯನ ಮನೆಯ ಸಮೀಪದ ಬೆಣಗಲ್ಲಿಗೆ ಒಡೆದನು. ಎರಡನೆಯ ಬಾರಿ ಯುವಕರ ನಡುವೆ ಈ ಹಿಡ್ಗಾಯಿ ಆಡುವ ಸರದಿಯನ್ನು ಪಾತ್ರಿ ಏರ್ಪಡಿಸಿದನು.

ಇದಾದ ಮೇಲೆ ಇನ್ನೊಂದು ಕ್ರೀಡೆ 'ಅಂಬೋಡಿ ಆಡುವುದು' ಜರಗಿತು. ಈ ಕ್ರೀಡೆ ಹಿಂದೆ ಜಾತ್ರೆ ಹಬ್ಬಗಳಲ್ಲಿ ನಡೆಯುತ್ತಿದ್ದ ಬಗ್ಗೆ ವಿವರಗಳು ದೊರೆಯುತ್ತವೆ. ಇದು ಇಂದು ಮರೆಯಾಗುತ್ತಿರುವ ಆಚರಣೆ. ಕಾಡ್ಯನ ಮನೆಯೆದುರು ಸುಮಾರು ಹದಿನೈದು ಅಡಿ ದೂರಕ್ಕೆ ಎರಡು ಕಂಬಗಳನ್ನು ನೆಟ್ಟು, ಅವುಗಳ ತುದಿಗೆ ತೋರದ ಹುರಿಹಗ್ಗವನ್ನು ಒಂದಕ್ಕೊಂದು ಸಂಧಿಸುವಂತೆ ಕಟ್ಟಲಾಯಿತು. ಹಗ್ಗದ ಎಡಬಲಗಳಲ್ಲಿ ಸುಮಾರು ೧೦ ಅಡಿ ದೂರಕ್ಕೆ ಅಭಿಮುಖವಾಗಿ ಕೈಯಲ್ಲಿ ಬರಲುಗಳನ್ನು ಹಿಡಿದು ಯುವಕರು ನಿಂತಿದ್ದರು. ಪಾತ್ರಿ ಒಂದು ಕಂಬದಿಂದ ಇನ್ನೊಂದು ಕಂಬದೆಡೆಗೆ ಸಮಾನಾಂತರವಾಗಿ ಸಾಗುವಷ್ಟರಲ್ಲಿ ಎದುರುಬದುರಾಗಿ ನಿಂತ ಯುವಕರು ಓಡಿಬಂದು ಪರಸ್ಪರ ಒಬ್ಬರಿಗೊಬ್ಬರು ಬರಲುಗಳನ್ನು ತಾಗಿಸಿಕೊಂಡರು. ಹೀಗೆ ಮೂರು ಬಾರಿ ನಡೆಯಿತು. ಆದರೆ ಹಿಂದೆ ಯುವಕರ ದೈಹಿಕಶಕ್ತಿ ಹಾಗೂ ಕ್ರೀಡಾಕ್ಷಮತೆಯನ್ನು ಸ್ಪರ್ಧೆಗೊಡ್ಡುವ ಅಣಕು ಕಾಳಗ ಇದ್ದಿರಬೇಕೆಂದು ಊಹಿಸಲಾಗಿದೆ.

ಅರಾಧನಾ ವಿಧಿಗಳ ಜತೆಗೆ ಕರ್ನಾಟಕದ ಇತರೆಡೆಯ ಹಗಣ(ಹಗರಣ) ವನ್ನು ಹೋಲುವ ಕೊರಗರ ಕೋಲ, ದಾಸರಕೋಲ, ಹುಲಿಹಂದಿಕೋಲ,

ಜ್ವರದಕೋಲ, ತಗಣೆಕೋಲಗಳು ಜರಗಿದವು. ಇಂತಹ ಕೋಲಗಳಿಗೆ ಸೂಕ್ತ ವ್ಯಕ್ತಿಗಳನ್ನು ಸಮುದಾಯದಿಂದ ಪಾತ್ರಿ ತನಗೆ ಮೈದುಂಬಿದಾಗ ನೀರು ಹನಿಯಿಸಿ ಆಯ್ಕೆ ಮಾಡಿದನು. ಇಲ್ಲಿ ಪಾತ್ರಿಯ ಆಯ್ಕೆಯನ್ನು ಯಾರೂ ಪ್ರಶ್ನಿಸುವಂತಿಲ್ಲ. ಆ ಮೂಲಕ ಈ ಹಗಣವನ್ನು ಹೋಲುವ ಆಚರಣೆಗಳಿಗೆ ಧಾರ್ಮಿಕ ಸ್ವರೂಪವನ್ನು ನೀಡಲಾಗುತ್ತದೆ. ಕೊರಗರ ಕೋಲಕ್ಕೆ ಕೊರಗ, ಕೊರತಿ, ಹಾಗೂ ಡೋಲುವಾದಕ ಹೀಗೆ ಮೂವರನ್ನು ಮೇರರ ಸಮುದಾಯದಿಂದ ಆಯ್ಕೆ ಮಾಡಲಾಯಿತು. ಆಯ್ಕೆಯಾದೊಡನೆ ಅವರು ಸಮುದಾಯದಿಂದ ಅಸ್ಪೃಶ್ಯರಾಗುತ್ತಾರೆ. ದೈವದ ಮನೆಯ ಸಂಕೀರ್ಣದಿಂದ ಅವರು ಹೊರ ನಡೆಯಬೇಕು. ತಲೆಗೆ ಕೊಂಬಾಳೆ, ಸೊಂಟಕ್ಕೆ ಗಂಟಿನಿಂದ ಮೇಲೆ ನಿಲ್ಲುವ ಕಪ್ಪುಬಟ್ಟೆ, ಕೈಗೊಂದು ಊರುಗೋಲು ಹಿಡಿದು ಕೊರಗ ಸಿದ್ಧನಾದನು. ಇನ್ನೊಬ್ಬ ಹರಕಲು ಸೀರೆಉಟ್ಟು, ಹೆಣ್ಣುವೇಷ ತೊಟ್ಟು ತಲೆಯ ಮೇಲೊಂದು ಬುಟ್ಟಿಯಿರಿಸಿಕೊಂಡು ಬೇಡುವ ಅನುಕರಣೆ ಮಾಡಿದನು. ಮೂರನೆಯಾತ ತುಂಡುಬಟ್ಟೆ ಉಟ್ಟು, ಹರಿದ ಕೊಂಬಾಳೆ ಟೊಪ್ಪಿಗೆ ಇರಿಸಿಕೊಂಡು ಕೊರಗ ಜನಾಂಗದವರಿಂದ ತಂದ ಡೋಲನ್ನು ಕೊರಳಿಗೆ ಇಳಿಬಿಟ್ಟು ನುಡಿಯಿಸುತ್ತಿದ್ದ. ಕೊರಗರಿಗೆ ಹಿಂದೆ ನೀಡುತ್ತಿದ್ದ ನೀಚಾನ್ನದಾನದ ಅನುಕರಣೆಯ ರೂಪದಲ್ಲಿ ಕೊರತಿಗೆ ಗೆರಸೆಯಲ್ಲಿ ಅನ್ನ ಪದಾರ್ಥವನ್ನು ನೀಡಲಾಯಿತು. ಕೊರಗರ ಬದುಕಿನ ಹಿನ್ನೆಲೆಯಲ್ಲಿ ಹೆಣೆದ ಲಘುಧಾಟಿಯ ಆಶುರೂಪದ ಸಂಭಾಷಣೆಗಳು ಕಿಕ್ಕಿರಿದ ಪ್ರೇಕ್ಷಕರನ್ನು ರಂಜಿಸಿದವು. ಕೊರಗ–ಕೊರತಿಯರು ತಮ್ಮ ತಲೆಯ ಮೇಲಿನ ಹಾಳೆಯ ಟೊಪ್ಪಿಗೆ ಹಿಡಿದು ಭಿಕ್ಷೆ ಯಾಚಿಸಿದಾಗ ಪ್ರತಿಯೊಬ್ಬರೂ ಹಣ ನೀಡಿದರು. 'ಕೊರಗ'ನ ಕುಣಿತಕ್ಕೆ ಸಿಳ್ಳು ಹಾಕುತ್ತಾ ಯುವಕರು ಕುಣಿಯತೊಡಗಿದರು. ಅಂದರೆ ಪ್ರೇಕ್ಷಕರು ಸಂಪೂರ್ಣವಾಗಿ 'ಕೊರಗರ ಕೋಲ'ದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಈ ಸಂದರ್ಭದಲ್ಲಿ ಜರಗಿದ ಇನ್ನೊಂದು ಕೋಲವೆಂದರೆ 'ದಾಸರಕೋಲ'. ದಾಸರನ್ನು ದಕ್ಷಿಣ ಕನ್ನಡದಲ್ಲಿ ಅಧಿಕೃತವಾಗಿ 'ಶಂಖದಾಸ'ರೆಂದು ಗುರುತಿಸಲಾಗಿದ್ದು ಇವರು ತಿರುಪತಿ ತಿಮ್ಮಪ್ಪನ ಭಕ್ತರು. ಒಂದು ಕೈಯಲ್ಲಿ ಶಂಖ ಊದುತ್ತಾ, ಇನ್ನೊಂದರಲ್ಲಿ ಜಾಗಟೆ ಸೇವಾರೂಪದಲ್ಲಿ ಭಿಕ್ಷೆ ಎತ್ತುತ್ತಿದ್ದರು. ತಿರುಪತಿ ದೇವಾಲಯಕ್ಕೂ ಊರಿಗೂ ಒಂದುಕೊಂಡಿಯಂತೆ ಇರುತ್ತಿದ್ದರು. ಈ ವೇಷದ ಅನುಕರಣೆಯನ್ನು ಇಲ್ಲಿ ಮಾಡಿದರು. ಪಾತ್ರಿಯಿಂದ ಆಯ್ಕೆಯಾದ ವ್ಯಕ್ತಿ ತಲೆಗೆ ಮುಂಡಾಸು, ಹಣೆಗೆ ಮೈಗೆ ಗಂಧದ ನಾಮ, ಕಚ್ಚೆಪಂಚೆ ಉಟ್ಟು ಶಂಖ ಊದುತ್ತಾ 'ಗೋವಿಂದ ಗೋವಿಂದ' ಎಂದು ಹೇಳುತ್ತಾ ಕಾಣಿಕೆ ಸಂಗ್ರಹಿಸಿದರು. ಇಂತಹ ವೇಷಗಳು ನೆರೆದಿದ್ದ ಸಮೂಹಕ್ಕೆ ಮನೋರಂಜನೆಗೆ ಒಳ್ಳೆಯ ಸಾಧನವಾಗಿತ್ತು.

ಕಾಡ್ಯನಾಟದ ಒಳಗೆ ಬೇಟೆಯಂತಹ ಕ್ರಿಯೆಯನ್ನು ನಾಟಕೀಯವಾಗಿ ಅಭಿನಯಿಸಿ, ತೋರಿಸಲಾಯಿತು. ಇದನ್ನು ಅವರು ಕರೆಯುವುದು 'ಹುಲಿ ಹಂದಿ ಕೋಲ'. ಇಲ್ಲಿ ಮೂರು ಮುಖ್ಯಪಾತ್ರ ಹುಲಿ, ಬೇಟೆಗಾರ, ಹಂದಿ. ಈ ಪಾತ್ರಗಳನ್ನು ನಿರ್ವಹಿಸಬೇಕಾದ ವ್ಯಕ್ತಿಗಳ ಆಯ್ಕೆ ಮಧ್ಯಾಹ್ನವೇ ನಡೆದಿರುತ್ತದೆ. ಈ ಕೋಲಕ್ಕೆ ಬೇಕಾದ ತಯಾರಿಯನ್ನು ಅವರೇ ಮಾಡಿಕೊಳ್ಳಬೇಕು. ಹಂದರದೊಳಗೆ ಹತ್ತೆಂಟು ಬಾಲಕರು ಕೈ ಕೈ ಹಿಡಿದು 'ಹುಲಿ ಬಂತೆ ಹುಲಿ' ಎನ್ನುತ್ತಾ ಸುತ್ತುತ್ತಿರುತ್ತಾರೆ. ಅಷ್ಟರಲ್ಲಿ ಕಿಕ್ಕಿರಿದು ನೆರೆದಿದ್ದ ಸಮೂಹದಿಂದ ಹಂದಿಯ ಮುಖವಾಡ ಇರಿಸಿಕೊಂಡಿದ್ದವನು ಹಂದಿಯಂತೆ ನಾಲ್ಕು ಕಾಲುಗಳಲ್ಲಿ ಹರಿದಾಡುತ್ತಾ ಹಂದರದ ಕಡೆ ಧಾವಿಸಿ ಬಂದನು. ಚಕ್ರಾಕಾರವಾಗಿ ಸುತ್ತುತ್ತಿರುವ ಮಕ್ಕಳ ಕೋಟೆಯೊಳಗೆ ಈ 'ಹಂದಿ' ನುಗ್ಗುತ್ತದೆ. ಅಷ್ಟರಲ್ಲಿ ಮೈಗೆ ಹುಲಿಯಂತೆ ಚಿತ್ತಾರ ಬರೆದುಕೊಂಡ ಮುಖಕ್ಕೆ ಹುಲಿಯ 'ಮುಖ' ಇರಿಸಿಕೊಂಡವನೊಬ್ಬನು ಜನರ ನಡುವಿನಿಂದಲೇ ಕಾಣಿಸಿಕೊಂಡು ಹಂದಿಯತ್ತ ನುಗ್ಗುತ್ತಾನೆ. ಜನರ ಕೂಗು, ಕೇಕೆಗಳು ಕಿವಿ ತುಂಬುತ್ತಿತ್ತು. ಆ ಹುಲಿಯ ಹಿಂದೆ ತುಂಡುಗಂಬಳಿ ಹೊದೆದ ಬೇಟೆಗಾರ ಕಾಣಿಸಿಕೊಳ್ಳುತ್ತಾನೆ. ಅವನ ಕೈಯಲ್ಲಿ ಕೋವಿಯ ಸಂಕೇತವಾಗಿ ದೊಡ್ಡ ದೊಣ್ಣೆಯಿದ್ದಿತ್ತು. ಒಣಹುಲ್ಲಿನಿಂದ ತಯಾರಿಸಿ ಬಣ್ಣಕೊಟ್ಟ 'ಬೇಟೆಯನಾಯಿ'ಯ ಕೊರಳಿಗೆ ಹುರಿಹಗ್ಗ ಬಿಗಿದು ಅದರ ಇನ್ನೊಂದು ತುದಿಯನ್ನು ಕೈಯಲ್ಲಿ ಹಿಡಿದು 'ಆಗ..... ಆಗ ಹಿಡಿ ಹಿಡಿ ಮಿಗ' ಎಂದು ಹೇಳುತ್ತಾ ತನ್ನ ನಾಯಿಯನ್ನು ಬೇಟೆ ಪ್ರಾಣಿಯ ಮೇಲೆ ಛೂ ಬಿಡುತ್ತಾ ಹುಲಿಯನ್ನು ಅಟ್ಟುತ್ತಾ ಮುನ್ನಡೆಯುತ್ತಾನೆ. ಹಂದರದೊಳಗೆ ತಲುಪಿದ ಹುಲಿ ಹಂದಿಯನ್ನು ಬೆನ್ನಟ್ಟಿ ಹಿಡಿದ ನಟನೆ ನಡೆಯಿತು. ಅಷ್ಟರಲ್ಲಿ ಬೇಟೆಗಾರ ಹುಲಿಗೆ ಈಡು ಇಟ್ಟು ಹೊಡೆದ. ಹುಲಿ ಹಂದಿ ಎರಡೂ ಉರುಳಿದುವು. ಜನಸಮೂಹ ಸಂತೋಷದಿಂದ ಏನೋ ಮಹತ್ವದ ಸಾಧನೆ ಆದಂತೆ ಕೈತಟ್ಟಿ, ಕೇಕೆ ಹಾಕಿ ನಕ್ಕು ನಲಿಯಿತು.

ಮುಸ್ಸಂಜೆಯ ಹೊತ್ತಿಗೆ ಕಾಡ್ಯನ ಮನೆಯ ಇದಿರು ಜನ ಕಿಕ್ಕಿರಿದು ನೆರೆದರು. ಈ ಜನಸಮೂಹದ ನಡುವೆ ಒಬ್ಬ ವ್ಯಕ್ತಿ ಕಂಬಳಿ ಹೊದ್ದುಕೊಂಡು ಮಲಗಿದುದು ಕಾಣಿಸಿತು. ಅವನ ಒಂದು ಮಗ್ಗುಲಿಗೆ ದೈವದ ಮನೆಯ ಪ್ರತಿನಿಧಿ ಹಾಗೂ ಇನ್ನೊಂದು ಮಗ್ಗುಲಿಗೆ ಊರಿನ ಪ್ರತಿನಿಧಿಯೊಬ್ಬರು ನಿಂತಿದ್ದುದು ಕಾಣಿಸಿತು. ಅದು ಭಕ್ತ ಸಮುದಾಯ ತಾವು ದೈನಂದಿನ ಬದುಕಿನಲ್ಲಿ ಬಂದ ಕೆಮ್ಮು, ಜ್ವರ, ಉಬ್ಬಸ ಮುಂತಾದ ಕಾಯಿಲೆ, ಹಂದಿ, ಹುಲಿ, ತಗಣಿ, ಮುಂತಾದುವುಗಳಿಂದ ಉಂಟಾದ ಉಪಟಳಗಳಿಗೆ ಹೇಳಿಕೊಂಡ ಹರಕೆಗಳನ್ನು ಒಪ್ಪಿಸುತ್ತಿದ್ದ 'ಆಶುಪ್ರಹಸನ'. ಇದಕ್ಕೆ ಜನರು 'ಕೆಮ್ಮನ ಕೋಲ, ಜ್ವರನಕೋಲ, ತಗಣಿಕೋಲ, ಹಂದಿಕೋಲ'

ಎಂದು ಕರೆಯುತ್ತಾರೆ. ಇದನ್ನು ಒಂದು ಬಗೆಯ ಮಾನಸಿಕ ಚಿಕಿತ್ಸೆ ಅಥವಾ ಜನಪದವೈದ್ಯ ಎಂದು ನಾವು ಗುರುತಿಸುತ್ತೇವೆ. ಇದನ್ನು ಅನುಕರಣೆಯ ಮಾಟ ಎಂದೂ ಕರೆಯಬಹುದು. ಮನೆಯಲ್ಲಿ ತಗಣಿಯ ಕಾಟ ಕಾಣಿಸಿಕೊಂಡಾಗ, ಮನೆಮಂದಿಗೆ ಕೆಮ್ಮು, ಜ್ವರ ಬಂದಾಗ, ತೋಟದಲ್ಲಿ ಹಂದಿಯ, ಹುಲಿಯ ಕಾಟ ಉಂಟಾದಾಗ ಕಾಡ್ಯನಿಗೆ ಸಂಬಂಧ ಪಟ್ಟ ಕೋಲ (ಜ್ವರನಕೋಲ, ಕೆಮ್ಮನಕೋಲ ಇತ್ಯಾದಿ) ಕೊಡಿಸುವುದಾಗಿ ಹೇಳಿಕೊಳ್ಳುತ್ತಾರಂತೆ. ಕೋಲದ ಹರಕೆ ಒಪ್ಪಿಸುವ ವ್ಯಕ್ತಿ ನಿರ್ದಿಷ್ಟ ಮೊತ್ತ (ಸಾಮಾನ್ಯವಾಗಿ ಒಂದು ರೂಪಾಯಿ)ವನ್ನು ಪೂಜಾರಿಯ ಅಥವಾ ಅವನ ಪ್ರತಿನಿಧಿಯ ಕೈಗೆ ಕೊಟ್ಟು ನನಗೆ ಇಂತಹ ಕೋಲವಾಗಬೇಕು ಎನ್ನುತ್ತಾನೆ. ನಾಲ್ಲೂರಿನಲ್ಲಿ ಈ 'ಕೋಲ'ಕ್ಕೆ ಆಯ್ಕೆಯಾದ ವ್ಯಕ್ತಿ ಕಾಡ್ಯನ ಮನೆಯೆದುರು ಚಪ್ಪರದಡಿ ಕಂಬಳಿ ಹೊದ್ದುಕೊಂಡು ಮಲಗಿದನು. ಪ್ರೇಕ್ಷಕರಲ್ಲಿ ಯಾರಾದರೊಬ್ಬರು ಮಲಗಿರುವವನಲ್ಲಿ '............ಇಂತಹವರಿಗೆ ತಗಣಿಕಾಟವಂತೆ, ಒಂದು ಕೋಲವಾಗಬೇಕಲ್ಲ' ಎನ್ನುತ್ತಾರೆ. ಅಷ್ಟರಲ್ಲಿ ಮಲಗಿರುವಾತ ತಗಣೆ ಕಡಿದವನಂತೆ ಅಭಿನಯಿಸುತ್ತಾನೆ. ತಗಣಿಯ ದೈಹಿಕ ಹಿಂಸೆಯನ್ನು ರಂಗುರಂಗಾಗಿ ಬಣ್ಣಿಸುತ್ತಾನೆ. ಅದಕ್ಕೆ ಪ್ರೇಕ್ಷಕರ ಪ್ರತಿನಿಧಿ ಉತ್ತರಿಸುತ್ತಿರುತ್ತಾನೆ. 'ಕಾಡ್ಯನಿಗೆ ಕೋಲ ಕೊಟ್ಟಾಯಿತು. ಇನ್ನು ತಗಣಿಯ ಕಾಟ ಇರಲಾರದು, ಹೋಗು' ಎಂದು ಹರಕೆ ಒಪ್ಪಿಸಿದವನಿಗೆ ಆಶ್ವಾಸನೆ ನೀಡುವಲ್ಲಿಗೆ ಈ 'ಹರಕೆಯ ಆಶುನಾಟಕ' ಕೊನೆಗೊಳ್ಳುತ್ತದೆ. ಆ ಬಳಿಕ ಇತರರ, ಕೆಮ್ಮನಕೋಲ, ಜ್ವರದಕೋಲ, ಹಂದಿಯ ಕೋಲ ಇತ್ಯಾದಿಗಳ ಸರಣಿ ಮುಂದುವರಿಯಿತು. ಇಲ್ಲಿ ಹರಕೆ ಕೊಟ್ಟವರಲ್ಲಿ ನಾವು ವೈಯಕ್ತಿಕವಾಗಿ ಭೇಟಿಮಾಡಿ 'ಕೋಲ'ದ ಹಿನ್ನೆಲೆ ಕೇಳಿದಾಗ ಕೆಲವರು ಮನೆಯಲ್ಲಿ ಕೆಮ್ಮು, ಜ್ವರ ಹೌದೆಂದೂ ಆ ಸಂದರ್ಭದಲ್ಲಿ ತಾವು ಹರಕೆ ಹೇಳಿಕೊಂಡುದು ಹೌದೆಂದೂ ಹೇಳಿದರು. ಆದರೆ ಕೆಲವರು ಗಮ್ಮತ್ತಿಗಾಗಿ ಆ ಹೊತ್ತಿಗೆ ಒಂದು ರೂಪಾಯಿ ಕೊಟ್ಟು ಕೋಲಮಾಡಿಸಿದುದಾಗಿ ಹೇಳಿದರು.

'ಜಕ್ಕಿಣಿಯರನ್ನು ಕುಣಿಸುವುದು' ಮುಂದಿನ ಆಚರಣೆ. ಇದರಲ್ಲಿ ಭಾಗವಹಿಸಿದವರು ಎಂಟರಿಂದ ಹತ್ತು ವರ್ಷ ವಯಸ್ಸಿನೊಳಗಿನ ಆರು ಹೆಣ್ಣು ಮಕ್ಕಳು. ಅವರನ್ನು ಆ ದಿನ ಬಂದ ಕುಟುಂಬದ/ನೆಂಟರ ಮಕ್ಕಳಿಂದ ಪಾತ್ರಿಯು ಬೆಳಗ್ಗೆ ಆಯ್ಕೆ ಮಾಡುವನು. ಮಕ್ಕಳ ಅಮ್ಮಂದಿರು ತಮ್ಮ ಮಕ್ಕಳಿಗೆ ಜಕ್ಕಿಣಿಯರಾಗಿ ಕುಣಿಯುವುದಕ್ಕೆ ಅವಕಾಶ ಸಿಕ್ಕಿರುವುದನ್ನು ಸಂತೋಷದಿಮದ ಸ್ವೀಕರಿಸಿದರು. ಆ ಮಕ್ಕಳು ಬೆಳಗಿನಿಂದ ಉಪವಾಸದಿಂದಿದ್ದರು. ಆ ಮಕ್ಕಳಿಗೆ ತಾಯಂದಿರು ಬಿಳಿ ಸಈರೆ ಉಡಿಸಿ ಕೊರಳಿಗೆ ಜಂಗಮ ಮರದ ತೊಗಟೆಯ ಸರಹಾಕಿ, ತಲೆಚಾಚಿಕಟ್ಟಿ ಹೂ ಮುಡಿಸಿ ಸಾಲಾಗಿ ಬೈದ್ಯರ ಹಂದರದೆಡೆಗೆ ಕರೆ ತಂದರು. ಬೈದ್ಯ

ಮುಹೂರ್ತದ ಕಂಬದ ಬಳಿ ಒಂದು ಕಾಲುದೀಪ ಇರಿಸಿ ಕಂಬಕ್ಕೆ ಮಕ್ಕಳನ್ನು ಪ್ರದಕ್ಷಿಣೆ ಬರುವಂತೆ ಹೇಳಿ, ತಾನು ಅವರ ಎದುರು ಜಕ್ಕಿಣಿಯರನ್ನು ಕುರಿತು ಹಾಡು ಹೇಳುತ್ತಾ ಕುಣಿದನು. ನಾಲ್ಕಾರು ಸುತ್ತು ಬಂದ ಬಳಿಕ ಆ ಮಕ್ಕಳು ಕಳಶದ ಚಿಟ್ಟೆಗೆ ಪ್ರದಕ್ಷಿಣೆ ಬರುವ ಮೂಲಕ ಈ ಆಚರಣೆ ಕೊನೆಯಾಯಿತು. ಈ ಜಕ್ಕಿಣಿಯರನ್ನು ಕುಣಿಸುವುದು ಪ್ರಾಚೀನ ಯಕ್ಷಾರಾಧನೆಯ ಪಳೆಯುಳಿಕೆ ಇರಬೇಕು. ನಾಗಮಂಡಲದಲ್ಲಿ ನಾಗನನ್ನು ಯಕ್ಷಿಯರ ರೂಪದಲ್ಲಿ ಆರಾಧಿಸುವ ಬಗ್ಗೆ ಈ ಹಿಂದೆಯೇ ಹೇಳಿದೆ. ಕಾಡ್ಯನ ಮನೆಯ ಸಂಕೀರ್ಣದಲ್ಲಿ ಯಕ್ಷಿಯ ಕಲ್ಲು, ಬ್ರಹ್ಮನ ಕಲ್ಲು ಇರುವುದು, ಕಾಡ್ಯನಾಟದಲ್ಲಿ ಜಕ್ಕಿಯರ ಕುಣಿತ ಇವು ಯಕ್ಷಾರಾಧನೆ ನಾಗಾರಾಧನೆಯ ಒಂದು ಭಾಗ ಎನ್ನುವುದನ್ನು ಸೂಚಿಸುತ್ತದೆ.

ಆ ದಿನ ರಾತ್ರಿ ಬೈದ್ಯರು ಹಿಂದಿನ ದಿನದಂತೆಯೇ 'ಹಂದರ'ದೊಳಗೆ ಮಂಡಲ ಬರೆದರು. ವ್ಯತ್ಯಾಸವೆಂದರೆ ಈ ದಿನ ರೂಪುಗಳೆಲ್ಲ ಕಂಬದಿಂದ ವಿರುದ್ಧ ದಿಕ್ಕಿಗೆ ಅಂದರೆ ಬಾಹ್ಯಾಭಿಮುಖವಾಗಿದ್ದುವು. ಬೈದ್ಯ ಈ ದಿನದ ಎಲ್ಲಾ ದೇವಾನುದೇವತೆಗಳನ್ನು ಕರೆದು ಮಂಡಲದಿಂದ ಹೊರಟು ತಮ್ಮ ಮೂಲ ನೆಲೆ ಸೇರುವಂತೆ ಕೋರಿದುದು ಅವನ ಹಾಡಿನಿಂದ ತಿಳಿಯಿತು. ಆ ರಾತ್ರೆ ಸುದೀರ್ಘಕಾಲ ಬೈದ್ಯರ ಬಳಗ 'ಯುಗ ಮಗುಚುವ ಹಾಡು' 'ಗೋವೆಹಕ್ಕಿಯ ಹಾಡು'–ಮುಂತಾದ ಹಾಡುಗಳನ್ನು ಹಾಡಿದರು.

### ೨.೨.೪ ನಾಲ್ಕನೆ ದಿನ

ಕೊನೆಯ ದಿನ ಬೆಳಗ್ಗೆ ಪಾತ್ರಿಯಿಂದ ಬೊಬ್ಬರ್ಯನ ದರ್ಶನವಾಗಿ ಬೈದ್ಯನ ಮಾರ್ಗದರ್ಶನದಲ್ಲಿ ಐದು ಕಲಶಗಳನ್ನು ಹೆಂಗಸರ ತಲೆಮೇಲೆ ಹೊರಿಸಿಕೊಂಡು ಊರಮೇಲೆ ಸಂಚಾರ ಹೋದರು. ಕಲಶದ ಬಾಯಿಗೆ ಮಾವು, ಹಲಸಿನ ಸೊಪ್ಪು ಇರಿಸಿ, ಮೇಲೊಂದು ತೆಂಗಿನಕಾಯಿ ಇರಿಸಿ, ಮಲ್ಲಿಗೆಯ ಹಾರ ಹಾಕಿ ಕೆಂಪು ಬಣ್ಣದ ಬಟ್ಟೆಯನ್ನು ಸುತ್ತಲಾಗಿತ್ತು. ಬೊಬ್ಬರ್ಯನ ರಕ್ಷೆಯಲ್ಲಿ ಈ 'ಊರ ಮೇಲೆ ಹೋಗುವ ವಿಧಿ' ನಡೆಯುವುದಾಗಿ ಜನ ನಂಬುತ್ತಾರೆ. ಕಾಡ್ಯನಾಟಕ್ಕೆ ಬಂದ ಬಹುಪಾಲು ಮಂದಿ ಶಂಖ ಜಾಗಟೆ, ಡೋಲು, ವಾದನದೊಂದಿಗೆ ಈ ಮೆರವಣಿಗೆಯಲ್ಲಿ ಪಾಲ್ಗೊಂಡರು. ಗ್ರಾಮದ ಎಲ್ಲಾ ಜಾತಿಯವರ ಮನೆಗೆ ಹೋಗಿ ಅವರ ಮನೆಯಂಗಳದಲ್ಲಿ ಕಲಶ ಇರಿಸಿ ಆಯಾಯ ಮನೆಯ ಯಜಮಾನರಿಂದಲೇ ಕಲಶಗಳಿಗೆ ಪೂಜೆ ಜರಗಿತು. ಮೊದಲ ಪೂಜೆಯ ಮರ್ಯಾದೆ ಸ್ಥಳದ ಯಜಮಾನರ ಮನೆಯಲ್ಲಿ ಜರಗಿತು. ಆ ಬಳಿಕ ಕಲಶ ತಯಾರಿಸಿಕೊಟ್ಟ ಕುಲಾಲರ ಮನೆಯಲ್ಲಿ. ಊರ ಮೇಲೆ ಹೋಗುವಾಗ ಉದ್ದಕ್ಕೂ

ಮಹಿಳೆಯರ ಬಳಗ ಶೋಭಾನಗೀತಗಳ ಧಾಟಿಯಲ್ಲಿ ಹಾಡು ಹೇಳುತ್ತಾ ಹೋಗುತ್ತಿರುವುದು ಕಾಣಿಸಿತು. ಊರಾಡುವುದಕ್ಕೆ ಬೆಳಗ್ಗೆ ಹೊರಟ ತಂಡ ಸೂರ್ಯಾಸ್ತವಾದ ಬಳಿಕವಷ್ಟೇ ಮರಳಿತು.

ಸಮುದಾಯವು ಊರಾಡಿ ಬಂದು ಸಾಮೂಹಿಕ ಭೋಜನ ಪೂರೈಸಿ ಮುಂದಿನ ಕಾರ್ಯಕ್ರಮಕ್ಕೆ ಅಣಿಯಾಯಿತು. ಕಾಡ್ಯನಿಗೆ ಪೂಜೆ ನಡೆದು ಪಾತ್ರಿಗೆ ದರ್ಶನಗಿ ಸಾಲಾಗಿ ನಿಂತ ಸ್ವಜಾತಿ ಬಾಂಧವರಲ್ಲಿ ಕುದುರೆ ಕೋಲಕ್ಕೆ, ಕುದುರೆ ಕಾಸ್ತಾರರಿಗೆ ತಕ್ಕವರನ್ನು ಹೂನೀರು ಹಾಕಿ ಆಯ್ಕೆ ಮಾಡಲಾಯಿತು. ಈ ಮೊದಲು ಇಡಿಯದಿನ ಕುದುರೆಯ ವೇಷಕ್ಕೆ ಬೇಕಾದ ಸಲಕರಣೆಗಳನ್ನು ಜೋಡಿಸುವುದರಲ್ಲಿ ಹಲವರು ನಿರತರಾಗಿದ್ದರು. ಕಾಡಿನಿಂದ ಸೂರಿಮುಳ್ಳಿನ ಕೋಲನ್ನು ತಂದು 'ಕುದುರೆ'ಗೆ ಉದ್ದದ ಅಟ್ಟೆ ತಯಾರಿಸಿದರು. ಎತ್ತ್‌ಬೀಳನ್ನು ಅಡ್ಡದ ಅಟ್ಟೆಯಾಗಿಯೂ ಬಳಸಿದುದು ಕಂಡು ಬಂತು. ಕುದುರೆಯ ಮುಖವನ್ನು ಅಡಿಕೆಮರದ ಹಾಳೆಯಿಂದ ಮಾಡಿ ಅದಕ್ಕೆ ಬಿಳಿ, ಕೆಂಪು ಬಣ್ಣ ಬಳಿದರು. ಕಣ್ಣು, ಕಿವಿ, ಮೂಗುಗಳನ್ನು ಕಪ್ಪು ಬಣ್ಣದಲ್ಲಿ ಬರೆದರು. ತೆಂಗಿನಗರಿಯಿಂದ ಕುದುರೆಯ ಬಾಲಮಾಡಿದರು. ಬೀಳಿನ ಅಟ್ಟೆಯನ್ನು ಮೈಗೆ ಸಿಕ್ಕಿಸಿಕೊಂಡು ಅದಕ್ಕೆ ಬಿಳಿ/ಕೆಂಪು ಬಟ್ಟೆ ಹೊದಿಸಿ ಕುದುರೆಯ ವೇಷ ನಿರ್ಮಿಸಿದರು. ಒಂದು ಬಿಳಿಕುದುರೆ, ಇನ್ನೊಂದು ಕೆಂಪು ಕುದುರೆ, ಒಂದೊಂದು ಕುದುರೆಗೆ ಒಬ್ಬೊಬ್ಬ ಕಾಸ್ತಾರ ಇದ್ದಿದ್ದರು.

ಕಾಡ್ಯನಮನೆಯೆದುರು ಬಿಳಿ ಕುದುರೆ, ಕೆಂಪು ಕುದುರೆ, ಇಬ್ಬರು ಕಾಸ್ತಾರರು ಅಣಿಯಾಗಿದ್ದರು. ಪಾತ್ರಿಯ ಸೂಚನೆಯಂತೆ ಬೈದ್ಯನ ಮುಂದಾಳುತ್ವದಲ್ಲಿ ಐದು ಕಲಶಗಳನ್ನು ಮಹಿಳೆಯರು ಹೊತ್ತುಕೊಂಡು 'ಗಂಗೆ ಮೀಯುವುದಕ್ಕೆ' ಹೊರಟರು. ಗಂಗೆ ಮೀಯುವುದೆಂದರೆ ಸಮೀಪದ ಹರಿವ ಜಲದಲ್ಲಿ ಕಲಶಗಳನ್ನು ತೊಳೆದು ಹೊಸನೀರನ್ನು ತುಂಬಿಕೊಂಡು ಬರುವ ಒಂದು ಆಚರಣೆ. ದಾರಿಯುದ್ದಕ್ಕೂ ಹೆಂಗಸರು ಈ ಕ್ರಿಯಾಚರಣೆಯನ್ನು ವಿವರಿಸುವ ಹಾಡು ಹೇಳುತ್ತಾ ಹೋದರು. ದಾರಿಯಲ್ಲಿ ಸಿಗುವ 'ಸ್ಥಳದ ಯಜಮಾನ'ರ ಮನೆಯಂಗಳದಲ್ಲಿ ಕುದುರೆ ವೇಷ ತೊಟ್ಟವರ ಬಹುಬಗೆಯ ಕುಣಿತ ನಡೆಯಿತು. ಇಲ್ಲಿ ಬಿಳಿ, ಕೆಂಪು ಕುದುರೆಗಳು ಹಾಯ್ಗುಳಿ ಹಾಗೂ ಬೊಬ್ಬರ್ಯನ ವಾಹನ ಎಂಬುದಾಗಿ ವಕ್ತೃಗಳು ಹೇಳಿದರು. ಮೆರವಣಿಗೆ ಸಮೀಪದ ಹರಿವ ನೀರೆಡೆಗೆ ಹೋಗಿ ಕಲಶದ ಮೇಲಿದ್ದ ಹೂ, ಎಲೆಗಳನ್ನು ನೀರಲ್ಲಿ ತೇಲಬಿಟ್ಟು ಕಲಶದೊಳಗೆ ಹೊಸನೀರು ತುಂಬಿಕೊಂಡು ಸಂಭ್ರಮದಿಂದ ಮತ್ತೆ ಕಾಡ್ಯನ ಮನೆಗೆ ಬಂದರು. ಚಿಟ್ಟೆಯೊಳಗೆ ಕಲಶಗಳನ್ನು ಇಳಿಸುವಲ್ಲಿಗೆ 'ಕುದುರೆ ಕೊಲ' ಮುಗಿಯಿತು.

ಹಂದರದಲ್ಲಿ ಬೈದ್ಯರಿಂದ ಹಾಡುಗಳು ಮುಂದುವರಿಯುತ್ತವೆ. ಹಗಲು ಊರು ಮೇಲೆ ಹೋದ ಸಂದರ್ಭದಲ್ಲಿ ಊರವರು ಕಾಣಿಕೆ ರೂಪದಲ್ಲಿ ನೀಡಿದ ಬೆಳ್ತಿಗೆ ಅಕ್ಕಿಯನ್ನು ಕುಲಾಲರು ಮೊದಲ ದಿನ ಮಾಡಿಕೊಟ್ಟ 'ಚರುವಿನ ಕಲಶ'ದಲ್ಲಿ ಬೇಯಿಸಿ ಚಿಕ್ಕ ಚಿಕ್ಕ ಎಲೆಗಳ ಚೂರುಗಳ ಮೇಲೆ ಅನ್ನವನ್ನು ಇರಿಸಿ ಭಾಗಾಳುಗಳಿಗೆಲ್ಲ ನೀಡಲಾಯಿತು. ಇದನ್ನು ಅವರು 'ಪೊಟ್ಲ ಅಡುವುದು' ಎಂದು ಹೇಳಿದರು. ಆ ಬಳಿಕ ಚಿಟ್ಟೆಯೊಳಗಿರುವ ಕಲಶಗಳನ್ನೆಲ್ಲ ಕಾಡ್ಯನ ಮನೆಯೊಳಗೆ ಸ್ಥಾನಾಂತರಿಸುವ ಕ್ರಿಯೆ ನಡೆಯಿತು. ಕಾಡ್ಯನಿಗೆ ಪೂಜಾರಿಯಿಂದ ಪೂಜೆ, ಪಾತ್ರಿಯಿಂದ ದರ್ಶನ ಜರಗಿತು. ಆರಾಧನಾವಿಧಿ ಸಾಂಗವಾಗಿ ಜರಗಿತೆಂಬ ಆಶ್ವಾಸನೆ ಪಾತ್ರಿಯಿಂದ ಬಂದಿತು. ಪಾತ್ರಿ ಬೆಣಕಲ್ಲಿಗೆ ತೆಂಗಿನಕಾಯಿ ಒಡೆವ ಮೂಲಕ ಕ್ರಿಯಾವಿಧಿ ಮುಗಿಯಿತೆಂಬುದನ್ನು ಸೂಚಿಸಲಾಯಿತು. ಈ ಮಧ್ಯೆ ಬೈದ್ಯ ತನ್ನ ಹಂದರದೊಳಗೆ ಎರಡು ವಿಕಾರ ಆಕೃತಿಗಳನ್ನು ಬರೆದು ಅದರ ಮೇಲೆ ತೆಂಗಿನಕಾಯಿ ಒಡೆದು ಇರಿಸಿದುದು ಕಂಡು ಬಂದಿತು. ಇದಕ್ಕೆ ಭೂತಬಲಿ ಎಂದು ಹೆಸರು. ಮಧ್ಯರಾತ್ರಿಯ ಹೊತ್ತಿಗೆ ಈ ಆಚರಣೆಯಲ್ಲಿ ಪಾಲ್ಗೊಂಡಿದ್ದ ಎಲ್ಲಾ ಗಂಡಸರು, ಹೆಂಗಸರು, ಮಕ್ಕಳು ಕಾಡ್ಯನ ಮನೆಯ ಪರಿಸರ ಬಿಟ್ಟುನಡೆದರು. ಇದೇಕೆ ಎಂದು ಅನೇಕ ವಕ್ತೃಗಳನ್ನು ಕೇಳಿದಾಗ 'ಕಳೆದ ಮೂರು ದಿನಗಳಲ್ಲಿ ನಾವು ನಡೆಸಿದ ಆಚರಣೆಯನ್ನು ದೇವತೆಗಳು ಮತ್ತೊಮ್ಮೆ ಪುನರಾಚರಿಸುತ್ತಾರೆ. ಅದನ್ನು ಮನುಷ್ಯರಾದ ನಾವು ನೋಡಬಾರದು' ಎಂದರು. ಕುಟುಂಬದ ಎರಡು ಕವಲುಗಳಿಂದ ತಂದ ಗೂಡುಗಳನ್ನು ಮತ್ತೆ ಆಯಾ ಮನೆಗೆ ಹೊತ್ತೊಯ್ದರು. ಬೈದ್ಯರು ಸಂಧಿಸ್ಥಾನದವರೆಗೆ ಹೋಗಿ ಅಲ್ಲಿಂದ ಅವರವರ ಮನೆಗೆ ತೆರಳಿದರು.

ನಾಲ್ಕು ದಿನಗಳ ಬಳಿಕ ಅಂದರೆ ಮುಂದಿನ ಶನಿವಾರ ಕಾಡ್ಯನಾಟದ ಭಾಗಾಳುಗಳೆಲ್ಲ (ಮುಖ್ಯವಾಗಿ ಕುಟುಂಬದವರು) ಮತ್ತೆ ಕಾಡ್ಯನ ಮನೆಗೆ ಬರುತ್ತಾರೆ. ಪಾತ್ರಿಯಿಂದ ದರ್ಶನವಾಗಿ ಬೈದ್ಯನಿಗೆ ಕಂಬ ಕೀಳಲು ಅನುಮತಿ ನೀಡಿದನು. ಬೈದ್ಯ ಕಂಬಕ್ಕೆ ಪೂಜೆಮಾಡಿ ಕಂಬವನ್ನು ತನ್ನ ಬಂಧುಗಳ ನೆರವಿನೊಂದಿಗೆ ಕಿತ್ತು ಸಂಸಾರದ ಎರಡು ಕವಲಿನವರ ಮೂಲಕ ಅದನ್ನು ಹೊರಿಸಿಕೊಂಡು ಸ್ಥಳದ ಯಜಮಾನರ ಮನೆಯ ಹಟ್ಟಿಯ ಅಟ್ಟದ ಮೇಲೆ ಹಾಕಿದರು. ಯಜಮಾನರಿಂದ ಭಾಗಾಳುಗಳಿಗೆಲ್ಲ ಊಟ ಉಪಚಾರ ನಡೆಯಿತು.

## ೪.೧ ಕ್ರೀಡೆ ಮತ್ತು ವಿಧಿಕ್ರಿಯೆ

ಜನಪದ ಕ್ರೀಡೆ ಹಾಗೂ ವಿಧಿಕ್ರಿಯೆ ಪರಸ್ಪರ ಸಂಬಂಧಪಟ್ಟ ಕ್ರಿಯೆಗಳು. ಡಾ.ತೀ.ನಂ ಶಂಕರನಾರಾಯಣರು ಕ್ರೀಡೆಯ ಸ್ವರೂಪ–ಉದ್ದೇಶಗಳನ್ನು ಹೀಗೆ

ಗುರುತಿಸಿದ್ದಾರೆ. 'ಆಟ ಮುಖ್ಯವಾಗಿ ಒಂದು ಸ್ಪರ್ಧೆ. ಇದು ಎರಡು ವ್ಯಕ್ತಿಗಳ ನಡುವೆ ಆಗಬಹುದು ಅಥವಾ ಎರಡು ಗುಂಪುಗಳ ನಡುವೆ ಆಗಬಹುದು. ಇದು ಕೆಲವು ನಿಯಮಗಳಿಗೆ ಬದ್ಧವಾಗಿದ್ದು ಎರಡು ಕಡೆಯವರೂ ಇದನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಸ್ಪರ್ಧೆಯಲ್ಲಿ ಯಾರು ಉತ್ತಮರು ಅಥವಾ ಯಾರು ಅತ್ಯುತ್ತಮರು, ಯಾರು ಗೆಲ್ಲುತ್ತಾರೆ ಅಥವಾ ಸೋಲುತ್ತಾರೆ ಎಂಬುದು ಇಲ್ಲಿ ಮುಖ್ಯ. ಆಟ ಲೌಕಿಕ ಸ್ವರೂಪದ್ದು, ಮನರಂಜನೆಗಾಗಿ ಆಡುವಂತಹದು. ಮನುಷ್ಯನ ಪ್ರಾಣಿ ಪ್ರವೃತ್ತಿಗಳಿಗೆ ನಿರುಪಾಯಕರವಾದ ರೀತಿಯಲ್ಲಿ ಅಭಿವ್ಯಕ್ತಿ ಕೊಡುವುದು, ವ್ಯಕ್ತಿಯ ಅಥವಾ ವ್ಯಕ್ತಿಗಳ ಶಕ್ತಿ ಸಾಮರ್ಥ್ಯಕ್ಕೆ ಉತ್ತೇಜನ ಕೊಡುವುದು, ಪ್ರೇಕ್ಷಕರ ಉತ್ಕಟ ಭಾವನೆಗಳಿಗೆ ಸಂರಕ್ಷಿತವಾದ ರೀತಿಯಲ್ಲಿ ಅಭಿವ್ಯಕ್ತಿ ಕೊಡಲು ಅವಕಾಶ ಮಾಡಿಕೊಡುವುದು. ವ್ಯಕ್ತಿಗಳನ್ನು ಕೆಲವು ನಿಯಮಗಳ ಮೂಲಕ ಸಮಾಜಕ್ಕೆ ಬದ್ಧರನ್ನಾಗಿ ಮಾಡುವುದು ಇದರ ಉದ್ದೇಶ' (ಶಂಕರನಾರಾಯಣ ೧೯೯೦ ಪು.೪೫-೫೨).

ಅದೇ ಲೇಖನದಲ್ಲಿ ಅವರು ಗುರುತಿಸಿರುವಂತೆ 'ಧಾರ್ಮಿಕ ಉದ್ದೇಶಗಳಿಗಾಗಿ ವ್ಯಕ್ತಿಗಳು ಸಮಾಜದಲ್ಲಿ ರೂಪಿಸಿಕೊಂಡು ಪರಂಪರಾನುಗತವಾಗಿ ಅನುಸರಿಸಿಕೊಂಡು ಬಂದಿರುವ ಕ್ರಿಯಾವಿಧಾನ ಮತ್ತು ವಿನ್ಯಾಸವನ್ನು 'ವಿಧಿಕ್ರಿಯೆ' ಎಂದು ಕರೆಯಲಾಗಿದೆ. ವ್ಯಕ್ತಿಯ ವೈಯಕ್ತಿಕ ಅಭ್ಯಾಸವು ವಿಧಿಕ್ರಿಯೆ ಎನಿಸಿಕೊಳ್ಳುವುದಿಲ್ಲ. ಅದು ಸಾಮಾಜಿಕ ಒಪ್ಪಿಗೆ ಪಡೆದದ್ದಾಗಿರಬೇಕು. ಇದು ನಿರ್ದಿಷ್ಟವಾದ ಕಾಲದಲ್ಲಿ ನಿರ್ದಿಷ್ಟವಾದ ಉದ್ದೇಶಕ್ಕೋಸ್ಕರ ಮಾಡುವಂತಹುದು. ಇದನ್ನು ಚೆನ್ನಾಗಿ ತಿಳಿದವರು ಮಾರ್ಗದರ್ಶನ ಮಾಡಿ ಮಾಡಿಸಬೇಕು. ವ್ಯಕ್ತಿಗೆ ಮತ್ತು ಸಮಾಜಕ್ಕೆ ಅತೀತ ಶಕ್ತಿಗಳಿಂದ ತೊಂದರೆಯಾದೀತು ಹಾಗೆ ಆಗದಿರಲಿ ಎಂಬ ಉದ್ದೇಶದಿಂದ ಮಾಡುವಂತಹುದು' (ಅದೇ ಪು.೪೪)

ಪ್ರೊ. ಅಲೆನ್‌ದಂಡಸರು ಪುರಾಣ ಮತ್ತು ಜನಪದ ಕಥೆಗಳು ವಿಧಿಕ್ರಿಯೆಗಳೊಂದಿಗೆ ಹೇಗೆ ಸಂಬಂಧ ಪಡೆದಿದೆಯೋ ಹಾಗೆ ಆಟ ಮತ್ತು ವಿಧಿಕ್ರಿಯೆಗಳ ನಡುವೆ ಸಂರಚನಾತ್ಮಕ ಸಾಮ್ಯಗಳಿವೆ ಎಂಬುದನ್ನು ಗುರುತಿಸಿದ್ದಾರೆ. ಅವರು ಹೇಳಿದ ಮೊಲ ಮತ್ತು ಬೇಟೆ ನಾಯಿಯ ಕತೆಯ ಸಂರಚನಾತ್ಮಕ ಸಾಮ್ಯವನ್ನು ನಾವು ಆಟ ಮತ್ತು ವಿಧಿಕ್ರಿಯೆಗೆ ಅನ್ವಯಿಸಬಹುದಾಗಿದೆ. ಮೇಲೆ ವಿವರಿಸಿದ 'ಹಿಡ್ಗಾಯಿ ಹಾಕುವ' ಕ್ರೀಡೆಯಲ್ಲಿ ತೆಂಗಿನಕಾಯಿಯನ್ನು ಪಡೆವಲ್ಲಿ ಪ್ರತಿಯೊಬ್ಬನೂ ಸ್ಪರ್ಧಿಯಾಗುತ್ತಾನೆ. ಉಳಿದವರೆಲ್ಲರೂ ಪ್ರತಿಸ್ಪರ್ಧಿಗಳಾಗುತ್ತಾರೆ. ದೂರದಲ್ಲಿ ನಿಂತಿರುವ ಪಾತ್ರಿಯನ್ನು ದಾಟಿದನೆಂದರೆ ಮತ್ತೆ ಸ್ಪರ್ಧೆಯಿಲ್ಲ. ಇಬ್ಬರು

ಪಾತ್ರಿಗಳು ನಿಂತಿರುವ ಪ್ರದೇಶವೇ ಸ್ಪರ್ಧಾವಲಯ. ಇಲ್ಲಿ ಪ್ರತಿಯೊಬ್ಬನೂ ತೆಂಗಿನಕಾಯಿಗಾಗಿ ಮೇಲಾಟ ನಡೆಸುವವರೇ. ಕಾಲಿಗೆ ಸಿಕ್ಕಿದವನು ಇನ್ನೊಬ್ಬನು ಅದನ್ನು ಕಸಿದುಕೊಳ್ಳದಂತೆ ಪ್ರಯತ್ನಿಸುತ್ತಿರುತ್ತಾನೆ. ಹೀಗೆ ಒಬ್ಬ ಸ್ಪರ್ಧಿಗೆ ಹಲವರು ಪ್ರತಿಸ್ಪರ್ಧಿಗಳು. ಈ ಪ್ರತಿಸ್ಪರ್ಧಿಗಳೇ ಸ್ಪರ್ಧಿಗಳಾಗಬಹುದು. ಕಾಯಿಯನ್ನು ಉಳಿಸಿಕೊಂಡು ಸ್ಪರ್ಧಾವಲಯವನ್ನು ದಾಟುವಲ್ಲಿ ಅಡ್ಡಿಪಡಿಸುವವರು–ನಿರ್ಬಂಧಕರು ಅಂದರೆ ಇತರರು. (Interdiction) ಪ್ರತಿಸ್ಪರ್ಧಿಗಳಲ್ಲೆ ಒಬ್ಬಾತ ಕಾಯಿಯನ್ನು ಸೆಳೆದುಕೊಂಡರೆ (Violation) ಮೊದಲಿನವನಿಗೆ ಸೋಲು (Consequence) ಇದನ್ನು ತಡೆದು ಪ್ರತಿಯೊಬ್ಬನೂ ಗೆಲ್ಲಲು ಪ್ರಯತ್ನಿಸುತ್ತಿರುತ್ತಾನೆ. ಇದನ್ನು ತಡೆದರೆ ಮೊದಲಿನವನು ಗೆಲ್ಲುತ್ತಾನೆ. ಹೀಗೆ ಇಲ್ಲಿ ಡಂಡೆಸ್ ಹೇಳುವ ಲ್ಯಾಕ್ ಮತ್ತು ಲೆಕ್ವಿಡಿಯೇಟೆಡ್ ಎನ್ನುವ ತತ್ವ ಇರುವುದನ್ನು ಗಮನಿಸಬಹುದು. ಅದನ್ನು ಹೀಗೆ ಅಡಕಗೊಳಿಸಬಹುದು.

| Lack | Interdiction | Violation | Consequence |
|---|---|---|---|
| ಸ್ಪರ್ಧಿ ತೆಂಗಿನಕಾಯಿ | ಪ್ರತಿಸ್ಪರ್ಧಿಗಳ | ಪ್ರತಿಸ್ಪರ್ಧಿಗಳ | |
| ಉಳಿಸಿಕೊಳ್ಳುವಿಕೆ | ಕೈಗೆ ಸಿಗದಂತೆ | ಕೈಗೆ ಸಿಕ್ಕಿದರೆ | ಸೋಲುತ್ತಾರೆ |
| | | (ಸಿಗದಿದ್ದರೆ) | ಗೆಲ್ಲುತ್ತಾರೆ |
| ಪ್ರತಿಸ್ಪರ್ಧಿಗಳು | ತೆಂಗಿನಕಾಯಿ | ಸ್ಪರ್ಧಿಯ ಕೈಗೆ | |
| | ಸೆಳೆದುಕೊಳ್ಳುವಿಕೆ | ಸಿಕ್ಕಿದರೆ | ಸೋಲುತ್ತಾನೆ |
| | ಕೈಗೆ ಸಿಗದಂತೆ | ಸಿಗದಿದ್ದರೆ | ಗೆಲ್ಲುತ್ತಾರೆ |

ಆಟದಲ್ಲಿ (ಕ್ರೀಡೆ) ಹೇಗೆ ನಿಯಮಗಳಿರುತ್ತವೆಯೋ ಹಾಗೆಯೇ ವಿಧಿಕ್ರಿಯೆಯ ಸಂದರ್ಭದ ಕ್ರೀಡೆಗಳಲ್ಲೂ ಖಚಿತ ನಿಯಮಗಳಿರುತ್ತವೆ. ನಿಯಮವನ್ನು ಮುರಿಯದಂತೆ ಪಾತ್ರಿ ನಿಗಾವಹಿಸುತ್ತಿರುತ್ತಾನೆ. ಜೊತೆಗೆ ಪ್ರೇಕ್ಷಕರೂ ನಿರ್ಣಾಯಕ ಪಾತ್ರ ವಹಿಸಬಹುದು. ಆಟದಲ್ಲಿ ಪ್ರೇಕ್ಷಕರಿರುವಂತೆ ವಿಧಿಕ್ರಿಯೆಯ ಸಂದರ್ಭದಲ್ಲೂ ಪ್ರೇಕ್ಷಕರ ಸಮೂಹ ನೆರೆದಿರುತ್ತದೆ. ಅವರ ಪ್ರೋತ್ಸಾಹದ ಮಾತುಗಳು ಕೇಕೆ, ಕೈಚಪ್ಪಾಳೆ, ಆಟದ ಕ್ರಿಯೆಯ ಮೇಲೆ ಪರಿಣಾಮ ಬೀರುತ್ತವೆ. ಹೀಗೆ ಲೌಕಿಕ ಸ್ವರೂಪದ ಕ್ರೀಡೆಗೂ ವಿಧಿರೂಪದ ಕ್ರೀಡೆಗೂ ನೆಂಟನ್ನು ಗುರುತಿಸಬಹುದಾಗಿದೆ.

### ೫.೧ ಕಾಡ್ಯನಾಟದಲ್ಲಿ ಹಗ(ರ)ಣಗಳು

ಕಾಡ್ಯನಾಟದ ವಿಧಿ ಆಚರಣೆಗಳನ್ನು ಎರಡು ವಿಭಾಗ ಮಾಡಬಹುದು. ಒಂದು ಗಂಭೀರ ಸ್ವರೂಪದ ಆಚರಣಾತ್ಮಕ ವಿಧಿಗಳು. ಇವುಗಳನ್ನು ಇಡಿಯ ಆಚರಣೆಯ

'ತಿರುಳು'(ಕೋರ್) ಎನ್ನಬಹುದು. ಇನ್ನೊಂದು ಬಗೆಯವು ವಿಧಿ ಆಚರಣೆಯ ಅವಿಭಾಜ್ಯ ಅಂಗಗಳಾದರೂ ಮನೋರಂಜನೆಯೇ ಪ್ರಧಾನವಾಗಿ ಉಳ್ಳವುಗಳು 'ಸೋಗು' ಎಂದು ಗುರುತಿಸಬಹುದು. ಇವು ವಿದ್ವಾಂಸರು ಗುರುತಿಸಿರುವ ಹಗಣವನ್ನು ಹೋಲುತ್ತಿವೆ. ಇವುಗಳನ್ನು

**ಕಾಡ್ಯನಾಟ**

| ಗಂಭೀರ ಸ್ವರೂಪದ ಆಚರಣೆಗಳು<br>ತಿರುಳು | ಹಗಣದ ಸ್ವರೂಪದವು<br>ಸೋಗು |
|---|---|
| ೧. ಕಾಡ್ಯನ ಪೂಜೆ, ದರ್ಶನ | ೧. ಹಿಡ್ಗಾಯಿ ಆಡುವುದು |
| ೨. ಕಂಬ ಕಡಿವ ಮೂಹೂರ್ತ | ೨. ಅಂಬೋಡಿ ಆಡುವುದು |
| ೩. ಕಂಬ ಸ್ಥಾಪನೆ | ೩. ಬ್ರಾಹ್ಮಣ ಕೋಲ |
| ೪. ಕುಲಾಲರಿಂದ ಕಲಶಪೂಜೆ | ೪. ದಾಸರ ಕೋಲ |
| ೫. ಮೈಲಿಗೆ ತೊಳೆವ ಆಚರಣೆ | ೫. ಕೊರಗರ ಕೋಲ |
| ೬. ಮಂಡಲ ಚಿತ್ತಾರ | ೬. ಹುಲಿಹಂದಿ ಕೋಲ |
| ೭. ಬೈದ್ಯರ ಹಾಡು | ೭. ಜ್ವರನಕೋಲ, ಕೆಮ್ಮನಕೋಲ ಇತ್ಯಾದಿ |
| ೮. ಬೆಳಿನಿರಿ ಕಟ್ಟುವುದು | ೮. ಕುದುರೆ ಕೋಲ |
| ೯. ಜಕ್ಕಿಣಿಯರನ್ನು ಕುಣಿಸುವುದು | |
| ೧೦. ಊರ ಮೇಲೆ ಹೋಗುವುದು | |
| ೧೧. ಗಂಗೆ ಮೀಯುವುದಕ್ಕೆ ಹೋಗುವುದು | |
| ೧೨. ಭೂತಮಂಡಲ ರಚನೆ | |

ಕಾಡ್ಯನಾಟ ಮೂರು ರಾತ್ರಿ. ನಾಲ್ಕು ಹಗಲುಗಳಷ್ಟು ಸುದೀರ್ಘ ಕಾಲ ಜನದೂರವಾದ ಕಾಡಿನ ಪ್ರದೇಶದಲ್ಲಿ ಜರಗುವ ಒಂದು ಆಚರಣೆ. ಈ ಸುದೀರ್ಘ ಕಾಲಾವಧಿಯ ಏಕತಾನತೆ, ಮನೆಮಾರು ಬಿಟ್ಟು ಬಂದುದರಿಂದ ಉಂಟಾದ ಪರಕೀಯತೆ ಎಲ್ಲವನ್ನೂ ಮುರಿದು ಭಾಗಾಳುಗಳಲ್ಲಿ ಒಂದು ಬಗೆಯ ಲವಲವಿಕೆ. ಉಲ್ಲಾಸ ಮೂಡಿಸುವ ಉದ್ದೇಶದಿಂದ ಬ್ರಾಹ್ಮಣ ಕೋಲ, ಕೊರಗರ ಕೋಲ

ಮುಂತಾದ ಹಗಣಗಳನ್ನು ಹೋಲುವ ಆಚರಣೆ ಜರಗುತ್ತಿರಬೇಕು. ಈ ಆಚರಣೆಗಳಿಗೆ ವಕ್ತ್ಯ ನೀಡುವ ನಾಮಾಂಕನ ಕೋಲಬಲಿ. ಇಲ್ಲಿ 'ಕೋಲ' ಎಂಬ ಪದಕ್ಕೆ ತುಳುವ ಸಂಪ್ರದಾಯದಲ್ಲಿರುವುದಕ್ಕಿಂತ ಭಿನ್ನವಾದ ಅರ್ಥವಿದ್ದಂತೆ ಕಾಣುತ್ತದೆ. ಈ ಪದಕ್ಕೆ ಇತರ ದ್ರಾವಿಡ ಭಾಷೆಗಳಲ್ಲಿರುವ ಅರ್ಥವೈವಿಧ್ಯ ಹೀಗಿದೆ : ಡಿ.ಡಿ. ಸಂಖ್ಯೆ. ೧೮೫೫

| | | |
|---|---|---|
| ತಮಿಳು | – | ಸೌಂದರ್ಯ, ರೂಪ, ವೇಷ, ಅಲಂಕಾರ, ಬಣ್ಣ |
| ಕನ್ನಡ | – | ನಟನೆ, ಸೋಗು, ಅಲಂಕಾರ, ವೇಷ ಆಭರಣ. (ಮುಖವಾಡ ಇತ್ಯಾದಿ) |
| ಮಲೆಯಾಳಂ | – | ಆಕಾರ, ವೇಷ (ಮುಖವಾಡ ಇತ್ಯಾದಿ), ಮೂರ್ತಿ, ಸೌಂದರ್ಯ |
| ತುಳು | – | ಭೂತನೃತ್ಯ |
| ತೆಲುಗು | – | ನೃತ್ಯ |

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ ಕೋಲ ಪದಕ್ಕೆ ಸೋಗು, ನಟನೆ, ಅಲಂಕಾರ, ವೇಷ (ಕನ್ನಡ–ಕನ್ನಡ ನಿಘಂಟು ಸಂ.೨ ಪು.೨೨೪೬) ಎಂಬ ಅರ್ಥ ನೀಡಲಾಗಿದೆ. 'ಬಲಿ' ಎನ್ನುವ ಪದಕ್ಕೆ ಇರುವ ಹರಕೆ, ಉತ್ಸವ (ಕಿಟ್ಟೆಲ್ ನಿಘಂಟು ಪು.೧೫೩) ಎನ್ನುವ ಅರ್ಥವನ್ನು ಒಪ್ಪಿಕೊಂಡಲ್ಲಿ ಕೋಲ ಬಲಿ ಎನ್ನುವುದು ಆಶುನಾಟಕರೂಪದ ಸೋಗಿನ ಉತ್ಸವ ಎಂಬುದಕ್ಕೆ ಸರಿಹೋಗುತ್ತದೆ.

ಕಾಡ್ಯನಾಟದಲ್ಲಿ ಕಾಣಿಸುವ ಆಶುಪ್ರಹಸನ ರೂಪದ ಕೋಲ (ವೇಷ)ಗಳು ಡಾ. ಚಿದಾನಂದಮೂರ್ತಿಯುವರು ಈಗಾಗಲೇ ಬೆಳಕಿಗೆ ತಂದಿರುವ ಪ(ಹ)ಗರಣವನ್ನು ಸಮೀಪದಿಂದ ಹೋಲುತ್ತವೆ. (ಚಿದಾನಂದಮೂರ್ತಿ ೧೯೮೪ ಪು೧–೩೪) ಅವರು ಹೇಳುವಂತೆ ಪಗರಣವು ಒಂದು ಗ್ರಾಮೀಣ ಕಲೆಯಾಗಿದ್ದು ಅನಕ್ಷರಸ್ಥರೇ ಪಾತ್ರಧಾರಿಗಳು. ಇದರ ಉದ್ದೇಶ ಮನರಂಜನೆ. ಬದುಕಿನ ವಿವಿಧಸ್ತರಗಳ ಜನಮಂದೆಯನ್ನು ಬಳಸಿಕೊಂಡು ನಡೆಸಿದ ನಾಟಕೀಯ ಆಶುರಚನೆಯಂತಿರುತ್ತವೆ. ಡಾ. ಚಿದಾನಂದಮೂರ್ತಿಯವರು ಹೇಳಿರುವ ಪಗರಣದ ಲಕ್ಷಣಗಳನ್ನು ಹೀಗೆ ಅಡಕಗೊಳಿಸಬಹುದು.

೧. ಪ(ಹ)ಗರಣವು ಮೂಲತಃ ಸಾಮಾನ್ಯ ಜನರು ಅಥವಾ ಅವಿದ್ಯಾವಂತರು ಹಾಕುತ್ತಿದ್ದ ವೇಷಗಳನ್ನು ಸೂಚಿಸುತ್ತದೆ.

೨. ಮನರಂಜನೆ ಹಗರಣದ ಪ್ರಧಾನ ಉದ್ದೇಶ.

೩. ಉತ್ತರಕನ್ನಡ ಜಿಲ್ಲೆ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹಗರಣವು ಧಾರ್ಮಿಕ ಮತಾಚಾರಗಳ ಒಂದು ಭಾಗವಾಗಿ ಜರಗುತ್ತದೆ.

೪. ಹಗರಣದಲ್ಲಿ ಹೆಂಗಸರು ಭಾಗವಹಿಸುವುದಿಲ್ಲ.

ಮೇಲೆ ಹೇಳಿದ ಹಗರಣದ ಲಕ್ಷಣಗಳು ಕಾಡ್ಯನಾಟದ ಆಚರಣೆಗಳಿಗೆ ಸರಿಹೋಗುತ್ತವೆ. ಕೊರಗರ ಕೋಲ, ಬ್ರಾಹ್ಮಣ ಕೋಲ, ದಾಸರ ಕೋಲ, ಹುಲಿಹಂದಿ ಕೋಲ–ಇವುಗಳ ಪ್ರಧಾನ ಉದ್ದೇಶ ಮನರಂಜನೆ. ಈ ವೇಷ ತೊಟ್ಟವರು ಆಡುವ ಮಾತಿಗೆ ವಿಧಿಕ್ರಿಯೆಯ ಚೌಕಟ್ಟಿನೊಳಗೆ ಖಚಿತ ಪಠ್ಯ ಇಲ್ಲದಿರುವುದರಿಂದ ಆಯಾ ಸಂದರ್ಭ, ಸನ್ನಿವೇಶ, ಪ್ರೇಕ್ಷಕವರ್ಗದ ಪ್ರತಿಕ್ರಿಯೆಗೆ ತಕ್ಕಂತೆ ಅದು ರೂಪುಗೊಳ್ಳುತ್ತದೆ. ಆಯಾ ಜಾತಿ, ವೃತ್ತಿಯವರ ಬಗೆಗೆ ಇದ್ದ ಅಸಹನೆ, ಅತೃಪ್ತಿ, ಅಥವಾ ಹತ್ತಿಕ್ಕಿದ ಭಾವಗಳಿಗೆ ಇಲ್ಲಿ ಬಾಯಿ ಸಿಗುತ್ತದೆ. ಈ ಆಚರಣೆಯ ಸಂದರ್ಭದಲ್ಲಿ ಆಡುವ ಮಾತುಗಳಿಗೆ ಯಾರಿಂದಲೂ ಆಕ್ಷೇಪಣೆ ಬರುವುದಿಲ್ಲ. ಹೀಗಾಗಿ ಇಲ್ಲಿನ ಮಾತುಗಳಲ್ಲಿ ಸಾಕಷ್ಟು ಸಾಮಾಜಿಕ ಅರೆಕೊರೆಗಳ ವಿಡಂಬನೆಯನ್ನು ಗುರುತಿಸುದು. ಕಾಡ್ಯನಾಟದಲ್ಲಿ ಕೊರಗರ ವೇಷ ತೊಟ್ಟವರನ್ನು ಇತರರು ಮುಟ್ಟದಿರುವುದು, ಬ್ರಾಹ್ಮಣ ವೇಷಧಾರಿ ಇತರರಿಂದ ಮುಟ್ಟಿಸಿಕೊಳ್ಳದಿರುವುದು ಇಲ್ಲೆಲ್ಲ ಸಾಮಾಜಿಕ ಏಣಿಶ್ರೇಣಿ ವ್ಯವಸ್ಥೆಯ ವಿಡಂಬನೆಯನ್ನೂ ಗುರುತಿಸಬಹುದು.

### ೬.೧ ಕಾಡ್ಯನಾಟದ ಸಾಂಕೇತಿಕತೆ

ಕಾಡ್ಯನಾಟದಲ್ಲಿ ಕಾಡ್ಯ ಕಾಳಿಂಗಸರ್ಪ ರೂಪದಲ್ಲಿ ವ್ಯಕ್ತಗೊಳ್ಳುವ ಅಲೌಕಿಕ ಶಕ್ತಿ ಎಂಬುದು ಆರಾಧನಾ ಪ್ರಕ್ರಿಯೆಯಲ್ಲಿ ವ್ಯಕ್ತಗೊಳ್ಳುವ ಸಾಂಸ್ಕೃತಿಕಾಂಶಗಳಿಂದ ಊಹಿಸಬಹುದು. ಅಂತಹ ಅಲೌಕಿಕ ಶಕ್ತಿಗಳು ಭೌತ ಪ್ರಪಂಚಕ್ಕಿಂತ ಭಿನ್ನವಾದ ಅಲೌಕಿಕ ಜಗತ್ತಿನಲ್ಲಿರುತ್ತವೆ. ಅವುಗಳನ್ನು ಕಂಡು ಭಯಭಕ್ತಿಯಿಂದ ಆರಾಧಿಸುವುದಕ್ಕೆ ಅವರು ನಿರ್ಮಾಣ ಮಾಡಿರುವ ಒಂದು ವಿಶಿಷ್ಟ ಆಚರಣೆ ಕಾಡ್ಯನಾಟ. ಇಂತಹ ಆಚರಣೆಗಳು ಸಾಮಾನ್ಯಕ್ಕಿಂತ ಭಿನ್ನವಾದ ವಿಶಿಷ್ಟವಾದ ಕಾಲದಲ್ಲಿ ಲೌಕಿಕ ಜಗತ್ತಿನಿಂದ ಹೊರಗಿನ ಪರಿಸರದಲ್ಲಿ (ಕಾಡಿನೊಳಗೆ) ಏರ್ಪಡುತ್ತವೆ. ಇದನ್ನು ಮಾನವ ಪ್ರಪಂಚಕ್ಕೆ ವೈದೃಶ್ಯ ಲೋಕವೆಂದೂ, ಮಧ್ಯಂತರ ಜಗತ್ತೆಂದೂ ಗುರುತಿಸಲಾಗಿದೆ. (ಚಿನ್ನಪ್ಪಗೌಡ ೧೯೮೮) ಈ ವಾಸ್ತವಿಕವಲ್ಲದ ಭ್ರಾಮಕ ಪ್ರಪಂಚದಲ್ಲಿ ಮಾನವ ಶ್ರೇಯಸ್ಸು ಹಾಗೂ ಅರ್ಥವಂತಿಕೆಯನ್ನು ಪಡೆಯುತ್ತಾನೆ. ಲೌಕಿಕ ಪ್ರಪಂಚಕ್ಕೆ ವಿರೋಧಿಗಳಾದ ನಾಶ, ಕಾಯಿಲೆ ಮುಂತಾದ ನಿಷೇಧಾತ್ಮಕ

ಅಂಶಗಳನ್ನು ಲೌಕಿಕ ಲೋಕದಿಂದ ಹೊರದಬ್ಬುವ ಪ್ರಯತ್ನ ನಡೆಸುತ್ತಾನೆ. 'ಮಾರಿ ಓಡಿಸುವುದು' ಇಂತಹ ಆಚರಣೆಗಳಲ್ಲಿ ಒಂದು. ವಿಧ್ಯುಕ್ತ ಬೇಟೆ ಇನ್ನೊಂದು. ಹೊರವಲಯದಿಂದ ದುಷ್ಟಶಕ್ತಿಗಳು ಲೌಕಿಕ ಪ್ರಪಂಚಕ್ಕೆ ಧಾಳಿಯಿಟ್ಟಾಗ ಸಮಾಜದ ಸದಸ್ಯರು ಸೇರಿ ಮತಾಚರಣೆ, ಬೇಟೆಯ ವಿಧಿ ನಡೆಸಿ ಆ ಮೂಲಕ ಅವುಗಳನ್ನು ನಾಶಮಾಡಲಾಗುವುದು. ಇಲ್ಲವೇ ಊರಿಂದ ಹೊರದಬ್ಬಲಾಗುವುದು. (ಕ್ಲಾಸ್ ೧೯೮೭ ಪು. ೧೬೫). ಮತಾಚರಣೆಗಳ ಸಂದರ್ಭದಲ್ಲಿ ಈ ಎರಡು ಲೋಕಗಳ ನಡುವೆ ಒಂದು ಬಗೆಯ ಅಂತರ್‌ಅವಲಂಬನ ಏರ್ಪಡುತ್ತದೆ. ಇಂತಹ ತಾತ್ಕಾಲಿಕ ಭ್ರಾಮಕ ಪ್ರಪಂಚದ ಸ್ವರೂಪವನ್ನು ಎಲ್ಲ ಮತಾಚರಣೆಗಳಂತೆ ಕಾಡ್ಯನಾಟದಲ್ಲೂ ಪರಿಕಲ್ಪಿಸಬಹುದಾಗಿದೆ. ಅಲೌಕಿಕ ಶಕ್ತಿಗಳಾದ ಕಾಡ್ಯ, ನಾಗ (ಸ್ವಾಮಿ), ಸೂರ್ಯ, ಚಂದ್ರ, ನಕ್ಷತ್ರ, ಯಕ್ಷಿ ವೃಕ್ಷಾಧಿದೇವತೆ ಮುಂತಾದ 'ಶಕ್ತಿ'ಗಳನ್ನೂ ಮಂಡಲ ಚಿತ್ತಾರದಲ್ಲಿ ರೇಖಿಸಿ ಹಾಡು ಹೇಳಿ ಕರೆದಾಗ ಅವು ಬಂದು ಅಲ್ಲಿ ನೆಲೆಯಾಗುತ್ತವೆ ಎನ್ನುವ ನಂಬಿಕೆ. ಈ ವಿಶಿಷ್ಟ ಶಕ್ತಿಗಳು ಆಚರಣೆಯ ಸಂದರ್ಭದಲ್ಲಿ ದೈವದ ಪಾತ್ರಿಯಲ್ಲಿ ಅಭಿವ್ಯಕ್ತಗೊಳ್ಳುತ್ತವೆ. ಇಲ್ಲಿ ಆತ ಲೌಕಿಕ ಅಲೌಕಿಕ ಜಗತ್ತಿನ ಮಧ್ಯಸ್ಥನಾಗುತ್ತಾನೆ. ಈ ಕ್ರಿಯೆಯನ್ನು ಚಾಲನಗೊಳಿಸುವುದು ಬೈದ್ಯ. (ವೈದ್ಯ). ವೈದ್ಯ ಆದಿಸಮಾಜದ ಮಾಂತ್ರಿಕನೂ ಔಷಧಿ ನೀಡುವವನೂ ಆಗಿದ್ದನು, (ಕಾರಂತ, ೧೯೮೨) ಲೌಕಿಕ ಅಲೌಕಿಕಗಳನ್ನು ಪ್ರೇರಿಸುವ ಬೈದ್ಯ, ಪಾತ್ರಿ ಇವರಿಬ್ಬರ ಸ್ಥಿತಿ ಇತರರಿಂದ ಭಿನ್ನವಾಗಿರಬೇಕು. ಪಾತ್ರಿ, ಬೈದ್ಯರು ಸ್ನಾನ ಮಾಡಿ ವಿಶಿಷ್ಟವಾದ ಕೆಂಪುಬಣ್ಣದ ಬಟ್ಟೆ ಉಟ್ಟಿರಬೇಕು. ಆಭರಣ ಧರಿಸಿರಬೇಕು, ಆಚಾರ ವಿಚಾರಗಳಲ್ಲಿ ವಿಶೇಷ ನಿಯಮಗಳನ್ನು ಪಾಲಿಸಿರಬೇಕು. ಜನಸಾಮಾನ್ಯರ ವಾಸಸ್ಥಾನದಿಂದ ದೂರದ ಕಾಡಿನ ಮಧ್ಯೆ ನಡೆವ ಆಚರಣೆ ಲೌಕಿಕದಿಂದ ಬೇರ್ಪಡಿಸುವುದಕ್ಕೆ ಸಹಕಾರಿಯಾಗುತ್ತದೆ. ಮೈದುಂಬಿದ ಪಾತ್ರಿಯ ನುಡಿತ, ನಡುಕ, ವಿಭಿನ್ನ ಹಾವಭಾವಗಳ ಪ್ರಕಟಣೆ, ವೈದ್ಯನ ವಿಶಿಷ್ಟ ರಾಗವಿನ್ಯಾಸದ ಹಾಡು, ಪಂಚವರ್ಣದ ಮಂಡಲ ಇವು ಕಾಡ್ಯನಾಟಕ್ಕೆ ವಿಶೇಷ ಅಲೌಕಿಕತೆಯನ್ನು ತರುತ್ತವೆ. ಸ್ನಾನ, ಪೂಜೆ, ದರ್ಶನ, ಕಲಶಸ್ಥಾಪನೆ, ಮರನೆಡುವಿಕೆ, ಮಂಡಲ ರಚನೆ, ಹಾಡು, ಕಲಶಗಳೊಂದಿಗೆ ಊರಸಂಚಾರ, ಗಂಗೆ ಮೀವುದಕ್ಕೆ ಹೋಗುವಿಕೆ, ಬಿಳಿನೆರಿ ಕಟ್ಟುವಿಕೆ ಮುಂತಾದ ವಿಧಿ ಆಚರಣೆಗಳು ಕಾಡ್ಯನ ಕುರಿತಾಗಿ ಇರುವ ಪರಿಕಲ್ಪನೆಗೆ ಸಾಂಸ್ಕೃತಿಕ ಸ್ವರೂಪವನ್ನು ತರುತ್ತವೆ. ಹಟ್ಟಿಯ ಜಾನುವಾರುಗಳಿಗೆ, ತೊಟ್ಟಿಲ ಮಕ್ಕಳ ಮೇಲೆ ಅಲೌಕಿಕ ಶಕ್ತಿಗಳ ದಾಳಿ ಏರ್ಪಟ್ಟಾಗ ಹರಕೆಯ ರೂಪದಲ್ಲಿ ವಸ್ತುವಿನ ವಿನಿಮಯ–ಕಾಣಿಕೆ, ಹಾಲು ಹಣ್ಣಿನ ಪೂಜೆ, ತುಲಾಭಾರಗಳ ಮೂಲಕ ಅಲೌಕಿಕ ಶಕ್ತಿಗಳನ್ನು ನಿಯಂತ್ರಿಸಲಾಗುತ್ತದೆ.

## ೭.೧. ಮಂಡಲ ಚಿತ್ತಾರ

ಮಂಡಲ ಎನ್ನುವ ಪದಕ್ಕೆ ನಿಘಂಟುಗಳಲ್ಲಿ ಕೊಟ್ಟಿರುವ ಹಲವಾರು ಅರ್ಥಗಳಲ್ಲಿ ನಮಗೆ ಸಂಗತವಾದ ಅರ್ಥವೆಂದರೆ ವರ್ತುಲಾಕಾರವಾದುದು, ದುಂಡಗಾಗಿರುವುದು.

ಮಹಿಳೆಯರ ದೈನಂದಿನ ಬದುಕಿನಲ್ಲಿ ಗಮನಾರ್ಹವಾದ ರಂಗೋಲಿಯೂ, ಆರಾಧನಾ ವಲಯಗಳಲ್ಲಿ ಬಳಕೆಯಲ್ಲಿರುವ 'ಮಂಡಲ ಯಂತ್ರ'ಗಳೂ ಸ್ವರೂಪ–ಉದ್ದೇಶಗಳಲ್ಲಿ ದಾಯಾದಿಗಳು. ಆದರೆ ಇವು ತಾಂತ್ರಿಕ ಸ್ವರೂಪವನ್ನು ಪಡೆದು ಸಂಕೀರ್ಣವಾದುವು. ಕಾಡ್ಯನಾಟದ ಮಂಡಲವು ಸಂಕೀರ್ಣ ಸ್ವರೂಪದ್ದಾಗಿರದೆ ಮಾನವನು ಆದಿಮ ಸ್ಥಿತಿಯಲ್ಲಿ ತನ್ನ ಬದುಕಿನ ಆಗುಹೋಗುಗಳಲ್ಲಿ ತನ್ನನ್ನು ಪ್ರಭಾವಿಸಿದವುಗಳಿಗೆ ಚಿತ್ರಗಳ ಮೂಲಕ ಅಭಿವ್ಯಕ್ತಿ ನೀಡಿದಂತೆ ಕಾಣುತ್ತದೆ. ಹೀಗೆ ಬರೆದ ಮಂಡಲಗಳಲ್ಲಿ ದೇವತೆಗಳು ಬಂದು ನೆಲಸುತ್ತಾರೆ ಎಂಬ ನಂಬಿಕೆಯಿದೆ. ಅವರ ಆತಿಥ್ಯಕ್ಕಾಗಿ ಬರೆದ ಮಂಡಲದ ಮೇಲೆ ವೀಳೆಯದೆಲೆ, ಅಡಿಕೆಗಳನ್ನು ಇರಿಸುವ ಸಂಪ್ರದಾಯವಿದೆ.

ಕಾಡ್ಯನಾಟದ ಸಂದರ್ಭದಲ್ಲಿ ಹಾಕಲಾದ ಬೈದ್ಯರ ಹಂದರದೊಳಗೆ ಸುಮಾರು ೧೦ ಅಡಿ ವ್ಯಾಸದ ವೃತ್ತಾಕಾರದ ಮಂಡಲವನ್ನು ಪಂಚವರ್ಣದ ಹುಡಿಯಿಂದ ಬರೆಯಲಾಗುತ್ತದೆ. ಈ ಮಂಡಲ ರಚನೆ ಬೈದ್ಯನ ನೇತೃತ್ವದಲ್ಲಿ ಅವನ ಸಹಯೋಗಿಗಳಿಂದ ಒಂದು ಸಾಮೂಹಿಕ ಪ್ರಯತ್ನದ ರೂಪದಲ್ಲಿ ರೂಪುಗೊಳ್ಳುತ್ತದೆ. ಕಾಡ್ಯನಾಟದ ಆಚರಣೆಯ ಎರಡನೆಯ ಹಾಗೂ ಮೂರನೆಯ ರಾತ್ರಿ ಈ ಮಂಡಲವನ್ನು ಬರೆಯುತ್ತಾರೆ. ಮೊದಲದಿನ ಚಿತ್ತಾರಗಳೆಲ್ಲವೂ ಕೇಂದ್ರ ಕಂಬದ ಕಡೆಗೆ ಮುಖ ಮಾಡಿದ್ದರೆ ಎರಡನೆಯ ದಿನ ಎಲ್ಲವೂ ವಿರುದ್ಧ ದಿಕ್ಕಿಗೆ ಅಂದರೆ ಮಂಡಲದ ಪರಿಧಿಗೆ ಅಭಿಮುಖವಾಗಿರುತ್ತವೆ.

ಮಂಡಲ ರಚನೆಯಲ್ಲಿ ಅವರು ಬಳಸುವ ಹಳದಿ, ಕೆಂಪು, ಕಪ್ಪು, ಹಸುರು ಹಾಗೂ ಬಿಳಿ ಬಣ್ಣಗಳ ಹುಡಿಗಳನ್ನು ಹಿಂದೆ ಅವರೇ ತಯಾರಿಸುತ್ತಿದ್ದರಂತೆ. ಆ ಬಣ್ಣಗಳ ಮೂಲಾಂಶಗಳು ಹೀಗಿವೆ.

ಹಳದಿ – ಅರಸಿನ ಬೇರಿನ ಹುಡಿ
ಕೆಂಪು – ಅರಸಿನ + ಸುಣ್ಣದಹುಡಿ
ಕಪ್ಪು – ಬತ್ತದ ಹೊಟ್ಟನ್ನು ಉರಿಸಿ ಕರಿಕುಗೊಳಿಸಿದ ಹುಡಿ
ಹಸುರು – ಜಂಗಮ ಸೊಪ್ಪಿನ ಹುಡಿ
ಬಿಳಿ – ಬೆಳ್ತಿಗೆ ಅಕ್ಕಿಯ ಹುಡಿ / ಜೇಡಿಮಣ್ಣಿನ ಹುಡಿ

ಈಗ ಕೈಗಾರಿಕೋತ್ಪನ್ನದ ಮೂಲಕ ಬಂದಿರುವ ಹುಡಿಗಳನ್ನು ಅಂಗಡಿಯಿಂದಲೇ ತುಂದು ಬಳಸುತ್ತಾರೆ.

ಮಂಡಲದ ಸಂದರ್ಭದ ಜನಪದ ಕುಣಿತದ ಸಾಂಕೇತಿಕತೆಯನ್ನು ವಿವರಿಸುತ್ತಾ ಡಾ.ಚಂದ್ರಶೇಖರ ಕಂಬಾರರು ಹೀಗೆ ಹೇಳುತ್ತಾರೆ.

'ನಾನು ಈ ತನಕ ಗಮನಿಸಿದ ಆರಾಧನಾ ಕುಣಿತಗಳೆಲ್ಲ ಮಂಡಲಾಕಾರದಲ್ಲಿ ಇದ್ದವು ಮತ್ತು ನಾನು ತಿಳಿದ ಅನೇಕ ಜನಪದ ಆಚರಣಾ ಕುಣಿತಗಳು ಮಂಡಲದ ಪೂಜೆಯೇ ಆಗಿವೆ. ಬಹುಶಃ ಆದಿಮಾನವ ತನ್ನ ಸುತ್ತಲಿನ ಜಗತ್ತು–ಜೀವನಗಳನ್ನು ಮಂಡಲಾಕಾರದಲ್ಲಿ ಗ್ರಹಿಸಿದ್ದನೆಂದು ತೋರುತ್ತದೆ. ಸೂರ್ಯ ಹುಟ್ಟಿದಲ್ಲಿಯೇ ಹುಟ್ಟುವುದು, ಋತುಮಾನ ರಿಪೀಟಾಗುವುದು. ಮನುಷ್ಯನ ಹುಟ್ಟುಸಾವು–ಇವೆಲ್ಲ ಅವನಿಗೆ ಮಂಡಲದ ಕಲ್ಪನೆಯನ್ನು ಪ್ರಚೋದಿಸಿರಬೇಕು. ತೀರ ಆದಿಮಕಾಲದ ಸಮೃದ್ಧಿಯ ಕುಣಿತಗಳು ಮಂಡಲಾಕಾರದಲ್ಲೇ ಇವೆ.' (ಕಂಬಾರ ೧೯೮೨ ಪು.೪) ನನಗೆ ತಿಳಿದಿರುವಂತೆ ನಾಗಮಂಡಲದ ಮಂಡಲದ ಕುಣಿತ, ಜೋಗತಿಯ ಕುಣಿತ ಎಲ್ಲವೂ ವೃತ್ತಾಕಾರದಲ್ಲೇ ಇವೆ. ಕಾಡ್ಯನಾಟದ ಮಂಡಲ ರಚನೆ, ಈ ಆಚರಣೆಯ ಸಂದರ್ಭದಲ್ಲಿ ಕಲಶಗಳನ್ನು ಸ್ಥಾಪನೆ ಮಾಡುವ ಚಿಟ್ಟೆ (ವೇದಿಕೆ)ಯ ಆಕಾರ ಎಲ್ಲವೂ ವೃತ್ತಾಕಾರದಲ್ಲೇ ಇರುವುದನ್ನು ಗಮನಿಸಬೇಕು. ಕಾಡ್ಯನಾಟದ ಮಂಡಲದೊಳಗೆ ಅವರು ತಮ್ಮ ಬದುಕನ್ನು ಪ್ರಭಾವಿಸಿದ ಸೂರ್ಯ, ಚಂದ್ರ, ನಕ್ಷತ್ರ, ಕಮಲದ ಹೂ ಹೊನ್ನರಳಿಮರ, ಕಾಗೆ, ಗೋವಕ್ಕಿ (ಗುಬ್ಬಚ್ಚಿ), ನವಿಲು, ಒನಕೆ, ಒರಳು, ಗೆರಸೆ, ಚೆನ್ನೆಮಣೆ, ದೋಣಿ, ನಾಗ, ಕಾಡ್ಯ, ಡೋಲು ಇತ್ಯಾದಿಗಳ ಚಿತ್ರ ಬರೆಯುತ್ತಾರೆ. ಮೇಲೆ ಹೇಳಿದ ಒಂದೊಂದು ವಸ್ತುವೂ ಆಚರಣೆಯ ಸಂದರ್ಭದಲ್ಲಿ ಹಾಡುವ ಹಾಡುಗಳಲ್ಲಿ ಪ್ರಸ್ತಾಪಿತವಾಗುತ್ತವೆ. ಈ ಮಂಡಲ ವಿಶ್ವದ ಸಂಕೇತವಾಗಿರಬೇಕು.

ಮಂಡಲವೆಲ್ಲ ಬರೆದಾದ ಬಳಿಕ ಅದರ ಕೇಂದ್ರದಲ್ಲಿರುವ ಮೂಹೂರ್ತ ಕಂಬಕ್ಕೆ ತಾಗಿ ಕಲಶವನ್ನು ಇರಿಸಲಾಗುತ್ತದೆ. ಉಳಿದ ನಾಲ್ಕನ್ನು ಮಂಡಲ ಚಿತ್ತಾರದೊಳಗೆ ಬೈದ್ಯನು ಸ್ಥಾಪಿಸುತ್ತಾನೆ. ಇಲ್ಲಿ ಕಂಬ ಪುರುಷ ಶಕ್ತಿಯ ಸಂಕೇತವಾದರೆ, ನೀರು ತುಂಬಿದ, ಹಸುರುಎಲೆ ಮುಚ್ಚಿದ ಸರ್ಪನ ಉಬ್ಬುಶಿಲ್ಪವುಳ್ಳ ಕಲಶ ಸ್ತ್ರೀ ಶಕ್ತಿಯ ಅಂದರೆ ಗರ್ಭದ ಸಂಕೇತವಾಗುತ್ತದೆ. ಮಂಡಲದೊಳಗೆ ತಾವರೆ ಹೂವಿನ ಚಿತ್ರ ಬರೆಯುವುದು ಗಮನಾರ್ಹ ಸಂಕೇತ. ಇಲ್ಲೆಲ್ಲ ಸಂತಾನ ಸಮೃದ್ಧಿಯ ಬಯಕೆ ವ್ಯಕ್ತಗೊಳ್ಳುತ್ತದೆ. ಮಾನವನ ಸಂತಾನ ಸಮೃದ್ಧಿಯ ಅನುಕರಣೆಯ ಮೂಲಕ ಪ್ರಕೃತಿಯ ಸಸ್ಯಾಳಿಯ ಸಮೃದ್ಧಿಯನ್ನು ಸೂಚಿಸಲಾಗುತ್ತದೆ. ಮಂಡಲದ ನಡೆವೆ ಕಲಶ ಹೊತ್ತ ಹೆಣ್ಣೊಬ್ಬಳನ್ನು ನಿಲ್ಲಿಸಿ ಆ ಕಲಶದ ಮೇಲೆ

ಬೈದ್ಯನು ಅಕ್ಕಿಕಾಳನ್ನು ಎರಚುವುದು ಫಲಸಮೃದ್ಧಿಯನ್ನು ಸೂಚಿಸುತ್ತದೆ. ಮಂಡಲದಲ್ಲಿ ಪ್ರಕೃತಿ ದೇವತೆಗಳ ಜೊತೆಗೆ ಕೃಷಿ ಸಂಬಂಧಿ ವಸ್ತುಗಳ ಚಿತ್ರವನ್ನು ಬಿಡಿಸುವುದುನ್ನು ಕಂಡರೆ ಪ್ರಕೃತಿಯನ್ನು ಮಾನವ ತನ್ನ ಅಂಕೆಗೆ ಒಳಪಡಿಸಿದುದನ್ನು ಸಂಕೇತಿಸಿದಂತೆ ಕಾಣುತ್ತದೆ.

## ೮.೧ ಕಾರ್ಯ (Function)

ಕಾರ್ಯವನ್ನು ಜಾನಪದ ವಿದ್ವಾಂಸರು ಹೀಗೆ ವಿವರಿಸಿದ್ದಾರೆ. 'ಅನೇಕ ಸಂದರ್ಭಗಳ ಆಧಾರದ ಮೇಲೆ ಒಂದು ಸಾಮಗ್ರಿಯ ಬಗ್ಗೆ ತಾಳುವ ಅಮೂರ್ತಭಾವನೆಯೇ ಕಾರ್ಯ. ಸಾಮಾನ್ಯವಾಗಿ 'ಕಾರ್ಯ'ವು ಜಾನಪದ ಪ್ರಕಾರವೊಂದರ ಉಪಯೋಗವಾಗಿರುತ್ತದೆ. ಅಥವಾ ಅದರ ಉದ್ದೇಶದ ಬಗ್ಗೆ ವಿಶ್ಲೇಷಕನೊಬ್ಬನು ಏನು ಯೋಚಿಸುತ್ತಾನೋ ಅಂತಹ ಆಲೋಚನೆಯ ಬಗೆಗಿನ ಆತನ ಹೇಳಿಕೆಯಾಗಿರುತ್ತದೆ'. (ರೈ ೧೯೮೫ ಪು ೮೪) ಸಮಾಜಶಾಸ್ತ್ರಜ್ಞರ ಪ್ರಕಾರ 'ಸಾಮಾಜಿಕ ಸಂಸ್ಥೆಯ ಕಾರ್ಯವು ಸಂಸ್ಥೆಗೂ ಮತ್ತು ಸಾಮಾಜಿಕ ಜೀವಿಯ ಅಗತ್ಯಗಳಿಗೂ ನಡುವಿನ ಅನುರೂಪತೆ ಅಥವಾ ಹೊಂದಿಕೆಯೂ ಆಗಿದೆ'. (Durkheem ಕನ್ನಡ ಶಂಕರರಾವ್ ೧೯೮೮ ಪು ೧೬೨) ಕಾಡ್ಯನಾಟದಂತಹ ಆಚರಣೆಗಳು ಅವು ತಮ್ಮ ಸ್ವೀಕೃತ ಕಾರ್ಯಗಳ ಜೊತೆಗೆ ಬೇರೆ ಪರಿಣಾಮಗಳಿಗೂ ಕಾರಣವಾಗುವುದುಂಟು. ಇವುಗಳನ್ನು ಅಪ್ರಕಟಿತ ಕಾರ್ಯ ಎಂದು ಗುರುತಿಸಬಹುದು.

ಕಾಡ್ಯನಾಟ ಜಾತಿಯ ಬಂಧುಬಾಂಧವರನ್ನೆಲ್ಲ ಒಂದೆಡೆ ಕಲೆಯುವಂತೆ ಮಾಡುವ ಒಂದು ಸಾಮೂಹಿಕ ಹಬ್ಬ. ಬಂದಂತಹ ಕುಟುಂಬದ ಹಾಗೂ ನೆಂಟ ಸದಸ್ಯರೆಲ್ಲರೂ ಒಂದಲ್ಲ ಒಂದು ಬಗೆಯಲ್ಲಿ ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆಯೇ ಹೊರತು ವೀಕ್ಷಕರಾಗಿ ಉಳಿಯುವುದಿಲ್ಲ. ಕಾಡ್ಯನಾಟಕ್ಕೆ ದಿನ ನಿಶ್ಚಯವಾದ ಬಳಿಕ ಯಾರೂ ಊರು ಬಿಟ್ಟು ಹೋಗುವುದಿಲ್ಲ. ಹಾಲು ಕುಡಿವ ಹಸುಗೂಸುಗಳಿಂದ ಹಿಡಿದು ಪ್ರತಿಯೊಬ್ಬರೂ ಆಚರಣೆಯ ಕಾಲದುದ್ದಕ್ಕೂ ಕಾಡ್ಯನ ಮನೆಯ ಪರಿಸರದಲ್ಲೇ ವಾಸಮಾಡುತ್ತಾರೆ. ಈ ಬಗೆಯ ಸಾಮೂಹಿಕ ಪಾಲ್ಗೊಳ್ಳುವಿಕೆ ಭಿನ್ನಾಭಿಪ್ರಾಯವಿದ್ದಲ್ಲಿ ಅದನ್ನು ಮರೆಯಿಸಿ ಒಂದು ಸಾಂಘಿಕ ಏಕತೆಯನ್ನು ತರುತ್ತದೆ. ಸಾಮಾಜಿಕ, ಆರ್ಥಿಕ ಕ್ಷೇತ್ರದಲ್ಲಿ ತಮಗಿರುವ ಸ್ಥಾನಮಾನ ಗೌರವಗಳನ್ನೆಲ್ಲ ಬದಿಗೊತ್ತಿ ಇಲ್ಲಿ ಬರಿಯ ವೀಕ್ಷಕರಾಗಿ ಉಳಿಯದೆ ಭಾಗಾಳುವಾಗಿ ತಮ್ಮ ಪಾತ್ರದ ಕೆಲಸವನ್ನು ನಿರ್ವಹಿಸುತ್ತಾರೆ.

ಸಂತಾನ ಭಾಗ್ಯ ಹಾಗೂ ಕುಟುಂಬದ ಸುಖಸಮೃದ್ಧಿ ಕಾಡ್ಯನಾಟದ ಉದ್ದೇಶ (purpose) ಎಂದು ಅವರು ಹೇಳುತ್ತಿದ್ದರು. ವಾಸ್ತವಿಕವಾಗಿ ಆಚರಣೆಯಲ್ಲಿ

ನೇರವಾಗಿ ಪಾಲ್ಗೊಳ್ಳುವ ಮೂಲಕ ಅವರಲ್ಲಿ ಸಮೂಹಪ್ರಜ್ಞೆ ಎಚೆತ್ತುಕೊಳ್ಳುತ್ತದೆ. ಪ್ರತಿಯೊಬ್ಬನೂ ಸಮಾಜದೊಳಗೆ ತನ್ನ ಸ್ಥಾನ ಹಾಗೂ ಕರ್ತವ್ಯವನ್ನು ಗುರುತಿಸಿಕೊಳ್ಳುತ್ತಾನೆ. ನಮ್ಮ ವಕ್ತೃಗಳು ಹೇಳುವಂತೆ ಹಿಂದೆ ಈ ಕಾಡ್ಯನಾಟದಲ್ಲಿ ಕಲಶ ಮಾಡಿಕೊಡುವ ಕುಂಬಾರ ಹಾಗೂ ನೇರವಾಗಿ ಪಾಲ್ಗೊಳ್ಳದಿದ್ದರೂ ಎಲ್ಲವನ್ನೂ ತನ್ನ ಸಾಮಾಜಿಕ ಗೌರವ ಹಾಗೂ ಆರ್ಥಿಕಬಲದಿಂದಾಗಿ ನಿಯಂತ್ರಿಸುವ ಸ್ಥಳದ ಯಜಮಾನರನ್ನು ಬಿಟ್ಟು ಇತರರು ಯಾರೂ ಈ ಆಚರಣೆಯಲ್ಲಿ ಪಾಲ್ಗೊಳ್ಳುತ್ತಿದ್ದಿಲ್ಲವಂತೆ. ಆದರೆ ಇತ್ತೀಚಿನ ಬೆಳವಣಿಗೆಯೆಂದರೆ ಹರಕೆಕೊಡುವುದಕ್ಕೆ ಹಾಗೂ ಪ್ರೇಕ್ಷಕರಾಗಿ ಇತರ ಜಾತಿಯವರು ಬರುತ್ತಿರುವುದು ಮೇರರಲ್ಲಿ ಲವಲವಿಕೆಯನ್ನು ತಂದಿದೆ. ಇದು ತಮ್ಮ ಜಾತಿಯವರಿಗೆ ಮಾತ್ರ ಮೀಸಲಾದ ಹಬ್ಬ ಅಲ್ಲದೆ ಹೋಗುತ್ತಿರುವುದು ಅವರಲ್ಲಿ ಸ್ವಾಭಿಮಾನ ಮೂಡಿಸಿದೆ.

ಕಾಡ್ಯನ ಆರಾಧನೆಯ ಮೂಲಕ ತಮ್ಮ ಕುಲದ ಮೂಲಸ್ತ್ರೀ ಹೊನ್ನಿಯ ಹಿರಿಮೆಯನ್ನು ಸ್ಥಾಪಿಸಲು ಅವರಿಗೆ ಅನುಕೂಲವಾಗುತ್ತದೆ. ತಾವಿಂದು ನಡೆಸುತ್ತಿರುವ ಕಾಡ್ಯನಾಟದ ಆಚರಣೆಯೊಂದಕ್ಕೆ ಸಮರ್ಥನೆಯ ಪೂರ್ವನಿದರ್ಶನವೊಂದನ್ನು ಒದಗಿಸುವುದು ಕಾಡ್ಯನಾಟದ ಹಾಡುಗಳ ಕಾರ್ಯವಾಗಿದೆ. ಹೀಗಾಗಿ ಬೈದ್ಯರು ತಮ್ಮ 'ಹಂದರ' ದೊಳಗೆ ಕುಳಿತು ಹಾಡುವ ಹಾಡುಗಳನ್ನು ಅನೇಕರು ಶ್ರದ್ಧಾಭಕ್ತಿಗಳಿಂದ ನಿಂತು ಕೇಳುವುದನ್ನು ನಾವು ಗಮನಿಸಿದ್ದೇವೆ.

ಕಾಡ್ಯನಾಟ ಈ ಹಿಂದೆ ಹೇಳಿದಂತೆ ಮೂರು ರಾತ್ರಿಗಳ ನಾಲ್ಕು ಹಗಲುಗಳ ಸುದೀರ್ಘ ಆಚರಣೆ. ಜನ ತಮ್ಮ ಮನೆಮಾರು ಬಿಟ್ಟು ಈ ಕಾಡಿನ ನಡುವೆ ವಾಸಮಾಡುತ್ತಿರುವಾಗ ಸಹಜವಾಗಿ ಅವರನ್ನು ಒಂಟಿತನದ ಬೇಸರ ಕಾಡಿದರೆ ಆಶ್ಚರ್ಯವಿಲ್ಲ. ಕಾಡ್ಯನಾಟದಲ್ಲಿ ನಡೆದ ಹಗಣಗಳನ್ನು ಹೋಲುವ ಆಚರಣೆಗಳು ಮನರಂಜನೆಯ ಉದ್ದೇಶ (ವಕ್ತೃಗಳು ಹೇಳುವ)ವನ್ನು ಹೊಂದಿದ್ದರೂ ಅಲ್ಲೆಲ್ಲ ಪ್ರತಿಭಟನೆಯ ಒಳ ದನಿಗಳು ಸ್ಪಷ್ಟವಾಗಿ ಕೇಳುತ್ತವೆ. ಇಲ್ಲೆಲ್ಲ ಆರಾಧನಾ ದೃಷ್ಟಿ ಪ್ರಧಾನವಾಗಿದ್ದರೂ ವಿವಿಧ ಆಚರಣೆಗಳು ಅವರಲ್ಲಿ ಸಂಸ್ಕೃತಿಪ್ರಿಯತೆಯನ್ನು ಮೂಡಿಸಿ ಅವುಗಳನ್ನು ಮುಂದುವರಿಸಿಕೊಂಡು ಬರಲು ಸಹಕಾರಿಯಾದಂತೆ ಕಾಣುತ್ತದೆ.)

**೮.೯.೧ ಪಠ್ಯ**

ಕಾಡ್ಯನಾಟದ ಬೃಹತ್ ಪಠ್ಯ (Larger Text) ವನ್ನು ಅರ್ಥಮಾಡಿಕೊಳ್ಳುವ ಹಿನ್ನೆಲೆಯಲ್ಲಿ ಆಚರಣೆಯುದ್ದಕ್ಕೂ ಬೈದ್ಯರು ಬಳಗ ಹಾಡುವ ಹಾಡುಗಳ

ಕಥಾಸಾರವನ್ನು ತಿಳಿದುಕೊಳ್ಳುವುದು ಅನುಕೂಲವಾಗಬಹುದು. ಇಲ್ಲಿನ ಹಾಡುಗಳಲ್ಲಿ ಕೆಲವು ಆಚರಣೆಗೆ ಸನ್ನದಿನಂತಿದ್ದರೆ ಇನ್ನು ಕೆಲವು ಆಚರಣೆಗೆ ನೇರ ಸಂಬಂಧಪಟ್ಟಂತೆ ಕಾಣುವುದಿಲ್ಲ.

### ೯.೧.೧. ಗುರುಶಾಸ್ತ್ರ

ಕಾಡ್ಯನಾಟದ ಸಂದರ್ಭದಲ್ಲಿ 'ಆಟ' ಆಡಿಸುವವರಿಂದ ಡೋಲು ಪಡೆದು ಬೈದ್ಯರ ಬಳಗ ಹಂದರದೊಳಗೆ ಹಾಡುವ ಮೊತ್ತ ಮೊದಲ ಹಾಡು ಗುರುಶಾಸ್ತ್ರ. ಈ ಹಾಡು ಹೇಳದೆ ಬೇರೆ ಯಾವ ಹಾಡನ್ನೂ ಹೇಳುವಂತಿಲ್ಲ. ಇದು ಪ್ರಾರ್ಥಾನಾ ರೂಪದ ಹಾಡು.

ಈ ಹಾಡಿನಲ್ಲಿ ಕಾಡ್ಯ ಅಥವಾ ಇನ್ನಾವ ದೈವ ದೇವರ ಹೊಗಳಿಕೆ ಇಲ್ಲ. 'ಈ ಭೂಮಂಡಲದ ಮೇಲಿನ ಜನರ ಬಾಳು ಹಸನಾಗಲಿ, ಸುತ್ತಿನ ಮೇಲೇಳಿ, ಕೇಳೇಳಿ, ಜಂಬೇಳಿ, ಹುಂಬೇಳಿ ಲೋಕದ ಮಂದಿಯ ಬಾಳಿನಲ್ಲಿ ಹೊನ್ನಕಲಶ (ಸಮೃದ್ಧಿ) ಮೂಡಿ ಬರಲಿ. ಬದುಕಿನ ರಾಜಾಂಗ್ಲದಲ್ಲಿ ಕಲಿ ಹಾಗೂ ಸಿರಿ ಎರಡೂ ಬಂದು ನಿಲ್ಲಲ್ಲಿ' ಎನ್ನುವಲ್ಲಿ ಬದುಕಿನ ವಾಸ್ತವಿಕತೆಯನ್ನು ಅವರು ಸ್ವೀಕರಿಸಿದಂತೆ ಕಾಣುತ್ತದೆ.

ಬೈದ್ಯ ತನ್ನಲ್ಲಿ ಈ 'ಆಟ'ದ ಹಾಡುಗಳು ಅಂತಸ್ಥಗೊಳ್ಳಲು ಕಾರಣವಾದ ಗುರುಪರಂಪರೆಯನ್ನು ಒಂದೊಂದಾಗಿ ನೆನಪಿಸಿಕೊಂಡು ವಂದಿಸುತ್ತಾನೆ. ತಂದೆ, ಮಾವ, ಅಜ್ಜ, ಪಿಜ್ಜರೆಂದು ಹಿರಿಯ ತಲೆಮಾರಿನ ಬಂಧುಕುಲವನ್ನು ಒಂದೊಂದಾಗಿ ನೆನೆದುಕೊಳ್ಳುತ್ತಾನೆ. ಆ ಬಳಿಕ ಸೋಮಬೈದ್ಯ, ಚೆನಿಯಬೈದ್ಯ, ಹೊನ್ನಿ ಬೈದ್ಯ, ಪನ್ನೀಲ ಬೈದ್ಯರೆಂದು ಒಬ್ಬೊಬ್ಬರ ಹೆಸರು ಹೇಳಿ ಶರಣು ಹೇಳುತ್ತಾನೆ. ಹೀಗೆ ಮಾನವ ಪರಂಪರೆಯಿಂದ ತೊಡಗಿ ಮುಂದೆ ಮಾನವೇತರ ಪರಂಪರೆಯನ್ನು ನೆನೆದುಕೊಳ್ಳುವ ಮೂಲಕ ಒಂದು ಸಾಂಸ್ಕೃತಿಕ ಪರಂಪರೆ ಉಳಿದುಬರುವಲ್ಲಿ ಪ್ರಕೃತಿಯ ಶಕ್ತಿಗಳೂ ನೆರವಾಗುತ್ತವೆ. ಎನ್ನುವುದನ್ನು ಸೂಚಿಸಿದಂತೆ ಕಾಣುತ್ತದೆ. ಪನ್ನೀಲಬೈದ್ಯರು ಭೂಮಿ ದೇವತೆಯಿಂದ, ಭೂಮಿದೇವತೆ ಬದುಕಿಗೆ ಜೀವಶಕ್ತಿಯನ್ನು ಒದಗಿಸುವ ಬತ್ತದ ಬೀಜದಿಂದ (ಶಂಕರಗಂಡ), ಅದು ಪಂಜರದ ಗಿಳಿರಾಮನಿಂದ, ಗಿಳಿರಾಮನು ನಾರಾಯಣ ಸ್ವಾಮಿಯಿಂದ ಹಾಡುಗಳನ್ನು ಕಲಿತುದಾಗಿ ಹೇಳುತ್ತಾನೆ. ನಾರಾಯಣ ಸ್ವಾಮಿಗೆ ಕಲಿಸಿದವರು ಯಾರೂ ಇಲ್ಲ. ಅವರಾದರೆ ತಾವಾಗಿಯೇ ಕಲಿತರು. ತಾವಾಗಿಯೇ ಮರೆತರು.

ಬೈದ್ಯರ ಹಂದರದೊಳಗೆ ಬೈದ್ಯರ ಕುಟುಂಬದವರಿಗೆ ಮಾತ್ರ ಪ್ರವೇಶ. ಬೈದ್ಯ ಹಾಡುತ್ತಿರುವಾಗ ಅವನ ಬಂಧುಬಾಂಧವರು ಅಕ್ಕಪಕ್ಕದಲ್ಲಿ ಕುಳಿತಿರುತ್ತಾರೆ.

ಒಬ್ಬಬ್ಬರು ಮುಖ್ಯ ಗಾಯಕ (ಬೈದ್ಯ)ನೊಂದಿಗೆ ಪುನರಾವೃತ್ತಿಯ ಮೂಲಕ ದನಿ ಸೇರಿಸುತ್ತಾರೆ. ಬೈದ್ಯ 'ಶಿಶುಮಗು'ವಾದ ತಾನು ಬಂಧುಬಾಂಧವರ ನಡುವೆ ಕುಳಿತು ಹಾಡು ಹೇಳುವುದಾಗಿ ಇಲ್ಲಿ ಹೇಳುತ್ತಾನೆ. 'ಹಾಸಿ ತೊಡಿಯನು ಕೊಡುವ ತಂದೆಯ ಗುರುಗಳಿಗೆ, ಬೀಸಿ ಮಲಿಯನು ಕೊಡುವ ತಾಯಿಯ ಗುರುಗಳಿಗೆ ಶರಣೆಂದು' ಅವರ ಪಾದ ತೊಳೆದು ಪನ್ನೀರು ಕುಡಿಯುವುದಾಗಿ ದೈನ್ಯದಿಂದ ನಿವೇದಿಸಿಕೊಳ್ಳುತ್ತಾನೆ.

ಕಾಡ್ಯನಾಟದಲ್ಲಿ 'ಬೈದ್ಯ'ನಾಗುವವನಿಗೆ ಅವನ ತಂದೆ ಅಥವಾ ಮಾವನಿಂದ 'ಗುರುಮುದ್ರೆ'ಯೆಂಬ ದೀಕ್ಷೆ ಆಗಬೇಕು. ಗುರುಮುದ್ರೆಯನ್ನು ಕಾಡ್ಯನಾಟದ ಮೊದಲಲ್ಲಿ ಮಾತ್ರ ನೀಡುವುದು ರೂಢಿ. ಆಟದ ಆಚರಣೆಯ ವಿಧಿವಿಧಾನಗಳನ್ನು ಹಾಡುಗಳನ್ನು ಆತ ಖಚಿತವಾಗಿ ತಿಳಿದುಕೊಂಡಿದ್ದಾನೆಂದಾದ ಬಳಿಕವೇ ಹಿರಿಯರು ಈ ದೀಕ್ಷಾವಿಧಿಯನ್ನು ನೆರವೇರಿಸುತ್ತಾರೆ. ಕಾಡ್ಯನಾಟದ ಮೊದಲದಿನ 'ಗುರುಮುದ್ರೆ' ಪಡೆಯುವವನು ದೀಕ್ಷೆ ನೀಡುವವನಿಂದ ತೆಂಗಿನಕಾಯಿಯನ್ನು ರುಬ್ಬಿ ತೆಗೆದ ಹಾಲನ್ನು ಪಡೆದು ಅದನ್ನು ತಲೆಗೆ ಮೈಗೆ ಹಚ್ಚಿ ಸ್ನಾನಮಾಡಿಕೊಂಡು ಬರಬೇಕು. ದೀಕ್ಷೆ ನೀಡುವವನು ಹಾಗೂ ಪಡೆಯುವವನು ಇಬ್ಬರೂ ಹಂದರದೊಳಗೆ ಅಕ್ಕಪಕ್ಕದಲ್ಲಿ ಕುಳಿತುಕೊಳ್ಳುತ್ತಾರೆ. ನೆರೆದ ಪ್ರೇಕ್ಷಕರೆದುರು ಗುರುಮುದ್ರೆ ಪಡೆವವನು ಒಬ್ಬನೇ ಏರು ದನಿಯಲ್ಲಿ ಗುರುಶಾಸ್ತ್ರವನ್ನು ಹಾಡಬೇಕು. ಇದು ಒಂದು ಬಗೆಯ ಸಾರ್ವಜನಿಕ ದಿವ್ಯ (pubilc ordeal) ಕೊನೆಯಲ್ಲಿ ದೀಕ್ಷಾಗುರುವಿನ ಪಕ್ಕದಲ್ಲಿ ಕುಳಿತ ನೂತನ ಬೈದ್ಯನಿಗೆ ತನ್ನ ಕೊರಳ ಸರವನ್ನು ತೆಗೆದುಹಾಕುತ್ತಾನೆ. ತಲೆಮೇಲೆ ಕೈಯಿರಿಸಿ ಆಶೀರ್ವದಿಸುತ್ತಾನೆ. ಅಂದಿನಿಂದ ಆತ ಬೈದ್ಯನಾಗಿ ಸ್ವತಂತ್ರನಾಗಿ ವಿಧಿ ಆಚರಣೆಗಳನ್ನು ನಡೆಸಬಹುದು.

### ೯.೧.೨ ಕಾಡ್ಯನ ಹುಟ್ಟು

ಕಾಡಿನ ಬೇಡರ ಹೆಣ್ಣು ಮೇರರ ಹೊನ್ನಿ. ಒಂದು ಸೋಮವಾರ ಹೊನ್ನಿ ಹೆಣ್ಣು ಹೋಗಿ ಹೆಂಗಸಾದಳು. ಬೆಳೆದ ಹೆಣ್ಣು ಹೊನ್ನಿಗೆ ಗಾಳಿದೇವರ ಸಂಗವಾಯಿತು. ಆ ನೀರು ನಿಂತು ಹೊನ್ನಿ ಬಸುರಿಯಾದಳು. ಒಂದೇ ಬಸುರಿಗೆ ಏಳು ಮಂದಿ ಮಕ್ಕಳನ್ನು ಹಡೆದಳು.

ಈ ಹೊತ್ತಿಗೆ ಬರಗಾಲ ಬಂತು. ಉಣ್ಣಲು ಅನ್ನ, ಉಡಲು ವಸ್ತ್ರಕ್ಕೂ ಕಷ್ಟವಾಯಿತು. ದಿಕ್ಕುಕಾಣದೆ ಹೊನ್ನಿ ಒಡೆಯರ ಮನೆಗೆ ನಡೆದಳು. 'ಒಡೆಯರೆ, ಅರಗಾಲ ಬರಗಾಲ ಬಂದಿದೆ. ಈ ಕಾಲದಲ್ಲೆ ನನಗೆ ಏಳು ಮಂದಿ ಮಕ್ಕಳು ಹುಟ್ಟಿದ್ದಾರೆ'. ಎಂದು ಕಡು ದುಃಖ ಮಾಡುವಳು. ಕಣ್ಣೀರು ಸುರಿಸುವಳು.

ಹೊನ್ನಿಯ ದುಃಖ ಕಂಡು ಒಡೆಯರ ಮನ ಕರಗಿತು. ಮನೆಮುಂದಿನ ಮಲಗಿದ್ದೆ, ಬಡಗುದಿಕ್ಕಿನಲ್ಲಿ ಬಳೆಗಾರನ ಅಂಗಡಿ, ತೆಂಕು ದಿಕ್ಕಿನಲ್ಲಿ ಕಂಚುಗಾರನ ಅಂಗಡಿ, ಮೂಡಣ ದಿಕ್ಕಿನಲ್ಲಿ ಮುಗಿಲರನ ಅಂಗಡಿ, ಪಡುವಣ ದಿಕ್ಕಿನಲ್ಲಿ ಗಾಣಿಗನ ಅಂಗಡಿಗಳನ್ನು ಹೊನ್ನಿಗೆ ಉಂಬಳಿ ಕೊಟ್ಟರು.

ಹೊನ್ನಿ ಬಹು ಸಂತಸಗೊಂಡಳು. ಚಕ್ರಕ್ಕೆ ಒಕ್ಕುಳಬಾರ (ಬತ್ತ)ಕೊಂಡು ತನ್ನ ಮನೆಗೆ ಹೊರಟಳು. ಆಗ ಇದ್ದಕ್ಕಿದ್ದಂತೆ ಮಾಯದ ಮಳೆಗಾಳಿ ಜೋರಾಗಿ ಬೀಸಿತು. ಕಾಲುಹೊಳಿ ಹೋಗಿ ದೋಣಿಹೊಳಿಯಾಯಿತು. ಕೆರೆ, ಬಾವಿ ಎಲ್ಲ ತುಂಬಿದವು. ಹೊನ್ನಿಗೆ ಏನು ಮಾಡಲೂ ತೋಚದಾಯಿತು. 'ನಾನು ಒಂದೇ ತಾಯಿ ತಂದೆಗೆ ಹುಟ್ಟಿದ ಮಗಳು ಹೌದಾದರೆ ಈ ಮಾಯದ ಮಳೆಗಾಳಿ ಎಲ್ಲ ನಿಲ್ಲಬೇಕು. ಹೊಳೆ ಹೋಗಿ ಹಳ್ಳವಾಗಬೇಕು. ತುಂಬಿದ ಕೆರೆಬಾವಿ ಎಲ್ಲ ಆರಿ ಹೋಗಬೇಕು.' ಎಂದು ಹೇಳಿದಳು. ಕಾಣು ಕಾಣುತ್ತಿರುವಂತೆ ಮಾಯದ ಮಳೆಗಾಳಿ ಎಲ್ಲ ಹಾರಿಹೋಯಿತು. ಉಕ್ಕಿದ ಕೆರೆಬಾವಿ ಎಲ್ಲ ಆರಿ ಹೋಯಿತು. ಹೊಳೆ ಹೋಗಿ ಹಳ್ಳವಾಯಿತು.

ಹೊನ್ನಿ ಮನೆಗೆ ಬಂದಳು. ತಂದ ಬತ್ತವನ್ನು ಸುವ್ವಾಲೆ ಸೊಪ್ಪಾಲೆ ಎಂದು ಒನಕೆಯಲ್ಲಿ ಕುಟ್ಟಿದಳು. ಬೇವಾಲೆ ಬೆಪ್ಪಾಲೆ ಎಂದು ಗೆರಸಿಯಲ್ಲಿ ಗೇರಿದಳು. ಕುಟ್ಟಿ ಮಾಡಿದ ಅಕ್ಕಿಯನ್ನು ಬೇಯಿಸಿ ಗಂಜಿ ಮಾಡಿದಳು. ಅಂಗಳದಲ್ಲಿ ಏಳು ಹೊಂಡ ತೋಡಿದಳು. ಏಳು ಮಕ್ಕಳಿಗೆ ತೆಂಗಿನ ಚಿಪ್ಪಿನಿಂದ ತಿಳಿಗಂಜಿ ಎರೆದಳು. ಏಳು ಮಕ್ಕಳು ಉಂಡು ಎದ್ದರು. ಬಳಿಕ ಹೊನ್ನಿ ಆ ಏಳು ಹೊಂಡಗಳನ್ನು ನೆಕ್ಕಿದಳು. ಅವಳ ಹಸಿವೆ ಹಿಂಗಲಿಲ್ಲ.

ಹೊನ್ನಿ, ಮುಂದೇನು ಮಾಡುವುದು ಎಂದು ಕೂತು ಯೋಚನೆ ಮಾಡುವಳು. ನಿಂತು ಯೋಚನೆ ಮಾಡುವಳು. ನಾನು ಹೀಗೆ ಕುಳಿತರೆ ದಿನ ಹೋಗದು. ಏನಾದರೂ ದುಡಿದು ತರಬೇಕು ಎಂದುಕೊಂಡಳು. ನೇರವಾಗಿ ಕಮ್ಮಾರನ ಮನೆಗೆ ಹೋದಳು. ಒಂದೇ ಕಾಸಿಗೆ, ಒಂದೇ ಹೊಡೆತಕ್ಕೆ ಏಳು ಜೋಡು ಅಗೆವ ಕಡಿವ ಸಲಕರಣೆಯನ್ನು ಮಾಡಿಕೊಡಬೇಕು ಎಂದು ಕೇಳಿದಳು. ಕಮ್ಮಾರ ಮಾಡಿಕೊಟ್ಟ ಸಾಮಗ್ರಿಗಳನ್ನು ತೆಗೆದುಕೊಂಡು ಹೊನ್ನಿ ಮನೆಗೆ ಬಂದಳು.

ಮುಂದೇನು ಮಾಡುವುದು? ಎಲ್ಲಿಗೆ ಹೋಗುವುದು? ಹೊನ್ನಿ ಮತ್ತೆ ಮತ್ತೆ ಯೋಚಿಸಿದಳು. ಕಮ್ಮಾರ ಮಾಡಿಕೊಟ್ಟ ಸಲಕರಣೆಗಳನ್ನು ತೆಗೆದುಕೊಂಡು ಗೆಣಸಿನ ಹೊಲಕ್ಕೆ ನಡೆದಳು. ಕಾಡಗೆಣಸನ್ನು ಅರಸುತ್ತ ಮೂಡಣ ಕಾಡಿಗೆ ಹೋದಳು. ಕಾಡಲ್ಲಿ ನಡೆದು ಕಾಡಗೆಣಸಿನ ಬೀಳನ್ನು ಕಂಡಳು. ಕೀಳ್‌ಕತ್ತಿಯಿಂದ ಕುರುಚಲನ್ನು

ಕಡಿದು ಬದಿಗೆ ತಳ್ಳಿದಳು. ಮಣ್ಣು ಕಡಿದು ದಡಕ್ಕೆ ಹಾಕಿದಳು. ಕುದುರೆ ನೀಟಾದ ಬೇರು ಆನೆ ತೋರದ ಕಲ್ಲು, ದೊಡ್ಡ ದೊಡ್ಡ ಬಂಡೆಕಲ್ಲುಗಳು ಬಂದವು. ಅವುಗಳನ್ನೆಲ್ಲ ಕಡಿದು ಬದಿಗೆ ಒತ್ತಿದಳು. ಮೂರ್ತಕ್ಕೆ ಮೂರು ಹಾರೆ ಮಣ್ಣು ಕಡಿದಳು. ಒಂದು ಹಾರೆ ಕಡಿಯಲು ಮಣ್ಣಿನಿಂದ ಹೊನ್ನ ಕಳಸ ಕಾಣಿಸಿತು. ಎರಡನೆಯ ಹಾರೆ ಮಣ್ಣು ತೆಗೆಯಲು ಚಿನ್ನ ಕಳಸ ಕಂಡಿತು. ಮತ್ತೊಂದು ಹಾರೆ ಮಣ್ಣು ತೆಗೆದಳು. ಆಗ, ಮಣ್ಣಿನ ಕಳಸ ಕಂಡು ಬಂತು. ಹೊನ್ನಿಗೆ ಆಶ್ಚರ್ಯ! ನೇರವಾಗಿ ಒಡೆಯರ ಮನೆಗೆ ಓಡಿದಳು. ಒಡೆಯರಲ್ಲಿ ತಾನು ಕಂಡ ಆಶ್ಚರ್ಯವನ್ನು ಹೇಳಿದಳು. ಒಡೆಯರು 'ನೀನೀಗ ಅಡಿಗಳ ಮನೆಗೆ ಹೋಗಿ ಅವರಲ್ಲಿ ಹೇಳು' ಎಂದರು. ಅದರಂತೆ ಹೊನ್ನಿ ಅಡಿಗಳ ಮನೆಗೆ ಬಂದಳು. ಅಡಿಗಳಿಗೆ ವಿಷಯ ತಿಳಿಸಿದಳು.

ಹೊನ್ನಿ, ಒಡೆಯರು, ಅಡಿಗಳು ಮೂರೂ ಮಂದಿ ಗೇಣಸಿನ ಹೊಲಕ್ಕೆ ಹೊರಟು ಬಂದರು. ಕಳಸಗಳನ್ನು ಕಂಡರು. ಚಿನ್ನದ ಕಳಸದ ನಾಗ ತನಗೆ ಎಂದು ಅಡಿಗಳು ತೆಗೆದುಕೊಂಡರು. ಹೊನ್ನ (ತಾಮ್ರದ) ಕಳಸದ ಸ್ವಾಮಿ ತನಗೆ ಎಂದರು ಒಡೆಯರು. ಹೊನ್ನಿ ಮಣ್ಣು ಕಳಸದ ಕಾಡ್ಯ ತನಗಿರಲಿ ಎಂದಳು. ಮೂವರೂ ಮನೆಗೆ ಬಂದರು. ಹೊನ್ನಿ ಮಲಗದ್ದೆಯ ಪೊದರಿನಲ್ಲಿ ಕಳಸವನ್ನು ಇರು ಮಾಡಿದಳು. ಒಡೆಯರು ಮನೆ ಮುಂದೆ ಸ್ವಾಮಿಯನ್ನು ಮೂರ್ತ ಮಾಡಿದರು. ಅಡಿಗಳು ನಾಗದೇವತೆಯನ್ನು ತಮ್ಮ ಅಶ್ವತ್ಥ ಕಟ್ಟೆಯಲ್ಲಿ ಪ್ರತಿಷ್ಠಾಪಿಸಿದರು. ನಾಗದೇವತೆಗೆ ನಾಗಮಂಡಲ, ಪಾಣರ ಆಟ ಎನ್ನುವುದು ಸ್ವಾಮಿಗೆ, ಕಾಡ್ಯನ ಆಟ ಎಂಬುದು ಕಾಡ್ಯನಿಗೆ ಮಾಡಿದರು.

ಹೊನ್ನಿ ಒಡೆಯರು ಮನೆಗೆ ಹೋಗುವಳು. 'ಒಡೆಯರೆ ನಾನು ಕಾಡ್ಯನ ಆಟ ಆಡಿಸಿಬೇಕು. ಕಾಡ್ಯನ ಆಟಗಳನ್ನು ಮಾಡಲು ಯಾರು ಬಲ್ಲರು?" ಎಂದು ಕೇಳುವಳು. 'ಬಡಗಣ ದೇಶದಲ್ಲಿ ಅಜ್ಜ ಬೈದ್ಯನಿದ್ದಾನೆ; ಅವನು ಅದನ್ನೆಲ್ಲ ಬಲ್ಲವನು' ಎಂದರು. ಹೊನ್ನಿ ಅಜ್ಜ ಬೈದ್ಯನಲ್ಲಿಗೆ ನಡೆದಳು. 'ಅಜ್ಜ ಬೈದ್ಯ, ನೀವೀಗ ನನ್ನೊಂದಿಗೆ ಬರಬೇಕು. ಕಾಡ್ಯನ ಆಟ ಮಾಡಬೇಕು. ಒಡೆಯರು ಬರಹೇಳಿದ್ದಾರೆ'. ಎಂದು ಅಜ್ಜ ಬೈದ್ಯನೊಂದಿಗೆ ಧನಿಗಳ ಮನೆಗೆ ಬರುವಳು. ಅಜ್ಜ ಬೈದ್ಯನಿಗೆ ಕಾಡ್ಯನ ಆಟ ಆಡಬೇಕು ಎಂದು ಏಳು ವರಹ ಹಾಗೂ ಏಳು ಮುಡಿ ಅಕ್ಕಿ ನೀಡಿದರು ಒಡೆಯರು. ಅದನ್ನು ತೆಗೆದುಕೊಂಡು ಮನೆಗೆ ಬಂದರು ಅಜ್ಜಬೈದ್ಯ. ಹೊನ್ನಿ ತನ್ನರಮನೆಗೆ ಬಂದಳು. ಜಾತಿಕಟ್ಟಿನವರನ್ನು, ನೆಂಟರಿಷ್ಟರನ್ನು ಕೂಡಿಕೊಂಡು ಆಟಕ್ಕೆ ದಿನ ಇಟ್ಟಳು. ಶನಿವಾರ ದಿನದಲ್ಲಿ ಮೂರ್ತ ಇಟ್ಟಳು. ಅಜ್ಜ ಬೈದ್ಯ ಎಂಟು ದಿನಗಳ

ಶೌಚವಿದ್ದರು. ಮುಂದಿನ ಶನಿವಾರ ಗೂಡು ಕೊಂಡು ಹೋಗಿ ಕಾಡ್ಯನ ಪೂಜೆ ಮಾಡಿದರು. ಆದಿತ್ಯವಾರ ದಿನ ಬೈದ್ಯ 'ಕಂಬೀನ ಮೂರ್ತ' ಮಾಡಿ ಮಂಡಲ ಬರೆದು ನಾಲ್ಕು ದಿಕ್ಕಿನ ದೈವದೇವರುಗಳನ್ನೆಲ್ಲ ಮಂಡ್ಲಕ್ಕೆ ಕರೆದು ಪೂಜೆ ಮಾಡಿದರು. ಹಾಂಡರ ಮನೆಗೆ ಹೋಗಿ ಹೊನ್ನ ಕಲಶಗಳಿಗೆ ಪೂಜೆ ಮಾಡಿ ಸ್ಥಳಕ್ಕೆ ತಂದನು. ಸೋಮವಾರ ದಾಸರ ಕೋಲು, ಕೊರಗರ ಕೋಲ ಮಾಡಿದರು. ಆ ಸಂಜೆ ದೊಡ್ಡ ಮಂಡ್ಲ ಬರೆದು ನಾಲ್ಕು ದಿಕ್ಕಿನ ದೈವಗಳನ್ನೆಲ್ಲ ಮಂಡ್ಲಕ್ಕೆ ಕರೆದರು. ಹೊನ್ನಿ ತಲೆಬಾಚಿ ಮುಡಿಕಟ್ಟಿ ಹೂ ಮುಡಿದು ಸಿಂಗಾರವಾದಳು. ಹೊನ್ನ ಕಲಶವನ್ನು ಹೊತ್ತಳು. ಹೊನ್ನಿಯನ್ನು ಮಂಡ್ಲದಲ್ಲಿ ನಿಲ್ಲಿಸಿ ಹೊನ್ನ ಕಲಶಕ್ಕೆ ಅಜ್ಜ ಬೈದ್ಯ ಪೂಜೆ ಮಾಡುವರು. ಹೊನ್ನಿ ಕಲಶವನ್ನು ಮಂಡ್ಲದಲ್ಲಿ ಇರಿಸುವಳು. ಮಂಗಳವಾರದಂದು ಡಕ್ಕೆಬಲಿ, ಹುಲಿ ಹಂದಿಕೋಲ, ಸಂಜೆ ಜಕ್ಕಿಯರ ಕುಣಿತ, ಕುದುರೆ ಕೋಲ ಮಾಡಿದರು ಬೈದ್ಯ. ಕುದುರೆ ಸಾರೋಟಿನಲ್ಲಿ ಹೊನ್ನ ಕಲಶದ ಗಂಗೆಸ್ನಾನಕ್ಕೆ ಹೊರಡುವರು. ಗಂಗೆಸ್ನಾನ ಮಾಡಿ ಬಂದು ಚಿಟ್ಟೆ ಪೂಜೆ ಮಾಡಿದ ಬೈದ್ಯ ಭೂತಮಂಡ್ಲ ಬರೆಯುತ್ತಾರೆ, ಹರಕೆ ಕಟ್ಟುತ್ತಾರೆ, ಮಧ್ಯ ಸರಿರಾತ್ರಿ ಕಾಲದಲ್ಲಿ ಗೂಡನ್ನು ಹೊನ್ನಿಯಿಂದ ಹೊರಿಸಿಕೊಂಡು ತಮ್ಮ ಮನೆಗೆ ಬರುತ್ತಾರೆ. ಆ ಮತ್ತಿನ ಶನಿವಾರದಂದು ಮೂರ್ತದ ಕಂಬವನ್ನು ಕೀಳುವುದು. ಮೂರ್ತದ ಕಂಬಕ್ಕೆ ಪೂಜೆಮಾಡಿ ಬೈದ್ಯ ಕಂಬ ಕೀಳುತ್ತಾರೆ. ಕಂಬ ಕಿತ್ತು ಒಡೆಯರ ಮನೆಯಲ್ಲಿ ಇರಿಸುವರು. ಒಡೆಯರು ಏಳು ಮುಡಿ ಅಕ್ಕಿ, ಏಳು ವರಹ ಕೊಟ್ಟರು. ಬೈದ್ಯರಿಗೆ ಸಮ್ಮಾನ ಮಾಡಿದರು.

## ೯.೧.೩ ಕಳಸ ಮಾಡುವ ಹಾಡು

ಅಜ್ಜ ಬೈದ್ಯ, ಒಡೆಯರು, ಹೊನ್ನಿಯ ಸಮಕ್ಷಮ ಕಾಡ್ಯನಾಟಕ್ಕೆ ದಿನ ನಿಶ್ಚಯಿಸ ಲಾಯಿತು. ಕಲಶ ಮಾಡಿಕೊಡಲು ಹಾಂಡರ ಮನೆಗೆ ಹೇಳಿಕೆಗೆ ಹೋದರು.

'ಹುಡಿಯಾದ ಮಣ್ಣನ್ನು ಗುದ್ದಿ ಕಾಲಲ್ಲಿ ಹದಮಾಡಿ, ನೀರಲ್ಲಿ ಮೆದುಮಾಡಿ ಹೊನ್ನ ಕಲಶವನ್ನು ಮಾಡಿಕೊಡಬೇಕು ಎಂದು ಹಾಂಡರಲ್ಲಿ ಬೈದ್ಯ, ಒಡೆಯರು ಕೇಳಿಕೊಳ್ಳುವರು. ಹೀರಿಯ ಹೂವಿನ ಹಾಗೆ ಏಳು ಹೆಡೆಯ, ತುಂಬಿಯ ಹೂವಿನಂಥ ಒಂಬತ್ತು ಹೆಡೆಯ, ಹಾಗಲ ಹೂವಿನಂಥ ಆರು ಹೆಡೆಯ ಹೊನ್ನ ಕಲಶವನ್ನು ಮಾಡಿಕೊಡಿ ಅದಕ್ಕೆ ಎಷ್ಟು ಹಣವಾಗುತ್ತದೆ' ಎಂದು ಕೇಳುವರು. ದೊಡ್ಡ ಹಣ ಕೊಟ್ಟರೆ ಹೊನ್ನಕಲಶ ಮಾಡಿಕೊಡುತ್ತೇನೆ ಎನ್ನುತ್ತಾರೆ ಸ್ಥಳದ ಹಾಂಡರು. ಅಕ್ಕಿ ತೆಂಗಿನಕಾಯಿ ಫಲವುಳ್ಳ ಸಿಂಗಾರ ಹೂ ಪಟ್ಟಿವೀಳ್ಯವ ಸ್ವೀಕರಿಸಿ ಹೊನ್ನ ಕಳಸ ಮಾಡಿದರು.

### ೯.೧.೪ ಕಳಸ ತರುವ ಹಾಡು

ಪಟ್ಟಿ ವೀಳ್ಯ ಹಿಡಿದು ಹಾಂಡರು ಮಣ್ಣ ಕಲಶ ಮಾಡಿದರು. ಮೇರರ ಜಾತಿಮಂದಿಯನ್ನು ಕರೆದು ಕಳಸವನ್ನು ಮುಂದೆ ತಂದಿಡುವರು. ಕಲಶಕ್ಕೆ ಕಾಯಿ ಒಡೆದು, ಸಿಂಗಾರ ಹೂ ಇರಿಸಿ, ಕೈಮುಗಿದು ನಮಸ್ಕಾರ ಮಾಡುವರು ಕಲಶ ಮಾಡಿದ ಹಾಂಡರು. ಮನೆಯ ದೀಪ ಉರಿಯುವಂತೆ, ಮನೆತುಂಬ ಮಕ್ಕಳು ಕೊಡುವಂತೆ, ಹಟ್ಟಿಕೊಟ್ಟಿಗೆಯಲ್ಲಿ ದನಕರುಗಳಿಗೆ ಸುಖ ಸೌಖ್ಯ ನೀಡುವಂತೆ ಬೇಡಿಕೊಳ್ಳುತ್ತಾರೆ. ಕಲಶಕ್ಕೆ ಪೂಜೆ ಸಲ್ಲಿಸಿ ಹೊನ್ನಿಯನ್ನು ಮುಂದೆ ಕರೆದು ಆಕೆಗೆ ಕಲಶ ಹೊರುವಂತೆ ಹೇಳುವರು. ಹೊನ್ನಿ ಸೆರುಗೊಡ್ಡಿ ಕಲಶ ಹಿಡಿಯುವಳು. ಸ್ಥಳದ ಹಾಯ್ಗುಳಿಯ ಒಡಗೊಂಡು ಹೊನ್ನಿ ತನ್ನ ಸ್ಥಳಕ್ಕಾಗಿ ಬರುವಳು.

### ೯.೧.೫ ಕಂಬ ಮೂರ್ತ ಮಾಡುವ ಹಾಡು

ಆಟಕ್ಕೆ 'ಮೂರ್ತದ ಕಂಬ' ಕಡಿಯಲು ಕುಟುಂಬದ ಹಿರಿಬುಡದ ಹಿರಿಯನನ್ನು ಬೈದ್ಯ ಕರೆಯುತ್ತಾನೆ. ಕಂಬಿನ ಮದುಮಗನಾದ ಅವನನ್ನು ದೀಕ್ಷಾ ಸ್ನಾನ ಮಾಡಿಸಿ ಸಿಂಗಾರ ಮಾಡುವರು. ಸಾರೋಟು ಸರ್ವದೈವಗಳನ್ನು ಕೂಡಿಕೊಂಡು ಕಂಬ ಕಡಿಯಲು ಕನಕದಂಡಿಗೆ ಏರಿ ಕಾಡ್ಯ ಹೊರಟಿದ್ದಾಳೆ. ಕಡಿವ ಕಂಬವನ್ನು ಕಂಡಿದ್ದಾಳೆ. ಬೈದ್ಯ ಕಂಬಕ್ಕೆ ಪೂಜೆ ಮಾಡಿ ಕಡಿಯಲು ಒಪ್ಪಿಗೆ ಇತ್ತಿದ್ದಾನೆ. ಕಂಬದ ಮದುಮಗ ಕಂಬ ಕಡಿದಿದ್ದಾನೆ. ಕಂಬ ಹೊತ್ತು ಕಾಡ್ಯನ ಮನೆಗೆ ತಂದಿದ್ದಾರೆ. ಹೊನ್ನ ಚಿಟ್ಟೆಗೆ ಮೂರು ಸುತ್ತು ಬಂದು ಬೈದ್ಯ ಮೂರ್ತದ ಕಂಬವನ್ನು ನೆಟ್ಟು ಪೂಜೆ ಮಾಡಿದನು.

### ೯.೧.೬ ಅಜ್ಜರ ಹುಟ್ಟು

ನಾರಾಯಣಸ್ವಾಮಿ, ನಗುರಾಸಿಸ್ವಾಮಿ, ಕರಿಸೂರಸ್ವಾಮಿ ಕುಳಿತು ಮಾತಾಡು ತ್ತಿದ್ದಾರೆ. ಅಜ್ಜರ ಹುಟ್ಟನ್ನು ನೋಡಬೇಕೆಂದು ಬಯಸಿದರು. ಹೋಮಹವನಕ್ಕೆ ಸಿದ್ಧತೆ ಮಾಡಿದರು. ಅದಕ್ಕಾಗಿ ಹನ್ನೆರಡು ಸಂಗ್ರಹಗಳನ್ನು ತರಿಸಿದರು, ಹನ್ನೆರಡು ಸಾಮಗ್ರಿಗಳನ್ನು ಕೂಡಿಸಿದರು. ಹವನದ ಕುಂಡ ಮಾಡಿದರು. ಅಗ್ನಿದೇವತೆಯನ್ನು ಸ್ಥಾಪಿಸಿದರು. ಒಂದು ಅಂತಸ್ತಿಗೆ ಅರುಳೆಯ ಚಕ್ಕೆ, ಒಂದು ಅಂತಸ್ತಿಗೆ ಹಳೆ ಎಣ್ಣೆ, ಮತ್ತೊಂದು ಅಂತಸ್ತಿಗೆ ಪತ್ರಿಯ ಚಕ್ಕೆ, ಇನ್ನೊಂದು ಅಂತಸ್ತಿಗೆ ಹಲಸಿನ ಚಕ್ಕೆ, ಮಗುದೊಂದು ಅಂತಸ್ತಿಗೆ ಹಳೆತುಪ್ಪ ಹಾಕಿ ಆಹುತಿ ನೀಡಿದರು. ಮಂತ್ರ ತಂತ್ರ ಮಾಡಿದರು. ಅಮೃತ ಗಿಂಡಿಯಲ್ಲಿ ನೀರು ಬಿಟ್ಟು, ಬೆಳ್ಳಿಯ ಬೆತ್ತ ಎಳೆದರು. ನೀಡಿದ ಅಹುತಿ ಎಲ್ಲವನ್ನೂ ಸ್ವೀಕರಿಸಿದ ಅಗ್ನಿದೇವತೆ ಸಂತುಷ್ಟರಾದರು. ಹವನ ಮಧ್ಯದಿಂದ ಇಬ್ಬರು ಅಜ್ಜರು ಹುಟ್ಟಿ ಎದ್ದು ನಿಂತರು. ಮೊದಲು ಹುಟ್ಟಿದವನು ಸಮುರುತನಜ್ಜ, ಮತ್ತೆ ಹುಟ್ಟಿದವನು ಅವತಾರದಜ್ಜ.

ಹವನದಿಂದ ಹುಟ್ಟಿಬಂದ ಅಜ್ಜರಿಬ್ಬರು ಮಾತಾಡಿದರು. 'ಮರ ಹುಟ್ಟಿದ ಹಾಗೆ ನಾವು ಹುಟ್ಟಿದೆವು. ಮರ ಹುಟಿದ ಹಾಗೆ ನಾವು ಬೆಳೆದೆವು. ಮುಂದೆ ಬೆಳೆಯುವಲ್ಲಿ ಹೆಣ್ಣು ಸಂತಾನವಿಲ್ಲ; ಹಿಂದೆ ಬಾಳುವಲ್ಲಿ ಗಂಡು ಸಂತಾನವಿಲ್ಲ, ಸಂತಾನ ಸಂತೋಷ ನಮಗೆ ಇಲ್ಲವಲ್ಲ' ಎಂದು ಬೇಸರದಿಂದ ಆಡುತ್ತಾರೆ.

ಇತ್ತ ಮೂರು ಸ್ವಾಮಿಗಳು ಕುಳಿತು ಮಾತನಾಡುತ್ತಾರೆ. ಅಜ್ಜರಿಬ್ಬರನ್ನು ಹುಟ್ಟಿಸಿದೆವು. ಇನ್ನು ಅವರಿಗೆ ಅರಮನೆ ಕಟ್ಟಬೇಕು, ಗುರುಮಠ ಕಟ್ಟಬೇಕು ಎಂದುಕೊಂಡು ಅಜ್ಜರಿಗೆ ಹೇಳುವರು. 'ಸಂತಾನವಿಲ್ಲದ ನಮಗೇಕೆ ಅರಮನೆ, ಗುರುಮಠ? ಯಾವುದೂ ಬೇಡೆಂದರು. ನೀವು ದುಃಖಿಸಬೇಡಿ. ನಿಮಗೆ ಸಂತಾನ ಸಂತೋಷ ನಾವು ಕೊಡುತ್ತೇವೆ' ಎಂದು ಅವರ ಮನ ಒಪ್ಪಿಸಿದರು. ಹರಿಕಾರ ನಿಂಗನನ್ನು ಕರೆದು ಲಿಪಿಕಾರನ ಮನೆಗೆ ಕರೆ ಕಳುಹಿಸಿದರು.

ಇದ್ದಕ್ಕಿದ್ದಂತೆ ಬಂದ ಹರಿಕಾರ ನಿಂಗನ ಕಂಡು ಲಿಪಿಕಾರನಿಗೆ ಆಶ್ಚರ್ಯ. 'ಹಗ್ಗೀನ ಹೋಕಿಗೆ ಏನು ಬಂದೆ ನೀನು? ಬ್ಯಾಸಗಿ ಮೊದಲಿಗೆ ಏನು ಬಂದೆ ನೀನು?' ಎಂದು ಕೇಳುವನು. ಸ್ವಾಮಿಗಳು ಮಾಯದಲ್ಲಿ ಅಜ್ಜರಿಬ್ಬರನ್ನು ಹುಟ್ಟಿಸಿದ್ದಾರೆ. ಅಜ್ಜರಿಗೆ ಅರಮನೆ. ಗುರುಮಠ ಕಟ್ಟಬೇಕು. ಅದಕ್ಕಾಗಿ ವಡ್ಡರಿಗೆ ನೀವು ವಾಲೆ (ಕಾಗದ) ಬರೆಯಬೇಕು ಎಂದು ವಿಷಯ ತಿಳಿಸುತ್ತಾನೆ ಹರಿಕಾರನಿಂಗ. ಒಪ್ಪಿದ ಲಿಪಿಕಾರ ತಾಳೆ ಓಲೆಯನ್ನು ಕೊಯ್ದು, ಬಂಗಾರದ ಬರುಕಂಟ ಹಿಡಿದು ಸ್ವಾಮಿಯಲ್ಲಿಗೆ ಬರುತ್ತಾನೆ.

'ಅಜ್ಜರಿಗೆ ಅರಮನೆ, ಗುರುಮಠ ಆಗಬೇಕು. ಈ ಓಲೆಯನ್ನು ಕಂಡ ಗಳಿಗೆಯಲ್ಲೇ ನೀವು ಸ್ವಾಮಿಯ ಬಳಿಗೆ ಬರಬೇಕು' ಎಂದು ವಾಲೆ ಬರೆದು ಲಿಪಿಕಾರ ಕೂಟದಧಿಕಾರನ ಕೈಗೆ ಕೊಡುವನು. ಕೊಟ್ಟ ವಾಲೆಯನ್ನು ಸೊಂಟದಲ್ಲಿ ಸಿಕ್ಕಿಸಿಕೊಂಡು ಹರಿಕಾರ ನಿಂಗ ಹೊರಟನು.

ಮೂಡಣ ದೇಶದ ಮುತ್ತಿನೊಡ್ಡನಿಗೆ, ಪಡುವಣ ದೇಶದ ಬಡಿಗಿಗೆ, ತೆಂಕಣ ದೇಶದ ಕಂಚಿನೊಡ್ಡನಿಗೆ, ಬಡಗಣ ದೇಶದ ಬಂಗಾರೊಡ್ಡರಿಗೆ ಸ್ವಾಮಿಯ ವಾಲೆ ಕೊಡುವನು. ವಾಲೆ ಓದಿದ ನಾಲ್ಕೂ ದಿಕ್ಕಿನ ವಡ್ಡರು ತಮ್ಮ ತಮ್ಮ ಸರಕುಗಳನ್ನು ಹೊರೆಕಟ್ಟಿ ಸ್ವಾಮಿಯ ಬಳಿಗೆ ಬರುವರು. ಸ್ವಾಮಿಗೆ ಕೈ ಮುಗಿದು, ಭೂಮಿಗೆ ತಲೆಬಾಗಿ ಗೌರವ ಸೂಚಿಸಿದರು. ಸ್ವಾಮಿ ಕರೆಸಿದ ಕಾರಣವನ್ನು ತಿಳಿಸಿದರು.

ಬೆಳ್ಳಿಮೂಡಿ ಬೆಳಗಾಗುವ ಹೊತ್ತಿಗೆ, ಕೋಳಿ ಕೂಗಿ ಬೆಳಕು ಮೂಡುವ ಹೊತ್ತಿಗೆ ವಡ್ಡರು ಎದ್ದು ನಿತ್ಯವಿಧಿಗಳನ್ನು ಪೂರೈಸಿದರು. ವಿಶೇಷ ಊಟ ಉಂಡು ಎಳೆಯ ವೀಳ್ಯವನ್ನು ಮೆದ್ದರು. ತಮ್ಮ ತಮ್ಮ ಸಲಕರಣೆಗಳನ್ನು ಮಸೆದು

ಹರಿತಗೊಳಿಸಿದರು. ಮಸೆದ ಸರಕುಗಳನ್ನು ಹೊತ್ತು ಮೂಡಣ ಕಾಡಿಗೆ ನಡೆದರು. ಬಡಗಿಗಳನ್ನು ಕಂಡ ಮರಗಳು ತಮ್ಮನ್ನು ಕಡಿಯುತ್ತಾರೆ ಎಂದು ಎದ್ದು ಓಡುವುವು. ಓಡಿದ ಮರಗಳನ್ನು ಉಳಿ ನೆಟ್ಟು ನಿಲ್ಲಿಸಿದರು. ನಿಂತ ಮರವನ್ನು ಕಡಿದು ಅಳತೆ ಮಾಡಿದರು. ಉಳಿಯಿಂದ ಕೆತ್ತಿ ಕೀಸುಳಿ ಹಾಕಿ ನಯ ಮಾಡಿದರು. ಮಣ್ಣಿನೊಡ್ಡರು ಮಣ್ಣನ್ನು ಹದ ಮಾಡಿದರು. ಕಲ್ಲು ಕಡಿದು ಕಲ್ಲುಕಟ್ಟಿ ನೆಲಗಟ್ಟು ಕಟ್ಟಿದರು. ಮೂರ್ತಕ್ಕೆ ಮುಂಡಿಗಿ ನಿಲ್ಲಿಸಿದರು. ಅರಮನೆ ಸಿದ್ಧವಾಯಿತು ಸಿದ್ಧವಾದ ಅರಮನೆಗೆ ಬಂಗಾರ ಹಚ್ಚಿದರು. ಬಣ್ಣ ಬರೆದರು. ಅಜ್ಜರು ಅರಮನೆ ಗುರುಮಠದಲ್ಲಿ ನೆಲೆಯಾದರು.

## ೯.೧.೭ ಹೆಣ್ಣು ಮಕ್ಕಳ ಹುಟ್ಟು

ಮಕ್ಕಳಿಲ್ಲದೆ ಕೊರಗುತ್ತಿದ್ದ ಅಜ್ಜರಿಗಾಗಿ ನಾರಾಯಣಸ್ವಾಮಿ ಹವನ ಏರ್ಪಡಿಸಿದರು. ಆ ಹವನದಲ್ಲಿ ಇಬ್ಬರು ಹೆಣ್ಣು ಮಕ್ಕಳು ಹುಟ್ಟಿ ಬಂದರು. ಅವರಿಗೆ ದದುಬಾಲಿ, ಹಲುಬಾಲಿ ಎಂದು ಹೆಸರಿಟ್ಟರು. ಮಕ್ಕಳು ಆಟಪಾಠವ ಕಲಿತರು. ಗುರೂಪದೇಶ ಪಡೆದರು. ದದುಬಾಲಿ, ಹಲುಬಾಲಿಯರು ಹೆಣ್ಣು ಹೋಗಿ ಹೆಂಗಸಾದರು. ಅಜ್ಜರು ಮದುವೆ ಸನ್ನಾಹ ಮಾಡುವುದನ್ನು ಕಂಡ ಅವರು ನಮಗಾಗುವ ಗಂಡನ್ನು ನಾವೇ ಮಾಡಿಕೊಳ್ಳುವುದಾಗಿ ಹೇಳಿದರು.

ಒಂದು ದಿನ ನಗುರಾಸಿ ಸ್ವಾಮಿ ಬಳೆಗಾರ ವೇಷ ತೊಟ್ಟು ಅಜ್ಜರ ಅರಮನೆಗೆ ಬಂದರು. ಹೊಸಬಳೆ ತೊಡುವಂತೆ ಹೆಣ್ಣು ಮಕ್ಕಳನ್ನು ಕರೆದರು. ಬಳೆಯಿಡಿಸಿಕೊಂಡ ದದುಬಾಲಿ ದೇವಿ ಬಳೆಯ ಬೆಲೆಕೊಡಲು ಬಂದಾಗ ನಿರಾಕರಿಸಿದರು ನಗುರಾಸಿ ಸ್ವಾಮಿ 'ನಾನು ನಗುರಾಸಿ ಸ್ವಾಮಿ, ಇದು ಧಾರೆಯ ಬಳೆ' ಎನ್ನುವರು. ತಮ್ಮರಮನೆಗೆ ಹೋದರು. ಇದಕ್ಕೆ ಪ್ರತಿಮಾಡು ಕೊಡುವ ಸಲುವಾಗಿ ದದುಬಾಲೆ ಗಂಡುರೂಪು ತೊಟ್ಟಳು. ಬಾರ್ಕೂರು ಪಟ್ಟಣದಿಂದ ಕುದುರೆ ಮೇಲೆ ಮುತ್ತು ಹೇರಿಕೊಂಡು ನಗುರಾಸಿಸ್ವಾಮಿಯ ಪಟ್ಟಣಕ್ಕೆ ಬರುತ್ತಾಳೆ. ಅರಮನೆಯ ಬಳಿ ಬಂದು ಮುತ್ತಿನ ಕರೂದಿ ಮಾಡುವಂತೆ ಕರೆದಳು. ನಗುರಾಸಿ ಸ್ವಾಮಿಯೇ ಬಂದು ಮುತ್ತು ಕರೂದಿ ಮಾಡಿದರು. ಬೆಲೆ ಕೊಡಲು ಬಂದಾಗ 'ಅಜ್ಜರ ಬಳಿಯ ಹೆಣ್ಣುಮಗಳು ನಾನು, ನಿಮ್ಮನ್ನು ಮೆಚ್ಚಿ ಬಂದಿದ್ದೇನೆ. ಧಾರೆಯ ಮುತ್ತು ಇದು' ಎಂದು ಹೇಳಿ ಹೊರಟು ಬರುವಳು.

ನಗುರಾಸಿ ಸ್ವಾಮಿ ಜಾತಿಯವರ ಸಭೆ ಸೇರಿಸಿ ದಿಬ್ಬಣ ಸಹಿತ ಹೊರಟು ಅಜ್ಜರ ಅರಮನೆಗೆ ಬರುವರು. ಏನೊಂದೂ ಅರಿಯದ ಅಜ್ಜರಿಗೆ ಮದುವೆ ದಿಬ್ಬಣ ಕಂಡು ಸೋಜಿಗ. ದದುಬಾಲಿ ನಡೆದಂಥ ಕತೆ ಹೇಳಿದಳು. ಅಜ್ಜರು ಮದುವೆಗೆ ಒಪ್ಪಿದರು. ದದುಬಾಲಿಯನ್ನು ಧಾರೆ ಎರೆದುಕೊಟ್ಟರು.

ಅಕ್ಕನಿಗೆ ಮದುವೆಯಾದುದನ್ನು ಕಂಡು ತಂಗಿ ಹಲುಬಾಲಿಗೆ ಮತ್ಸರವಾಯಿತು. ಭಾವನಿಗೆ ಕಾಯಿಕಜ್ಜಾಯ, ಅಕ್ಕನಿಗೆ ಸಿಂಗಿಗಂಗರದ ಹಿಟ್ಟು (ವಿಷ) ಮಾಡಿಕೊಂಡು ಅಕ್ಕನ ಮನೆಗೆ ಹೊರಟಳು. ಹೊರೆ ಹೊರಲು ಯಾರೂ ಸಿಗದಾಗ ಸ್ವತಃ ಅಜ್ಜರೇ ಹೊರೆ ಹೊತ್ತುಕೊಂಡು ಹೊರಡುತ್ತಾರೆ. ನಗುರಾಸಿ ಸ್ವಾಮಿಯ ಅರಮನೆ ಮುಂದೆ ಹೊಳೆಯೊಂದು ಹರಿಯುತ್ತಿತ್ತು. ಅಜ್ಜ ಕಜ್ಜಾಯದ ಹೊರೆ ಇಳಿಸಿ ಸ್ನಾನ ಮಾಡಿ ಬರುವುದಾಗಿ ನೀರಿಗಿಳಿದರು. ಅಲ್ಲಿಂದ ನಗುರಾಸಿ ಪಟ್ಟಣಕ್ಕೆ ನಡೆದು ದದುಬಾಲಿಯನ್ನು ಕಂಡು 'ನಿನ್ನ ತಂಗಿ ವಿಷದ ಕಜ್ಜಾಯ ತಂದಿದ್ದಾಳೆ. ಅದನ್ನು ತಿನ್ನುವ ಮೊದಲು ಸಾಕಿದ ನಾಯಿಗೆ, ಕೋಳಿಗೆ ಹಾಕಿ ಪರೀಕ್ಷಿಸಬೇಕು' ಎಂದು ಸೂಚನೆ ನೀಡಿದರು. ಅಲ್ಲಿಂದ ಹಲುಬಾಲಿ ಇರುವಲ್ಲಿಗೆ ಬಂದು ಆಕೆಯೊಂದಿಗೆ ನಗುರಾಸಿ ಪಟ್ಟಣಕ್ಕೆ ಬಂದರು.

ಅರಮನೆಯಲ್ಲಿ ಭಾವವನ್ನು ಕಾಣದಿರಲು ಹಲುಬಾಲಿ ಒಂದೊಂದು ಹೂವಿನ ವನಕ್ಕೆ ನಡೆದು ವನವೆಲ್ಲ ಹುಡುಕುತ್ತಾಳೆ. ಎಲ್ಲೂ ಭಾವ ಕಾಣದೆ ಹೋದಾಗ ಬಾಳೆಯ ವನಕ್ಕೆ ಬರುತ್ತಾಳೆ. ಅಲ್ಲಿ ಭಾವನನ್ನು ಕಂಡು ತಾನು ತಂದ ಸಿಹಿಕಜ್ಜಾಯದ ಹಿಟ್ಟು ನೀಡುತ್ತಾಳೆ. ಭಾವ ನಾದಿನಿಯರು ಅಲ್ಲಿ ಒಂದಾದರು. ಅಲ್ಲಿಂದ ಹೊನ್ನರಮನೆಗೆ ಬಂದು ಅಕ್ಕನಿಗೆ ವಿಷದ ಕಜ್ಜಾಯ ಕೊಡುತ್ತಾಳೆ. ಅಕ್ಕ ದದುಬಾಲಿ ತಂಗಿ ನೀಡಿದ ಕಜ್ಜಾಯವನ್ನು ಕೋಳಿ, ನಾಯಿಗಳಿಗೆ ಹಾಕಿದಾಗ ಅವು ಸತ್ತು ಹೋದವು.

ಇತ್ತ ಹಲುಬಾಲಿಗೆ ಮುಟ್ಟು ನಿಂತಿತು. ತಿಂಗಳು ತುಂಬಿತು. ತುಂಬಿದ ಗರ್ಭಿಣಿ ಅಕ್ಕನ ಮನೆಗೆ ಬಂದು ಹೆರಿಗೆಗೆ ಹೊನ್ನರಮನೆಯಲ್ಲಿ ಜಾಗ ನೀಡುವಂತೆ ಕೇಳಿಕೊಳ್ಳುತ್ತಾಳೆ. ಹೆರಿಗೆ ಬೇನೆಯಿಂದ ಬೆನ್ನುಬಿಟ್ಟು ನಿಂತ ತಂಗಿಗೆ ಅಕ್ಕ ಒಂದೊಂದೆಡೆಗೂ ನೆಪ ಮುಂದೊಡ್ಡಿ ನಿರಾಕರಿಸುತ್ತಾಳೆ. ಆಗ ಗರ್ಭಿಣಿಯ ಹೊಟ್ಟೆಯಲ್ಲಿದ್ದ ಶಿಶು 'ಕಾಡಿನ ಬದಿಯಲ್ಲಿ ನುಕ್ಕಿಯ ಬೀಳಿನ ಗೂಡು ಮಾಡು. ಅದರೊಳಗೆ ನೀನು ಬೇನೆಯಿಲ್ಲದೆ ಬೆಸಲಾಗುವೆ' ಎಂದಿತು. ಅಂತೆಯೇ ನುಕ್ಕಿಯ ಗೂಡು ರಚಿಸಿ ಅದರೊಳಗೆ ಕುಳಿತು ಹಲುಬಾಲಿ ಬೆಸಲಾಗುವಳು. ಹುಟ್ಟಿದ್ದು ಗಂಡುಕೂಸು. ಹುಟ್ಟಿದ ಹಸುಗೂಸಿಗೆ ರೆಕ್ಕೆ ಮೂಡುತ್ತದೆ. ಮಗು ಪಕ್ಕದ ಗೋಳಿಮರ ಏರಿ ಕುಳಿತುಕೊಳ್ಳುತ್ತದೆ. ಅದನ್ನು ಕಂಡ ಅಜ್ಜ ಕೋಲುಗೆದ್ದಲು ಮಾಡಿ ಎಸೆದರು. ಅದು ಬಾಲಕನ ರೆಕ್ಕೆ ಕತ್ತರಿಸಿತು. ಅವನು ಹೊನ್ನಳಿವೆಯೊಳಗೆ ಬಿದ್ದನು. ಅಜ್ಜ ಹೊನ್ನೆಳೆ ನೂಲನ್ನು ಮಾಡಿ ಅದನ್ನು ನೀರಲ್ಲಿ ಇಳಿಬಿಟ್ಟರು. ತಾನು ಅದರಲ್ಲಿ ಅಳಿವೆಗೆ ಇಳಿಯುತ್ತಾರೆ. ಅದನ್ನು ಕಂಡ ಹಲುಬಾಲಿಯ ಬಾಲಕ ಹೊನ್ನೆಳಿ

ನೂಲನ್ನು ಕತ್ತರಿಸುತ್ತಾನೆ. ಅಜ್ಜ ಹೊನ್ನಳಿವೆಯೊಳಗೆ ಬೀಳುತ್ತಾರೆ. ನೀರಲ್ಲಿ ಮುಳುಗಿ ಏಳುವ ಅಜ್ಜನನ್ನು ಕಂಡು ಹುಡುಗ ಲೇವಡಿ ಮಾಡುವನು. ಈ ಸುದ್ದಿಕೇಳಿದ ಹಲುಬಾಲಿ ಬಂದು 'ಇವರು ನಿನ್ನಜ್ಜ' ಎಂದು ಹೇಳಿ ಅವರನ್ನು ಮೇಲಕ್ಕೆ ತರುವಳು. ಅಲ್ಲಿಂದ ಎಲ್ಲರೂ ನಗುರಾಸಿ ಪಟ್ಟಣಕ್ಕೆ ನಡೆದು ಹೊನ್ನರಮನೆಗಾಗಿ ಬಂದರು. ಅದನ್ನು ಕಂಡ ಅಕ್ಕ ದದುಬಾಲಿ 'ಮಗನನ್ನು ಪಡೆದೀಯಾ ತಂಗಿ' ಎಂದು ಕೇಳುವಳು. ಹೆರಿಗೆಗೆ ಎಡೆಕೊಡದೆ ಮನನೋಯಿಸಿದ ಬಗ್ಗೆ ಹಲುಬಾಲಿ ಅಕ್ಕನನ್ನು ಆಕ್ಷೇಪಿಸುವಳು. ಆಗ ಅಕ್ಕ 'ನೀನು ಭಾವನಿಗೆ ಸಿಹಿಕಜ್ಜಾಯ ನೀಡಿದೆ. ನನಗೆ ವಿಷದ ಕಜ್ಜಾಯ ಮಾಡಿ ತಂದೆ. ನನ್ನನ್ನು ಕೊಲ್ಲಬಯಸಿದ ನಿನಗೆ ಅಕ್ಕ ಎಂಬ ಮೋಹವಿತ್ತೆ?' ಎಂದು ಕೇಳುವಳು. ಆಗ ಸಮುರುತನಜ್ಜ ಅಮುರುತನಜ್ಜ ಇಬ್ಬರೂ ಮೊಮ್ಮಕ್ಕಳಿಗೆ ಬುದ್ಧಿ ಹೇಳುವರು. ಒಂದೇ ಅರಮನೆಯಲ್ಲಿ ಇಬ್ಬರೂ ಸುಖವಾಗಿ ಬಾಳುವಂತೆ ಹೇಳಿ ಹರಸುವರು.

## ೯.೧.೮ ಯುಗ ಮಗುಚುವ ಹಾಡು

ಗಂಗೆ ಹತ್ತೆಂಟು ಯುಗವನ್ನು ತೋರುವಳು. ಒಂದು ಯುಗ ಮಗುಚಿ ಇನ್ನೊಂದು ಯುಗ ಆರಂಭವಾಗುತ್ತದೆ. ಯುಗ ಕಳೆದು ಭೂಲೋಕದಲ್ಲಿ ಇಡೀ ನರಮನುಷ್ಯರ ಕುಲವೇ ನಾಶವಾಗಿ ನಾಲ್ಕು ಸಮುದ್ರ, ನಾಲ್ಕು ಅಳಿವೆ ಎಲ್ಲಾ ಒಂದಾಗಿದೆ. ಎಲ್ಲೆಲ್ಲೂ ಜಲಾವೃತ.

ಏಳು ಹಗಲು ಏಳು ರಾತ್ರೆ, ಏಳು ರಾತ್ರೆ ಏಳುಹಗಲು ಕಳೆದವು. ಭೂಮಿಯಲ್ಲಿ ಮನುಷ್ಯ ಸಂತಾನವೇ ಇಲ್ಲವಾಗಿ ದೈವದೇವರಿಗೆ ನೀರು ನೈವೇದ್ಯ ಇಲ್ಲವಾಯಿತು.

ಮೇಲೇಳಿ ಲೋಕದಲ್ಲಿ ನಿಂತು ನಾರಾಯಣ ಸ್ವಾಮಿ ನೋಡುತ್ತಾರೆ. ನರಮನುಷ್ಯರ ಕುಲವೆಲ್ಲ ಲಯವಾಗಿದೆ. ದೈವದೇವರೆಲ್ಲ ತೇಲಾಡುತ್ತಿದ್ದಾರೆ. ಭೂಲೋಕವಿಡೀ ಜಲಾವೃತವಾಗಿದೆ. ಆ ಜಲಾವೃತ ಪ್ರದೇಶದಲ್ಲಿ ದೂರದಲ್ಲಿ ಒಂದು ಹೊನ್ನ ಮದ್ದಳೆ ತೇಲುತ್ತಿರುವುದು ಕಾಣುತ್ತದೆ. ಕೂಡಲೇ ಮಾಯದಲ್ಲಿ ಅಂಬಿಗನನ್ನು ಮಾಡಿ ಅವನಿಗೆ ಹೊನ್ನ ದೋಣಿ, ಹೊನ್ನ ಹುಟ್ಟು ಮಾಡಿ ಕೊಟ್ಟರು. ಆ ಹೊನ್ನ ಮದ್ದಳೆಯನ್ನು ಹಿಡಿದು ತರುವಂತೆ ಹೇಳಿದರು. ಅದರಂತೆ ಅಂಬಿಗಾರ ಹೊನ್ನಳಿವೆಯಿಂದ ಹೊನ್ನು ಮದ್ದಳೆಯನ್ನು ತಂದಿರಿಸಿದ. ಮದ್ದಳೆಯನ್ನು ಒಡೆಯಿಸಿದರು ನಾರಾಯಣ ಸ್ವಾಮಿ.

ಅದರಲ್ಲಿ ಬತ್ತಲೆಯಾದ ಕೊರಗ ಕೊರತಿಯರಿದ್ದರು. ಅವರಿಗೆ ಸೊಪ್ಪು ಉಡಿಸಿ ಸ್ವಾಮಿಯ ಬಳಿಗೆ ತಂದರು. 'ನೀವು ಯಾರು?' ಕೇಳಿದರು ನಾರಾಯಣ ಸ್ವಾಮಿ. 'ನಾವು ಅಣ್ಣ ತಂಗಿ' ಎಂದರು. ಸ್ವಾಮಿ ಅವರ ರೂಪ ಪರಿವರ್ತನೆ ಮಾಡಿದರು. "ಈಗ ನೀವು ಏನಾಗಬೇಕು?" ಎನ್ನಲು "ನಾವು ಈಗ ಕೊರಗ–ಕೊರತಿ ಗಂಡ–ಹೆಂಡತಿ' ಎಂದು ಉತ್ತರಿಸಿದರು. ಕೀಳೇಳಿ ಲೋಕದಲ್ಲಿ ನರಮನುಷ್ಯರ ಕುಲವೇ ನಾಶವಾಗಿದೆ. ನೀವೀಗ ನರಮನುಷ್ಯರ ನೂರೊಂದು ಕುಲವನ್ನು ಹಡೆದು ಹಾಕಬೇಕು. ನಿಮ್ಮಿಂದ ಅಲ್ಲಿ ಮತ್ತೆ ಸಂತಾನ ಆಗಬೇಕು' ಎಂದರು. ನಾರಾಯಣ ಸ್ವಾಮಿಯ ಅಪ್ಪಣೆಯಂತೆ ಕೊರಗ ಕೊರತಿ ನೂರೊಂದು ಕುಲವನ್ನು ಹಡೆದು ಹಾಕಿದರು.

ಮನುಷ್ಯ ಸೃಷ್ಟಿ ಏನೋ ಆಯಿತು. ಆದರೇನು? ಹುಟ್ಟಿದ ನರರಿಗೆ ಅನ್ನ ಆಹಾರವಿಲ್ಲ, ಹುಟ್ಟ್ ಚಿತ್ತೇರಿಗೆ ನೀರು ನೈವೇದ್ಯ ಇಲ್ಲವಾಗಿದೆ. ಅದಕ್ಕಾಗಿ ಸ್ವರ್ಗದಲ್ಲಿರುವ ನೆಲು ಸಂಕ್ರಗಂಡ (ಭತ್ತ)ನನ್ನು ತರುವಂತೆ ಹರಿಕಾರ ನಿಂಗನನ್ನು ಕಳುಹಿಸುತ್ತಾರೆ. ಹರಿಕಾರ ನಿಂಗ ದೇವೇಂದ್ರನ ಬಳಿಗೆ ಹೋಗಿ ನೆಲು ಸಂಕ್ರಗಂಡನನ್ನು ಕಳುಹಿಸಿಕೊಡುವಂತೆ ಬಿನ್ನವಿಸಿದ. ದೇವೇಂದ್ರಸ್ವಾಮಿ ನೆಲುಸಂಕ್ರಗಂಡನನ್ನು ಕರೆಸಿದರು. ವಿಷಯ ಹೇಳಲು ಆತ ಹಿಂದೊಂದು ಜನ್ಮವನ್ನು ಭೂಮಿಯಲ್ಲಿ ಎತ್ತಿದಾಗ ಅನುಭವಿಸಿದ ಕಷ್ಟವನ್ನೆಲ್ಲ ಹೇಳಿ ನಾನು ಹೋಗಲಾರೆ ಎನ್ನುತ್ತಾನೆ. ದೇವೇಂದ್ರಸ್ವಾಮಿ ಒತ್ತಾಯಿಸಲು ಹೊನುಬಸುವಯ್ಯ ಜತೆಗೆ ಬಂದರೆ ನಾನು ಹೋಗುತ್ತೇನೆ ಎನ್ನುತ್ತಾನೆ.

ದೇವೇಂದ್ರಸ್ವಾಮಿ ಹೊನುಬಸುವಯ್ಯನಿಗೆ ಹೋಗಲು ಹೇಳುತ್ತಾರೆ. ಆತನೂ ಹಿಂದೊಂದು ಜನ್ಮವನ್ನು ಭೂಮಿಯಲ್ಲಿ ಎತ್ತಿದಾಗ ತಾನು ಉಂಡ ನೋವನ್ನೆಲ್ಲಾ ಹೇಳಿ ನಾನು ಹೋಗಲಾರೆ ಎನ್ನುತ್ತಾನೆ. ದೇವೇಂದ್ರಸ್ವಾಮಿ ಒತ್ತಾಯ ಮಾಡಿದಾಗ ಮಾದಾರ ಚೆನ್ನ ಬಂದರೆ ಅವನ ಹಿಂದೆ ನಾನು ಹೋಗುತ್ತೇನೆ ಎನ್ನುತ್ತಾನೆ. ಮಾದಾರ ಚೆನ್ನ ಒಪ್ಪಲು ಕೀಳೇಳಿ ರಾಜ್ಯಕ್ಕೆ ನಾನು ಬರಬೇಕಾದರೆ ಹುಲು ಬೀಜವನ್ನು ನನ್ನ ಮುಂದೆ ಬಿತ್ತಬೇಕು. ನೆಲ ಬೀಜವನ್ನು ನನ್ನ ಹಿಂದೆ ಬಿತ್ತಬೇಕು ಎನ್ನುತ್ತಾನೆ ಹೊನುಬಸುವಯ್ಯ. ಒಪ್ಪಿದ ಹರಿಕಾರನಿಂಗ ಮೂವರನ್ನೂ ಕರೆದುಕೊಂಡು ಭೂಲೋಕಕ್ಕೆ ಬರುತ್ತಾನೆ.

ನಾರಾಯಣಸ್ವಾಮಿ ಭೂಮಿಯ ಸೌಳನ್ನೆಲ್ಲ ಸೆಳೆದು ಸರಿಮಾಡಿದರು. ಗದ್ದೆ ಬಯಲು ಹಳ್ಳಹೊಳೆ ಎಲ್ಲ ಮಾಡಿದರು. ಹೊನುಬಸುವಯ್ಯನನ್ನು ಕಟ್ಟಿ ಮಾದಾರಚೆನ್ನ ಬಯಲನ್ನೆಲ್ಲ ಹೂಡಿ ಹದಮಾಡಿದನು. ನೆಲುಸಂಕ್ರಗಂಡನನ್ನು

ಬಿತ್ತಿದನು. ಬಿತ್ತಿದ ಬೆಳೆ ಬೆಳೆದು ಹುಟ್ಟಿದ ನರರಿಗೆ ಅನ್ನ ಆಹಾರವಾಯಿತು. ಹುಟ್ಟ್ ಚಿತ್ತೆರಿಗೆ ನೀರು ನೈವೇದ್ಯವಾಯಿತು. ದೈವ ದೇವರಿಗೆ ಸಂತೋಷವಾಯಿತು. ನರಮನುಷ್ಯರಿಗೆ ಸೌಖ್ಯವಾಯಿತು.

## ೯.೧.೯ ಪಾಪದೋಷರ ಹಾಡು

ಮುಳುಗಿದ ಸೂರ್ಯ ಮತ್ತೆ ಮೂಡಲಿಲ್ಲ. ಹೀಗೇ ಏಳು ಹಗಲು ಏಳು ರಾತ್ರಿ ಕಳೆಯಿತು. ನಾರಾಯಣ ಸ್ವಾಮಿ, ನಗುರಾಸಿ ಸ್ವಾಮಿ, ಕರಿಸೂರ ಸ್ವಾಮಿ ಕುಳಿತು 'ಇದೇನು ಸೋಜಿಗ! ಇದೇನು ಮಾಯ?' ಎಂದು ಮಾತಾಡಿಕೊಳ್ಳುತ್ತಾರೆ. ಹರಿಕಾರ ನಿಂಗನನ್ನು ಕರೆದು ನಾಲ್ಕು ದಿಕ್ಕುಗಳಿಗೆ ನೀನು ಹೋಗಿ ಯಾವ ದೇಶದಲ್ಲಿ ಏನೇನು ನಡೆಯುತ್ತಿದೆ ಎಂದು ನೋಡಿಬರಬೇಕು ಎಂದು ಕಳುಹಿಸಿದರು. ಬೆಳ್ಳಿಬೆತ್ತ ಹಿಡಿದು ಹರಿಕಾರನಿಂಗ ಹೊರಟ. ಬಡಗಣದೇಶಕ್ಕೆ ಹೋಗುತ್ತಾನೆ. ಅಲ್ಲಿನ ಜನ ಹೊನ್ನ ತಂಬಿಗೆ ತುಂಬ ದಾನ ಧರ್ಮ ನೀಡುತ್ತಿದ್ದರು. ಹೋಮನೇಮ ಮಾಡುತ್ತಿದ್ದರು. ಮೂಡಣ ದೇಶಕ್ಕೆ, ಪಡುವಣ ದೇಶಕ್ಕೆ ಬರುತ್ತಾನೆ. ಅಲ್ಲಿಯೂ ಜನರು ಹೊನ್ನ ತಂಬಿಗೆ ತುಂಬ ದಾನ ಧರ್ಮ ನೀಡುತ್ತಿದ್ದರು. ಹೋಮನೇಮ ಮಾಡುತ್ತಿದ್ದರು. ಅಲ್ಲಿಂದ ತೆಂಕಣದೇಶಕ್ಕೆ ಬರುತ್ತಾನೆ ಹರಿಕಾರನಿಂಗ.

ತೆಂಕಣ ದೇಶದಲ್ಲಿ ದಾನವಿಲ್ಲ. ಧರ್ಮವಿಲ್ಲ. ಹೋಮವಿಲ್ಲ, ನೇಮವಿಲ್ಲ. ಅಣ್ಣ ತಂಗಿ ಎಂಬ ಭೇದವಿಲ್ಲ, ಭಾವ ನಾದಿನಿ ಎನ್ನುವ ವಾಜಿಲ್ಲ, ಎಲ್ಲೆಲ್ಲೂ ನೀತಿ ಇಲ್ಲ. ಎಲ್ಲರೂ ಪಾಪಕರ್ಮಿಗಳು. ಕಂಡ ಪಾಪವನ್ನು ಬಂದು ಸ್ವಾಮಿಗೆ ಅರುಹುತ್ತಾನೆ. ಅದರಿಂದಲೆ ಮುಳುಗಿದ ಸೂರ್ಯ ಮೂಡಲಿಲ್ಲ ಎನ್ನುತ್ತಾನೆ. ಸ್ವಾಮಿ ಮಾದಾರ ಚೆನ್ನನಿಗೆ ಹೇಳಿ ಹೊನುಬಸುವಯ್ಯ (ಬಸವ)ನನ್ನು ಕರೆಸುತ್ತಾರೆ. 'ತೆಂಕಣ ದೇಶಕ್ಕೆ ನೀನು ಹೋಗಬೇಕು. ಆ ಜನ ನಿನ್ನನ್ನು ಹೆದರಿಸಿ ಹಿಡಿಯುತ್ತಾರೆ. ಆಗ ನೀನು ಅವರನ್ನು ಹಿಡಿದು ನನ್ನ ಬಳಿ ತಂದು ಕೆಡವಬೇಕು' ಎಂದರು. ಒಪ್ಪಿದ ಹೊನುಬಸವಯ್ಯ ತೆಂಕಣದೇಶಕ್ಕೆ ಬರುತ್ತಾನೆ. ಅಲ್ಲಿನ ಜನರು ಅವನನ್ನು ಬೆದರಿಸಿ ಹಿಡಿಯುತ್ತಾರೆ. ಆಗ ಹೊನುಬಸವಯ್ಯ 'ನಾನು ಮೂರು ಚೆಂಗು ಹಾರುತ್ತೇನೆ. ನನ್ನನ್ನು ಗಟ್ಟಿಯಾಗಿ ಹಿಡಿದುಕೊಳ್ಳಿ, ಬಿಡಬೇಡಿ' ಎನ್ನುತ್ತಾನೆ. ಅದರಂತೆ ಒಂದು..... ಎರಡು....... ಚೆಂಗು ಹಾರುತ್ತಾನೆ. ಆ ಮನುಷ್ಯರು ಗಟ್ಟಿಯಾಗಿ ಹಿಡಿದುಕೊಳ್ಳುತ್ತಾರೆ. ಮೂರನೆ ಚೆಂಗು ಹಾರಿ ಸ್ವಾಮಿಯ ಬಳಿಗೆ ಬಂದು ನಿಲ್ಲುತ್ತಾನೆ. ಪಾಪ ದೋಷರನ್ನು ಸ್ವಾಮಿಯ ಕಾಲಡಿ ಕೆಡಹುತ್ತಾನೆ.

ನಾರಾಯಣಸ್ವಾಮಿ, ನಗುರಾಸಿಸ್ವಾಮಿ, ಕರಿಸೂರಸ್ವಾಮಿ ಕುಳಿತು ಮಾತಾಡುತ್ತಾರೆ. ಪಾಪದೋಷರ ಪಾಪವನ್ನು ಪರಿಹಾರ ಮಾಡಬೇಕು

ಎಂದುಕೊಳ್ಳುತ್ತಾರೆ. ಮೆಣಸಿನಕಾಯಿಯ ಹೊಗೆ ಹಾಕಿದರು. ಬೆಳ್ಳಿಯ ಬೆತ್ತ ಎಳೆದರು. ಬೆಳ್ಳಿ ಮೂಡಿ ಕಪ್ಪು ಕತ್ತಲು ಕರಗಿ ಬೆಳಕು ಹರಿಯುವಂತೆ ಪಾಪದೋಷರ ಪಾಪ ಪರಿಹಾರವಾಗಿ ಶುದ್ಧರಾದರು.

### ೯.೧.೧೦ ಮಂಡಲ ಬರೆಯುವ ಹಾಡು

ಕಾಡ್ಯನ ಆಟಕ್ಕೆ ದಿನ ನಿಶ್ಚಯಿಸಿ ಬೈದ್ಯ ವೀಳ್ಯ ಹಿಡಿದಿದ್ದಾನೆ. ಹಿರಿಬುಡ (ಹಿರಿತಾಯಿ)ದ ಮಗನನ್ನು ಕರೆದು ಜಾತಿಕಟ್ಟಿನವರಿಗೆ, ಕೂಡುಕುಟುಂಬಕ್ಕೆ, ಊರಿನಲ್ಲಿರುವ ಎಲ್ಲಾ ಜನಗಳಿಗೆ ಹೇಳಿಕೆ ಮಾಡುವಂತೆ ಹೇಳುತ್ತಾನೆ. ಹಿರಿತಾಯಿ ಮಗನಿಂದ ಹೇಳಿಕೆ ಸಲ್ಲುತ್ತದೆ.

ಬೈದ್ಯ ಮಂಡ್ಲ ಬರೆಯಲು ಕುಳಿತಿದ್ದಾನೆ. ಪಂಚವರ್ಣದ ಹುಡಿ ಹಿಡಿದಿದ್ದಾನೆ. ಮಂಡಲ ಬರೆಯಲು ತೊಡಗಿದ್ದಾನೆ. ಕಾಮಾಲೆ (ಕಮಲ) ರೂಪವನ್ನು ಬರೆದಿದ್ದಾನೆ. ಗೋಲಾಕಾರದ ಮಂಡ್ಲ ಬರೆದಿದ್ದಾನೆ. ಮಂಡಲದಲ್ಲಿ ಸೂರ್ಯದೇವರ ರೂಪ ಬರೆದಿದ್ದಾನೆ. ಬಳಿಕ ಶುಕ್ರ ದೇವರು, ಚಂದ್ರ ದೇವರು, ಮಂಗಳ ದೇವರುಗಳ ರೂಪ ಬರೆದಿದ್ದಾನೆ. ಮುತ್ತಿನ ಕಾಳಿಂಗನ ರೂಪ, ನಾಗದೇವರ ರೂಪ, ಐರ್‌ಮೀನು, ಹೊನ್ನರಳಿ ಮರ, ಗುಬ್ಬಿ, ಗೆರಸಿ, ಒರಳು, ಒನಕೆ, ಚೆನ್ನೆಮಣೆ, ಕಕಚಾಂಡಲಕ್ಕಿ, ಗೋವಕ್ಕಿಗಳನ್ನು ಮಂಡಲದಲ್ಲಿ ಚಿತ್ರಿಸಿದ್ದಾನೆ. ಹೊನ್ನ ದೋಣಿ, ಹುಟ್ಟು ಬರೆದಿದ್ದಾನೆ. ಚಕ್ರಾಕಾರದಲ್ಲಿ ಮಂಡಲ ಬರೆದನು. ಮಂಡಲ ಬರೆದು ತಲೆ ಎರಗಿ ನಮಸ್ಕಾರ ಮಾಡುವನು. ಮಂಡಲಕ್ಕೆ ಪೂಜೆ ಮಾಡುವನು.

### ೯.೧.೧೧ ಗೋವಕ್ಕಿ ಹಾಡು

ಬಡಗು ದಿಕ್ಕಿನಲ್ಲಿ ಬಡಗೋಳಿ ಮರ. ಅದು ಹಣ್ಣಿನಿಂದ ತುಂಬಿದೆ. ಆ ಹಣ್ಣಿನ ಪರಿಮಳ ಮೇಲೇಳಿ ಲೋಕಕ್ಕೆ, ಕೀಳೇಳಿ ಲೋಕಕ್ಕೇ, ಅಷ್ಟೇ ಅಲ್ಲ ನಾಲ್ಕು ದಿಕ್ಕಿಗೂ ಹರಡಿದೆ. ತೆಂಕಾನ ದೇಶದ ಗೋವಕ್ಕಿ ಮರಿಗಳು ಹಣ್ಣಿನ ಪರಿಮಳಕ್ಕೆ ಬಡಗೋಳಿ ಮರಕ್ಕೆ ಹಾರಿಬಂದುವು. ಮರದಲ್ಲಿ ಕುಳಿತ ಹಕ್ಕಿಗಳಿಗೆ ಹಣ್ಣು ತಿನ್ನುತ್ತಾ ತಿನ್ನುತ್ತಾ ಹೊತ್ತು ಮುಳುಗಿದ್ದೂ ತಿಳಿಯುವುದಿಲ್ಲ. ಗೂಡು ಸೇರಲು ದಾರಿಕಾಣದೆ ಅವು ಅಜ್ಜರ ಅರಮನೆಗೆ ಬರುತ್ತವೆ. ಅಲ್ಲಿ ಉಳಿಯುವುದಕ್ಕೆ ತಮಗೆ ಜಾಗ ಕೊಡುವಂತೆ ಕೇಳುತ್ತವೆ. ನೆಲೆನಿಂತ ಗುರುತು ತೋರಿ ಹೋಗುವುದಾದರೆ ಚಿನ್ನದ ಕಡುಮಾಡದಲ್ಲಿ, ಬಣ್ಣದ ಬಿಳುಮಾಡದಲ್ಲಿ ಉಳಿದು ಹೋಗಿ ಎಂದು ಅಜ್ಜರು ಹೇಳುತ್ತಾರೆ.

ಹಕ್ಕಿಗಳು ರಾತ್ರಿ ಅಲ್ಲಿ ಉಳಿದುವು. ಬೆಳ್ಳಿ ಮೂಡಿ ಬೆಳಗಾಗುವಾಗ ಕೋಳಿ ಕೂಗಿ ಉದಯವಾಗುವಾಗ ಗಂಡು ಹಕ್ಕಿ ಎದ್ದು ಸ್ವರಗೈಯುತ್ತದೆ. ಹೆಣ್ಣು ಹಕ್ಕಿ

ಪಕ್ಕ ಬಡಿಯುತ್ತದೆ. ಕೊಕ್ಕಿನಲ್ಲಿ ಕಚ್ಚಿದ ಹಣ್ಣನ್ನು, ಕಾಲಲ್ಲಿ ಮೆಟ್ಟಿದ ಹಣ್ಣನ್ನು, ರೆಕ್ಕೆಯಲ್ಲಿ ಬಡಿದ ಹಣ್ಣನ್ನು ತಿಂದು ಉಗಿದವು. ತೆಂಗಿನ ದೇಶಕ್ಕೆ ಹಾರಿಹೋದುವು.

ಇತ್ತ ಬೆಳಗಾಯಿತು. ಆಳುಗಳು ಚಿನ್ನದ ಪೊರಕೆ ಹಿಡಿದು ಅರಮನೆಯ ಕಸ ಗುಡಿಸಿದರು. ಕಸವನ್ನು ಚಿನ್ನದ ಹೆಡಗೆಗೆ ತುಂಬಿ ಹೊರಚೆಲ್ಲಿದರು. ಅಜ್ಜ ಅಂಗಳಕ್ಕೆ ಬಂದರು. ಅಲ್ಲಿ ಸಾವಿರ ಸರುಗೋಳಿ ಗಿಡಗಳು ಹುಟ್ಟಿವೆ. ಅಜ್ಜ ಅದಕ್ಕೆ ಹಾಲು, ನೀರು ಎರೆದು ಸಾಕಿ ಸಲಹಿದರು. ಮರ ಬಲವಾಗಿ ಬೆಳೆಯಿತು ಮರದ ಗೆಲ್ಲು ನಾಲ್ಕೂ ದಿಕ್ಕಿಗೆ ಹಬ್ಬಿ ಆಕಾಶದೆತ್ತರಕ್ಕೆ ಬೆಳೆಯಿತು. ಒಂದು ದಿನದಲ್ಲಿ ಹೂವಾಯಿತು. ಇನ್ನೊಂದು ದಿನದಲ್ಲಿ ಮಿಡಿಯಾಯಿತು. ಮತ್ತೊಂದು ದಿನದಲ್ಲಿ ಕಾಯಾಗುತ್ತದೆ. ಇನ್ನೊಂದು ದಿನದಲ್ಲಿ ಹಣ್ಣಾಗುತ್ತದೆ.

ಹಣ್ಣಿನ ಪರಿಮಳ ನಾಲ್ಕು ದಿಕ್ಕಿಗೂ ಬಡಿಯುತ್ತದೆ. ತೆಂಕಾನ ದೇಶದ ಗೋವಕ್ಕಿಗೆ ಪರಿಮಳ ಬಡಿದು ಅದು ಬಂದು ಸರುಗೋಳಿ ಮರದಲ್ಲಿ ಕುಳಿತುಕೊಳ್ಳುತ್ತದೆ. ಅದನ್ನು ಕಂಡ ಅಜ್ಜರು ಹಣ್ಣನ್ನು ತಿನ್ನಬೇಕಾದರೆ ಮರದಲ್ಲಿ ಗೂಡುಕಟ್ಟಬೇಕು, ಮೊಟ್ಟೆ ಇಡಬೇಕು ಎಂದರು. ಗೋವೆಹಕ್ಕಿ ನಾಲ್ಕು ದಿಕ್ಕಿಗೆ ಹಾರಿ ಕಸಕಡ್ಡಿ ತಂದು ಆನೆಗಾತ್ರದ ಗೂಡುಕಟ್ಟುತ್ತದೆ. ಕುದುರೆಯಷ್ಟು ಉದ್ದದ ಮೊಟ್ಟೆ ಇಡುತ್ತದೆ. ಸರುಗೋಳಿ ಮರ ಭಾರ ತಡೆಯಲಾರದೆ ಗಾಳಿಗೆ ಅಲುಗಾಡುತ್ತದೆ. ಗೋವಕ್ಕಿಯ ಮೊಟ್ಟೆಗಳೆಲ್ಲ ಉದುರಿದುವು. ಇದನ್ನು ಕಂಡ ಅಜ್ಜರು ಸರುಗೋಳಿ ಮರಕ್ಕೆ ತಲೆಕೊಟ್ಟರು. ಉದುರಿದ ಮೊಟ್ಟೆಗಳು ತಲೆಯಿಂದ, ಹೆಗಲಿಗೆ, ಅಲ್ಲಿಂದ ಸೊಂಟಕ್ಕೆ ಬಿದ್ದುವು. ಸೊಂಟದಲ್ಲಿ ಅಜ್ಜರು ಅವುಗಳನ್ನು ಹಿಡಿದರು. ಅಲ್ಲಿಂದ ಅದು ಮುಂಗೈಗೆ ಅಲ್ಲಿಂದ ಕಾಲಿಗೆ ಬಂದು ಭೂಮಿಗೆ ಬಿದ್ದು ಮೊಟ್ಟೆಗಳೆಲ್ಲ ಒಡೆದು ನೆಲಸಮವಾಗಿ ಸತ್ತು ಸ್ವಾಮಿಯ ಸೇರ್ಗೆಗೆ ಸೇರಿದವು.

## ೯.೧.೧೨ ಜಕ್ಕಿಯರ ಹಾಡು

ಬಿಳಿಸೀರೆ ಉಟ್ಟ ಮದುವೆಯಾಗದ ಸ್ವಜಾತಿಯ ಬಾಲಕಿಯರನ್ನು ಮೂಹೂರ್ತಕಂಬದ ಸುತ್ತ ಬೈದ್ಯ ಕುಣಿಸುವ ಸಂದರ್ಭದಲ್ಲಿ ಹೇಳುವ ಹಾಡು ಇದು. ನಮ್ಮ ವಕ್ತೃ ಹೇಳುವಂತೆ ಈ ಜಕ್ಕಿಯರು ಹೊನ್ನಿಯ ಮಕ್ಕಳು.

ಜಕ್ಕಿಯರು ಹೂ, ಕಾಯಿ, ಹಣ್ಣು ಕೊಯ್ದು ತಮ್ಮ ಮಡಿಲೊಳಗೆ ಹಾಕಿಕೊಳ್ಳುವರು. ನೂಲು ಇಲ್ಲದೆ ಹೂ ಹೆಣೆದು ಮಾಲೆ ಮಾಡುವರು. ಹಣ್ಣಡಿಕೆ ಇಟ್ಟು ಒಡೆದು ಕಾಯಿ ಅಡಿಕೆ ಮೆಟ್ಟಿ ಒಡೆದು ಹುಟ್ಟಿನ ದೈವಕ್ಕೆ ಪೂಜೆ ಮಾಡುವರು. ಹೂವಿನ ಹಂದರದೊಳಗೆ ನವಿಲಾಟ ಆಡುವರು. ಅಷ್ಟರಲ್ಲಿ ಅಲ್ಲಿಗೆ ಕೋಲು ಊರಿಕೊಂಡು ಅಜ್ಜ ಬರುತ್ತಾರೆ. ಬೀಳದೇವ ಬಿಲ್ಲು ಹಿಡಿದುಕೊಂಡು ಬರುತ್ತಾನೆ.

## ೯.೧.೧೩ ಬೀಳದೇವನ ಹಾಡು.

ಮೇರರ ಹುಡುಗ ಬೀಳದೇವ ಇನ್ನೂ ಚಿಕ್ಕ ಹುಡುಗ, ಹುಡುಗನಿಗೆ ಬೇಟೆಗೆ ಹೋಗಬೇಕೆಂದು ಮಹಾಆಸೆ. ತಾಯಿಯೊಡನೆ 'ನಾನು ಬೇಟೆಗೆ ಹೋಗಬೇಕು' ಎಂದು ಹೇಳುತ್ತಾನೆ. ಎಳೆಯ ಮಗನನ್ನು ಬೇಟೆಗೆ ಕಳುಹಿಸಲು ತಾಯಿಗೆ ಇಷ್ಟವಿಲ್ಲ. 'ನೆತ್ತಿ ಎಣ್ಣೆ ಆರಲಿಲ್ಲ ನಿನಗೆ; ಬಾಯಿಯ ಹಾಲ್ಹಲ್ಲು ಮುರಿಯಲಿಲ್ಲ; ಆಮಿರೋಮ ಇನ್ನೂ ಉದುರಲಿಲ್ಲ, ನೀನಿನ್ನೂ ಹಸುಬಾಲೆ. ನಿನಗೆಂಥ ಸಂಬಳ, ನಿನಗೆಂಥ ಬೇಟೆ' ಎಂದು ತಾಯಿ ಹೇಳುತ್ತಾಳೆ. ತಾಯಿಯ ಮಾತು ಮಗ ಬೀಳದೇವನಿಗೆ ಮೆಚ್ಚಿಗೆಯಾಗಲಿಲ್ಲ. ತಂದೆಯಲ್ಲಿಗೆ ಹೋಗಿ 'ನಾನು ಬೇಟೆಗೆ ಹೋಗಬೇಕು' ಎನ್ನುತ್ತಾನೆ. ತಂದೆ 'ಬೇಡ' ಎಂದು ಬುದ್ಧಿ ಹೇಳುವನು. ಮಗ ಹಿಡಿದ ಹಟ ಬಿಡನು. ತಾಯಿ ತಂದೆಯ ಮಾತನ್ನು ಕೇಳದಿದ್ದರೆ ನೀನು ಹೆಣವಾಗುತ್ತಿ ಎಂದು ಎಚ್ಚರಿಸುತ್ತಾರೆ. ಯಾರು ಏನು ಹೇಳಿದರೂ ಕೇಳದೆ ಬೇಟೆಗೆ ಬೇಕಾದ್ದೆಲ್ಲವನ್ನೂ ಕೂಡಿಸಿದ. ಕೈಯಲ್ಲಿ ಬಿಲ್ಲು ಹಿಡಿದು. ಬೆನ್ನಿಗೆ ಬತ್ತಳಿಕೆ ಕಟ್ಟಿ ಬೇಟೆಗೆ ಸಿದ್ಧನಾದ. ಎಲ್ಲರಿಗೂ ಬೇಟೆ ವೀಳ್ಯವನ್ನು ಹಂಚಿದ.

ಬೇಟೆಯ ವಿಧಿಕಾರ್ಯ ಮುಗಿಸಿದ ಬೀಳದೇವ ಕಾಡಿನತ್ತ ಹೊರಟ. ಮಾಜಿಮಲಸಪ್ಪನ್ನು ಸುತ್ತು ಕಟ್ಟಿ ಬೇಟೆಯ ಕಣವನ್ನು ಸಿದ್ಧಮಾಡಿದ. ನವಿಲು, ಕೋಣ, ಜಿಂಕೆ, ಹಿಂಡುಹಿಂಡಾಗಿ ಬಂದವು. ಎಲ್ಲವನ್ನೂ ಬೀಳದೇವ ಬಾಣ ಹೂಡಿ ಬೇಟೆಯಾಡಿದ. ಇನ್ನೊಂದು ಕಾಡಿಗೆ ನಡೆದ. ಕೆಂಚಿಕಿರುಗೋಡ ಸುತ್ತುಕಟ್ಟಿ ದೊಡ್ಡ ಹಂದಿ, ಹೊನ್ನಬಣ್ಣದ ಹುಲಿಗಳನ್ನು ಬೇಟೆಯಾಡಿದ. ಗೆದ್ದ ಬೇಟೆಯನ್ನು ಮೆರವಣಿಗೆಯಲ್ಲಿ ಮನೆಗೆ ಹೊತ್ತು ತಂದ. ಹುಲಿ ಹೊಡೆದು ಕೀರ್ತಿ ಮೆರೆದ.

## ೯.೧.೧೪ ಕಳಸ ನಾಡ ಮೇಲೆ ಹೋಗುವ ಹಾಡು

ಜಾತಿ ಬಾಂಧವರು, ಕೂಡು ಕುಟುಂಬದವರನ್ನು ಕೂಡಿಕೊಂಡು ಬೆರ್ಮಸ್ಥಾನದ ಮರಿಮಟ್ಟಿ ಕಟ್ಟಿಕೊಂಡು ಉಂಬುಳಿಯ ವಸೂಲಿಗೆ ನಾಡ ಮೇಲೆ ತಾಯಿ ಕಾಡ್ಯ ಹೊರಟಿದ್ದಾರೆ. ಊರ ಮನೆ ಮನೆಗಳಲ್ಲಿ ಕಲಶ ಇಳಿಸಿ ಹೂ ಇರಿಸಿ, ಕಾಯಿ ಒಡೆದು ಕೈ ಮುಗಿದು ಪೂಜೆ ಮಾಡುವರು. ಮನೆಯಲ್ಲಿ ಸಂತಾನ, ಸಂಪತ್ತು ಸಮೃದ್ಧಿ ತುಂಬಬೇಕು ಎಂದು ಬೇಡುವರು.

## ೯.೧.೧೫ ಕೂಟದ ಹಾಡು

ಕೀಳೇಳಿ ಲೋಕದಲ್ಲಿ ಕೋಟೇಸುರ ಸ್ವಾಮಿ ಹುಟ್ಟಿ ಹನ್ನೆರಡು ದಿನಗಳಾಗಿವೆ. ಮೇಲೇಳಿ ಲೋಕದಲ್ಲಿ ಶಿವಭಾಮೆ ಹುಟ್ಟಿದ್ದಾಳೆ. ನಾರಾಯಣ ಸ್ವಾಮಿ, ನಗುರಾಸಿ

ಸ್ವಾಮಿ, ಕರಿಸೂರ ಸ್ವಾಮಿಗಳ ಮಾಯದ ಮಗಳು ಶಿವಭಾಮೆ (ಗೌರಿ) ಹುಟ್ಟಿ ವರುಷಗಳು ಉರುಳಿದವು. ಶಿವಭಾಮೆ ಹೆಣ್ಣು ಹೋಗಿ ಹೆಂಗುಸಾಗಿ ನೆರದಳು.

ತಂದೆಯರು ಕುಳಿತು ಮಗಳಿಗೆ ಮದುವೆ ಮಾಡಬೇಕೆಂದು ಯೋಚಿಸುತ್ತಾರೆ. ಭಾಮೆಗೆ ತಕ್ಕ ಗಂಡಾಗಬೇಕಲ್ಲ! ಅದಕ್ಕಾಗಿ ಮೇಲೇಳಿ ಲೋಕದ ಕೂಟ ಕೂಡಲು ನಿಶ್ಚಯಿಸುತ್ತಾರೆ. ಬರುಸ್ಯಾನುಬಯ್ಯ ಓಲೆ ಬರೆಯುತ್ತಾನೆ. ಕೂಟದಧಿಕಾರ ನಾಲ್ಕು ದಿಕ್ಕಿನ ದೇವತೆಗಳಿಗೆಲ್ಲ ಕೂಟಕ್ಕೆ ಬರುವಂತೆ ಹೇಳಿಕೆ ಮಾಡುತ್ತಾನೆ.

ಕೂಟಕ್ಕೆ ಸಿದ್ಧತೆ ನಡೆಯುತ್ತದೆ. ಮೇಲೇಳಿ ಲೋಕದ ದೇವಾನುದೇವತೆಗಳೆಲ್ಲ ಕೂಟದ ರಾಶಿಗೆ ಬಂದು ನೆರೆದಿದ್ದಾರೆ. ಶಿವಭಾಮೆ ಕೂಟದ ರಾಶಿಯನ್ನು ಪ್ರವೇಶಿಸುತ್ತಾಳೆ. ಬಂದ ದೇವತೆಗಳು ಯಾರೊಬ್ಬರೂ ಶಿವಭಾಮೆಗೆ ಒಪ್ಪಿಗೆಯಾಗಲಿಲ್ಲ. ಕೂಡಿದ ಮೇಲೇಳಿ ಲೋಕದ ಕೂಟ ಹಿರಿಯುತ್ತದೆ.

ತಂದೆಯರು ಕೀಳೇಳಿ ಲೋಕದ ಕೂಟ ಕೂಡಿಸುತ್ತಾರೆ. ರಾಜ ಮಹಾರಾಜರೆಲ್ಲ ಅವರವರ ಸ್ಥಾನಮಾನಕ್ಕೆ ತಕ್ಕಂಥ ಕಟ್ಟೆಯಲ್ಲಿ ಕುಳಿತಿದ್ದಾರೆ. ವಿವಾಹ ಕೂಟಕ್ಕೆ ಬಂದ ಶಿವಭಾಮೆ ಯಾರೊಬ್ಬರಿಗೂ ಒಲಿಯಲಿಲ್ಲ. ಕೂಟಕ್ಕೆ ಬಾರದ ಕೋಟೇಸುರ ಸ್ವಾಮಿಗೆ ಬರುವಂತೆ ಕರೆಹೋಯಿತು. ಕೋಟೇಸುರ ಸ್ವಾಮಿಯನ್ನು ಕಂಡ ಶಿವಭಾಮೆ ಪ್ರಪಂಚದ ಹೂ ಮಾಲೆಯನ್ನು ತಿರಸ್ಕರಿಸಿ ನರಮನುಷ್ಯರು ಕಾಣದ ಅತ್ತಿಯ ಹೂವಿನ ಮಾಲೆಯನ್ನು ಸ್ವಾಮಿಯ ಕೊರಳಿಗೆ ಹಾಕಿದಳು. ಸ್ವಾಮಿಗೂ ಭಾಮೆಗೂ ಧಾರೆಯಾಯಿತು. ಕೋಟೇಸುರ ಸ್ವಾಮಿ ಶಿವಭಾಮೆ ಯೊಂದಿಗೆ ತಮ್ಮರಮನೆಗೆ ಬಂದರು. ಕೂಟಕ್ಕೆ ಹೋಗಿ ಮೈಮಾಸಿದ ಕೋಟೇಸುರ ಸ್ವಾಮಿ ಶಿವಗಂಗೆಯಲ್ಲಿ ಸ್ನಾನ ಮಾಡಬೇಕು ಎಂದರು. ಶಿವಭಾಮೆ ಎಣ್ಣೆ ಹಚ್ಚಿಸಿ ಸ್ನಾನಕ್ಕೆ ವ್ಯವಸ್ಥೆ ಮಾಡುತ್ತಾಳೆ. ಹೊನ್ನ ಕುದುರೆ ಹತ್ತಿ ಸ್ವಾಮಿ ಹೊರಡುತ್ತಾರೆ. ಹೊರ ಬಾಗಿಲಿಗೆ ಬರುವಾಗ ಅರಮನೆಯ ಹೊನ್ನ ದಾರಂದ ತಲೆಗೆ ಬಡಿಯುತ್ತದೆ. ಮನೆಮುಂದಿನ ಮಲಗದ್ದೆಗೆ ಬಂದಾಗ ಅಲ್ಲಿನ ಅಶ್ವತ್ಥಮರ ಬೇರು ಸಹಿತ ಬೀಳುತ್ತದೆ. ಏರಿದ ಕುದುರೆ ಮುಗ್ಗರಿಸುತ್ತದೆ. ಅಪಶಕುನವಾಗುತ್ತದೆ.

ಸಮಾಧಾನ ಹೇಳಿಕೊಂಡು ಸ್ವಾಮಿ ಮುನ್ನಡೆಯುತ್ತಾರೆ. ಹೊನ್ನರಳಿ ಎಲೆಯಿಂದ ಹೊನ್ನದೋಣಿ, ಹುಟ್ಟು ಮಾಡಿ ಮಾಯದ ಅಂಬಿಗಾರನಿಗೆ ಕೊಡುತ್ತಾರೆ. ಸ್ವಾಮಿ ದೋಣಿಯಲ್ಲಿ ಕುಳಿತು ಹೊನ್ನಳಿವೆಗೆ ಬರುತ್ತಾರೆ. ದಾಸಿಯರು ಸ್ವಾಮಿಗೆ ಸ್ನಾನ ಮಾಡಿಸುವರು. ಗಂಗೆಸ್ನಾನ ಮಾಡಿ ಬಂದ ಸ್ವಾಮಿ ತಮ್ಮ ಜಡೆಯನ್ನು ಲೆಕ್ಕ ಮಾಡುವಾಗ ಉದ್ದದ ಒಂದು ಜಡೆ ನೀರಿನಿಂದ ಮೇಲೇಳಲಿಲ್ಲ. ಮಾಯದಂಬಿಗಾರನಿಗೆ ಆ ಜಡೆ ಹಿಡಿದು ನೀರೊಳಗೆ ಇಳಿದು ಜಡೆಯ

ಸುಳುಹನ್ನು ಕಂಡು ಬಾ ಎಂದರು. ಮಾಯದಂಬಿಗಾರ ಜಡೆ ಹಿಡಿದು ಕೆಳಗೆ ಹೋದರೆ ಆ ಜಡೆಯಲ್ಲಿ ಗಂಗೆ ಇದ್ದಾಳೆ! ಅಂಬಿಗಾರ ಸ್ವಾಮಿಯ ಜಡೆಬಿಡು ಎನ್ನುತ್ತಾನೆ. ಗಂಗೆ 'ಇಲ್ಲ. ಸ್ವಾಮಿಯನ್ನು ಮೆಚ್ಚಿ ನಾನು ಹಿಡಿದಿದ್ದೇನೆ, ಜಡೆ ಬಿಡುವುದಿಲ್ಲ' ಎಂದು ಜಡೆಯಲ್ಲಿ ಅಡಗಿಯೇ ಸ್ವಾಮಿಯ ಬಳಿಗೆ ಬರುತ್ತಾಳೆ.

ಜಡೆಯಲ್ಲೆ ಬಂದ ಶಿವಗಂಗೆಗೆ ಸ್ವಾಮಿ ಇಳಿದು ಹೋಗುವಂತೆ ಹೇಳುತ್ತಾರೆ. ಆದರೆ ಏನು ಹೇಳಿದರೂ ಆಕೆ ಒಪ್ಪಳು. 'ನಿಮ್ಮನ್ನು ನೆಚ್ಚಿನಾ ಬಂದಿದ್ದೇನೆ; ಬಿಡಲಾರೆ' ಎಂದು ಹಟ ಹಿಡಿಯುತ್ತಾಳೆ. 'ಅರಮನೆಯಲ್ಲಿ ನನ್ನ ಮಡದಿ ಶಿವಭಾಮೆ ಇದ್ದಾಳೆ. ಆಕೆ ಮಹಾ ಸಿಟ್ಟಿನವಳು. ನೀನು ಬಂದರೆ ನಿನ್ನನ್ನು ಹೊಡೆಯುವಳು. ಕಾಲಲ್ಲಿ ತುಳಿಯುವಳು, ಪೊರಕೆಯಿಂದ ಹೊಡೆಯುವಳು, ನನ್ನನ್ನು ಬಯ್ಯುವಳು, ದಯವಿಟ್ಟು ನನ್ನ ಜಡೆಯಿಂದ ಇಳಿದು ಹೊಗು' ಎನ್ನುತ್ತಾರೆ. ಸ್ವಾಮಿ ಎಷ್ಟು ಹೇಳಿದರೂ ಶಿವಗಂಗೆ ಹಿಡಿದ ಹಟ ಬಿಡಲಾರಳು.

ಇತ್ತ ಹೊನ್ನರಮನೆಯಲ್ಲಿ ಶಿವಭಾಮೆಗೆ ಸ್ವಾಮಿಯ ಜಡೆಯಲ್ಲಿ ಗಂಗೆ ಅಡಗಿದ್ದಾಳೆ ಎಂದು ಸ್ವಪ್ನ ಬೀಳುತ್ತದೆ. ಕೋಟೇಸುರ ಸ್ವಾಮಿ ಹೊನ್ನರಮನೆಗೆ ಬರುತ್ತಾರೆ. ಶಿವಭಾಮೆ ಬಾಗಿಲಲ್ಲಿ ಹೊನ್ನ ಹೂಜಿ, ಮಣ್ಣು ಹೂಜಿಯಲ್ಲಿ ಉದಕ ಹಿಡಿದು ಸ್ವಾಗತಿಸುತ್ತಾಳೆ. ಹೊನ್ನ ಹೂಜಿಯ ಉದಕದಲ್ಲಿ ಸ್ವಾಮಿಯ ಪಾದ ತೊಳೆಯುತ್ತಾಳೆ. 'ಮಣ್ಣೂಜಿಯ ಉದಕ ಯಾರಿಗೆ ಭಾಮೆ' ಸ್ವಾಮಿಯ ಪ್ರಶ್ನೆ. 'ನಿಮ್ಮ ಹೆಂಡತಿಗೆ, ನನ್ನ ಸವತಿಗೆ' ಎನ್ನುವಳು ಭಾಮೆ, ಏನೊಂದು ಉತ್ತರಿಸದೆ ಸ್ವಾಮಿ ಒಳನಡೆಯುತ್ತಾರೆ.

ಪಟ್ಟದರಿಸಿ ಶಿವಭಾಮೆ ಗೌಡಿಯರನ್ನು, ತೊತ್ತಿಯರನ್ನು ಕರೆದು ಸ್ವಾಮಿಯ ತಲೆಬಾಚಲು ಸಲಕರಣೆಗಳನ್ನು ಅಣಿ ಮಾಡುವಂತೆ ಹೇಳುತ್ತಾಳೆ. ಗಂಡನ ಹನ್ನೆರಡು ಜಡೆಗಳಿಗೂ ಎಣ್ಣೆಹಚ್ಚಿ ಬಣ್ಣದ ಬಾಚಣಿಗೆಯಿಂದ ಭಾಮೆ ತಾನೇ ಬಾಚುತ್ತಾಳೆ. ಅಡಗಿದ್ದ ಗಂಗೆ ಹಣ್ಣಡಕೆಯಾಗಿ ಕೆಳಗೆ ಬೀಳುತ್ತಾಳೆ. ಭಾಮೆಯ ಸಂಶಯ ಗಟ್ಟಿಯಾಗುತ್ತದೆ. ದಾಸಿಯರನ್ನು ಕರೆದು ಮೆಟ್ಟುಕತ್ತಿ ತರಿಸಿ ಹಣ್ಣಡಕೆಯನ್ನು ಒಡೆಯುತ್ತಾಳೆ. ಶಿವಗಂಗೆ ಲಿಂಬೆಯ ಹಣ್ಣಾಗಿ ಸ್ವಾಮಿಯ ಜಡೆ ಸೇರುತ್ತಾಳೆ. ಶಿವಭಾಮೆ ಬಿಡಳು. ಚಿನ್ನದ ಚೀರಣಿಗೆಯಿಂದ ಸ್ವಾಮಿಯ ಜಡೆ ಬಾಚುತ್ತಾಳೆ. ಲಿಂಬೆಯ ಹಣ್ಣು ಕೆಳಗೆ ಬೀಳುತ್ತದೆ. ಬಿದ್ದ ಲಿಂಬೆಯ ಹಣ್ಣನ್ನು ಹಿಡಿದು ಕತ್ತರಿಸುತ್ತಾಳೆ. ಶಿವಗಂಗೆ ಹೆಣ್ಣಾಗಿ ಎದ್ದು ನಿಲ್ಲುವಳು.

ಎದ್ದು ನಿಂತ ತಂಗಿ, ಅಕ್ಕನನ್ನು ನಾವಿಬ್ಬರೂ ಜತೆಯಾಗಿ ಒಂದೇ ಗಂಡನ ಜತೆ ಸಮಬಾಳು ನಡೆಸುವ ಎಂದು ಬೇಡಿಕೊಳ್ಳುತ್ತಾಳೆ.

ಶಿವಭಾಮೆಗೆ ಸಿಟ್ಟು ತಡೆಯಲಾಗಲಿಲ್ಲ. ಗಂಡನ ಪ್ರೀತಿಯಲ್ಲಿ ಪಾಲ್ಗೊಳ್ಳ ಬಂದ ಸವತಿಯಲ್ಲಿ ಅಸಹನೆ ಮೀರಿತು. ಕೋಪ ಉಕ್ಕಿತು. ಕಾಲಿನಿಂದ ತುಳಿಯ ಹೋದಳು. ಪೊರಕೆ ಹಿಡಿದು ಹೊಡೆದು ಹೋದಳು. ಈಗ ಗಂಗೆಗೂ ಚಿತ್ತ ಕದಡಿತು. ಕೋಪ ಕುದಿಯಿತು. 'ನಿನ್ನ ಹೊಲೆ ನಿನ್ನ ಕೈಯಲ್ಲೆ ತೊಳಿಸುತ್ತೇನೆ ನೋಡು' ಎಂದು ಶಪಥ ಮಾಡುತ್ತಾಳೆ. ಆಡಿದಂತೆ ಜಲದೇವತೆ ಶಿವಗಂಗೆ ನೀರಿನ ಕಣ್ಣನ್ನು ಕಟ್ಟಿದಳು. ಒಸರಿನ ನೆಲೆಯನ್ನು ಮುಚ್ಚಿದಳು. ಭೂಮಿ ಬಿಟ್ಟು ಪಾತಾಳಕ್ಕೆ ಇಳಿದು ಹೋದಳು.

ಶಿವಭಾಮೆಗೆ ಮುಟ್ಟಿನ ದಿನ ಬಂತು. ಸೂತಕ ಕಳೆಯಲು ನೀರಿಲ್ಲ. ಕಣ್ಣಲ್ಲಿ ಕಾಣಲೂ ನೀರಿನ ಹನಿ ಇಲ್ಲ. ಹಕ್ಕಿ ಪಕ್ಕಿ ಕುಡಿಯಲೂ ನೀರಿಲ್ಲ. ಮೊರೆಯುವ ಪಡುವಣ ಕಡಲೂ ತೊಟ್ಟು ನೀರಿಲ್ಲದಂತೆ ಬತ್ತಿ ಬರಿದಾಗಿದೆ. ಶಿವಭಾಮೆ ಎದೆಗುಂದಲಿಲ್ಲ. ಹೊಸ ಯೋಚನೆ ಮಾಡಿದಳು. ಹನ್ನೆರಡು ದಾವಣಿ ಎಮ್ಮೆ ಕೊಂಡು ತಂದಳು. ಹಾಲು ಕರೆದು ಕೊಪ್ಪರಿಗೆಗೆ ತುಂಬಿದಳು. ಆ ಹಾಲಲ್ಲೆ ಮಿಂದು ಒಳ ಬಂದಳು. ಇದನ್ನು ಕಂಡ ಕೋಟೇಶ್ವರ ಸ್ವಾಮಿ 'ಹಾಲಲ್ಲಿ ಮಿಂದು, ಬಟ್ಟೆ ಮಡಿ ಮಾಡಿದರೆ ಸೂತಕ ಕಳೆಯದು, ನನ್ನರಮನೆಯೊಳಗೆ ಬರಬೇಡ' ಎಂದು ಮಡದಿಯನ್ನು ತಡೆಯುತ್ತಾರೆ.

ಶಿವಭಾಮೆಗೆ ದಾರಿ ತೋಚಲಿಲ್ಲ. ನೇರ ಅನುಪಣ್ಣನ ಮನೆಗೆ ನಡೆದಳು. 'ಸೂಜಿಯ ಗಾತ್ರದ ನೀರು ಬಿಡಣ್ಣ' ಎಂದು ತನ್ನ ಕಷ್ಟವನ್ನು ನಿವೇದಿಸಿಕೊಳ್ಳುವಳು. 'ಶಿವಗಂಗೆ ಸಿಟ್ಟಿನಿಂದ ಹೊರಟು ಹೋಗಿದ್ದಾಳೆ. ನಾನು ನೀರು ಬಿಟ್ಟರೆ ನನ್ನನ್ನು ಹೊಡೆಯುವಳು ನಿನ್ನನ್ನು ಬಯ್ಯುವಳು. ನನ್ನಿಂದಾಗದು' ಎನ್ನುತ್ತಾನೆ.

ಅಲ್ಲಿಂದ ಹೊರಟ ಶಿವಭಾಮೆ ಆರೆಕಣ್ಣಿನ (ನೀರು) ಅಜ್ಜನ ಮನೆಗೆ ಬರುತ್ತಾಳೆ. 'ಕೊಳಲು ಗಾತ್ರದ ನೀರು ಬಿಡಜ್ಜ' ಎಂದು ಭಾಮೆ ಪ್ರಾರ್ಥಿಸುತ್ತಾಳೆ. 'ಶಿವಗಂಗೆ ಸಿಟ್ಟಿನಿಂದ ಹೊರಟು ಹೋಗಿದ್ದಾಳೆ. ನಾನು ನೀರು ಬಿಟ್ಟರೆ ನನ್ನನು ಹೊಡೆಯುವಳು ನಿನ್ನನ್ನು ಬಯ್ಯುವಳು. ನನ್ನಿಂದಾಗದು' ಎನ್ನುತ್ತಾನೆ.

ಶಿವಭಾಮೆ ಸಿಟ್ಟಿನಿಂದ ಥರಥರ ನಡುಗಿದಳು. ಮಡದಿಗೆ ಸ್ವಾಮಿ ಬುದ್ಧಿ ಹೇಳಿದರು. ತಲೆಬಾಗಿಸಿ ಶಿವಗಂಗೆಗೆ ಅಡ್ಡಬೀಳು ಎಂದರು. ಶಿವಭಾಮೆಗೆ ತಿಳಿವು ಮೂಡಿತು. ಸವತಿ ಶಿವಗಂಗೆಯೊಂದಿಗೆ ಒಂದಾಗಿ ಬಾಳುವುದೇ ಸರಿ ಎಂದೆನಿಸಿತು. 'ಒಬ್ಬ ಗಂಡನೊಂದಿಗೆ ಕೂಡಿ ಬಾಳುವ ತಂಗಿ' ಎಂದು ಸೆರಗೊಡ್ಡಿ ಕಾಲಿಗೆ ಬಿದ್ದು ಸವತಿಯನ್ನು ಕೇಳಿಕೊಳ್ಳುವಳು.

ಇಳಿದ ಗಂಗೆ ಏರಿ ಬಂದಳು. ಗಂಗೆ ನೀರಲ್ಲಿ ಭಾಮೆ ಮಿಂದಳು. ಉಟ್ಟ ಬಟ್ಟೆ ಮಡಿ ಮಾಡಿದಳು. ಅಕ್ಕ–ತಂಗಿ ಒಂದಾದರು. ಸ್ವಾಮಿಯ ಎಡಬಲದಲ್ಲಿ ಶಿವಗಂಗೆ ಶಿವಭಾಮೆ ನೆಲೆಯಾದರು.

## ೯.೧.೧೬ ಗಂಗೆ ಸ್ನಾನಕ್ಕೆ ಹೋಗುವ ಹಾಡು

ಜಾತಿ ಹೆಂಗಸರು ಐದು ಕಲಶಗಳನ್ನು ತಲೆಯ ಮೇಲೆ ಹೊತ್ತು ಗಂಗೆ ಸ್ನಾನಕ್ಕೆ ಜಾತಿಬಾಂಧವರೊಡನೆ ಹೋಗುತ್ತಾರೆ. ಬೈದ್ಯ ಈ ಹಾಡನ್ನು ಹಾಡುತ್ತ ಮುಂದಿನಿಂದ ಹೋಗುತ್ತಿರುತ್ತಾನೆ. ಕಾಡ್ಯನ ಮನೆ ಆವರಣದ ದೈವ ದೇವರುಗಳನ್ನೆಲ್ಲ ಶುದ್ಧಸ್ನಾನ ಮಾಡಿಸಿ ಸ್ವಸ್ಥಾನ ಸೇರಿಸುವುದು ಕಾಣುತ್ತದೆ. ತಾಯಿ ಮುಗ್ತಿನಮ್ಮ, ಸ್ಥಳದ ಹಾಯ್ಗುಳಿ, ಮುಂಡ್ಗಿ ಹಾಯ್ಗುಳಿ, ಬಬ್ಬರ್ಯರನ್ನು ಕೂಡಿಕೊಂಡು ಊರ ಮಂದಿ, ಜಾತಿ ಬಾಂಧವರು, ನೆಂಟರಿಷ್ಟರು, ಕೂಡು ಕುಟುಂಬದವರು ಗಂಗೆ ಸ್ನಾನಕ್ಕೆ ಹೋಗಬೇಕು. ವೇಳೆ ಸಂದು ಗಳಿಗೆ ಬಂದು ಶುಭಕಾಲ ಸನ್ನಿಹಿತವಾಗಿದೆ. ಗಂಗೆ ಸ್ನಾನಕ್ಕೆ ಹೊರಡಲು ಆನೆ ಕುದುರೆ ಸಿಂಗಾರವಾಗಿ ನಿಂತಿವೆ. ಕನಕದಂಡಿಗೆಯಲ್ಲಿ ಕುಳಿತು ದೇವಿ ಗಂಗೆ ಸ್ನಾನ ಮಾಡಿ ಬಂದಳು.

## ೯.೧.೧೭ ಕುದುರೆ ಕೋಲದ ಹಾಡು

ಗಂಗೆ ಸ್ನಾನಕ್ಕೆ ಹೋಗುವ ಸಂದರ್ಭದಲ್ಲಿ ಮೇರ ಹೆಂಗಸರು ಈ ಹಾಡನ್ನು ಹಾಡುತ್ತಾರೆ. ಹಿಂದೆ ಮುಂದೆ ಸಾವಿರ ಮಂದಿಯನ್ನು ಕೂಡಿಕೊಂಡು ನಡುವಿನಲ್ಲಿ ಹಾಯ್ಗುಳಿಯ ಬಿಳಿ ಆನೆಯೊಂದಿಗೆ ಗಾಮನ ಬಿಳಿ ಕುದುರೆ ಏರಿಕೊಂಡು, ಮುಗ್ತಿನಮ್ಮನ ಮರಿಮಟ್ಟೆ ಕೂಡಿಕೊಂಡು ಹೊನ್ನಿ ಗಂಗೆ ಸ್ನಾನಕ್ಕೆ ಹೊರಟಿದ್ದಾಳೆ. ಪಾಂಡಿ ಹೊಳೆಗೆ ನಡೆದಳು. ತುಂಬಿ ಹರಿಯುವ ನದಿಗೆ ಇಳಿಯಲು ಅವಳಲ್ಲಿ ದೋಣಿ ಇಲ್ಲ. ದುಃಖದಿಂದ ಕಣ್ಣೀರ ಸುರಿಸುವಳು. ಘಟ್ಟದ ಕಾಡೆಲೆ ತಂದು ದೋಣಿ ಮಾಡಿದಳು, ಚೊಟ್ಟು ಮುರಿದು ಹುಟ್ಟು ಮಾಡಿ ದೋಣಿ ನಡೆಸಿದಳು. ಬ್ಯಾಲಿಯ ಮರಕ್ಕೆ ತೊಟ್ಟಿಲು ಕಟ್ಟಿ ಮಗುವನ್ನು ಮಲಗಿಸಿದಳು. ಹಾಯ್ಗುಳಿಯನ್ನು, ಮುಗ್ತಿನಮ್ಮನನ್ನು ಕರೆದು ಗಂಗೆ ಸ್ನಾನ ಮುಗಿಸಿ ಗಡಿಗೆ ಬಂದಳು ಹೊನ್ನಿ.

## ೯.೧.೧೮ ರಣಸಿರಿ ಹಾಡು

ಮೇಲೇಳಿ ಲೋಕದ ನಾರಾಯಣ ಸ್ವಾಮಿ, ಕೀಳೇಳಿ ಲೋಕದ ರಣಸಿರಿದೇವಿ ಹೊನ್ನರಳಿ ಕಟ್ಟೆಯಲ್ಲಿ ಕವಡೆ ಆಡುತ್ತಿದ್ದಾರೆ. ಆಟ ನೋಡಲು ದೇವಾನುದೇವತೆಗಳೆಲ್ಲ ನೆರೆದಿದ್ದಾರೆ. ಆಟ ಮುಗಿಸಿ ನಾರಾಯಣ ಸ್ವಾಮಿ, ರಣಸಿರಿದೇವಿ

ತಮ್ಮರಮನೆಗೆ ಬಂದರು. ರಣಸಿರಿಗೆ ಮುಟ್ಟುಬಂದು ಆ ನೀರುನಿತ್ತು ಬಸಿರಾದಳು. ದಿನದಿಂದ ದಿನಕ್ಕೆ ಗರ್ಭಿಣಿಯ ಮೈಕಾಂತಿ ಹೆಚ್ಚುತ್ತ ಬಂದು ಹತ್ತು ತುಂಬಿದ ತಿಂಗಳಲ್ಲಿ ಹೆಣ್ಣುಮಗುವನ್ನು ಹಡೆದಳು.

ನಾರಾಯಣ ಸ್ವಾಮಿ ಮಗು ಹುಟ್ಟಿದ ಗಳಿಗೆ ಕೇಳಲು ಜೋಯಿಸರಲ್ಲಿಗೆ ಹೋದರು. ಕವಡೆಯಿಟ್ಟು ನೋಡಿದ ಜೋಯಿಸರು 'ಮಗು ಅಮವಾಸ್ಯೆ ಬೂದಿಯಾಗಿ ಹುಟ್ಟಿದೆ. ಶಿಶು ಹುಟ್ಟಿದ ಗಳಿಗೆಯಲ್ಲಿ ಹರದು ಹಾಲುಂಬಾಗ ತಾಯಿಗು ಮರಣ, ಕೂತು ಕೂಳುಂಬಾಗ ತಂದಿಗು ಮರಣ ಫಲವಿದೆ' ಎಂದರು. ಸುದ್ದಿ ಕೇಳಿದ ನಾರಾಯಣ ಸ್ವಾಮಿ ರಣಸಿರಿದೇವಿ ಇಬ್ಬರೂ ಮುರ್ಛೆ ಹೋಗುತ್ತಾರೆ. ಕೊನೆಗೆ ಮಗುವನ್ನು ದಾನ ಕೊಡುವುದು ಎಂದು ನಿಶ್ಚಯಿಸುತ್ತಾರೆ. ನಾಲ್ಕು ದಿಕ್ಕಿನ ದೇವತೆಗಳಿಗೆ ಯಾರಿಗೆ ದಾನ ಕೊಟ್ಟರೂ ಒಂದಲ್ಲ ಒಂದು ರೀತಿಯಲ್ಲಿ ಒಂದೇ ಕುಟುಂಬದವರಾಗುತ್ತಾರೆ. ಕಡೆಯಲ್ಲಿ ಹೊನ್ನು ಮಂದಾಸುಮಾಡಿ ಗಂಗೆಗೆ ದಾನ ಕೊಡುವುದು ಎಂದು ನಿರ್ಧರಿಸುತ್ತಾರೆ.

ಹೊನ್ನರಳಿ ಮರದಿಂದ ಹನ್ನೆರಡು ಕೋಣೆಗಳಿರುವ ಹೊನ್ನಪೆಟ್ಟಿಗೆ ಸಿದ್ಧವಾಯಿತು. ನಾಲ್ಕು ದಿಕ್ಕುಗಳ ದೇವತೆಗಳಿಗೆ, ಊರೂರಿಗೆ ಡಂಗುರ ಹೊಡಿಸಿದರು 'ಶಿಶುವನ್ನು ಶಿವಗಂಗೆಗೆ ದಾನ ಕೊಡುತ್ತೇವೆ ನೀವೆಲ್ಲ ಬರಬೇಕು; ಎಂದು. ಎಲ್ಲರೂ ಬಂದು ಸೇರಿದರು. ಹೊನ್ನ ಪೆಟ್ಟಿಗೆಯನ್ನು ಸಿಂಗರಿಸಿದರು. ಒಂದೊಂದು ಕೋಣೆಗೆ ಒಂದೊಂದು ಬಗೆಯ ಸಾಮಾನು ತುಂಬಿದರು. ಒಂದು ಕೋಣೆಯಲ್ಲಿ ಮಗುವನ್ನು ಇರಿಸಿದರು. ದೇವಾನುದೇವತೆಗಳು ಪೆಟ್ಟಿಗೆಗೆ ಪೂಜೆ ಮಾಡಿದರು. ಗಂಗೆಯಲ್ಲಿ ತೇಲಿಬಿಟ್ಟರು. ಅಸುರೀಯ ಗುಂಡಿಯಲ್ಲಿ ಹೋಗಿ ಮುಳುಗುತ್ತದೆ ಮಂದಾಸು. ಅಲ್ಲಿ ಹನ್ನೆರಡು ಮಂದಿ ಮುನಿಗಳು ತಪಸ್ಸು ಮಾಡುತ್ತಿದ್ದರು. ಹೊನ್ನ ಪೆಟ್ಟಿಗೆಗೆ ಅವರ ಜಡೆ ಸಿಕ್ಕಿ ಕೊಂಡಿತು. ಮಾಯದ ಅಂಬಿಗಾರನನ್ನು ಮಾಡಿ ಆ ಹೊನ್ನಪೆಟ್ಟಿಗೆಯನ್ನು ತರುವಂತೆ ಕಳುಹಿಸಿದರು. ಆತ ಕ್ಷಣದಲ್ಲೆ ಹೊನ್ನಪೆಟ್ಟಿಗೆಯನ್ನು ದಡಕ್ಕೆ ಎಳೆದು ತಂದನು.

ಮುನಿಗಳು ಹೊನ್ನಪೆಟ್ಟಿಗೆಯನ್ನು ಒಡೆಸಿದರು. ಅದರಲ್ಲಿ ಹನ್ನೆರಡು ವರ್ಷದ ಸುಂದರ ಹೆಣ್ಣುಮಗಳನ್ನು ಕಂಡು ಸಂತೋಷಗೊಂಡರು. ಆಕೆ ಮೂರು ಸೀನು ಸೀನಿದಳು. ಅದರಿಂದ ಆಕೆಗೆ ಸೀತಗ್ನಿ ಎಂದು ಹೆಸರಿಟ್ಟರು.

ಸೀತೆ ಬೆಳೆದು ದೊಡ್ಡವಳಾದಳು. ಸೀತೆಗೆ ಮದುವೆ ಮಾಡಬೇಕೆಂದು ಮುನಿಗಳು ಬಯಸಿದರು. ಸೀತೆಗೊಪ್ಪುವ ಗಂಡನಾಗಬೇಕಲ್ಲ! ಅದಕ್ಕಾಗಿ ಬಿಲ್ಲುಕಾಮನಬ್ಬ ಮಾಡಬೇಕೆಂದು ನಿಶ್ಚಯಿಸಿದರು.

ಅದರಂತೆ ಆಕಾಶ ತೂಕದ ಬಾಣ. ಭೂಮಿ ಭಾರದ ಬಿಲ್ಲು ಮಾಡಿಸಿದರು. ಯಾರು ಆ ಬಿಲ್ಲನ್ನು ಎತ್ತಿ ಹೊಡೆಯುತ್ತಾರೋ ಅವರಿಗೆ ಸೀತೆಯನ್ನು ಧರ್ಮಧಾರೆ ಎರೆದು ಕೊಡುವುದಾಗಿ ನಾಲ್ಕು ದಿಕ್ಕುಗಳಿಗೆ, ಸುತ್ತಿನ ಹತ್ತೆಂಟು ದೇಶಗಳಿಗೆ ಎಲ್ಲೆಲ್ಲೂ ಡಂಗುರ ಹೊಡೆಸಿದರು. ನಿಶ್ಚಿತ ದಿನದಂದು ಬಿಲ್ಲುಕಾಮನಬ್ಬ ವ್ಯವಸ್ಥೆಯಾಯಿತು. ದೇವಾನು ದೇವತೆಗಳು, ರಾಜಾಧಿರಾಜರುಗಳು ಎಲ್ಲರೂ ಸೀತೆಯನ್ನು ಮದುವೆಯಾಗುವ ಇಚ್ಛೆಯಿಂದ ಬಂದರು. ಆದರೆ ಆ ಬಿಲ್ಲು ಬಾಣದ ಸ್ವರೂಪವನ್ನು ಕಂಡೆ ಹೆದರಿ ತಮಗಾಗದು ಎಂದು ಹಿಂದಿರುಗಿದರು.

ಪಡುಲಂಕ ಕಡಲ ರಾವಣನಿಗೆ ಸ್ವಪ್ನವಾಗುತ್ತದೆ. ಸೀತೆಗೆ ಬಿಲ್ಲುಕಾಮನಬ್ಬ ಮಾಡುತ್ತಿದ್ದಾರೆ ಎಂದು. ಸ್ವಪ್ನ ಬಿದ್ದು ರಾವಣ ಅತ್ತ ಹೊರಡುತ್ತಾನೆ. ಇದು ಸೀತೆಗೆ ಅಂತರ್‌ದೃಷ್ಟಿಯಿಂದ ತಿಳಿಯುತ್ತದೆ. 'ರಾವಣ ಬಿಲ್ಲುಕಾಮನಬ್ಬಕ್ಕೆ ಬಂದು ಬಾಣಕ್ಕೆ ಕೈಯಿಕ್ಕಿದರೆ ಅವನು ಮುಗ್ಗರಿಸಿ ಬೀಳಬೇಕು. ಅವನ ಹಲ್ಲು ಮುರಿದು ಹೋಗಬೇಕು. ಕಾಲು ತುಂಡಾಗಬೇಕು' ಎಂದು ಶಾಪ ಕೊಡುತ್ತಾಳೆ. ಬಿಲ್ಲು ಕಾಮನಬ್ಬಕ್ಕೆ ಬಂದ ರಾವಣನಿಗೆ ಅದೇ ಗತಿಯಾಗುತ್ತದೆ. ರಾವಣ ಹೆದರಿ ಓಡಿ ಹೋಗುತ್ತಾನೆ.

ಬಿಲ್ಲುಕಾಮನಬ್ಬದ ಸಂಗತಿ ತಿಳಿದು ರಾಮ ಲಕ್ಷ್ಮಣನೊಡನೆ ಹೇಳುತ್ತಾನೆ. 'ಬಿಲ್ಲುಕಾಮನಬ್ಬಕ್ಕೆ ನಾವು ಹೋಗಬೇಕು. ಆದರೆ ಆ ವಿಶೇಷ ಬಿಲ್ಲುಬಾಣವನ್ನು ಎತ್ತಲು ಹನ್ನೆರಡು ವರುಷ ಉಪವಾಸ ಮಾಡಿರಬೇಕು.' ಆಗ ಲಕ್ಷ್ಮಣ 'ಆ ಬಾಣ ನನಗೆ, ಹೆಣ್ಣು ನಿಮಗೆ ಚಿಂತೆ ಮಾಡಬೇಡಣ್ಣ, ನಾನು ಹನ್ನೆರಡು ವರುಷ ಉಪವಾಸ ಇದ್ದೇನೆ" ಎಂದು ಬಾಯಿ ತೆರೆದು ತೋರುತ್ತಾನೆ. ಲಕ್ಷ್ಮಣನ ಗಂಟಲಲ್ಲಿ ಹೊನ್ನಬಣ್ಣದ ಸಾಲೆಬಲೆ ಕಟ್ಟಿದೆ! ರಾಮ ಆಶ್ಚರ್ಯ ಚಕಿತನಾಗುತ್ತಾನೆ. ಅಣ್ಣ ತಮ್ಮರಿಬ್ಬರೂ ಬ್ರಾಹ್ಮಣ ವೇಷತೊಟ್ಟು ಬಿಲ್ಲುಕಾಮನಬ್ಬಕ್ಕೆ ಹೋಗುತ್ತಾರೆ. ದಾರಿ ಮಧ್ಯದಲ್ಲಿ ರಾವಣ ಎದುರಾಗಿ 'ನೀವು ಎಲ್ಲಿಗೆ ಹೋಗುತ್ತೀರಿ? ಯಾವ ಊರಿಂದ ಬರುತ್ತಿದ್ದೀರಿ?' ಎಂದು ಕೇಳುತ್ತಾನೆ. 'ನಾವು ಕೀಳೇಳಿ ಲೋಕದ ಬಿಲ್ಲು ಹಬ್ಬಕ್ಕೆ ಹೊರಟಿದ್ದೇವೆ. ಆ ಬಿಲ್ಲು ಬಾಣವನ್ನು ಎತ್ತಿ ಹೊಡೆದು ಸೀತೆಯನ್ನು ಧರ್ಮಧಾರೆ ಮಾಡಿ ತರುತ್ತೇವೆ' ಎನ್ನುತ್ತಾರೆ. 'ನೀವು ಬಿಲ್ಲು ಕಾಮನಬ್ಬಕ್ಕೆ ಹೋಗಬೇಕಾದರೆ ಮೊದಲು ನನ್ನ ಬಾಣವನ್ನು ನೀವು ಎತ್ತಬೇಕು. ಇಲ್ಲ ಬಂದ ದಾರಿಯಲ್ಲಿ ಹಿಂದೆ ಹೋಗಿ' ಎನ್ನುತ್ತಾನೆ ರಾವಣ. ಇದನ್ನು ಕೇಳಿ ಲಕ್ಷ್ಮಣನಿಗೆ ಸಿಟ್ಟು ಬರುತ್ತದೆ. ಎಡಗಾಲಿನ ಬೆರಳಿನ ತುದಿಯಿಂದ ಆ ಬಾಣವನ್ನು ಹಾರಿಸುತ್ತಾನೆ. ಅದು ಏಳು ಸಮುದ್ರದ ಆಚೆಗಿನ ಕೀಳು ಸಮುದ್ರದಲ್ಲಿ ಹೋಗಿ ಬೀಳುತ್ತದೆ. ಆಗ ರಾವಣ ತನ್ನ ತಪ್ಪನ್ನು ಮನ್ನಿಸಿ ತನ್ನ ಬಾಣವನ್ನು ತರಿಸಿಕೊಡಬೇಕು ಎಂದು ಬೇಡಿಕೊಳ್ಳು

ತ್ತಾನೆ. ಮಂತ್ರದಲ್ಲೆ ರಾವಣನಿಗೆ ಬಾಣವನ್ನು ತಂದುಕೊಟ್ಟು ರಾಮಲಕ್ಷ್ಮಣರು ಮುನ್ನಡೆಯುತ್ತಾರೆ.

ರಾಮಲಕ್ಷ್ಮಣರು ಬಿಲ್ಲುಕಾಮನಬ್ಬಕ್ಕೆ ಬರುತ್ತಾರೆ. ಲಕ್ಷ್ಮಣ ಆ ಅದ್ಭುತ ಬಿಲ್ಲು ಬಾಣವನ್ನು ಎತ್ತಿ ಹೊಡೆಯುತ್ತಾನೆ. ಮಾತಿನಂತೆ ಸೀತೆಯನ್ನು ರಾಮನಿಗೆ ಧರ್ಮಧಾರೆಯಾಗುತ್ತದೆ. ಸೀತೆಯನ್ನು ಕರೆದುಕೊಂಡು ರಾಮಲಕ್ಷ್ಮಣರು ಹಿಂದಿರುಗುವರು.

ದಾರಿಯಲ್ಲಿ ಮೂವರು ಬರುತ್ತಿರುವಾಗ ದೂರದಲ್ಲಿ ಬಂಡೆಕಲ್ಲಿನ ಮೇಲೆ ಮುನಿಗಳು ತಪಸ್ಸು ಮಾಡುತ್ತಿರುವುದು ಕಾಣಿಸುತ್ತದೆ. ಅದೇ ಕಲ್ಲಿನ ಮೇಲೆ ಮಂಡೋದರಿ ಕಾಗೆ ಹೇಲು ಮಾಡಿ ಮುನಿಗಳ ತಪಸ್ಸನ್ನು ಕೆಡಿಸುತ್ತಿದೆ. ಇದನ್ನು ಕಂಡ ರಾಮ ಲಕ್ಷ್ಮಣರು ತಮ್ಮ ಬಾಣವನ್ನು ಕಾಗೆಗೆ ಗುರಿ ಇಡುವರು. ಆ ಕಾಗೆ ತಿರುಪತಿಗೆ, ಧರ್ಮಸ್ಥಳಕ್ಕೆ, ಕೊಲ್ಲೂರಿಗೆ, ಕೋಟೇಶ್ವರಕ್ಕೆ ಎಲ್ಲೆಲ್ಲಿ ಹೋದರೂ ಬಾಣ ಬೆನ್ನುಹತ್ತಿ ಹೋಗುತ್ತದೆ. ಕಡೆಗೆ ರಾಮ ಬಾಣ ಮಂಡೋದರಿ ಕಾಗೆಯ ಬಲ್ಲಗಣ್ಣಿಗೆ ಬಡಿದು ಕಣ್ಣನ್ನು ಕಿತ್ತುಕೊಳ್ಳುತ್ತದೆ.

## ೯.೧.೧೯ ಬ್ರಹ್ಮಯ್ಯರ ಹಾಡು

ಬ್ರಹ್ಮಮಂಡಲದಲ್ಲಿ ಬ್ರಹ್ಮಯ್ಯ ಹುಟ್ಟಿದ್ದಾನೆ. ತಂಗಿ ಮಾಜೋಕು ರಾಕ್ಷಸಿ, ಪಾತಾಳದಲ್ಲಿ ಹುಟ್ಟಿದ್ದಾಳೆ. ಬ್ರಹ್ಮಯ್ಯ ಬಡಗು ದಿಕ್ಕಿಗೆ ಹೋಗಿ ಬಡಗಿನ ದೇಶಗಳನ್ನೆಲ್ಲ ಆಳಿಕೊಂಡಿದ್ದಾನೆ. ಮಾಜೋಕು ತೆಂಕು ಸೇರಿ ತೆಂಕಿನ ದೇಶಗಳನ್ನೆಲ್ಲ ಆಳುತ್ತಿದ್ದಾಳೆ.

ಒಂದು ದಿನ ಮಾಜೋಕುಗೆ ಅಣ್ಣನ ನೆನಪಾಗುತ್ತದೆ. ಕಾಣುವ ಆಸೆಯಾಗುತ್ತದೆ. ಹರದು ಹಾಲು ಉಂಬಾಗ ಅಣ್ಣನನ್ನು ಕಾಣಲಿಲ್ಲ. ಕೂತು ಕೂಳು ಉಂಬಾಗ ಅಣ್ಣನನ್ನು ಕಾಣಲಿಲ್ಲ. ಅಣ್ಣನನ್ನು ಕಾಣದೆ ಹನ್ನೆರಡು ವರುಷಗಳಾದವು. ಅಣ್ಣನ ಮನೆಗೊಮ್ಮೆ ಹೋಗಬೇಕು ಎಂದುಕೊಳ್ಳುತ್ತಾಳೆ. ಮಾಜೋಕು ಬಡಗಿಯ ಮನೆಗೆ ಹೋದಳು. ಮೂರು ದುಡ್ಡಿಗೆ ಡೋಲು ಮಾಡಿಸಿ ತಂದಳು. ಅಣ್ಣ ಬ್ರಹ್ಮಯ್ಯನ ಅರಮನೆಗೆ ಹನ್ನೆರಡು ಬಾಗಿಲು, ಹನ್ನೆರಡು ಕಾವಲು, ಹನ್ನೆರಡು ಕಾವಲಿಗೆ ತಿನಿಸಿದ ಹನ್ನೆರಡು ಹೊರೆ ಕಟ್ಟಿಸಿದಳು. ಆಳಿನ ಮೇಲೆ ಹೊರಿಸಿದಳು. ಅಣ್ಣನ ಅರಮನೆಗೆ ಹೊರಟಳು.

ತನ್ನ ಮನೆಯಿಂದ ಹೊರಡುವಾಗ ಒಂದು ಬಾರಿ ಡೋಲನ್ನು ಬಡಿದಳು. ಅದು ಅಣ್ಣ ಬ್ರಹ್ಮಯ್ಯನ ಅರಮನಗೆ ಕೇಳಿಸಲಿಲ್ಲ. ದಾರಿ ಹಿಡಿದು ನಡೆದಳು.

ದಾರಿ ಮಧ್ಯದಲ್ಲಿ ಎರಡನೆಯ ಬಾರಿ ಡೋಲು ಹೊಡೆದಳು. ಡೋಲಿನ ಸದ್ದು ಅಣ್ಣನಿಗೆ ಕೇಳಿಸಿತು. ತಂಗಿ ಮಜೋಕು ಬರುತ್ತಿದ್ದಾಳೆ ಎಂದು ತಿಳಿಯಿತು. ನನ್ನ ತಂಗಿ ಮಾಜೋಕು ಬರುತ್ತಿದ್ದಾಳೆ. ನರ ಮನುಷ್ಯರನ್ನು ತಿನ್ನುವ ರಾಕ್ಷಸಿ ಅವಳು ಎಂದು ಹಾದಿ ಬೀದಿಯ ಒಕ್ಕಲುಗಳನ್ನು ತೆಗೆಸಿದ್ದನು.

ಅಣ್ಣ ಬ್ರಹ್ಮಯ್ಯ ತಂಗಿಯ ಬರವಿನ ನಿರೀಕ್ಷೆಯಲ್ಲೆ ಇರುವನು. ಮಾಜೋಕು ಅಣ್ಣನ ಅರಮನೆಯ ಬಾಗಿಲಿಗೆ ಬಂದಳು. ಹನ್ನೆರಡು ಬಾಗಿಲ ಕಾವಲಿಗೆ ನಿಂತ ಆನೆ, ಕುದುರೆ, ಕತ್ತೆ, ಹೋರಿ, ಎತ್ತು, ಕೋಳಿ, ನಾಯಿ, ಬೆಕ್ಕು, ಒಂಟೆ, ಹುಲಿ, ಸರ್ಪಗಳಿಗೆ ಅವುಗಳಿಗೆ ತಕ್ಕ ಆಹಾರದ ಹೊರೆ ನೀಡಿದಳು. ಹನ್ನೆರಡು ಬಾಗಿಲುಗಳನ್ನು ದಾಟಿ ಒಳ ನಡೆದಳು. ಅಣ್ಣ ತಂಗಿಯನ್ನು ಕಂಡು 'ಹಸಿವಿಗೆ ಹಾಲ್ಹಣ್ಣು ಮೆಲುಬೇಕು ತಂಗಿ, ಬಾಯೇರಿಗ್ ಹಾಲು ಕುಡಿಬೇಕು ತಂಗಿ, ಕೂಪಲ್ಲಿಗ್ ಹೊನು ಕುರ್ಚಿ ಕೂರಬೇಕು ತಂಗಿ' ಎಂದು ಪ್ರೀತಿಯಿಂದ ಸತ್ಕರಿಸುತ್ತಾನೆ. ನನಗೇನೂ ಬೇಡವೆಂದ ಮಾಜೋಕು ನಿನಗೆ ಬಂದಿರುವ ಕಷ್ಟವನ್ನು ಬಿಡಿಸಿಹೋಗಲು ಬಂದಿದ್ದೇನೆ ಎನ್ನುವಳು. ಅದಕ್ಕೆ ಬೇಕಾದ ಸಂಗ್ರಹ – ಹನ್ನೆರಡು ತೆಂಗಿನಕಾಯಿ, ಹನ್ನೆರಡು ಸಿದ್ದಕ್ಕಿ, ಹನ್ನೆರಡು ಕೊಟ್ಟೆ ಹಾನ, ಹನ್ನೆರಡು ಕೋಳಿ ಎಲ್ಲವನ್ನೂ ತರಿಸಿಕೊಂಡಳು. ಅಣ್ಣನನ್ನು ಕೂಡಿಕೊಂಡು ಹೊರಟಳು. ಮೂರು ದಾರಿ ಕೂಡುವಲ್ಲಿ ಅಣ್ಣನನ್ನು ಕೂರಿಸಿದಳು. ಹನ್ನೆರಡು ಸಿದ್ದಕ್ಕಿ ಚರು ಹೊಯ್ದಳು. ಹನ್ನೆರಡು ಕೋಲು ನೆಣೆ ಉರಿಸಿದಳು. ಹನ್ನೆರಡು ಕಾಯಿ ಒಡೆದು ಹನ್ನೆರಡು ಕೋಳಿ ಕಡಿದಳು. ಅಣ್ಣನ ಕಷ್ಟ ಪರಿಹಾರವಾಯಿತು.

ಮಾಜೋಕು ದಾರಿ ಕೂಡಿ ತನ್ನರಮನೆಗೆ ನಡೆದಳು. ಈಚೆಯಿಂದ ಮಾಜೋಕು ಬರುತ್ತಿರುವಾಗ ಆಚೆಯಿಂದ ಮನುಷ್ಯನೊಬ್ಬ ಬರುತ್ತಿದ್ದ. ಅವನನ್ನು ಕಂಡೊಡನೆ ಮಾಜೋಕು ಅವನನ್ನು ಬೆರುಸಿ ಬೆನ್ನಟ್ಟಿದಳು. ಅಂಗೈಯಲ್ಲಿ ಹಾರಿ ಹಿಡಿದಳು. ಮುಂಗೈಯಲ್ಲಿ ಮುರಿದಳು. ತನ್ನ ಉದ್ದನೆಯ ಚೂಪಾದ ಉಗುರಿನಿಂದ ಬಗಿದು ತಿಂದಳು. ಸಂತೋಷದಿಂದ ಮುನ್ನಡೆದಳು. ಇನ್ನಷ್ಟು ದೂರ ಹೋಗುವಾಗ ಎದುರಿನಿಂದ ದೇವರಕಂದ ಬರುವುದನ್ನು ಕಂಡಳು. ಅವನನ್ನು ಬೆರುಸಿ ಹಿಡಿದಳು. ಅಶ್ವತ್ಥ ಕಟ್ಟೆಯನ್ನು ಕಟ್ಟಿಸಿದಳು. ಅಲ್ಲಿ ದೇವರಕಂದನನ್ನು ಸ್ಥಾಪನೆ ಮಾಡಿದಳು. ಪಾಪಕೆ ನರಮನುಷ್ಯನನ್ನು ಕೊಂದೆ ಪುಣ್ಯಕೆ ಹೊನ್ನಕಟ್ಟೆ ಕಟ್ಟಿಸಿ ದೇವರನ್ನು ಪ್ರತಿಷ್ಠಾಪಿಸಿದೆ. ಇನ್ನು ನನ್ನ ಪಾಪ ಪರಿಹಾರವಾಯಿತು ಎಂದುಕೊಂಡಳು.

## ೧೦.೧ ಪಠ್ಯವಿಶ್ಲೇಷಣೆ

ಕಾಡ್ಯನಾಟದ ಸಂದರ್ಭದಲ್ಲಿ ಪ್ರದರ್ಶಿತವಾಗುವ ಪಠ್ಯ (ಶಾಬ್ದಿಕ)ವನ್ನು ಜನಪದಗೀತೆ (Folk songs) ರೂಪದವುಗಳು ಹಾಗೂ ಜನಪದ ಕಥನಕಾವ್ಯ (Folk narrative) ಗಳೆಂದು ಎರಡಾಗಿ ವಿಂಗಡಿಸಬಹುದು. ಗುರುಶಾಸ್ತ್ರ, ಕಲಶಮಾಡುವ ಹಾಡು, ಕಲಶ ತರುವ ಹಾಡು, ಕಂಬ ಮುಹೂರ್ತ ಮಾಡುವ ಹಾಡು, ಮಂಡಲ ಬರೆವ ಹಾಡು, ಜಕ್ಕಿಯರ ಹಾಡು, ಕಲಶ ನಾಡಮೇಲೆ ಹೋಗುವ ಹಾಡು, ಗಂಗೆ ಸ್ನಾನಕ್ಕೆ ಹೋಗುವ ಹಾಡು, ಕುದುರೆ ಕೋಲದ ಹಾಡುಗಳು ಮೊದಲ ಪ್ರವರ್ಗಕ್ಕೆ ಸೇರುತ್ತವೆ. ಕಾಡ್ಯನಹುಟ್ಟು, ಅಜ್ಜರ ಹುಟ್ಟು, ಹೆಣ್ಣು ಮಕ್ಕಳ ಹುಟ್ಟು, ಯುಗಮಗುಚುವ ಹಾಡು, ಪಾಪದೋಷರ ಹಾಡು, ಗೋವಕ್ಕಿಹಾಡು, ಕೂಟದ ಹಾಡು, ರಣಸಿರಿ ಹಾಡು, ಬ್ರಹ್ಮಯ್ಯರ ಹಾಡು – ಇವು ಎರಡನೆಯ ಪ್ರವರ್ಗದಲ್ಲಿ ಬರುತ್ತವೆ.

ಮೊದಲ ಪ್ರವರ್ಗಕ್ಕೆ ಸೇರುವ ಜನಪದ ಗೀತ ರೂಪದವುಗಳು ಕ್ರಿಯಾತ್ಮಕವಾದವುಗಳು. ಕ್ರಿಯೆಯ ಪ್ರೇರಣೆಯಿಂದ ಬಳಕೆಯಾಗುವ ಮೂಲಕ ಒಂದು ಬಗೆಯ ಸಾಮಾಜಿಕ ಉದ್ದೇಶವನ್ನು ನೆರವೇರಿಸುತ್ತವೆ. ಜೊತೆಗೆ ವಿಶಿಷ್ಟ ಆಚರಣೆಯೊಂದಕ್ಕೆ ಸನ್ನದಿನ (Charter) ರೂಪದಲ್ಲಿ ಕೆಲಸ ಮಾಡುತ್ತವೆ. ಈ ಹಾಡುಗಳಲ್ಲಿ ಸಾಮಾನ್ಯವಾಗಿ ಕಥೆ ಇರುವುದಿಲ್ಲ. ಒಂದು ಸಂಗತಿ, ಘಟನೆ, ಭಾವವನ್ನು ವಿವರಿಸುವುದರಲ್ಲೇ ಅದು ಕೊನೆಗೊಳ್ಳುತ್ತದೆ. ಒಂದು ವಿಧಿ ಅಥವಾ ಆಚರಣೆಯ ಸಂದರ್ಭದಲ್ಲಿ ಪ್ರದರ್ಶಿತವಾಗುವ ಈ ಹಾಡುಗಳು ಜನಪದ ಗೀತೆಯೊಳಗಿನ ಮಾಂತ್ರಿಕಗೀತೆ (Shamanistic)ಯ ಕಕ್ಷೆಯೊಳಗೆ ಬರುತ್ತವೆ.

ಎರಡನೆಯ ಪ್ರವರ್ಗಕ್ಕೆ ಸೇರುವ ಹಾಡುಗಳು ಬಹುಮಟ್ಟಿಗೆ ಕಥನಕಾವ್ಯ ಅಥವಾ ಖಂಡಕಾವ್ಯದ ಹರಹನ್ನು ಒಳಗೊಂಡವುಗಳಾಗಿವೆ. ಕಾಡ್ಯನಾಟದ ಹಾಡುಗಳನ್ನು ಆಚರಣೆಯ ಸಂದರ್ಭದಲ್ಲಿ ಮೇರ (ಹರಿಜನ) ಜಾತಿಯ ಒಂದು ವಿಶಿಷ್ಟ ಮನೆತನಕ್ಕೆ ಸೇರಿದ 'ಬೈದ್ಯ' ದೀಕ್ಷೆಯನ್ನು ಪಡೆದವನು ಮಾತ್ರ ಹಾಡಬೇಕಾಗಿದೆ. ಹೀಗೆ ಇಂತಹ ವಿಶಿಷ್ಟ ಸಂದರ್ಭಗಳಲ್ಲಿ ಗೊತ್ತಾದ ಜನವರ್ಗ ಮಾತ್ರ ಹಾಡಬೇಕೆನ್ನುವುದು ಗಣನೀಯ ವಿಚಾರ.

ಜನಪದ ಗೀತದ ಹರಹನ್ನು ಮೀರಿ ಕಥನಕಾವ್ಯ. ಖಂಡಕಾವ್ಯದ ಮಹತ್ತನ್ನು ಹೊಂದಿರುವ ಇಲ್ಲಿನ ಕೆಲವು ಗೀತಗಳಲ್ಲಿ ಪುನರಾವೃತ್ತಿ, ಸಾಂಪ್ರದಾಯಿಕ ಸೂತ್ರಗಳು, ಕ್ರಿಯೆಗಳ ವಿವರವಾದ ನಿರೂಪಣೆ, ಅಲಂಕಾರಿಕ ವಿಶೇಷಣಗಳು ಹಾಗೂ

ಉಪಮೆಗಳನ್ನು ಗುರುತಿಸಬಹುದಾಗಿದೆ. ಈ ಲಕ್ಷಣಗಳು ಒಂದು ಜನಪದಕಾವ್ಯದ ಅನಿವಾರ್ಯ ಗುಣವಾದ ಸಾವಕಾಶತೆ (retardation)ಯನ್ನು ತರಬಲ್ಲವಾಗಿವೆ.

ಜನಪದ ಕಾವ್ಯಗಳಲ್ಲಿ ಹಲವು ಬಗೆಯ ಪುನರಾವೃತ್ತಿ ಕಾಣಿಸುತ್ತವೆ. ಅವುಗಳಲ್ಲಿ ಒಂದು ಕೇಂದ್ರೀಯ ಪುನರಾವೃತ್ತಿ ಇನ್ನೊಂದು ಚೌಕಟ್ಟಿನ ಪುನರಾವೃತ್ತಿ (nuclcus repetition) ಇನ್ನೊಂದು ಚೌಕಟ್ಟಿನ ಪುನರಾವೃತ್ತಿ. (frame repctition) ಕೇಂದ್ರೀಯ ಪುನರಾವೃತ್ತಿಯಲ್ಲಿ ಆಶಯ ಹಾಗೂ ಚೌಕಟ್ಟು ಎರಡರಲ್ಲೂ ಬದಲಾವಣೆ ಆಗುವುದಿಲ್ಲ. ಚೌಕಟ್ಟಿನ ಪುನರಾವೃತ್ತಿಯಲ್ಲಿ ಕೇಂದ್ರೀಯ ಆಶಯ ಒಂದೇ ಆಗಿದ್ದು ಸಣ್ಣಪುಟ್ಟ ಬದಲಾವಣೆಗೆ ಒಳಗಾಗುತ್ತದೆ. ಕೇಂದ್ರೀಯ ಪುನರಾವೃತ್ತಿಗೆ ದೃಷ್ಟಾಂತವನ್ನು ಇಲ್ಲಿನ 'ಹೆಣ್ಣು ಮಕ್ಕಳ ಹುಟ್ಟು' ಕಾವ್ಯದಿಂದ ಎತ್ತಿ ಹೇಳಬಹುದು. ನಗುರಾಸಿಸ್ವಾಮಿ ದದುಬಾಲಿ ದೇವಿಯಲ್ಲಿಗೆ ಬಳೆಗಾರ ವೇಷ ತೊಟ್ಟು ಬಂದು ಆಕೆಗೆ 'ಧಾರೆ ಬಳೆ' ಕೊಟ್ಟು ಹೋದುದು ಅದಕ್ಕೆ ಪ್ರತಿಯಾಗಿ ದದುಬಾಲಿ ಗಂಡುರೂಪ ತೊಟ್ಟು ಅವರಿಗೆ 'ಧಾರೆಮುತ್ತು' ನೀಡಿ ಬಂದ ಪ್ರಸಂಗವನ್ನು ಆಕೆ ತನ್ನ ಅಜ್ಜನಿಗೆ ಯಥಾವತ್ತಾಗಿ ಅದೇ ಪದಸಮೂಹಗಳನ್ನು ಬಳಸಿ ಹೇಳುವಲ್ಲಿ ಈ ಬಗೆಯ ಪುನರಾವೃತ್ತಿಯನ್ನು ಕಾಣಬಹುದು. ಇಂಥ ಪುನರಾವೃತ್ತಿ ಇಲ್ಲಿನ ಕಾವ್ಯಗಳಲ್ಲಿ ಇನ್ನೂ ಹಲವೆಡೆ ತಲೆ ಹಾಕಿವೆ.

ಚೌಕಟ್ಟಿನ ಪುನರಾವೃತ್ತಿ ಕೂಡಾ ಇಲ್ಲಿ ಅಲ್ಲಲ್ಲಿ ಕಾಣಿಸುತ್ತವೆ. ಭಾವನನ್ನು ಕೂಡಿ ಬಸುರಿಯಾದ ಹಲುಬಾಲಿ ಅಕ್ಕ ದದುಬಾಲಿಯಲ್ಲಿಗೆ ಬಂದು ಹೆರಿಗೆಗೆ ಜಾಗ ಬೇಡುವ ಪ್ರಸಂಗ. ಭಾವನ ಕೋಣೆ, ಅಡುಗೆ ಕೋಣೆ, ಕೋಣನ ಹಟ್ಟಿ, ಎತ್ತಿನ ಲಾಡ, ಕೋಳಿ ಗೂಡು – ಹೀಗೆ ಒಂದೊಂದಾಗಿ ಬೇಡುವಲ್ಲಿ ಅಕ್ಕ ದದುಬಾಲಿ ಪ್ರತಿಯೊಂದನ್ನು ಒಂದಲ್ಲ ಒಂದು ನೆಪವೊಡ್ಡಿ ನಿರಾಕರಿಸುವಲ್ಲಿ ಒಂದೇ ಆಶಯವು ಕೊಂಚ ಬದಲಾವಣೆಯೊಂದಿಗೆ ಪುನರಾವೃತ್ತಿಗೊಳ್ಳುತ್ತದೆ. ಇಂತಹ ಪುನರಾವೃತ್ತಿಗಳು ಜನಪದ ಕಾವ್ಯದ ಲಕ್ಷಣಗಳಲ್ಲಿ ಒಂದಾದ ಸಾವಕಾಶತೆಗೆ ಕಾರಣವಾಗುತ್ತವೆ.

ಜನಪದ ಕಾವ್ಯಗಳು ಸಾಮಾನ್ಯವಾಗಿ ನಿರ್ದಿಷ್ಟ ಸಂಗತಿಗಳನ್ನು ಹೇಳುವಲ್ಲಿ ಸಾಂಪ್ರದಾಯಿಕ ಸೂತ್ರಗಳನ್ನು (Traditional Formula) ಬಳಸುವುದುಂಟು. 'ಸೂತ್ರವೆಂದರೆ ಒಂದು ನಿರ್ದಿಷ್ಟ ಛಂದೋರಚನೆಯ ಚೌಕಟ್ಟಿನೊಳಗೆ ಅಗತ್ಯವಾದ ಒಂದು ಆಲೋಚನೆಯನ್ನು ವ್ಯಕ್ತಪಡಿಸಲು ಬಳಸುವ ಪದಗಳ ಗುಂಪು' (Albert B - Lord 1961 PP 30-67) ಹೀಗಾಗಿ ಪ್ರತಿ ಪ್ರದರ್ಶನದಲ್ಲಿ ಸಂರಚನೆಗೊಳ್ಳುವ ಮೌಖಿಕ ಕಾವ್ಯವು ಹೊಸದೇ ಆಗಿರುತ್ತದೆ ಎಂಬ ಸಿದ್ಧಾಂತವು ವಿದ್ವಾಂಸರಲ್ಲಿ

ಮೂಡಿಬಂದಿತು. ಆದರೆ ಇತ್ತೀಚಿನವರೆಗೂ ನಮ್ಮಲ್ಲಿ ಜನಪದ ಕಾವ್ಯಗಳು ಗಾಯಕರಲ್ಲಿ ಬಾಯಿಪಾಠದ ಮೂಲಕವೇ ಯಾವುದೇ ಬದಲಾವಣೆಯಿಲ್ಲದೆ ಯಥಾವತ್ತಾಗಿ ಪಳೆಯುಳಿಕೆಯ ರೂಪದಲ್ಲಿ ಹೊಮ್ಮುತ್ತವೆ ಎಂದು ನಂಬಲಾಗಿತ್ತು. ಗಾಯಕನೊಬ್ಬ ಸೃಷ್ಟಿಶೀಲ ಕಲಾವಿದ ಎಂಬ ಅಲೋಚನೆಯೇ ಇರಲಿಲ್ಲ. ವಾಸ್ತವಿಕವಾಗಿ ಬದುಕಿನ ಅಂಗವಾದ ಜನಪದ ಕಾವ್ಯವೊಂದು (ಕತೆ ಕೂಡಾ) ಅವನ 'ಭಂಡಾರ' (Repertoire)ದಲ್ಲಿ ಅಂತಸ್ಥಗೊಂಡಿರುತ್ತದೆ. ಅದು ವಾಸ್ತವ ಶರೀರರೂಪಧಾರಣೆ ಮಾಡಿರುವುದಿಲ್ಲ.

ಅದನ್ನು ಆತ ಈ ಹಿಂದೆ ತನ್ನ ಬಂಧು-ಬಾಂಧವರು ಅಥವಾ ಇತರ ಗಾಯಕರು ಹಾಡುವುದನ್ನು ಹಲವಾರು ಕೂರುಗಳಲ್ಲಿ ಕೇಳಿ ಕತೆಯ ಪಾತ್ರ, ಸನ್ನಿವೇಶ, ಅರ್ಥ, ರೂಪ, ಧಾಟಿ, ಸೂತ್ರ ಇವುಗಳನ್ನು ಒಳಗು ಮಾಡಿಕೊಳ್ಳುತ್ತಾನೆ. ಹಾಗೆ ಕೇಳಿದುದನ್ನು ಒಂಟಿಯಾಗಿ ತನ್ನಲ್ಲಿ ಗುಣುಗುಣಿಸುತ್ತ ಹಾಡಾಗಿಸಲು ಪ್ರಯತ್ನಿಸುತ್ತಾನೆ. ಮುಂದೆ ಪ್ರಧಾನಗಾಯಕನಿಗೆ ಒತ್ತುಗಾಯಕನಾಗಿ ಹಾಡುತ್ತಾ ತನ್ನ ಆಲೋಚನೆಯನ್ನು ಸ್ಥಿರೀಕರಿಸುತ್ತಾ, ತಾನಾಗಿಯೇ ಹಾಡುಕಟ್ಟುವ ವಿಶ್ವಾಸ ಬಲಿತಾಗ ಪ್ರದರ್ಶನವೊಂದರಲ್ಲಿ ತಾನು ಸ್ಥಿರೀಕರಿಸಿಕೊಂಡಿರುವ ಸ್ಥಿರನುಡಿಗಟ್ಟು ಹಾಗೂ ಸೂತ್ರಗಳ ಬಲದಿಂದ ಕಾವ್ಯವನ್ನು ಪುನರ್‌ಸೃಷ್ಟಿಗೆ ಒಳಪಡಿಸುತ್ತಾನೆ. ಈ ಹಾಡು ಹಿಂದೆ ಆತನು ತನ್ನವರಿಂದ ಕೇಳಿಸಿಕೊಂಡ ಹಾಡಿನ ಯಥಾಸೃಷ್ಟಿಯಾಗಿರದೆ ಪ್ರದರ್ಶನದ ಸಂದರ್ಭ, ಪ್ರೇಕ್ಷಕವರ್ಗಕ್ಕೆ ತಕ್ಕಂತೆ ಹೊಸರೂಪ ತಾಳಿಬರುತ್ತದೆ. ಅಂದರೆ ಗಾಯಕನೊಬ್ಬನು ಒಮ್ಮೆ ಹಾಡಿದಂತೆ ಇನ್ನೊಮ್ಮೆ ಹಾಡಲಾರ.

ನಮ್ಮ ಪ್ರಧಾನ ವಕ್ತ ಶ್ರೀ ಬಚ್ಚಮೇರ (ಬೈದ್ಯ)ರನ್ನು ಹಲವಾರು ಕೂರುಗಳಲ್ಲಿ ಒಂದೇ ಹಾಡನ್ನು ಹಾಡಿಸಿದಾಗ ಮೇಲಿನ ನಿಲುವಿಗೆ ಸಮರ್ಥನೆ ದೊರೆಯಿತು. ಕೆಲವು ಸಿದ್ಧನುಡಿಗಟ್ಟುಗಳ (phrases) ಸೂತ್ರಗಳ (Formula) ಬಲದಿಂದ ಆತ ಹಾಡನ್ನು ಹೆಣೆಯುತ್ತಾ ಹೋಗುವುದು ಕಂಡು ಬಂದಿತು. ವಸ್ತು (theme) ಹಾಗೂ ದೀರ್ಘತೆ (length)ಯಲ್ಲಿ ಸಂದರ್ಭದಿಂದ ಸಂದರ್ಭಕ್ಕೆ ಬದಲಾವಣೆ ಗೋಚರಿಸಿತು. ಪ್ರತೀ ಪ್ರದರ್ಶನದಲ್ಲಿ ಮೂಡಿಬಂದ ಪಠ್ಯ ವಿಶಿಷ್ಟ ಎಂದು ತಿಳಿಯಬೇಕು. ಅಂತಹ ಯಾವುದೋ ಒಂದು ಪಠ್ಯವನ್ನು ಇಲ್ಲಿ ನೀಡಲಾಗಿದೆ.

ಜನಪದಕಾವ್ಯಗಳು ತಮ್ಮ ಹೆಣಿಗೆಯಲ್ಲಿ ಸಾಂಪ್ರದಾಯಿಕ ಸೂತ್ರಗಳನ್ನು ಬಳಸಿಕೊಳ್ಳುವುದುಂಟು. ಈ ಸೂತ್ರಗಳು ನಿರ್ದಿಷ್ಟ ಸನ್ನಿವೇಶವನ್ನು ಸಮಾನವಾದ ಅಥವಾ ಬಹುಮಟ್ಟಿಗೆ ಸಮಾನವಾದ ಪದಗಳ ಮೂಲಕ ಹೇಳುತ್ತವೆ.

**ವಾಲೆ ಬರೆವ ಸಂದರ್ಭ**

ಹೊನ್ವಾಲಿ ಸರ್ರನೆ ಕೊಯ್‌ಕಂಡುನಾಲೆ
ಬಂಗಾರ್ದ ಬರುಕಂಟ ಕೈಲಿಡುವಾನು

**ಸೂರ್ಯೋದಯದ ವರ್ಣನೆ**

ಬೆಳ್ಳೀಯ ಮೂಡಿ ಬೆಳಗಾಗುವಂಗೆ
ಕೋಳೀಯ ಕೂಗಿ ಉದಿಯಾಗುವಂಗೆ

**ಪರಸ್ಪರ ಭೇಟಿ**

ಹಗ್ಗೀನ ಹೋಕೀಗೆ ಏನು ಬಂದೆ ನೀನು?
ಬ್ಯಾಸೀಗಿ ಮೊದಲೀಗೆ ಏನು ಬಂದೆ ನೀನು?

**ಜೋಯಿಸರಿಂದ ಜ್ಯೋತಿಷ್ಯ ಹೇಳುವ ಬಗ್ಗೆ ತಯಾರಿ**

ತಣುನೀರು ಮಿಂದು ಮಡಿ ಉಟ್ಟೀದುರಾಲೆ
ಲಗಕಂಡುರಯ್ಯ ದ್ಯಾವಾಡಿಗಳು
ಕದುರೀಯ ಕಲುಮಣಿ ತರ್ಸಿಕೊಂಡುರಾಲೆ
ಹೆಗುಡೀಯ ಹರಳನ್ನು ತರ್ಸಿಕೊಂಡುರಾಲೆ

**ಸೇವಕ ವರ್ಗದಿಂದ ಯಜಮಾನರ ಭೇಟಿ**

ಸ್ವಾಮೀಗೆ ಕೈನ ಮುಗಿದಾರೆಲವ್ರು
ಭೂಮಿಗೆ ತಲೀನ ಎರುಗೀದುರಾಲೆ
ಮುಗಿದಂತ ಕೈಯೀಗ ಹಾ ಅಂದುರಾಲೆ
ಎರುಗೀದ ತಲೀಗೆ ಹಾ ಎಂದುರಾಲೆ

**ಸಂತಾನಹೀನತೆಯ ನಿರೂಪಣೆ**

ಮುಂದು ಬೆಳುವಲ್ಲೆ ಹೆಣುಸಂತಾನಿಲ್ಲೆ
ಹಿಂದು ಬಾಳುವಲ್ಲೆ ಗಂಡು ಸಂತಾನಿಲ್ಲೆ

**ಮರ ಕಡಿವ ಪ್ರಸಂಗ**

ಓಡೀದ ಮರಕೆ ಉಳಿನೆಡುವಾರೆ
ನಿತ್ತಂತ ಮರನ ಬುಡುಕಡುವಾರೆ

ಬುಡುಕಡುವಾರೆ ತಲಿಕಡುವಾರೆ
ತಲಿಕಡುವಾರೆ ಕೆತ್ತೀಸುವಾರೆ
ಕೆತ್ತೀಸುವಾರೆ ಹಾಳೈಸುವಾರೆ

ಸಾಮಾನ್ಯ ಜನಪದ ಕಾವ್ಯಗಳಲ್ಲಿ ನಾಮಪದಗಳನ್ನು ಸಿದ್ಧವಿಶೇಷಣಗಳಿಂದ ಅಲಂಕರಿಸಲಾಗುತ್ತದೆ. ಕಾಡ್ಯನಾಟದ ಹಾಡುಗಳಲ್ಲಿ ಅರಮನೆ, ಕಲಶ, ಮಂದಾಸ್ (ಪೆಟ್ಟಿಗೆ) ದೋಣಿ, ಬಸವ, ಅರಳಿ ಮುಂತಾದ ಪದಗಳ ಜೊತೆಗೆ ಹೊನು (ಹೊನ್ನು) ಎಂಬ ವಿಶೇಷವನ್ನು ಜೋಡಿಸಲಾಗುತ್ತದೆ. ಅದೇ ರೀತಿ ಬೈದ್ಯನನ್ನು ಅಜ್ಜಬೈದ್ಯನೆಂದೂ, ಬೇರನ್ನು 'ಕುದುರಿತೋರದ ಬೇರು' ಎಂದೂ, ಕಲ್ಲನ್ನು 'ಆನಿತೋರದ ಕಲ್ಲು' ಎಂದೂ, ಹಾರೆಯನ್ನು 'ಬಂಗಾರ್‌ಹಾರಿ' ಎಂದೂ ಕರೆಯುವುದುಂಟು.

ಒಂದೇ ಹಾಡನ್ನು ಭಿನ್ನ ಭಿನ್ನ ಹಾಡುಗಾರರಿಂದ ಸಂಗ್ರಹಿಸುವ ಮೂಲಕ ಸೂತ್ರಗಳ ಪ್ರಸರಣವನ್ನು ಅಧ್ಯಯನಮಾಡಬಹುದು. ನಾವು ಈ ಸಂಗ್ರಹದಲ್ಲಿ ಬಹುಪಾಲು ಬಚ್ಚಬೈದ್ಯರ (ಹಾಡಿನ ಸಂಖ್ಯೆ ೩, ೪, ೧೪, ೧೭ – ಹಾಡಿದವರು ಬುಡ್ಡು ಹರಿಜನ) ಹಾಡನ್ನೇ ಬಳಸಲಾಗಿದ್ದರೂ ಅಧ್ಯಯನಕ್ಕಾಗಿ ನೆಡ್ಲಾಡಿಯ ನೀಚ ಹರಿಜನ ಮತ್ತು ಕುಷ್ಟಹರಿಜನ (ಬಿದ್ಕಲ್ ಕಟ್ಟೆ) ಸಂಗಡಿಗರಿಂದಲೂ ಎಲ್ಲಾ ಹಾಡುಗಳನ್ನು ಸಂಗ್ರಹಿಸಲಾಗಿತ್ತು. ಭಿನ್ನ ಮೂಲದ ಹಾಡುಗಳಲ್ಲಿ ಅನೇಕ ಸಮಾನ ಸೂತ್ರಗಳು, ನುಡಿಗಟ್ಟುಗಳು, ಘಟನಾರೂಪಗಳು ತಲೆಹಾಕಿರುವುದು ನಮ್ಮ ಗಮನಕ್ಕೆ ಬಂದಿವೆ. ಮಾದರಿಗಾಗಿ 'ಕಾಡ್ಯನಹುಟ್ಟು' ಹಾಡಿನ ವಿಭಿನ್ನ ಪಠ್ಯಗಳನ್ನು ಈ ಸಂಗ್ರಹದಲ್ಲಿ ನೀಡಲಾಗಿದೆ.

ಇಲ್ಲಿನ ಕಥನಗೀತಗಳು ನಿಗದಿತ ಛಂದಸ್ಸಿನ ಕಟ್ಟಿಗೆ ಅಳವಟ್ಟಿಲ್ಲ. ಡೋಲಿನ ನುಡಿತದೊಂದಿಗೆ ಹಾಡುವುದಿದ್ದರೂ ಸಾಲಿನ ದೀರ್ಘತೆ ತಾಳಲಯಗಳಲ್ಲಿ ಹಾಡಿನಿಂದ ಹಾಡಿಗೆ ಬದಲಾವಣೆ ಕಂಡು ಬರುತ್ತದೆ. ಮೊದಲೆರಡು ಸಾಲುಗಳನ್ನು ಪ್ರಧಾನಗಾಯಕ (ಬೈದ್ಯ) ಹಾಡಿದ ಬಳಿಕ ಸಹಗಾಯಕರು ಅದನ್ನು ಪುನರಾವೃತ್ತಿಸುತ್ತಾರೆ.

ಈ ಕಾಲಾವಧಿಯಲ್ಲಿ ಮುಖ್ಯಗಾಯಕನಿಗೆ ಮುಂದಿನ ಸಾಲುಗಳನ್ನು ಹೆಣೆಯಲು ಕಾಲಾವಕಾಶ ಸಿಗುತ್ತದೆ. ಮನಸ್ಸಿನಲ್ಲಿ ಹಾಡಿನ ಸಾಲುಗಳು ರೂಪುಗೊಳ್ಳದೆ ಹೋದಾಗ ಮತ್ತೆ ಮತ್ತೆ ಪುನರಾವೃತ್ತಿಸುವುದುಂಟು ಅಥವಾ ಲಗ ಕಂಡುರಯ್ಯ........... ಪದಗಳು ಕಥೆಯ ಹರಿವಿನಲ್ಲಿ ಅನಾವಶ್ಯಕವಾಗಿ

ಕಾಣಿಸಿಕೊಳ್ಳುವುದುಂಟು. ಹಾಡಿನ ಮೊದಲಲ್ಲಿ ಬರುವ 'ಹೊಯ ಹೊಯ್ಯವಂಗೆ ಮೆಲು ಮೆಲು ಗಿನ್ನಾ........' ಯಾವುದೇ ಅರ್ಥವನ್ನು ಹೊಂದಿರದ ಈ ಸಾಲುಗಳ ಕಾರ್ಯ ಏನೆಂದು ವಕ್ತೃಗಳಲ್ಲಿ ಕೇಳಿದಾಗ ಅವರು 'ಅದು ಹಾಡಿನ ಧಾಟಿ. ಹಳೆಯ ಕಾಲದಿಂದ ಬಂದ ಕ್ರಮ' ಎಂದಷ್ಟೇ ಹೇಳಿದರು. ಬಹುಶಃ ಅದು ಹಾಡಿನ ರೂಪ (from) ಮತ್ತು ಲಯ (rhythm) ವನ್ನು ನಿಗದಿ ಪಡಿಸಲು ಸಹಾಯ ಮಾಡುತ್ತದೆ.

## ಲೋಕದೃಷ್ಟಿ (world view)

'ಕಾಡ್ಯನಾಟ'ವನ್ನು ನಡೆಸಿದ ಜನಸಮುದಾಯ ಜಗತ್ತನ್ನು ಗ್ರಹಿಸಿದ ಬಗೆ ಹಾಗೂ ಜಗತ್ತಿನಲ್ಲಿ ಮಾನವನ ನೆಲೆ ಬೆಲೆಗಳನ್ನು ಕುರಿತ ಅಭಿಪ್ರಾಯ ಮಾನವ ಸಂಸ್ಕೃತಿಯ ಅಧ್ಯಯನದಲ್ಲಿ ಉಪಯುಕ್ತವಾಗುತ್ತದೆ ಎಂಬ ನಿಲವಿನಿಂದ ಇಲ್ಲಿನ ಹಾಡುಗಳಲ್ಲಿ ವ್ಯಕ್ತಗೊಂಡ ಲೋಕದೃಷ್ಟಿಯನ್ನು ಗಮನಿಸಲಾಗಿದೆ. '.....ಜನಪದರು ನೇರವಾಗಿ ಅಥವಾ ಪರೋಕ್ಷವಾಗಿ ಲೋಕಸಮಸ್ತದ ಬಗೆಗೆ ಹೊಂದಿರುವ ದರ್ಶನವನ್ನು ಲೋಕದೃಷ್ಟಿ ಎಂದು ಕರೆಯಬಹುದು.' (ಬಿಳಿಮಲೆ ೧೯೯೦ ಪು ೧೫೨-೧೬೪) ಈ ಪ್ರಪಂಚದ ಹುಟ್ಟು. ಜೀವನ ವಿಕಾಸ. ವ್ಯವಸಾಯದಲ್ಲಿ ತೊಡಗುವಿಕೆ-ಇಲ್ಲೆಲ್ಲ ವ್ಯಕ್ತಗೊಳ್ಳುವ ಈ ಜನಾಂಗದ ಕಲ್ಪನೆ ವೈದಿಕ ಅಥವಾ ಸಂಸ್ಕೃತ (Sanskritic) ಪರಂಪರೆಯ ಛಾಪು ಒತ್ತಿಕೊಂಡು ಸಮಾಜಕ್ಕೆ ವಿಚಿತ್ರವಾಗಿ ಕಾಣಿಸಿದರೆ ಆಶ್ಚರ್ಯವಿಲ್ಲ. ಆದರೆ ಆ ಜನವರ್ಗದವರಿಗೆ ಅದು ಸಹಜ ಮತ್ತು ಸತ್ಯ. ಹೀಗೆಂದು ಅದನ್ನು ತಳ್ಳಿಹಾಕದೆ ಭಿನ್ನ ಭಿನ್ನ ಸಮಾಜದ ಸಾಂಸ್ಕೃತಿಕ ಅಂಶಗಳ ಅಭಿವ್ಯಕ್ತಿಯೆಂದು ಒಪ್ಪಿಕೊಂಡು ಜಾನಪದ ಲೋಕದೃಷ್ಟಿಯನ್ನು ತಿಳಿಯುವ ಪ್ರಯತ್ನಮಾಡಬೇಕಾಗಿದೆ. (ಅವರ ಬದುಕಿನ ಅಂಗವಾದ ಜಾನಪದದಲ್ಲಿ ಅಪ್ರಜ್ಞಾಪೂರ್ವಕವಾಗಿ ಮಡುಕಟ್ಟಿಕೊಂಡಿರುವ ಅವರ ಲೋಕದೃಷ್ಟಿ ರೂಪಕಗಳ ಮೂಲಕ ಅಭಿವ್ಯಕ್ತಗೊಂಡಿದೆ. ಅವರ ವಾರ್ಷಿಕಾವೃತ್ತ ಆಚರಣೆಗಳಲ್ಲಿ ಒಂದಾದ ಕಾಡ್ಯನಾಟದಲ್ಲಿ ಅವರ ಲೋಕದೃಷ್ಟಿಯನ್ನು ಗುರುತಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಪ್ರಕೃತಿಯನ್ನು ಅವ್ಯವಸ್ಥಿತವಾದ ವ್ಯವಸ್ಥೆಯೆಂದು ಪರಿಭಾವಿಸುವುದು ಹಾಗೂ ಅದನ್ನು ವ್ಯವಸ್ಥೆಗೊಳಪಡಿಸಿ ತನ್ನ ತೆಕ್ಕೆಗೆ ತರುವುದರಲ್ಲಿ ಮಾನವನ ಪ್ರಯತ್ನದ ಹಿನ್ನೆಲೆಯಲ್ಲಿ ಅ ಜನಾಂಗದ ಲೋಕದೃಷ್ಟಿ ಅಡಗಿದೆ. ತಮ್ಮ ಮೂಲಸ್ತ್ರೀ ಹೊನ್ನಿಗೆ ಗಾಳಿಯಿಂದ ಬಸುರುಬಂದುದು. ಆಕೆ ತನ್ನ ಹುಟ್ಟಿನ ಪಾವಿತ್ರ್ಯದಿಂದ ಪ್ರಕೃತಿಯ ವಿಕೋಪವನ್ನು ನಿಯಂತ್ರಿಸಿದುದು. ಕೃಷಿಯೋಗ್ಯ ಭೂಮಿ. ಜಾನುವಾರುಗಳ ಮೂಲಕ ಸಮೃದ್ಧಿ ಪಡೆವ ಹಂತವನ್ನು ಇನ್ನೂ ತಲಪದೆ ಇರುವ ದಿನಗಳಲ್ಲಿ ಆಕೆಗೆ ದೊರೆತ ಮೂರು ಕಲಶಗಳನ್ನು ಸಮಾಜದ ಏಣಿಶ್ರೇಣಿ ವ್ಯವಸ್ಥೆಗೆ ತಕ್ಕಂತೆ

ಬ್ರಾಹ್ಮಣ (ಚಿನ್ನದ ಕಲಶ), ಬಂಟ (ಹೊನ್ನಕಲಶತಾಮ್ರ) ಹಾಗೂ ಮೇರ (ಮಣ್ಣಿನ ಕಲಶ) ರು ಹಂಚಿಕೊಂಡುದು ಅವರ ಪಾಲಿಗೆ ಸಹಜ ಹಾಗೂ ಶಿಷ್ಟ. ಇಂತಹ ಸಮಾಜವ್ಯವಸ್ಥೆಯನ್ನು ಆ ಜನಾಂಗ ಅಂದು ಒಪ್ಪಿಕೊಂಡಿತ್ತು ಯಾವುದೇ ಪ್ರತಿಭಟನೆಯ ಸೊಲ್ಲು ಇಲ್ಲದೆ. ಆದರೆ ಮುಂದೆ ಕಾಲಾನುಕಾಲಕ್ಕೆ ಅವರ ಒಳಮನಸ್ಸಿನ ಪ್ರತಿಭಟನೆಯ ದನಿಗಳು ಆಚರಣೆಯೊಳಗೆ ಮನರಂಜನೆಯ ಹಗಣದ ರೂಪದಲ್ಲಿ ವ್ಯಕ್ತಗೊಂಡಿರಬೇಕು.)

ಇಲ್ಲಿನ ಹಾಡುಗಳಲ್ಲಿ ಬರುವ ಶಿವ, ನಾರಾಯಣ, ರಾಮ, ಸೀತೆಯರು ವೈದಿಕ / ಸಂಸ್ಕೃತ ಲೋಕದಿಂದ ಭಿನ್ನಪಾತಳಿಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಅವರನ್ನು ಮಾನವಲೋಕದ ಪಾತ್ರಧಾರಿಗಳನ್ನಾಗಿ ಕಡೆದಿದ್ದಾರೆ. ಆ ದೇವತೆಗಳನ್ನು ತಮ್ಮ ಅನುಭವದ ಕಕ್ಷೆಯೊಳಗೆ ತರಲು ಪ್ರಯತ್ನಿಸುತ್ತಾರೆ. ಅಂದರೆ ತಮಗೆ ಪರಿಶಿಷ್ಟವಾದ ಸಂಗತಿಗಳನ್ನು ಶಿಷ್ಟಗೊಳಿಸುವ ಪ್ರಯತ್ನ. ಇಲ್ಲಿನ 'ಯುಗಮಗುಚುವ ಹಾಡು' ವಿವರಿಸುವಂತೆ ಸೃಷ್ಟಿಯ ಆದಿಯಲ್ಲಿ ನೀರು ಎಲ್ಲೆಡೆ ಆವರಿಸಿತ್ತು. ಅದರಲ್ಲಿ ಹೊನ್ನ ಮದ್ದಳೆ ತೇಲಿ ಬಂತು. ಅದರೊಳಗೆ ಇದ್ದವರು ಬತ್ತಲೆ ಕೊರಗ ಕೊರತಿಯರು. ಅಣ್ಣ ತಂಗಿಯರು. ನಾರಾಯಣಸ್ವಾಮಿ ಅವರಿಗೆ ಸೊಪ್ಪು ಉಡಿಸಿ, ರೂಪಬದಲಾಯಿಸಿ ಗಂಡ ಹೆಂಡಿರನ್ನಾಗಿಸಿದರು. ಈ ದಂಪತಿಗಳಿಂದಲೇ ಮುಂದೆ ಜಗತ್ತಿನ ಮನುಷ್ಯ ಪರಂಪರೆ ಬೆಳೆದು ಬಂದಿತು. ಹುಟ್ಟಿದ ನರಮನುಷ್ಯರಿಗೆ ಅನ್ನ, ಆಹಾರ, ಹುಟ್ಟುಚಿತ್ತೇರಿಗೆ ನೀರು ನೈವೇದ್ಯ ಇಲ್ಲದೆ ಹೋದಾಗ ಭೂಮಿಯಲ್ಲಿ ವ್ಯವಸಾಯ ಮಾಡಲು ಹವಣಿಸಿದರು. ಅದಕ್ಕಾಗಿ ಬಿತ್ತನೆಗೆ ಬೀಜ (ಶಂಕರಗಂಡ). ಉಳಲು ಎತ್ತು ತರಲು ಮೇಲು ಲೋಕಕ್ಕೆ ಹೋದರು. ಕೃಷಿ ಕರ್ಮ ನಡೆಸಲು ದೇವಲೋಕದಿಂದ ಸ್ವತಃ ಮಾದಾರ ಚೆನ್ನಯ್ಯನೇ ಬಂದನು ಅವನಿಂದ ಈ ಭೂಮಿಯಲ್ಲಿ ಕೃಷೀ ಜೀವನ ಆರಂಭಗೊಂಡಿತು. ಕಂತಿದ ಸೂರ‍್ಯ ಮೂಡದೆ ಹೋದುದಕ್ಕೆ ತೆಂಕಣ ದೇಶದ 'ಪಾಪದೋಷರ' ವರ್ತನೆ ಕಾರಣ ಎಂಬ ನಂಬಿಕೆ, ಹೊನುಬಸವನಿಂದ ಅವರನ್ನು ಕರೆಸಿ ಶಿಕ್ಷಿಸಿ ಪರಿಹಾರ ಮಾಡುವುದು ಇಲ್ಲೆಲ್ಲ ಬದುಕನ್ನು ವ್ಯವಸ್ಥೆಗೆ ಒಳಪಡಿಸುವ ಬಗೆಯನ್ನು ಕಾಣಬಹುದು.

ಒಟ್ಟಿನಲ್ಲಿ ಜನಾಂಗವೊಂದರ ಲೋಕದೃಷ್ಟಿ ಅವರ ಬದುಕಿನ ವಿಶಿಷ್ಟ ಸಂದರ್ಭಗಳಲ್ಲಿ ವಿಶೇಷವಾಗಿ ಈ ಕಾಡ್ಯನಾಟದ ಸಂದರ್ಭದಲ್ಲಿ ಅವರನ್ನು ಭಾವನಾತ್ಮಕವಾಗಿ ಒಗ್ಗೂಡಿಸುತ್ತದೆ. ಬದುಕಿನ ನಿನ್ನೆ–ಇಂದುಗಳ ಬಗ್ಗೆ ಬೆಳಕು ಚೆಲ್ಲುತ್ತಾ, ವ್ಯಂಗ್ಯದ ಧಾಟಿಯಲ್ಲಿ ಪ್ರತಿವಿರೋಧಿಸುತ್ತ (ಹಗಣಗಳಲ್ಲಿ) ಅವರ ಲೋಕದೃಷ್ಟಿಯು ಮೂರ್ತಗೊಂಡಿದೆ.

## ಟಿಪ್ಪಣಿ

೧. ನಮ್ಮ ಅಧ್ಯಯನದಲ್ಲಿ ನೆರವಾದ ವಕ್ತೃಗಳು :

೧. ವಾಸುದೇವ ಹೆಬ್ಬಾರ, ಪಟೇಲರು ನಾಲ್ತೂರು, ಅಂಚೆ: ಯೆಡಾಡಿ, ಮತ್ಯಾಡಿ ಕುಂದಾಪುರ ತಾಲೂಕು.
೨. ಬಚ್ಚ ಮೇರ, ಕ್ವಾಣಿ, ಅಂಚೆ: ಮೊಳಹಳ್ಳಿ, ಕುಂದಾಪುರ ತಾಲೂಕು.
೩. ಜಯರಾಮ ಹೆಗ್ಡೆ, ಕೈಗಾರಿಕೋದ್ಯಮಿ, ಅಂಚೆ: ಮೊಳಹಳ್ಳಿ, ಕುಂದಾಪುರ ತಾಲೂಕು.
೪. ರಾಜೀವ ಶೆಟ್ಟಿ, ಅಧ್ಯಾಪಕರು, ಹೆಬ್ರಿ, ಕಾರ್ಕಳ ತಾಲೂಕು.
೫. ಸದಿಯ ಮೇರ, ಕ್ವಾಣಿ ಅಂಚೆ: ಮೊಳಹಳ್ಳಿ, ಕುಂದಾಪುರ ತಾಲೂಕು.
೬. ನಾರಾಯಣ ಮೇರ, ಅಂಚೆ: ಸಿದ್ಧಾಪುರ, ಕುಂದಾಪುರ ತಾಲೂಕು.
೭. ದ್ಯಾವ ಮೇರ, ನಾಲ್ತೂರು, ಅಂಚೆ: ಯೆಡಾಡಿ, ಮತ್ಯಾಡಿ, ಕುಂದಾಪುರ ತಾಲೂಕು.
೮. ಮಂಜುನಾಥ, ಲೋಕಸೇವಾ ವಿಭಾಗ, ಅಂಚೆ: ಬಿದ್ಕಲಕಟ್ಟೆ, ಕುಂದಾಪುರ ತಾಲೂಕು.
೯. ನೀಚ ಮೇರ, ಅಂಚೆ: ಆವರ್ಸೆ, ಉಡುಪಿ ತಾಲೂಕು.
೧೦. ಬಾಲ ಮೇರ, ಅಂಚೆ: ಆವರ್ಸೆ, ಉಡುಪಿ ತಾಲೂಕು.
೧೧. ಕುಷ್ಟ ಮೇರ, ಅಂಚೆ: ಬಿದ್ಕಲಕಟ್ಟೆ, ಕುಂದಾಪುರ ತಾಲೂಕು.
೧೨. ಬುಡ್ಡು ಹೆಂಗ್ಸು, ಹಳೆಯಂಗಡಿ, ಅಂಚೆ: ಮಂದರ್ತಿ, ಉಡುಪಿ ತಾಲೂಕು
೧೩. ಗೋಪಾಲಕೃಷ್ಣ ಉಪಾಧ್ಯಾಯ, ಪೆರ್ಡೂರು, ಉಡುಪಿ ತಾಲೂಕು
೧೪. ಸುಭಾಶ್ಚಂದ್ರ ಇಂಗ್ಲೀಷ್ ವಿಭಾಗ ಪೂರ್ಣಪ್ರಜ್ಞ ಕಾಲೇಜು ಉಡುಪಿ.
೧೫. ರಘುರಾಮ ಶೆಟ್ಟಿ, ಮಂದರ್ತಿ, ಉಡುಪಿ ತಾಲೂಕು.

೨. ಕಾಡ್ಯನಾಟದ ಎಲ್ಲಾ ವಿಧಿ ವಿಧಾನಗಳ ನಿಯಂತ್ರಕ ಬೈದ್ಯ, ಮೇರ ಜನಾಂಗಕ್ಕೆ ಸೇರಿದ ಈತ ಕಾಡ್ಯನಾಟದ ವಿಧಿ ವಿಧಾನಗಳನ್ನು, ಸುದೀರ್ಘ ಕಥಾನಕಗಳನ್ನು ಬಲ್ಲವನಾಗಿರಬೇಕು. ಈ "ಬೈದ್ಯ" ಪದ ಆಚರಣೆಯ ಸಂದರ್ಭದಲ್ಲಿ ಅವನ ಹೊಣೆಗಾರಿಕೆಯನ್ನು ನಿರ್ದೇಶಿಸುವ ಪದ. ಆತ ಆಚರಣೆಯ ಸಂದರ್ಭದಲ್ಲಿ ಹಾಡುವ ಹಾಡುಗಳಿಗೆ ಬೈದ್ಯರ ಹಾಡುಗಳೆಂದೇ ಕರೆಯಲಾಗುತ್ತದೆ. ಆಚರಣೆಯ ಸಂದರ್ಭದಲ್ಲಿ ಬೈದ್ಯ (ರು) ಮಂಡಲ ಬರೆವ, ಹಾಡು ಹೇಳುವ, ವಿಶ್ರಾಂತಿಗೆಂದು ಕುಳಿತುಕೊಳ್ಳುವ ಜಾಗಕ್ಕೆ 'ಬೈದ್ಯರ ಹಂದರ' ವೆಂದೇ ಕರೆಯುಲಾಗುತ್ತದೆ. ಇದೇ ಪ್ರದೇಶದ ನಾಗಮಂಡಲ ಆಚರಣೆಯುನ್ನು ನಡೆಸಿಕೊಡುವ ಬ್ರಾಹ್ಮಣ ಸಮುದಾಯದ ಗೀತ – ನರ್ತನಕಾರರನ್ನು ವೈದ್ಯರೆಂದು ಕರೆಯುವುದನ್ನು ಇಲ್ಲಿ ಅವಶ್ಯ ಗಮನಿಸಬೇಕು. ತುಳುನಾಡಿನಲ್ಲಿ

ಕೋಟಿಚೆನ್ನಯರ ಆರಾಧಕರಾದ ಬಿಲ್ಲವರನ್ನು ಬೈದ್ಯರೆಂದೂ, ಪೂಜಾರಿಗಳೆಂದೂ ಕರೆಯುವುದನ್ನು ಗಮನಿಸಬೇಕು. ಬಹುಶಃ ಈ ವೈದ್ಯ/ಬೈದ್ಯ ಆದಿಮ ಸಮಾಜದ ಮಾಂತ್ರಿಕನೂ, ಪೂಜಾರಿಯೂ, ಔಷಧಿಕಾರ (Medicine man) ನೂ ಆಗಿದ್ದಿರಬಹುದು.

೩. ಡಾ. ಕೆ.ವಿ.ರಮೇಶರು ತಮ್ಮ 'ತುಳುನಾಡಿನ ಇತಿಹಾಸ' ಗ್ರಂಥದ ಪುರಾತನ 'ತುಳುನಾಡು' ಅಧ್ಯಾಯದಲ್ಲಿ ಕಾಡುಗಳಿಂದ ಕೂಡಿದ್ದ ಕರಾವಳಿಗೆ ಘಟ್ಟವನ್ನು ದಾಟಿ ಬಂದು ಅಲ್ಲೆ ಸಾಗುವಳಿಯ ಕಾರ್ಯ ಪ್ರಾರಂಭಿಸುವ ಸಲುವಾಗಿ ಪುರಾತನ ಮಾನವನು ಕಾಡುಗಳನ್ನು ಕಬ್ಬಿಣದ ಕೊಡಲಿಗಳಿಂದ ಕಡಿದಿರಬಹುದೆಂದೂ, ಪರಶುರಾಮನು ಈ ಲೋಹಯುಗದ ಕಾಡುಗಲಿಗಳ ನೆನಪಿಂದ ಹುಟ್ಟಿದ ಪುರಾಣ ಪುರುಷನಾಗಿರಬೇಕೆಂದೂ ಬರೆಯುತ್ತಾರೆ.

೪. ಮಾಹಾಕೂಟದ ಸ್ತಂಭ ಲೇಖದಲ್ಲೆ (ಕ್ರಿ.ಶ. ೬೦೨) ಕೇರಲ–ಮೂಷಿಕ ದೇಶಗಳ ಮುಂದೆಯೇ ಹಾಗೂ ವೈಜಯಂತಿ ಎಂಬ ಬನವಾಸಿಯ ಜತೆಯಲ್ಲೇ ಅಳುಕ ಎಂಬ ದೇಶವನ್ನು ಹೇಳಿದೆ. ಆತ ಯಾವ ಆ ಅಳುಕ ದೇಶವು ತುಳುನಾಡು ಎಂಬಲ್ಲಿ ಸಂಶಯವಿಲ್ಲ. ಈಗ ಆದಿಶೇಷನಿಗೆ ಅಲುಕ ಎಂಬ ಹೆಸರಿದೆ.

ಶೇಷೊ ನಾಗಾಧಿಪೋನಂತೋ ದ್ವಿಸಹಸ್ರಾಕ್ಷಃ ಆಲುಕಃ
(ಡಾ. ಗುರುರಾಜ ಭಟ್ಟ – ತುಳುನಾಡು ಪು.೬೪)

೫. ನಾವು ಕಂಡ ಕುಂದಾಪುರ ತಾಲೂಕು ಆಸೋಡು ದೊಡ್ಡಮನೆಯ ಸಮೀಪದ ಚಿತ್ತೇರಿಯಲ್ಲಿ ಈ ಮನೆತನದ ಆಡಳಿತಕ್ಕೊಳಪಟ್ಟ ಗ್ರಾಮದೇವತೆ ನಂದಿಕೇಶ್ವರನ ಗೆಂಡದ ಹಬ್ಬದ ಮರುದಿನ ನಾಗಮಂಡಲ ಜರಗುತ್ತದೆ.

೬. ವೈದ್ಯರು ನಡೆಸುವ ಡಕ್ಕೆಬಲಿ ಸಾತ್ವಿಕ ಸ್ವರೂಪದಾದರೂ ಪಾಣಾರಾಟದ ಅಂಗವಾಗಿ ಪಾಣರು ನಡೆಸಿಕೊಡುವ ಡಕ್ಕೆಬಲಿಯಲ್ಲೆ ಕುರಿ. ಕೋಳಿಗಳ ಬಲಿ ಇನ್ನೂ ಉಳಿದುಕೊಂಡು ಬಂದಿರುವುದನ್ನು ಗಮನಿಸಬೇಕು.

೭. ವೈದ್ಯರು ನಾಗಮಂಡಲ, ಡಕ್ಕೆಬಲಿಗಳ ಸಂದರ್ಭದಲ್ಲಿ ಹೇಳುವ 'ಬ್ರಹ್ಮಲಿಂಗನ ಕತೆ' ಹಾಡಿನಲ್ಲಿ ಈ ಬ್ರಹ್ಮನನ್ನು ಚತುರ್ಮುಖ ಬ್ರಹ್ಮನೆಂದೇ ಪರಿಭಾವಿಸಿದಂತಿದೆ. 'ಕರವು ಎಂಟು ನಿಮಗೆ ಶಿರವು ನಾಲ್ಕು ಹಿರಿದಪ್ಪಂತ ದೇಹ ಬ್ರಹ್ಮರಾಯರೆ......' (ವೈದ್ಯರ ಹಾಡುಗಳು ಸಂ. ಎ.ವಿ. ನಾವಡ ೧೯೮೫ ಪು. ೧೦)

೮. ಶತಮಾನಗಳಿಂದ ತಿರಸ್ಕೃತರಾದ ಜಾತಿ ಮತ್ತು ವೃತ್ತಿಯ ಜನರ ದೃಷ್ಟಿಕೋನವೇ ತಂತ್ರ ಪಂಥದ ಮೂಲಸ್ವರೂಪವಾಗಿತ್ತು. ತಂತ್ರ ಪಂಥದಲ್ಲೆ ಚಂಡಾಲಿ, ದೊಂಬಿ, ರಜಕಿ ಮುಂತಾದವರಿಗೆ ಮಹತ್ವ ನೀಡಲಾಗಿದೆ. ಇವರಲ್ಲಿ ಆ ಕಾಲದಲ್ಲಿ ಸಮಾಜ ತುಚ್ಛವಾಗಿ ಕಾಣುತ್ತಿದ್ದ ವೃತ್ತಿಯಲ್ಲಿ ತೊಡಗಿದ್ದ ಕೀಳುಜಾತಿಯ ಸ್ತ್ರೀಯರು. ತಂತ್ರ ಪಂಥಕ್ಕೆ ಸೇರಿದ ಕುಬ್ಜಿಕ ಶಾಖೆಯು ಕೆಳಜಾತಿಯಲ್ಲಿ ಒಂದಾದ ಕುಂಬಾರ ಜನಾಂಗದ್ದು ಎನ್ನಲಾಗಿದೆ.

೯. ಉಪ್ಪಾರರು ತಮ್ಮನ್ನು ಬಸವನಕುಲದವರೆಂದೂ, ಲಿಂಗಾಯತ ಮೂಲದವರೆಂದೂ, ಕೂಡ್ಲಿ ತಮ್ಮ ಗುರುಮಠವೆಂದೂ ಗುರುತಿಸಿಕೊಳ್ಳುತ್ತಾರೆ. ಘಟ್ಟದ ಮೇಲೆ ಜೈನ ಸಂತಾನವೊಂದನ್ನು ಕೊಂದ ಕಾರಣ ಅವರ ಧಾಳಿಯಿಂದ ತತ್ತರಿಸಿ ದ. ಕನ್ನಡಕ್ಕೆ ತಲೆಮರೆಸಿಕೊಂಡು ಬಂದು ಮೈಮೇಲಿನ ಲಿಂಗಗಳನ್ನು ಕೋಟೇಶ್ವರದ ಕೆರೆಗೆ ಎಸೆದು, ಬಂಟರ (ನಾಡವರ) ಮನೆಯ ಆಳುಗಳಾಗಿ ಆಶ್ರಯ ಪಡೆದು, ಕೂಸಾಳು ಎಂಬ ಹೊಸ ಹೆಸರು ಪಡೆದುದಾಗಿ ಹೇಳುತ್ತಾರೆ. ತಮ್ಮ ಪರಿಚಯು ಸಿಗಬಾರದೆಂದು ಪಿತೃಮೂಲೀಯುತೆಯುನ್ನು ಬಿಟ್ಟು ಮಾತೃಮಾಲೀಯ ಕುಟುಂಬ ವ್ಯವಸ್ಥೆಯನ್ನು ಒಪ್ಪಿಕೊಂಡುದಾಗಿಯೂ, ಮಾಂಸ ಮೀನು ಭಕ್ಷಣೆಗೆ ತೊಡಗಿದುದಾಗಿಯೂ ಉಪ್ಪಿನಕುದ್ರು ಗ್ರಾಮದ ಬಚ್ಚ ಎಂಬವರು ಹೇಳಿದ್ದಾರೆ. (ದಿ. ೩೦-೫-೯೧) ಈ ಐತಿಹ್ಯವನ್ನು ಬಿಜ್ಜಳನ ಪತನದ ಸಂದರ್ಭದಲ್ಲಿ ವೀರಶೈವ ಸಮುದಾಯ ದಿಕ್ಕಾಪಾಲಾದಾಗ ಅವರಲ್ಲಿ ಒಂದು ಕವಲು ದ. ಕನ್ನಡಕ್ಕೆ ಬಂತು ಎಂದು ಪ್ರಾಕ್ಕಲ್ಪನೆ ಮಾಡಬಹುದೇ?

ಈ ದ.ಕನ್ನಡದ ತುಳುನಾಡಿನ ನಲ್ಕೆ ಎನ್ನುವ ಭೂತಮಾಧ್ಯಮ ಜನಾಂಗವನ್ನೇ ಕನ್ನಡ ಪ್ರದೇಶದಲ್ಲೆ ಪಾಣರೆಂದು ಕರೆಯುತ್ತಾರೆ.

ಹಸ್ಲರು ಕುಂದಾಪುರ ತಾಲೂಕಿನ ಹಳ್ಳಿಹೊಳೆ, ಮಾಡಾಮಕ್ಕಿಗಳಲ್ಲಿ ಕಾಡುತ್ಪತ್ತಿ ಸಂಗ್ರಹ, ಸವರ್ಣೀಯರ ತೋಟಗಳಲ್ಲಿ ಕೃಷಿಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

ತುಳುನಾಡಿನ ಬಾಕುಡರನ್ನು ಕುಂದಾಪುರ ತಾಲೂಕಿನಲ್ಲಿ ಬತ್ತಾಡರೆಂದು ಹೇಳುತ್ತಾರೆ.

# ಗುರುಶಾಸ್ತ್ರ

ಯಾ ಬಾಳನ್ನ ಬಾಳೆಯಾವಯ್ಯಾ
ಯಾ ಸ್ವಾಮಿ ಬಾಳಿನ್ನು
ಯಾ ಭೂಮಿ ಬಾಳಿನ್ನು
ಯಾ ಭೂಮಿ ಬಾಳಿನ್ನುವಯ್ಯಾ
ಯಾ ಭೂಮಂಡಲ ಬಾಳಿನ್ನು
ಯಾ ಬಾಳ ನಿನ್ನ ಬಾಳೆಯಾವಯ್ಯಾ
ಯಾ ಮೇಲೇಳಿ ಲೋಕು ಬಾಳ
ಯಾ ಮೇಲೇಳಿ ಲೋಕದ ನಮ್ಮವಯ್ಯಾ
ಯಾ ದೇವ್‌ದಿಕ್ಕಳು ಬಾಳ
ಯಾ ಬಾಳ ನಿನ್ನ ಬಾಳೆಯಾವಯ್ಯಾ
ಯಾ ಕೀಳೇಳಿ ಲೋಕದ ಬಾಳೆಯಾವಯ್ಯಾ
ಯಾ ಕೀಳೇಳಿ ಲೋಕದ ನಮ್ಮವಯ್ಯಾ
ಯಾ ಹೊನ್ನ ಕಳಸ ಬಾಳ
ಯಾ ತುಂಬಿ ತುಳಸಿ ಬಾಳ
ಯಾ ಬಾಳ ನಿನ್ನ ಬಾಳೆಯಾವಯ್ಯಾ
ಯಾ ಹುಂಬೇಳಿ ಲೋಕ ಬಾಳ
ಯಾ ಬಾಳ ನಿನ್ನ ಬಾಳೆಯಾವಯ್ಯಾ
ಯಾ ಜಂಬೇಳಿ ಲೋಕ ಬಾಳ
ಯಾ ಜಂಬೇಳಿ ಲೋಕದ ನಮ್ಮವಯ್ಯಾ
ಯಾ ದೇವ್‌ದಿಕ್ಕಳ ಬಾಳ
ಯಾ ಬಾಳ ನಿನ್ನ ಬಾಳೆಯಾವಯ್ಯಾ
ಯಾ ಸುತ್ತೇಳಿ ಲೋಕು ಬಾಳ

ಯಾ ಸುತ್ತೇಳಿ ಲೋಕದ ನಮ್ಮವಯ್ಯಾ
ಯಾ ದೇವ್‌ದಿಕ್ಕಳ ಬಾಳ
ಯಾ ಬಾಳಗಿನ ಬಾಳೆಯವಯ್ಯಾ
ಯಾ ಕಲಿಯೆ ಬಾಳಿನ್ನು
ಯಾ ಬಾಳನಿನ್ನ ಬಾಳೆಯಾವಯ್ಯ
ಯಾ ಸಿರಿಯೆ ಬಾಳಿನ್ನು
ಯಾ ಕಲಿ ಬಂದು ನಿಂದಾವೆವಯ್ಯಾ
ಯಾ ಕತ್ತಲಿ ಪುರುದಲ್ಲಿ
ಯಾ ಸಿರಿಬಂದು ನಿಂದಾವೆವಯ್ಯಾ
ಯಾ ರಾಜಾಂಗಣದಲ್ಲಿ
ನಮ್ಮಲ್ಲಿ ಕಲಿಸಿದ ಗುರು ಯಾರಿಂದ್ಯಾರಿಗೇನೊ
ನಮ್ಮಲ್ಲಿ ಕಲಿಸಿದ ಗುರು ತಂದೆಯ ಗುರುಗಳು
ತಂದೆಗೆ ಕಲಿಸೀದುರಯ್ಯ ಯಾರಿಂದ್ಯಾರಿಗೇನೊ
ತಂದೆಗೆ ಕಲಿಸಿದರವ್ರ್ ಮಾವರ ಗುರುಗಳು
ಮಾವರಿಗ್ ಕಲಿಸೀದುರಯ್ಯ ಯಾರಿಂದ್ಯಾರಿಗೇನೊ
ಮಾವರಿಗ್ ಕಲಿಸಿದರವ್ರ್ ಅವರ ಅಜ್ಜಾರ ಗುರುಗಳು
ಅಜ್ಜರಿಗ್ ಕಲಿಸೀದ ಗುರು ಯಾರಿಂದ್ಯಾರಿಗೇನೊ
ಅಜ್ಜರಿಗ್ ಕಲಿಸೀದರವ್ರ್ ಪಿಜ್ಜಾರ ಗುರುಗಳು
ಪಿಜ್ಜರಿಗ್ ಕಲಿಸೀದ ಗುರು ಯಾರಿಂದ್ಯಾರಿಗೇನೊ
ಸೊಬೈಲಲ್ಲಿ ಸೋಮ ಬೈದ್ಯರ ಗುರುಗಳ
ಸೋಮ ಬೈದ್ಯರಿಗ್ ಕಲಿಸಿದ ಗುರು ಯಾರಿಂದ್ಯಾರಿಗೇನೊ
ಸೋಮ ಬೈದ್ಯರಿಗ್ ಕಲಿಸಿದವ್ರ್ ಚೆನ್ನಿಯ ಬೈದ್ಯರವರು
ಚೆನ್ನಿಯ ಬೈದ್ಯರಿಗ್ ಕಲಿಸಿದ ಗುರು ಯಾರಿಂದ್ಯಾರಿಗೇನೊ
ಚೆನ್ನಿಯ ಬೈದ್ಯರಿಗ್ ಕಲಿಸಿದರವ್ರ್ ಹೊನ್ನಿ ಬೈದ್ಯರು
ಹೊನ್ನಿ ಬೈದ್ಯರಿಗ್ ಕಲಿಸಿದ ಗುರು ಯಾರಿಂದ್ಯಾರಿಗೇನೊ
ಹೊನ್ನಿ ಬೈದ್ಯರಿಗ್ ಕಲಿಸಿದವ್ರ್ ಪನ್ನೀಲ ಬೈದ್ಯರು
ಪನ್ನೀಲ ಬೈದ್ಯರಿಗ್ ಕಲಿಸಿದ ಗುರು ಯಾರಿಂದ್ಯಾರಿಗೇನೊ

ಪನ್ನೀಲ ಬೈದ್ಯರಿಗ್ ಕಲಿಸಿದವ್ರ್ ಭೂಮಿಯ ದೇವುತೆ
ಭೂಮಿಯ ದೇವತೆಗ್ ಕಲಿಸಿದವ್ರ್ ಯಾರಿಂದ್ಯಾರಿಗೇನೊ
ಭೂಮಿಯ ದೇವತೆಗ್ ಕಲಿಸಿದವ್ರ್ ಸಂಕರಗಂಡನು
ಸಂಕರಗಂಡಂಗೆ ಕಲಿಸಿದವ್ರ್ ಯಾರಿಂದ್ಯಾರಿಗೇನೊ
ಸಂಕರಗಂಡಂಗೆ ಕಲಿಸೀದವ್ರ್ ಪಂಜಾರ್ದ ಗಿಳಿರಾಮ
ಪಂಜಾರ್ದ ಗಿಳಿರಾಮಂಗ್ ಕಲಿಸೀದವ್ರ್ ಯಾರಿಂದ್ಯಾರಿಗೇನೊ
ಪಂಜಾರ್ದ ಗಿಳಿರಾಮಂಗ್ ಕಲಿಸೀದವ್ರ್ ನಾರಾಯ್ಣ ಸ್ವಾಮಿಯು
ನಾರಾಯ್ಣ ಸ್ವಾಮಿಗ್ ಕಲಿಸೀದವ್ರ್ ಯಾರಿಂದ್ಯಾರಿಗೇನೊ
ತಾವಾಗಿ ಕಲ್ತರು ಸ್ವಾಮಿ ತಾವಾಗಿ ಮರ್ತ್ತಾರು
ಗುರುವಿಂದ ಗುರುಗಳೆ ನೀವು ಸಿರಿವಂದಿ ನಿಲ್ಲಿರಿ
ನಮ್ಮಲ್ಲೆ ಗುರುವಿನ ನಾನೊಂದ್ ಹಾಡಿನ್ ಹೊಗಳುವೆ
ತಂದೆಯ ಗುರುವಿನ ನಾನೊಂದ್ ಹಾಡಿನ್ ಹೊಗಳುವೆ
ಮಾವನ ಗುರುವಿನ ನಾನು ಮುನ್ನೂರ್ ಓದುವೆನು
ಅಜ್ಜನ ಗುರುವಿನ ನಾನು ಐನೂರ್ ಓದುವೆನು
ತಂದೆಯ ಗುರುವಿನ ನಾನು ತಪ್ಪದೆ ಓದುವೆನು
ಆಚೆ ಕೂತರು ನನ್ನ ಅಜ್ಜಾರ ಗುರುಗಳು
ಈಚೆ ಕೂತರು ನನ್ನ ಮಾವರ ಗುರುಗಳು
ಮುಂದೆ ಕೂತರು ನನ್ನ ಚಿರಂಜಗಳೆಲ್ಲ
ನಡುಗೆ ಕೂತನು ನಾನು ಶಿಶುಮಗುನಾಲೆ
ಚಂಚಿ ಮುದ್ದಾಡು ನನ್ನ ಅಜ್ಜಿಯ ಗುರುಗಳು
ಹಾಸಿ ತೊಡಿಯನು ಕೊಡುವ ತಂದೆಯ ಗುರುಗಳು
ಬೀಸಿ ಮಲಿಯನು ಕೊಡುವ ತಾಯಿಯ ಗುರುಗಳು
ಗುರುವಿನ ಪಾದಕೆ ನಾನು ಶರಣ ಮಾಡುವೆನು
ಪಾದವ ತೊಳೆವೆನು ನಾನು ಪನ್ನೀರ ಕುಡಿವೆನು
ಬೆನ್ನನ್ನ ತೊಳೆವೆನು ನಾನು ಬೆನ್ನೀರ ಕುಡಿವೆನು

(ಹೇಳಿದವರು : ಶ್ರೀ ಬಚ್ಚಮೇರ)

## ಕಾಡ್ಯನ ಹುಟ್ಟು

ಹೊಯ ಹೊಯ್ಯುವಂಗೆ ಮೆಲು ಮೆಲು ಗಿನ್ನಾ
ಹೊಯ ಹೊಯ್ಯುವಂಗೆ ಮೆಲು ಮೆಲು ಗಿನ್ನಾ
ಕಾಡಾಗ್ ಹುಟ್ಟುವಳವ್ವ ಕಣರನ್ನೋಲುವಳು
ಊರಾಗ್ ಹುಟ್ಟುವಳವ್ವ ಊರವ್ರನ್ನೋಲುವಳು
ಕಾಡರಬ್ಬೆಯ ಮಗಳು ಬ್ಯಾಡರಬ್ಬೆಲವ್ವ
ಬ್ಯಾಡರಬ್ಬಿಯ ಮಗಳು ಮ್ಯಾರರ್ ಹೊನ್ನಿಲವ್ವ
ಲಗಳಿ ಕಂಡಳೆಲವ್ವ ಮ್ಯಾರರ ಹೊನ್ನಿ
ಹೆಣ್ಣು ಹೋಗಿ ಹೆಂಗುಸು ಆದಳೆಲವ್ವ
ಸೋಮವಾರ ಹೆಂಗುಸು ಆದಳೆಲವ್ವ
ಗಾಳಿ ದೇವರ ಸಂಗವಾದುವಾಲೆ
ಮೂರು ದಿನದ ಮುಟ್ಟು ಬಂದುವಾಲೆ
ಆ ನೀರು ನಿತ್ತು ಈಗ ಬಸ್ರು ಬಂದುವಾಲೆ
ಒಂದೆ ಬಸ್ರಿಗೆ ಏಳ್ಮಂದಿ ಮಕ್ಕಳನ್ನ ಹಡಿದಾಳೆ
ಅರ್ಗ್ಗಾಲೊ ಬರ್ಗ್ಗಾಲೊ ಎಲ್ಲ ಬಂದುವಾಲೆ
ಹೊನ್ನಿಗೆ ಬರ್ಗ್ಗಾಲೊ ಎಲ್ಲ ಬಂದುವಾಲೆ
ಉಂಬಲ್ಲ್ ಅನ್ನೊ ಉಡುವಲ್ಲ್ ವಸ್ತ್ರೊ ಇಲ್ಲುವಾಲೆ
ಈಗ ಬರ್ಗಾಲ್ದ ಕಾಲ್ದಲ್ಲ್ ಏಳ್ಮಂದಿ ಹುಟ್ಟುವಾರೆ
ಲಗಳಿ ಕಂಡಳೆಲವ್ವ ಮ್ಯಾರರ ಹೊನ್ನಿ
ಒಡಿಯರ ಮನಿಗಾಗಿ ತಾನು ಓಡಿದಾಳು
ಈಗ ಒಡಿಯರ ಮನಿಯಲ್ಲಿ ತಾನು ನೆಡಿದಾಳು
ಕೇಳು ಕೇಳ್ಯಯ್ಯ ನೀವು ಒಡಿಯರೆ
ನಾನೊಂದು ಸೊಕ್ಕಿಯೆ ನಿಮ್ಮ ಬಳಿ ಬಂದಿ
ಲಗಳಿ ಕಂಡರೆಲವ್ರು ಒಡಿಯಾರು
ಸೊಕ್ಕಿಂದೆ ಬಂದಾರು ನಿನ್ನ ಸಿಕ್ಕಿಂದೆ ಕಳುಹುವೆ

ಸಿಕ್ಕಿಂದೆ ಬಂದಾರು ನಿನ್ನ ಸೊಕ್ಕಿಂದೆ ಕಳುಹುವೆ
ಕೇಳಿ ಕೇಳ್ಯಯ್ಯ ನೀವು ಒಡಿಯರೆ
ಏಳ್‌ಮಂದಿ ಬರ್‌ಗಾಲ್ದ ಕಾಲ್ದಲ್ಲಿ ನನ್ಗೆ ಹುಟ್ಟುವಾರು
ಉಂಬಲ್ಲ್ ಅನ್ನೊ ಉಡುವಲ್ಲ್ ವಸ್ತ್ರ ಇಲ್ಲಿಯಾಲೆ
ಕಡುಕಡು ದುಕ್ಕವ ಮಾಡುವಳೊ ಅವ್ವು
ಕಣನೀರಾನೆ ಹೊನ್ನಿ ಸೆಡುವಳೊ
ಲಗಳಿ ಕಂಡರೆಲವ್ವು ಧನಿಗಳು
ಕೇಳು ಕೇಳ್ಯಯ್ಯ ನೀನು ಮ್ಯಾರರ ಹೊನ್ನಿ
ಮನಿಮುಂದಿನ ಮಲಗೆದ್ದಿ ನಿನಗೆ ಉಂಬುಳಿಯೊ
ಬಡಗಾನ ತೊರಿಯಲಿ ಅಂವ ಬಳಿಗಾರ
ಬಳಿಗಾರ್ನ ಅಂಗುಡಿಯು ನಿನಗೆ ಉಂಬುಳಿಯೊ
ತೆಂಕಾನ ತೊರಿಯಲಿ ಅಂವ ಕಂಚುಗಾರ
ಕಂಚುಗಾರ್ನ ಅಂಗುಡಿಯು ನಿನಗೆ ಉಂಬುಳಿಯೊ
ಮೂಡಾನ ತೊರಿಯಲಿ ಅಂವ ಮುಗಿಲರ
ಮುಗಿಲರ್ನ ಅಂಗುಡಿಯು ನಿನಗೆ ಉಂಬುಳಿಯೊ
ಪಡುವಾನ ತೊರಿಯಲಿ ಅಂವ ಗಾಣದಂವ
ಗಾಣ್ದರನ ಅಂಗುಡಿಯು ನಿನಗೆ ಉಂಬುಳಿಯೊ
ಹೊನ್ನಿಗೆ ಉಂಬುಳಿನೆಲ್ಲ ಕೊಟ್ಟುರಾಲೆ
ಚಕ್ರಕೆ ಒಕ್ಕುಳಬಾರ ಕೊಂಡುಳಾಲೆ
ತನ್ನಾರಮನಿಗಾಗಿ ತಾನು ಸೌಂನುವಾಗ
ಮಾಯದ ಮಳಿಗಾಳಿ ಎಲ್ಲ ಬಂದುವಾಲೆ
ಕಾಲ್‌ಹೊಳಿಯೆ ಹೋಗಿ ದೋಣಿಹೊಳಿ ಆದುವಾಲೆ
ಲಗಳಿ ಕಂಡಳೆಲವ್ವು ಮ್ಯಾರರ ಹೊನ್ನಿ
ಮಾಯದ ಮಳಿಗಾಳಿ ಎಲ್ಲ ಬಂದುವಾಲೆ
ಜೋಗಾಲ್ದ ಕೆರಿ ಬಾಮಿ ಎಲ್ಲ ತುಂಬುವಾದೆ
ಲಗಳಿ ಕಂಡಳೆಲವ್ವು ಮ್ಯಾರರ ಹೊನ್ನಿ
ನಾನು ಒಂದೆ ತಾಯ್ತುಂದೆಗ್ ಹುಟ್ಟಿದ್ದ್ ಹೌದಾದ್ರೆ
ಮಾಯದ ಮಳಿಗಾಳಿ ಎಲ್ಲ ಹಾರಿಹೋಯ್ಕೊ
ದೋಣಿ ಹೊಳಿಯೆ ಹೋಗಿ ಕಾಲ್ ಹೊಳಿ ಆಯ್ಕೊ?
ಮಾಯದ ಮಳಿಗಾಳಿ ಎಲ್ಲ ಹಾರಿ ಹೋದೊ

ಜೋಗಾಳ್ದ ಕೆರಿಬಾಮಿ ಎಲ್ಲಾ ಆರಿ ಹೋದೊ
ದೋಣಿ ಹೊಳಿಯೆ ಹೋಗಿ ಕಾಲ್‌ಹೊಳಿಯಾದೊ
ಲಗಳಿ ಕಂಡಳೆಲವ್ವು ಮ್ಯಾರರ ಹೊನ್ನಿ
ತನ್ನಾರಮನಿಗಾಗಿ ತಾನು ಬಂದುಳಾಲೆ
ಚಕ್ರಕೆ ಒಕ್ಕುಳಬಾರ ತಂದುಳಾಲೆ
ಸುವ್ವಾಲೆ ಸೊಪ್ಪಾಲೆ ಎಂದು ಕುಟ್ಟುವಾಳು
ಬೆವ್ವಾಲೆ ಬೆಪ್ಪಾಲೆ ಎಂದು ಗೆರುವಾಳು
ತೆಂಗ್ ತೆಳ್‌ಗಂಜಿ ಮಾಡುವಳೊ
ಏಳ್ ಹೊಂಡುವಾದರು ಹೊನ್ನಿ ತೆಗುವಾಳೊ
ತೆಂಗ್ ತೆಳ್‌ಗಂಜಿ ಏಳ್ ಹೊಂಡುಕೆ ಎರುವಾಳೊ
ಈಗ ಏಳ್‌ಜನು ಮಕ್ಕುಳೆಲ್ಲ ಉಂಡು ಎದ್ದುರಾಲೆ
ಹೊನ್ನಿ ಏಳ್ ಹೊಂಡುನಾದರು ತಾನು ನೆಕ್ಕುವಾಳೊ
ಕೂತು ಯೇಚನಿ ತಾನು ಮಾಡುವಾಳೆ
ನಿತ್ತು ಯೇಚನಿ ತಾನು ಮಾಡುವಾಳೆ
ಹಾಗಂದೆ ಕೂತರೆ ನನ್ನ ಕಾಲ ಕಳಿಯ
ಹೀಗಂದೆ ನಿತ್ತರೆ ನನ್ನ ವ್ಯಾಳಿ ಹೋಗ
ಕೂತು ಯೇಚನಿ ತಾನು ಮಾಡಿದಾಳು
ನಿತ್ತು ಯೇಚನಿ ತಾನು ಮಾಡಿದಾಳು
ಹಣರ್‍ನ ಮನಿಗಾಗಿ ತಾನು ನಡಿದಾಳು
ಲಗಳಿ ಕಂಡಳೆಲವ್ವು ಮ್ಯಾರರ ಹೊನ್ನಿ
ಹೊನ್ನಿ ಹಣರ ಹಣರ ಎಂದು ಕರೆದಾಳು
ಎರಡು ಕರೀಗೆ ಯಾರೆಂದು ಕೇಳಲಿಲ್ಲೆ
ಮೂರು ಕರೀಗೆ ಯಾರೆಂದು ಕೇಂಡುನಾಲೆ
ಕೇಳು ಕೇಳ್ಯಯ್ಯ ನೀನು ಹಣರನ ಮಗನೆ
ಒಂದೇ ಕಾಸಿಗೆ ಒಂದೇ ಹಣುತಕ್ಕೆ ನೀನು
ಏಳ್ ಜೋಡು ಜೋಡಣಿಯನು ಹಣ್ದ್ ಕೊಡ್ಕು
ಅಕ್ಕಾಲಿ ಎಂದಾನೆಲಂವ ಹಣರನ ಮಗ
ಒಂದೇ ಕಾಸಿಗೆ ಒಂದೇ ಹಣುತಕ್ಕೆನಂವ
ಏಳ್ ಜೋಡು ಜೋಡಣಿಯನು ಹಣ್ದು ಕೊಟ್ಟಲಂವ
ಕೀಳ್ ಕಡು ಕೀಳ್‌ಕತ್ತಿ ಹಣ್ದ್ ಕೊಟ್ಟ

ಬೇರ್ ಕಡು ಬೇರ್‌ಮಚ್ಚ್ ಹಣ್ದ್ ಕೊಟ್ಟ
ಮಣ್ಣ್ ಕಡು ಬಂಗಾರ್‌ಹಾರಿ ಹಣ್ದ್ ಕೊಟ್ಟ
ಕಲ್ಲ್ ಕಡು ಕಲ್ಲ್‌ಮಚ್ಚ್ ಹಣ್ದ್ ಕೊಟ್ಟ
ಏಳ್ ಜೋಡು ಜೋಡಣಿಯನು ಹಣ್ದ್ ಕೊಟ್ಟ
ಜೋಡು ಜೋಡಣಿ ಕರೂದಿಯ ಕೊಟ್ಟುಳಾಲೆ
ಹೊನ್ನಿ ತನ್ನಾರಮನಿಗಾಗಿ ತಾನು ಬಂದುಳಾಲೆ
ಲಗಳಿ ಕಂಡಳೆಲವ್ವು ಮ್ಯಾರರ ಹೊನ್ನಿ
ಕೂತು ಯೇಚನಿ ತಾನು ಮಾಡುವಳು
ನಿತ್ತು ಯೇಚನಿ ತಾನು ಮಾಡುವಳು
ಹೊನ್ನಿ ಏಳ್ ಜೋಡು ಜೋಡಣಿ ತೆಕ್ಕಂಡಾಳು
ಹೊನ್ನಿ ಗೆಣ್ಸಿನ ಹೊಲಕೆ ತಾನು ನಡಿದಾಳು
ಕಾಡ ಗೆಣ್ಸನು ತಾನು ಅರ್‍ಸುವಾಳು
ಗೆಣ್ಸಿನ ಹೊಲಕೆ ಅವ್ವು ಹೋದುಳಾಲೆ
ಅವ್ವು ಮೂಡಣ ಮಲ್ಪತ್ತಿಗೆ ಹೋದುಳಾಲೆ
ಗೆಣ್ಸಿನ ಬೀಳೆಂಬುದೆಲ್ಲ ಕಂಡುಳಾಲೆ
ಕೀಳ್ ಕಡು ಕೀಳ್‌ಕತ್ತಿ ತೆಗಿದಾಳೆ ಹೊನ್ನಿ
ಕೀಳ್ ಕಡ್ದ್ ದಿಡುಕೊಮ್ಮೆಒತ್ತುವಾಳೊ
ಮಣ್ಣ್ ಕಡು ಬಂಗಾರ್‌ಹಾರಿ ತೆಗುವಾಳೊ
ಮಣ್ಣ್ ಕಡ್ದ್ ದಿಡುಕೊಮ್ಮೆ ಒತ್ತವಾಳು
ಕುದುರಿ ನೀಟಾದ ಬೇರು ಬಂದುವಾಲೆ
ಬೇರ್ ಕಡು ಬೇರ್‌ಮಚ್ಚ್ ತೆಗಿದಾಳೆ
ಬೇರ್ ಕಡ್ದೆ ದಿಡುಕೊಮ್ಮೆ ಒತ್ತುವಾಳು
ಆನೆ ತಾರಾದ ಕಲ್ಲು ಬಂದುವಾಲೆ
ಕಲ್ಲ್ ಕಡು ಕಲ್ಲಮಚ್ಚ ತೆಗಿದಾಳೆ
ಕಲ್ಲ್ ಕಡ್ದೆ ದಿಡುಕೊಮ್ಮೆ ಒತ್ತುವಾಳು
ಆಡಗಲ್ಲ್ ತಾಡಗಲ್ಲ್ ಬಂದುವಾಲೆ
ಮೂರ್ತಕೆ ಮೂರ್ ಹಾರಿ ಅವ್ವು ಕಡಿದಾಳೆ
ಹೊನ್ನ ಕಳಸ ಚಿನ್ನ ಕಳಸ ಬಂದುವಾಲೆ
ಮತ್ತೊಂದು ಹಾರಿ ತೆಗುದಾಳೊ ಹೊನ್ನಿ
ಮಣ್ಣ ಕಳಸ ಎಂಬುದೀಗ ಬಂದುವಾಲೆ

ಒಡಿಯರ ಮನಿಗಾಗಿ ತಾನು ಓಡಿದಾಳು
ಒಡಿಯಾರೆ ಒಡಿಯಾರೆ ಅಂದು ಕರೆದಾಳು
ಏನು ಬಂದೆ ಎಂತು ಬಂದೆ ಅಂದುರಾಲೆ
ಕೇಳಿ ಕೇಳ್ಯಯ್ಯ ನೀವು ಧನಿಗಳೆ
ಗೆಣ್ಸಿನ ಹೊಲಕೆ ನಾನು ಹೊಗುತಿದ್ದೆ
ಕಾಡಗೆಣ್ಸಿನ ನಾನು ಹಯ್ಡುತಿದ್ದೆ
ಆಡಗಲ್ಲ ತಾಡಗಲ್ಲ ಬಂದುವಾಲೆ
ಹೊನ್ನ ಕಳಸ ಚಿನ್ನ ಕಳಸ ಬಂದುವಾಲೆ
ಮಣ್ಣು ಕಳಸ ಎಂಬುದೀಗ ಬಂದುವಾಲೆ
ಲಗಳಿ ಕಂಡರೆಲವ್ರು ಧನಿಗಳು
ಕೇಳು ಕೇಳಯ್ಯ ನೀನು ಮ್ಯಾರರ ಹೊನ್ನಿ
ಅಡಿಗರ ಮನಿಗಾಗಿ ನೀನು ಹೊಗುಲೆಬೇಕು
ಅಡಿಗರ ಕೈಲೀಗ ಹೇಳುಬೇಕು
ಲಗಳಿ ಕಂಡಳೆಲವ್ಳು ಮ್ಯಾರರ ಹೊನ್ನಿ
ಗೆಣ್ಸಿನ ಹೊಲಕೆ ನಾನು ಹೋದುನಲೆ ಅಡಿಗರೆ
ಕಾಡ ಗೆಣ್ಸನು ನಾನು ಹಯ್ಡುತಿದ್ದಿ ಅಡಿಗಳೆ
ಆಡಗಲ್ಲ ತಾಡಗಲ್ಲ ಬಂದುವಾಲೆ
ಹೊನ್ನ ಕಳಸ ಚಿನ್ನ ಕಳಸ ಬಂದುವಾಲೆ
ಮಣ್ಣ ಕಳಸ ಎಂಬುದೀಗ ಸಿಕ್ಕಿದ್ವಾಲೆ
ಲಗಳಿ ಕಂಡರೆಲವ್ರು ಅಡಿಗಳು
ಹೊನ್ನಿ ಮುಂದೆ ಅಡಿಗಳ್ ಹಿಂದೆ ಹೊಯ್ಟುರಾಲೆ
ಲಗಳಿ ಕಂಡಳೆಲವ್ಳು ಮ್ಯಾರರ ಹೊನ್ನಿ
ತನ್ನಲಿ ಒಡಿಯರನೀಗ ಕೂಡಿಕೊಂಡು
ಗೆಣ್ಸಿನ ಹೊಲುಕೆ ಈಗ ಹೋದುರಾಲೆ
ಕಾಡ ಗೆಣ್ಸನೀಗ ಕಂಡುರಾಲೆ
ಚಿನ್ನ ಕಳಸ ಹೊನ್ನ ಕಳಸ ಕಂಡುರಾಲೆ
ಚಿನ್ನ ಕಳಸದ ನಾಗ ತನಗೆಂದಾರು ಅಡಿಗಳು
ಹೊನ್ನ ಕಳಸದ ಸ್ವಾಮಿ ತನಗೆಂದಾರು ಒಡಿಯರು
ಮಣ್ಣು ಕಳಸದ ಕಾಡ್ಯ ತನಗೆಂದಾಳು ಮ್ಯಾರರ ಹೊನ್ನಿ
ಮನಿ ಮುಂದಿನ ಮಲುಗೆದ್ದಿ ಕಂಡುಳಾಲೆ

ಹೊಸಗೆದ್ದಿ ತಡಿಯಲ್ಲಿ ಹೊಸ ಬಲ್ಲಿಯಾಲೆ
ಹೊಸಗೆದ್ದಿ ಬಲ್ಲಿಯಾಲಿ ಕಳಸ ಇರುಮಾಡುವಳು
ಒಡಿಯರು ಮನಿ ಮುಂದೆ ಸ್ವಾಮಿಯ ಇರು ಮಾಡುವರು
ಅಡಿಗಳು ನಾಗದೇವತೆನ ಅಸ್ವಂತ ಕಟ್ಟೇಲಿ ಇರುಮಾಡುವರು
ಮಂಡ್ಲ ಎಂಬುದೆಲ್ಲ ನಾಗದೇವತಿಗೆ
ಪಾಣರ ಅಣಿಯೆಂಬುದೀಗ ಸ್ವಾಮಿಗಾಲೆ
ಕಾಡ್ಯನ ಆಟವೆಂಬುದು ಮ್ಯಾರರಿಗೆ
ಕೇಳು ಕೇಳ್ಯಯ್ಯ ನೀವು ಒಡಿಯರೆ ನೀವು
ಕಾಡ್ಯನ ಆಟವೆಂಬುದು ಆಡಬೇಕೊ ನಾನು
ಕೇಳು ಕೇಳ್ಯಯ್ಯ ನೀನು ಮ್ಯಾರರ ಹೊನ್ನಿ
ಕಾಡ್ಯನ ಆಟಗಳೆಲ್ಲ ಮಾಡಬೇಕೊ ನೀನು
ಕೇಳು ಕೇಳ್ಯಯ್ಯ ನೀವು ಒಡಿಯರೆ
ಕೇಳು ಕೇಳ್ಯ ಯ್ಯ ನೀವು ಧನಿಗಳೆ
ಕಾಡ್ಯನ ಆಟಗಳೆಲ್ಲ ಈಗ ಯಾರು ಬಲ್ಲರೊ
ಕೇಳು ಕೇಳ್ಯ ಯ್ಯ ನೀನು ಮ್ಯಾರರ ಹೊನ್ನಿ
ಬಡಗಾನ ತೊರಿಯಲ್ಲಿಲಂವ ಅಜ್ಜ ಬೈದ್ಯ
ಅಜ್ಜ ಬೈದ್ಯನ ಕೈಲಿ ಹೋಗಿ ಕೇಳು ಹೊನ್ನಿ
ಅದ್ಕ್ ಆಪ ಬಣ್ಣಾಣಿ ಎಲ್ಲ ಅಂವ ಬಲ್ಲ
ಲಗಳಿ ಕಂಡಳೆಲವ್ವ ಮ್ಯಾರರ ಹೊನ್ನಿ
ಬಡಗಾನ ತೊರಿಗಾಗಿ ಅವ್ವ ಹೋದುಳಾಲೆ
ಅಜ್ಜ ಬೈದ್ಯನ ಕೈಲಿ ಹೋಗಿ ಹೇಳುವಾಳೊ
ಕೇಳು ಕೇಳ್ಯಯ್ಯ ನೀನು ಅಜ್ಜ ಬೈದ್ಯ
ನನ್ನಲ್ಲಿ ನೀನೀಗ ಬರಬೇಕು
ಕಾಡ್ಯನ ಆಟಗಳೆಲ್ಲ ಮಾಡಬೇಕೊ
ಧನಿಗಳ ಕೈಲೀಗ ನೀನು ಹೇಳಬೇಕೊ
ಲಗಳಿ ಕಂಡನೆಲಂವ ಅಜ್ಜ ಬೈದ್ಯ
ಹೊನ್ನಿ ಮುಂದೆ ಅಜ್ಜ ಹಿಂದೆ ಬಂದುರಾಲೆ
ಧನಿಗಳ ಮನಿಗಾಗಿ ಬಂದುರಾಲೆ
ಕೇಳು ಕೇಳ್ಯಯ್ಯ ನೀವು ಧನಿಗಳೆ
ಏನು ಕಾರಣದಿಂದ ಕರುದೀರಿ ನನ್ನ
ಎಂತು ಕಾರಣದಿಂದ ಕರುದೀರಿ ನನ್ನ

ಕೇಳು ಕೇಳ್ಯಯ್ಯ ನೀನು ಅಜ್ಜ ಬೈದ್ಯ
ಕಾಡ್ಯನ ಆಟಗಳೆಲ್ಲ ಆಡಬೇಕೊ
ಅದ್ಕ್ ಆಪ ಬಣ್ಣಾಣಿ ಎಲ್ಲ ಹೇಳಬೇಕೊ
ಅದ್ಕ್ ಆಪ ಸಾಯತ ಎಲ್ಲ ಹೇಳಬೇಕೊ
ಕೇಳು ಕೇಳ್ಯಯ್ಯ ನೀವು ಒಡಿಯಾರೆ
ಏಳ್ ವರಹ ಏಲ್ಮುಡಿ ಅಕ್ಕಿ ಆಗಬೇಕೊ
ಮೂರೆ ದಿನದ ಆಟ ಆಡಬೇಕೊ
ಲಗಳಿ ಕಂಡರೆಲವ್ರು ಒಡಿಯಾರು
ಏಳ್ ವರಹ ಏಳ್ಮುಡಿ ಅಕ್ಕಿ ಕೊಟ್ಟುರಾಲೆ
ಲಗಳಿ ಕಂಡನೆಲಂವ ಅಜ್ಜ ಬೈದ್ಯ
ಏಳ್ ವರಹ ಏಳ್ಮುಡಿ ಅಕ್ಕಿ ತಕಂಡುನಾಲೆ
ತನ್ನಾರಮನಿಗಾಗಿ ತಾನು ಬಂದುನಾಲೆ
ಲಗಳಿ ಕಂಡಳೆಲವ್ಳು ಮ್ಯಾರರ ಹೊನ್ನಿ
ತನ್ನಾರಮನಿಗಾಗಿ ತಾನು ಬಂದುಳಾಲೆ
ಜಾತಿ ಕಟ್ಟನು ಈಗ ಕೂಡಿದಾಳು ಅವ್ಳು
ನೆಂಟರಿಷ್ಟರನೆಲ್ಲ ಕೂಡಿಕೊಂಡುಳಾಲೆ
ಆಟಕೆ ದಿನವೆಂಬುದೆಲ್ಲ ಇಟ್ಟುಳಾಲೆ
ಶನಿವಾರ ದಿನದಲ್ಲೆ ಮೂರ್ತ ಇಟ್ಟುಳಾಲೆ
ಲಗಳಿ ಕಂಡರೆಲಂವ ಅಜ್ಜ ಬೈದ್ಯ
ಎಂಟು ದಿವ್ಸದ ಚೌತ ಬಿದ್ದುರಾಲೆ ಅವ್ರು
ಮೇಲ್ಬರು ಶನಿವಾರ ಗೂಡೆಂಬುದೆಲ್ಲ ಹೋಗಬೇಕೊ
ಲಗಳಿ ಕಂಡನೆಲಂವ ಅಜ್ಜ ಬೈದ್ಯ
ಕಾಡ್ಯನ ಪೂಜಗಳೆಲ್ಲ ಮಾಡಿದಾನೊ
ಆಯಿತ್ಯವಾರ ದಿನದಲ್ಲೆ ಕಂಬಿನ್ ಮೂರ್ತುವಾಲೆ
ಆಯಿತ್ಯವಾರ ದಿನದಲ್ಲೆ ಈಗ ಅರ್ಧ ಮಂಡ್ಲವಾಲೆ
ಬೈದ್ಯ ಮಂಡ್ಲಕ್ಕೆ ವೀಳ್ಯವನೆಲ್ಲ ಹಚ್ಚಿದಾನು
ನಾಲೂಕು ತೊರಿಯ ದೇವುರುಗಳನೆಲ್ಲ
ಮಂಡ್ಲಕೆ ಈಗ ಕರಿದಾನು
ಮಂಡ್ಲದ ಪೂಜವನೆಲ್ಲ ಮಾಡುವಾನು
ಲಗಳಿ ಕಂಡನೆಲಂವ ಅಜ್ಜ ಬೈದ್ಯ
ಹಾಂಡರ ಮನಿಗಾಗಿ ನಡಿದಾನುಲಂವ

ಹೊನ್ನ ಕಳಸಗಳನೆಲ್ಲ ತಂದಾನು
ಹೊನ್ನ ಕಳಸದ ಪೂಜ ಮಾಡುವಾನು
ಲಗಳಿ ಕಂಡಲಲಂವ ಅಜ್ಜ ಬೈದ್ಯ
ದಾಸ್ರ ಕೋಲ ಕೊರ್‍ರ ಕೋಲ ಮಾಡುವಾನು
ಸೋಮಾರ ದಿನದಲ್ಲಿ ಕೋಲ ಮಾಡುವಾನು
ಸೋಮಾರ ಸೈಂಕಾಲ ಈಗ ಅಜ್ಜ ಬೈದ್ಯ
ದೊಡ್ಡ ಮಂಡ್ಲವೆಂಬುದನೀಗ ಬರಿದಾನು
ಮಂಡ್ಲಕೆ ವೀಳ್ಯಗಳನೆಲ್ಲ ಹಚ್ಚುವಾನು
ನಾಲೂಕು ದೇಶದ ದೈಯುಗಳನೆಲ್ಲ
ಮಂಡ್ಲಕ್ಕೆ ತಾನು ಕರಿದಾನು
ಲಗಳಿ ಕಂಡಳೆಲವ್ವ ಮ್ಯಾರರ ಹೊನ್ನಿ
ಹೈಟ್ ಮಂಡಿ ಗುಂಯ್ಟ್ ಕಟ್ಟುವಾಳು
ತಲಿಗೆ ಹೂಗಳನೆಲ್ಲ ಮುಡುವಾಳು
ಹೊನ್ನಿ ಸಿಂಗಾರವೆಂಬುದೆಲ್ಲ ಮಾಡಿದಾಳು
ಹೊನ್ನ ಕಳಸವೆಂಬುದೀಗ ಹೊತ್ತುಳಾಲೆ
ಲಗಳಿ ಕಂಡನೆಲಂವ ಅಜ್ಜ ಬೈದ್ಯ
ಕೇಳು ಕೇಳ್ಯಯ್ಯ ನೀನು ಮ್ಯಾರರ ಹೊನ್ನಿ
ಹೊನ್ನ ಕಳಸ ಹೊತ್ಕಂಡ್ ಬಾರೊ ಹೊನ್ನಿ
ಮಂಡ್ಲದಲ್ಲಿ ನೀನು ಬಂದು ನಿಲ್ಲು ಹೊನ್ನಿ
ಲಗಳಿ ಕಂಡರೆಲಂವ ಅಜ್ಜ ಬೈದ್ಯ
ಹೊನ್ನ ಕಳಸಕೆ ಪೂಜನೆಲ್ಲ ಮಾಡುವಾನು
ಲಗಳಿ ಕಂಡಳೆಲವ್ವ ಮ್ಯಾರರ ಹೊನ್ನಿ
ಹೊನ್ನ ಕಳಸವೆಂಬುದೀಗ ಇರು ಮಾಡುವರು
ಮಂಗ್ವಾರ ದಿನದಲ್ಲಿ ಈಗ ಅಜ್ಜ ಬೈದ್ಯ
ಡಕ್ಕಿಯಬಲಿ ಎಂಬುದೆಲ್ಲ ಮಾಡುವಾನು
ಹುಲಿ ಹಂದಿಯ ಕೋಲ ಮಾಡುವಾನು
ಲಗಳಿ ಕಂಡರೆಲಂವ ಅಜ್ಜ ಬೈದ್ಯ
ಜಕ್ಕಿಯರನೆಲ್ಲ ಕುಣಿಸುವಾನೊ
ಕುದುರಿ ಕೋಲಗಳನ್ನೆಲ್ಲ ಮಾಡುವಾನೊ
ಲಗಳಿ ಕಂಡರೆಲಂವ ಅಜ್ಜ ಬೈದ್ಯ
ಗಂಗೆ ಸಾನವ ಮಾಡಬೇಕು ಈಗ

ಹೊನ್ನ ಕಳಸಕೆ ಸಾನ ಆಗಬೇಕು
ಲಗಳಿ ಕಂಡರೆಲಂವ ಅಜ್ಜ ಬೈದ್ಯ
ಗಂಗೆ ಸಾನಕೆ ಅಂವ ಹೊರಟಾನು
ಹೊನ್ನ ಕಳಸವನೆಲ್ಲ ಕೂಡಿಕೊಂಡು
ಕುದುರೆ ಸಾರೋಟನೆಲ್ಲ ಕೂಡಿಕೊಂಡು
ಈಗ ಗಂಗೆ ಸಾನಕೆ ಅಂವ ಹೊರಟಾನು
ಗಂಗೆ ಸಾನವನೆಲ್ಲ ಮಾಡಿಕೊಂಡು ಈಗ
ಕಾಡ್ಯನ ಮನೆಗೆಲ್ಲ ಬಂದುರಾಲೆ
ಚಿಟ್ಟಿ ಪೂಜವನೆಲ್ಲ ಮಾಡಿದಾನು ಅಜ್ಜ
ಭೂತ್ ಮಂಡ್ಲಗಳನೆಲ್ಲ ಬರಿದಾನು
ಹರ್ಕೆ ಎಂಬುದನೆಲ್ಲ ಕಟ್ಟುವಾನು
ಹನ್ನೆಯ್ಡು ಗಂಟೆಯ ರಾತ್ರಿ ಕಾಲದಲ್ಲಿ
ಗೂಡು ನಮ್ಮರಮನೆಗೆ ಹೋಗಬೇಕೊ
ಗೂಡೆಂಬುದೆಲ್ಲ ಹೊನ್ನಿಗೆ ನೆಗಿದಾನೊ
ತನ್ನಾರಮನಿಗಾಗಿ ತಾನು ಬಂದುನಾಲೆ
ಬೈದ್ಯನ ಸಮ್ಮಾನುವೆಲ್ಲ ಆದುವಾಲೆ
ಕೇಳು ಕೇಳ್ಯಯ್ಯ ನೀನು ಮ್ಯಾರರ ಹೊನ್ನಿ
ಮೇಲ್ಬರು ಶನಿವಾರ ದಿನುದಲ್ಲಿಯಾಲೆ
ಮೂರ್ತಾದ ಕಂಬಾನು ಈಗ ಕೀಳಬೇಕೊ
ಮೇಲ್ಬರು ಶನಿವಾರ ದಿವ್ಸ ಬಂದುವಾಲೆ
ಮೂರ್ತದ ಕಂಬುನೆಲ್ಲ ಪೂಜ ಮಾಡಿದುರಾಲೆ
ಈಗ ಮೂರ್ತದ ಕಂಬುನೆಲ್ಲ ಕಿತ್ತುರಾಲೆ
ಲಗಳಿ ಕಂಡರೆಲಂವ ಅಜ್ಜ ಬೈದ್ಯ
ಒಡಿಯಾರ ಮನಿಯಲ್ಲಿ ಇರುಮಾಡುವಾರು
ಲಗಳಿ ಕಂಡರೆಲವ್ರು ಒಡಿಯಾರು
ಏಳ್ ವರ ಏಳ್ಮುಡಿ ಅಕ್ಕಿ ಕೊಟ್ಟುರಾಲ*

(ಹೇಳಿದವರು : ಬಚ್ಚಮೇರ)

* ಹಾಡುಗಾರನ ಮರವೆಯಿಂದಾಗಿ ಆಚರಣೆಯ ಕ್ರಿಯಾ ವಿಧಿ ವಿಧಾನಗಳ ಕ್ರಮಾನುಗತಿ ಹಾಡಿನಲ್ಲಿ ವ್ಯತ್ಯಸ್ತಗೊಂಡಿದೆ. – ಸಂ.

## ಕಳಸ ಮಾಡುವ ಹಾಡು

ಉದ್ದೀನ ತೋರಾದ ಮಣ್ಣ ಗುದ್ದಿ ಚೂರಾನ ಮಾಡಿ
ಕಾಲೊಳಗೆ ಮಣ್ಣು ಹದುಮಾಡಿ
ಕಾಲೊಳಗೆ ಮಣ್ಣು ಹದುಮಾಡಿ ಪಾಂಡವರಳಿಯ
ಗೈಯ್‌ಕೊಡಿ ಹೊನ್ನಕಳಸವು
ಉದ್ದೀನ ತೋರಾದ ಮಣ್ಣ ಗುದ್ದಿ ಚೂರಾನ ಮಾಡಿ
ಕಾಲೊಳಗೆ ಮಣ್ಣು ಹದುಮಾಡಿ
ನೀರೊಳಗೆ ಮಣ್ಣು ಮೆದುಮಾಡಿ ಪಾಂಡವರಳಿಯ
ಗೈಯ್‌ಕೊಡಿ ಹೊನ್ನ ಕಳಸವು
ಹೀರಿಯ ಹೂಗಿನ್ಹಾಗು ಏಳ್ಡೆಡಿ ಕಳಸವು
ಗೆಯ್‌ಕೊಡಿ ಹೊನ್ನ ಕಳಸವು
ತುಂಬೀಯ ಹೂಗಿನ್ಹಾಗು ಒಂಬತ್ತೆಡಿ ಕಳಸಾವು
ಗೆಯ್‌ಕೊಡಿ ಹೊನ್ನ ಕಳಸವು
ಹಾಗಲ ಹೂಗಿನ್ಹಾಗು ಆರ್ಡೆಡಿ ಕಳಸವು
ಗೆಯ್‌ಕೊಡಿ ಹೊನ್ನ ಕಳಸವು
ಹೊನ್ನಿನಂಥ ಕಳಸಕೆ ಎಷ್ಟ್ ಹಣು ಹಿಡುವಾದು
ಹೊನ್ನು ಆಗಸದ ಚವಲಾವು
ಹೊನ್ನು ಆಗಸದ ಚವಲಾವು ಕೊಟ್ಟರೆ
ಹೊನ್ನಿನಂಥ ಕಳಸ ಗೈಲಕ್ಕ್
ಅಷ್ಟೊಂದ ಮಾತನು ಕೇಂಡವರೆ ಪಾಂಡವರಳಿಯ
ಗೆಯ್ದಾರೆ ಹೊನ್ನ ಕಳಸವು
ಅಡಿಅಕ್ಕಿ ತೆಂಗಿನಕಾಯಿ ಫಲವುಳ್ಳ ಸಿಂಗಾರ್ಹೂವು
ಪಟ್ಟಿ ವೀಳ್ಯಗಳ ಹಿಡುವಾರು
ಪಟ್ಟಿ ವೀಳ್ಯಗಳ ಹಿಡುವಾರು ಪಾಂಡವರಳಿಯ
ಗೆಯ್ದಾರೆ ಹೊನ್ನ ಕಳಸವು

(ಹೇಳಿದವರು : ಶ್ರೀಮತಿ ಬುಡ್ಡು)

## ಕಳಸ ತರುವ ಹಾಡು

ಪಟ್ಟಿ ವೀಳ್ಯಗಳ ಹಿಡಿದಾರು ಪಾಂಡವರಳಿಯ
ಗೆಯ್ದಾರೆ ಹೊನ್ನ ಕಳಸವು ಪಾಂಡವರಳಿಯ
ಕಾಯ್ನಾಳ ಮುಂದೆ ಕರಿದಾರು
ಕರಿದಾರೆ ಮುಂದೆ ಬಂದಾರೆ ಪಾಂಡವರಳಿಯ
ತಂದಿಡುವಾರೆ ಜೊತನದಲಿ ಪಾಂಡವರಳಿಯ
ಹೂ ಒಡ್ದು ಕಾಯ ಒಡುವಾರು
ಹೂ ಒಡ್ಡು ಕಾಯ ಒಡುವಾರು ಪಾಂಡವರಳಿಯ
ಕೈ ಮುಗ್ದು ಕಾಲು ಎರುಗುವರು
ಕೈ ಮುಗ್ದು ಕಾಲು ಏನೆಂದೆ ಎರುಗುವರು
ಮನಿ ಒಳಗೆ ಜ್ಯೋತಿ ಉರಿಕಂದ್
ಮನಿ ತುಂಬ ಮಕ್ಳ್ ಕೊಡ್ಬೇಕಂದ್ ಪಾಂಡವರಳಿಯ
ಹಟ್ಟೀಲಿ ಗಂಟೀನ ಕೊಡ್ಬೇಕು
ಕಾಯ್ನಾಳ ಮುಂದೆ ಕರಿದಾರೆ ಪಾಂಡವರಳಿಯ
ಮುಂದೆ ಬಾರೆಂದು ಕರಿದಾರು
ಮುಂದೆ ಬಾರೆಂದು ಕರಿದಾರು ಹೊನ್ನೀಯ
ನೆಗಿದಾರು ಹೊನ್ನ ಕಳಸೋವ
ಸೆರಗೊಡ್ಡಿ ಕಳಸೊ ಹಿಡುವಾಳು ಹೊನ್ನಿ
ತಳದ ಹಾಯ್ಗುಳಿಯ ಒಡಗೊಂಡು ಹೊನ್ನಿ
ಬರುವಾಳು ತನ್ನ ತಳಕಾಗಿ
ತಾಯಿ ತಳದಲ್ಲಿ ಇಳ್ಸುವಾಳು ಹಾಯ್ಗುಳಿ
ತಾಯಿ ಜೊತೆಯಲ್ಲಿ ನೆಲುವಾಗೆ

(ಹೇಳಿದವರು : ಶ್ರೀಮತಿ ಬುಡ್ಡು)

## ಕಂಬ ಮೂರ್ತಮಾಡುವ ಹಾಡು

ಲಗ ಕಂಡುನಯ್ಯ ಹೆರುತಾಯಿ ಮಗುವೆ
ಲಗ ಕಂಡುನಯ್ಯ ಬೈದ್ಯೇರು ಮಗುನೆ
ಕಡುವಲ್ಲಿ ಕಂಬಾನು ಕಡ್ದು ಬರುಬೇಕೆ
ಕೇಳಮ್ಮ ಕೇಳೊ ಮುಗ್ತಿನು ತಾಯೆ
ಕಡುವಲ್ಲಿ ಕಂಬಾನು ಕಡ್ದು ಬರುಬೇಕೆ
ಯಾಳ್ಯೆಲ್ಲ ಸಂದೊ ಗಳ್ಗಿಯು ಬಂದೊ
ಕೇಳಮ್ಮ ಕೇಳೆ ಮುಗ್ತಿನು ತಾಯೆ
ಹೆರುತಾಯಿ ಮಗುನ ಕರಿತಿದ್ದುನಯ್ಯ
ಲಗ ಕಂಡುನಯ್ಯ ಬೈದ್ಯೇನು ಮಗುನೆ
ಕಂಬೀನ ಮದುಮಗನ ಬಳುಮೀಸುತಾನೆ
ಕಂಬೀನ ಮದುಮಗ ಬಳುಮೀಯುತಾನೆ
ಕಂಬೀನ ಮದುಮಗ ಸಿಂಗಾರಾಗುತಾನೆ
ಕೇಳಮ್ಮ ಕೇಳೊ ಮುಗ್ತಿನು ತಾಯೆ
ಕಡುವಲ್ಲಿ ಕಂಬಾನು ಕಡ್ದು ಬರುಬೇಕೆ
ಕಂಬೀನ ಎರುಕಾಕೆ ನೀನ್ಹೋಗುಬೇಕೆ
ಕಡುವಲ್ಲಿ ಕಂಬಾನು ಕಡ್ದು ಬರುಬೇಕೆ
ಲಗ ಕಂಡುನಯ್ಯ ಹೆರುತಾಯಿ ಮಗುನೆ
ಕಂಬೀನ ಮದುಮಗ ಸಿಂಗಾರಾಗಿದಾನೆ
ಕೇಳಮ್ಮ ಕೇಳೊ ಮುಗ್ತೀನು ತಾಯೆ
ಸಾರೋಟು ಸರುದೈವ ಕೊಡ್ಯೋಗುಬೇಕೆ
ಹಾಯ್ಗುಳಿರಾಯನ ಕೂಡ್ಯೋಗುಬೇಕೆ
ಬಬ್ಬರ್ಯರಾಯನ ಕೂಡ್ಯೋಗುಬೇಕೆ

ಕಂಬೀನ ಎರುಕಾಕೆ ಹೊರುಟೀದುಳಮ್ಮ
ಕಂಬೀನ ಎರುಕಾಕೆ ಹೋದಾಳೆಲವ್ವ
ತಾನೇರುವಾಳು ಕನ್ಕ ದಂಡಿಗ್ಯಾನ
ಕಂಬೀನ ಎರುಕಾಕೆ ಹೊರುಟೀದುಳಾಲೆ
ಕಡುವಲ್ಲಿ ಕಂಬಾನೆ ಕಂಡಾಳೆಲವ್ವ
ಲಗ ಕಂಡುನಯ್ಯ ಬೈದ್ಯೇನು ಮಗುನೆ
ಕಂಬೀನ ಪೂಜಾವ ಮಾಡೀದುನಾಲೆ
ಕಡುವಲ್ಲಿ ಕಂಬಾನ ಬಿಟ್ಟುಕೊಟ್ಟುನಾಲೆ
ಲಗ ಕಂಡುನಯ್ಯ ಹೆರುತಾಯು ಮಗುನೆ
ಕಡುವಲ್ಲಿ ಕಂಬಾನು ಕಡುದೀದುನಾಲೆ
ಕಂಬೆಂಬುದೆಲ್ಲ ಕಾಡ್ಯನ ಮನಿಗ್‌ಬಂದುವಾಲೆ
ಹೊನ್ನಾರ ಮನಿಗಾಗಿ ಬಂದಾವೆ ಕಂಬು
ಮೂರ್ತಕೆ ಮೂರ್ ಸುತ್ತು ಬಂದಾವೆ ನೋಡಿ
ಹೊನು ಚಿಟ್ಟಿ ಸುತ್ತಾಲು ಬಂದಾವೆ ನೋಡಿ
ಲಗ ಕಂಡುನಯ್ಯ ಬೈದ್ಯೇನು ಮಗುವೆ
ಮೂರ್ತದ ಕಂಬಾನು ನೆಟ್ಟಾನೆಲಂವ
ಪೂಜೆಂಬುದೆಲ್ಲ ಮಾಡೀದುನಾಲೆ

(ಹೇಳಿದವರು : ಬಚ್ಚಮೇರ)

# ಅಜ್ಜರ ಹುಟ್ಟು

ಅಜ್ಜಾರ ಹುಟ್ಟ ನಾವ್ ನೋಡುಬೇಕೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಲಗ ಕಂಡುರಯ್ಯ ಕರಿಸೂರ ಸ್ವಾಮಿ
ಅಜ್ಜಾರ ಹುಟ್ಟಾನು ನಾವ್ ನೋಡುಬೇಕೆ
ಹನ್ನೆರಡು ಸಂಗೂರ ತರ್ಸ್ಸಿಕೊಂಡುರಾಲೆ
ಹನ್ನೆರಡು ಸಾಯಾತ ತರ್ಸ್ಸಿಕೊಂಡುರಾಲೆ
ಹಮುನೆಂಬುದೆಲ್ಲ ಕೂಡೀದುರಾಲೆ
ಒಂದಂತುರಾಕೆ ಅರುಳೆಯ ಚಕ್ಕೆ
ಒಂದಂತುರಾಕೆ ಹಳೆಯೆಣ್ಣೆಯಾಲೆ
ಒಂದಂತುರಾಕೆ ಪತ್ರಿಯ ಚಕ್ಕೆ
ಒಂದಂತುರಾಕೆ ಹಳೆ ತುಪ್ಪುವಾಲೆ
ಒಂದಂತುರಾಕೆ ಹೆಲಸಿನ ಚಕ್ಕೆ
ಒಂದಂತುರಾಕೆ ಎಣ್ಣೆ ಹೊಯ್ಯುವಾರು
ಹಮುನೆಂಬುದೆಲ್ಲ ಕೂಡೀದುರಾಲೆ
ತಂತುರ ಮಂತುರ ಮಾಡೀರ್ ಸ್ವಾಮಿ
ಅಮುರುತ ಗಿಂಡಿಕಿ ನೀರು ಬಿಡುವಾರೆ
ಅಜ್ಜಾರು ಇಬ್ಬಾರು ಹುಟ್ಟೀದುರಾಲೆ
ಹಮನ್ದಲ್ಲೆ ಅಜ್ಜಾರು ಹುಟ್ಟೀದುರಾಲೆ
ಮುಂದ್ ಹುಟ್ಟುವಾನೆ ಸಮುರುತುನಜ್ಜ
ಹಿಂದ್ ಹುಟ್ಟ್‌ವಾನೆ ಅವ್‌ತಾರ್‌ದಜ್ಜ
ಅಜ್ಜಾರು ಇಬ್ಬಾರು ಎದ್ದ್ ಕೂರುವಾರೆ
ಎದ್ದು ಕೂತ ಅಜ್ಜಾರು ಮಾತಾಡುವಾರೆ
ಏನೆಂದು ಮಾತಾನೆ ಆಡುತಿರುವಾರು
ಮರ ಹುಟ್ಟಿದ್ದಾಗೆ ನಾವ್ ಹುಟ್ಟಿತಾಲೆ
ಮರ ಬೆಳಿದ್ದಾಗೆ ನಾವ್ ಬೆಳಿತಾಲೆ
ಸಂತಾನ ಸಂತೋಸ ನಮಗಿಲ್ಲಿಯಾಲೆ
ಮುಂದು ಬೆಳುವಲ್ಲೆ ಹೆಣು ಸಂತಾನಿಲ್ಲೆ

ಹಿಂದು ಬಾಳುವಲ್ಲೆ ಗಂಡು ಸಂತಾನಿಲ್ಲೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಲಗ ಕಂಡುರಯ್ಯ ನಗುರಾಸಿ ಸ್ವಾಮಿ
ಲಗ ಕಂಡುರಯ್ಯ ಕರಿಸೂರ ಸ್ವಾಮಿ
ಸ್ವಾಮಿ ಕೂತು ಮಾತಾಡುವಾರೆ
ಏನೆಂದು ಮಾತಾನೆ ಆಡುತಿರುವಾರು
ಅಜ್ಜಾರು ಇಬ್ಬಾರ್ನ ಹುಟುಸೀದುವಾಲೆ
ಅಜ್ಜಾರಿಗ್ ಅರುಮನಿ ಕಟ್ಟಾಲು ಬೇಕೆ
ಅಜ್ಜಾರಿಗ್ ಗುರುಮಠ ಕಟ್ಟಾಲು ಬೇಕೆ
ಕೇಳ್ಯಯ್ಯ ಕೇಳಿ ನಮ್ಮಜ್ಜ ನೀವೆ
ಅರುಮನಿ ಗುರುಮಠ ಕಟ್ಟಾಲು ಬೇಕು
ಕೇಳ್ಯಯ್ಯ ಕೇಳಿ ಅಜ್ಜಾರೆ ನೀವು
ಯಾಕ್ ಸ್ವಾಮಿ ನಮಗೆ ಅರುಮನಿಗಳು
ಯಾಕ್ ಸ್ವಾಮಿ ನಮಗೆ ಗುರುಮಠಗಳು
ಮುಂದು ಬಾಳುವಲ್ಲೆ ಹೆಣು ಸಂತಾನಿಲ್ಲೆ
ಹಿಂದು ಬಾಳುವಲ್ಲೆ ಗಂಡು ಸಂತಾನಿಲ್ಲೆ
ಕೇಳ್ಯಯ್ಯ ಕೇಳಿ ನಮ್ಮಜ್ಜ ನೀವೆ
ಸಂತಾನ ಸಂತೋಸು ನಾವ್ ಕೊಡುತೇವೆ
ಮಾಯ್‌ದಲ್ಲಿ ಸಂತಾನ ನಾವ್ ಕೊಡುತೇವೆ
ಅರುಮನಿ ಗುರುಮಠ ಕಟ್ಟಾಲು ಬೇಕೆ
ಲಗ ಕಂಡುರಯ್ಯ ಅಜ್ಜಾರೆಲವ್ರು
ಅಕ್ಕಂದೆ ಒಪ್ಪೀಗಿ ಕೊಟ್ಟೀದುರಾಲೆ
ಲಗ ಕಂಡುರಯ್ಯ ನಾರಾಯ್ಣಸ್ವಾಮಿ
ಅಜ್ಜಾರಿಗ್ ಅರುಮನಿ ಕಟ್ಟಾಲು ಬೇಕೆ
ಅಜ್ಜಾರಿಗ್ ಗುರುಮಠ ಕಟ್ಟಾಲು ಬೇಕೆ
ಕೂಟದಧಿಕಾರಿನ ಕರುಸೀದುರಾಲೆ
ಇಲು ಬಾರೊ ಇಲ್ಲೆ ಹರಿಕಾರ ನಿಂಗ
ಅಜ್ಜಾರಿಗ್ ಅರುಮನಿ ಕಟ್ಟಾಲು ಬೇಕೆ
ಬರುಸ್ಯಾನುಬಯ್ಯನ ಮನಿಗ್ಹೋಗುಬೇಕೆ
ಅಕ್ಕಾಲಿ ಎಂದ ಕೂಟದಧಿಕಾರ
ಬರುಸ್ಯಾನುಬಯ್ಯನ ಮನಿಗ್ಹೋದುನಾಲೆ

ಹಗ್ಗಿನ ಹೋಕಿಗೆ ಏನು ಬಂದೆ ನೀನು
ಬ್ಯಾಸೀಗೆ ಮೊದಲೀಗೆ ಏನು ಬಂದೆ ನೀನು
ಕೇಳ್ಯಯ್ಯ ಕೇಳಿ ಬರುಸ್ಯಾನುಬಯ್ಯ
ಮಾಯ್‌ದಲಿ ಅಜ್ಜಾರ ಹುಟುಸೀದುರಾಲೆ
ಅಜ್ಜಾರಿಗ್ ಅರುಮನಿ ಕಟ್ಟಾಲು ಬೇಕೆ
ಅಜ್ಜಾರಿಗ್ ಗುರುಮಠ ಕಟ್ಟಾಲು ಬೇಕೆ
ಒಡ್ಡಾರಿಗ್ ವಾಲಿಯ ನೀವ್ ಬರಿಬೇಕೆ
ಅಕ್ಕಾಲಿ ಎಂದ ಬರುಸ್ಯಾನುಬಯ್ಯ
ಹೊನ್ವಾಲೆ ಸರುನ ಕೊಯ್ಕಂಡುನಾಲೆ
ಬಂಗಾರ್ದ ಬರುಕಂಟ ಕೈಲಿಡುವಾನು
ವಾರೆಂಬುದೆಲ್ಲ ಬರಿತಿದ್ದುನಾಲೆ
ವಾಲಿಗೆ ಒಂಕಾಣಿ ಏನು ಬರುದಯ್ಯಾ
ಈ ವಾಲಿಯಾನ ಕಂಡ ಗಳ್ಗಿಯಲ್ಲೆ
ಸ್ವಾಮಿಯ ಬಳಿಗಾಗಿ ನೀವ್ ಬರುಬೇಕೆ
ಹಾಗಂದೆ ವಾಲೀಯ ಬರಿದಾನೆಲಂವ
ವಾಲ್ಯೆಂಬುದೆಲ್ಲ ಬರುದಾದ ಮ್ಯಾಲೆ
ಲಗ ಕಂಡುನಯ್ಯ ಬರುಸ್ಯನುಬಯ್ಯ
ಕೂಟದಧಿಕಾರ ಕೈ ಕೊಡುವಾನೆ
ವಾಲ್ಯೆಂಬುದೆಲ್ಲ ಕೊಡುತಿದ್ದುನಾಲೆ
ಲಗ ಕಂಡುನಯ್ಯ ಕೂಟದಧಿಕಾರ
ಕೊಟ್ಟಾಲೆ ಮಡುಲಲ್ಲೆ ಸರ್ರಿಕೊಂಡುನಾಲೆ
ಮೂಡಾನ ತೊರಿಗೆ ನಡೆದಾನೆಲಂವ
ಮುತ್ತಿನೊಡ್ಡಂಗ್ ವಾಲಿ ಕೊಡುತಿದ್ದುನಾಲೆ
ಲಗ ಕಂಡುನಯ್ಯ ಮುತ್ತಿನೊಡ್ಡಲಂವ
ಬಂದೋಲೆಯನ್ನ ನಿಂದೋದುವಾನೆ
ವಾಲಿಗೆ ಜಾಬಾವು ಬರೆದಾನೆಲಂವ
ತಾತನ್ನಗಳ ಮುಟ್ಟ ಹೊರೆಕಟ್ಟುವಾನು
ಲಗ ಕಂಡುನಂವ ಹರಿಕಾರ ನಿಂಗ
ತೆಂಕಾನ ತೊರಿಗೆ ನೆಡಿದಾನೆಲಂವ
ಕಂಚಿನೊಡ್ಡಲಂವ ಕಂಡಾನೆ ನೋಡೆ
ಕಂಚಿನೊಡ್ಡಂಗ್ ವಾಲಿ ಕೊಡುತ್ತಿದ್ದುನಾಲೆ

ಲಗ ಕಂಡುನಯ್ಯ ಕಂಚಿನೊಡ್ಡಲಂವ
ಪಡುವಾನ ತೊರಿಗೆ ನಡೆದಾನೆಲಂವ
ಬಡುಗ್ಯಾನಿಗೆ ವಾಲಿ ಕೊಡುತಿದ್ದುನಾಲೆ
ಲಗ ಕಂಡುನಂವ ಬಡುಗೇರ ಮಗುನೆ
ವಾಲ್ಯೆಂಬುದೆಲ್ಲ ಓದೀದುನಾಲೆ
ಸ್ವಾಮಿಯ ಬಳಿಯಿಂದ ಬಂದಂತ ವಾಲಿ
ವಾಲೀಗೆ ಜಾಬಾವು ಬರೆದಾನೆಲಂವ
ತಾತನ್ನಗಳ ಮುಟ್ಟ ಹೊರೆಕಟ್ಟುವಾನು
ಲಗ ಕಂಡುನಂವ ಹರಿಕಾರ ನಿಂಗ
ಲಗ ಕಂಡುನಂವ ಬಡುಗೇರ ಮಗನೆ
ಬಡುಗಾನ ತೊರಿಗೆ ನಡೆದಾನೆಲಂವ
ಬಂಗಾರೊಡ್ಡನಂವ ಕಂಡಾನೆ ನೋಡೆ
ಬಂಗಾರೊಡ್ಡಂಗೆ ವಾಲಿ ಕೊಡುತಿದ್ದುನಾಲೆ
ಲಗ ಕಂಡುನಯ್ಯ ಬಂಗಾರೊಡ್ಡಲಂವ
ಸ್ವಾಮಿಯ ಬಳಿಯಿಂದ ಬಂದಂತ ವಾಲಿ
ವಾಲ್ಯೆಂಬುದೆಲ್ಲ ಓದೀದುನಾಲೆ
ವಾಲೀಗೆ ಜಾಬಾವು ಬರಿದಾನೆಲಂವ
ತಾತನ್ನಗಳ ಮುಟ್ಟ ಹೊರಿಕಟ್ಟುವಾನು
ನಾಲೂಕು ತೊರಿಯ ವಡ್ಡಾರೆಲವ್ರು
ಸ್ವಾಮಿಯ ಬಳಿಗಾಗಿ ಬಂದಾರೆಲವ್ರು
ಸ್ವಾಮಿಗೆ ಕೈನ ಮುಗಿದಾರೆಲವ್ರು
ಭೂಮಿಗೆ ತಲೀನ ಎರುಗೀದುರಾಲೆ
ಲಗ ಕಂಡುರಯ್ಯ ನಾರಾಯ್ಣಸ್ವಾಮಿ
ಮುಗಿದಂತ ಕೈಯೀಗೆ ಹಾ ಅಂದುರಾಲೆ
ಎರುಗೀದ ತಲಿಗೆ ಬಾ ಎಂದುರಾಲೆ
ಲಗ ಕಂಡುರಯ್ಯ ವಡ್ಡಾರೆಲವ್ರು
ಕೇಳ್ರಯ್ಯ ಕೇಳಿ ನಾರಾಯ್ಣಸ್ವಾಮಿ
ಏನು ಕಾರಣಿಂದ ಕರಸೀರಿ ಸ್ವಾಮಿ
ಕೇಳ್ರ ಯ್ಯ ಕೇಳಿ ವಡ್ಡಾರೆ ನೀವು
ಮಾಯ್ದಲಿ ಅಜ್ಜಾರು ಹುಟ್ಟೀರುವಾರೆ
ಅಜ್ಜಾರಿಗರುಮನಿ ಕಟ್ಟಾಲು ಬೇಕೆ

ಅಜ್ಜಾರಿಗರುಮತ ಕಟ್ಟಾಲು ಬೇಕೆ
ಅಕ್ಕಾಲಿ ಎಂದ್ರು ವಡ್ಡಾರೆಲವ್ರು
ಬೆಳ್ಳೀಯ ಮೂಡಿ ಬೆಳಗಾಗುವಂಗೆ
ಕೋಳೀಯ ಕೂಗಿ ವದಿಯಾಗುವಂಗೆ
ಮುಕಮಾರಿ ಎಂಬುದು ತೊಳಿದಾರೆಲವ್ರು
ಕಣಮಾರಿ ಎಂಬುದು ತೊಳಿದಾರೆಲವ್ರು
ಹಲುಬಾನದೂಟದ ಉಂಡಾರೆಲವ್ರು
ಊಟೆಂಬುದೆಲ್ಲ ಉಂಡಾದ ಮ್ಯಾಲೆ
ಕಪುರಾದ ವೀಳ್ಯಾವ ಮೆದ್ದಾರೆಲವ್ರು
ಲಗ ಕಂಡುರಯ್ಯ ಬಡುಗೇರ ಮಗನೆ
ಕೀಳೂಳಿ ಚಿಕ್ಕೂಳಿ ಮಸೆದಾರೆಲವ್ರು
ಮಾಮೇರಿ ಮಚ್ಚಾನೆ ಮಸೆದಾರೆಲವ್ರು
ನಾಲೋಕು ತೊರಿಯ ಒಡ್ಡಾರೆಲವ್ರು
ಲಗ ಕಂಡುನಯ್ಯ ಬಡುಗೇರ ಮಗನೆ
ಮೂಡಾನ ಮಲಪತ್ತಿಗೆ ನಡೆದಾರೆಲವ್ರು
ಬಡುಗೇರ ಕಂಡು ಮರ ಎದ್ದೋಡುವಾದೆ
ಓಡೀದ ಮರಕೆ ಉಳಿನಡುವಾರೆ
ನಿತ್ತಂತ ಮರನ ಬುಡುಕಡುವಾರೆ
ಬುಡುಕಡುವಾರೆ ತಲಿಕಡುವಾರೆ
ತಲಿಕಡುವಾರೆ ಕೆತ್ತೀಸುವಾರೆ
ಕೆತ್ತೀಸುವಾರೆ ಹಾಳೈಸುವಾರೆ
ಮರ ಎಂಬುದೆಲ್ಲ ಕಡುದಾದ ಮ್ಯಾಲೆ
ಲಗ ಕಂಡುರಯ್ಯ ಮಣ್ಣಿನೊಡ್ಡಲಂವ
ಅರುಮನಿ ತಳಕಟ್ಟ ಮಾಡೀದುರಾಲೆ
ಅರುಮನಿ ನೆಲಕಟ್ಟ ಮಾಡೀದುರಾಲೆ
ಮಣ್ ಕಡುವಾರೆ ಮಣ್ ಕಡುವಾರೆ
ಕಲು ಕಡುವಾರೆ ಕಲು ಕಡುವಾರೆ
ಅರುಮನಿ ನೆಲಕಟ್ಟು ಆಗ್ಯೋದ ಮ್ಯಾಲೆ
ಬಂಡೀಯ ಮ್ಯಾಲೆ ಮರ ಬಂದುವಯ್ಯ
ರೀಪು ಪಕಾಸಿ ಮಾಡೀದುರಾಲೆ
ಮುಂಡೀಗಿ ಎಂಬುದ ಮಾಡೀದುರಾಲೆ

ಮುರ್ತಕೆ ಮೂಂಡೀಗಿ ನಿಲುಸೀದುರಾಲೆ
ಮೂರ್ತಕೆ ಬಾಗಿಲ ನಿಲುಸೀದುರಾಲೆ
ಅರುಮನಿ ಎಂಬಾದು ಆಗ್ಯೋದುವಯ್ಯ
ಅರುಮನಿಗೆ ಬಂಗಾರ ಹಚ್ಚೀದುರಯ್ಯ
ಅರುಮನಿ ಕೆಲಸ ಆಗ್ಯಾದುವಯ್ಯಾ
ಕೇಳ್ಯಯ್ಯ ಕೇಳಿ ನಾರಾಯ್ಣಸ್ವಾಮಿ
ಲಗ ಕಂಡುರಯ್ಯ ನಾರಾಯ್ಣಸ್ವಾಮಿ
ಕೇಳ್ಯಯ್ಯ ಕೇಳಿ ವಡ್ಡಾರೆ ನೀವು
ಮೆಚ್ಚೀದೆ ನಾನು ನಿಮ ಕೆಲುಸಕೆ
ಹೊನ್ನನು ಕೊಟ್ಟು ಬಣ್ಣ ನೆಡುವಾರು
ಊಟಾನು ಕೊಟ್ಟು ಉಪ್‌ಚಾರ್ ಹಾಡುವಾರು
ವಡ್ಡರಿಗೆ ಸಂಬುಳೊ ಕೊಟ್ಟುದುರಾಲೆ
ನಾಲೂಕು ತೊರಿಯ ವಡ್ಡಾರೆಲವ್ರು
ನಾಲಕು ತೊರಿಯ ವಡ್ಡಾರು ಎಲ್ಲ
ತಂತಮ್ಮ ಮನಿಗೆ ತಾವ್ ಹೋಗುವಾರೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಅರುಮನಿ ಗುರುಮನಿ ಆಗ್ಯಾದುವಾಲೆ
ಅರುಮನಿಗ್ ಇರುವೆ ಆಗಾಲುಬೇಕು
ಕೇಳ್ಯಜ್ಜ ಕೇಳಿ ನಮ್ಮಜ್ಜ ನೀವೆ
ಅರುಮನಿ ಇರುವೆ ಆಗಾಲುಬೇಕು
ಕೇಳ್ಯಯ್ಯ ಕೇಳಿ ನಾರಾಯ್ಣಸ್ವಾಂಇ
ಸಂತಾನ ಸಂತೋಸು ನಮಗಿಲ್ಲಿಯಾಲಿ
ಸಂತಾನ ಸಂತೋಸ ನೀವ್ ಕೊಟ್ಟುರೀಗ
ಅರುಮನಿ ಇರುವೆ ನಾವಾಗುತ್ತೇವೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಸಂತಾನ ಸಂತೋಸ ನಾವ್ ಕೊಡುತೇವೆ
ಲಗ ಕಂಡುರಯ್ಯ ನಾರಾಯ್ಣಸ್ವಾಮಿ
ಸಂತಾನ ಸಂತೋಸ ಕೊಟ್ಟೀದುರಾಲೆ
ಲಗ ಕಂಡುರಯ್ಯ ಅಜ್ಜಾರೆಲವ್ರು
ಅರಮನಿಗ್ ಇರುವೆ ಆಗೀದುರಾಲೆ.

(ಹೇಳಿದವರು : ಬಚ್ಚಮೇರ)

## ಹೆಣ್ಣು ಮಕ್ಕಳ ಹುಟ್ಟು

ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಹನ್ನೆರಡು ಸಂಗೂರ ತರ್ಸಿಕೊಂಡುರಾಲೆ
ಹನ್ನೆರಡು ಜೀನಸು ತರ್ಸಿಕೊಂಡುರಾಲೆ
ಹನ್ನೆರಡು ಕೊಡಿ ಬಾಳೆಲೆ ತರ್ಸಿಕೊಂಡುರಾಲೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಂಇ
ಹನ್ನೆರಡು ಸಿದ್ದಕ್ಕಿ ಬೆಣತೀಗಿ ತರ್ಸಿಕೊಂಡುರಾಲೆ
ಹನ್ನೆರಡು ಕಾಯ ತರ್ಸಿಕೊಂಡುರಾಲೆ
ಹನ್ನೆರಡು ಕೊನಿ ಹೂಗ ತರ್ಸಿಕೊಂಡುರಾಲೆ
ಹನ್ನೆರಡು ಸಿದ್ಧಿ ಎಣ್ಣೆ ತರ್ಸಿಕೊಂಡುರಾಲೆ
ಹನನೆರಡು ಹಾಡ ತುಪ್ಪ ತರ್ಸಿಕೊಂಡುರಾಲೆ
ಹನ್ನೆರಡು ಕೊಡಿಬಾಳೆ ಹಾಸಿದುರಾಲೆ
ಹನ್ನೆರಡು ಕಾಯ ಒಡಿದಿದ್ದುರಾಲೆ
ಹನ್ನೆರಡು ಹೂಗ ಇಡುತ್ತಿದ್ದುರಾಲೆ
ಹಳೆ ತುಪ್ಪ ಎಂಬುದು ಹಾಕಿದುರಾಲೆ
ತಂತುರು ಮಂತುರು ಮಾಡಿದುರಾಲೆ
ಹಮುನಕ್ಕೆ ಕೈಯ ಮುಗಿದಾರೆ ಅವ್ರು
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಅಮುರುತ ಗಿಂಡಿಗಿ ನೀರು ಬಿಡುವಾರೊ
ಬೆಳ್ಳೀಯ ಬೆತ್ತ ಎಳಿದಾರೆ ಅವ್ರು
ತಂತುರು ಮಂತುರು ಮಾಡಿದುರಾಲೆ
ಲಗ ಹುಟ್ಟಿದರಯ್ಯ ಎಯ್ಡ್ ಮಕ್ಕಳು ಅವ್ರು
ತಂತುರದಲ್ಲಿ ಹುಟ್ಟಿದುರಾಲೆ ಅವ್ರು
ಹೆಣು ಮಕ್ಕಳಿಬ್ಬರು ಹುಟ್ಟಿದುರಾಲೆ
ದದುಬಾಲಿ ಹಲುಬಾಲಿ ಎಂದು ಹೆಸರಿಟ್ಟುರಾಲೆ

ಸಂತಾನ ಸಂತೋಸು ಆಗಿದುವಾಲೆ
ಸಂತಾನ ಸಂತೋಸು ಮಾಡಿದುರಾಲೆ
ಕೇಳ್ರಯ್ಯ ಕೇಳಿ ನಮ್ಮಜ್ಜ ನೀವು
ಮಾಯ್‌ದಲ್ಲಿ ಸಂತಾನ ನಾವ್ ಕೊಟ್ಟಿತಾಲೆ
ಸಂತಾನ ಸಂತೋಸು ನಾವ್ ಕೊಟ್ಟಿತಾಲೆ
ಹೆಣುಮಕ್ಕಳ ಹುಟ್ಟ ಆಗ್ಯಾದುವಾಲೆ
ಅರುಮನಿ ಇರುವ ಮಾಡಿದುವಾಲೆ
ಅರುಮನಿ ಇರುವ ಆಗ್ಯಾದುವಾಲೆ
ಏನಂಗದಿನ್ನು ಆಗಾಲುಬೇಕೆ?
ಅರುಮನಿಗೊಪ್ಪಿದ ಕೆರಿ ಕಟ್ಟುವಾರೆ
ಕೆರಿ ಎಂಬುದೆಲ್ಲ ಕಟ್ಟ್ಯಾದುಮ್ಯಾಲೆ
ಏನಂಗದಿನ್ನು ಆಗಾಲುಬೇಕೆ
ಕೆರಿಗೊಪ್ಪಿದ ಮೆಟ್ಲ ಕಡುಸಾಲುಬೇಕೆ
ಮೆಟ್ಲೆಂಬುದೆಲ್ಲ ಆಗ್ಯಾದಮ್ಯಾಲೆ
ಏನಂಗದಿನ್ನು ಆಗಾಲು ಬೇಕೆ
ಕೂಟಾದ ಕಟ್ಟೆ ಕಟ್ಟಾಲುಬೇಕೆ
ಕೂಟಾದ ಕಟ್ಟೆಯ ಕಟ್ಟೀದುರಾಲೆ
ಹೊನ್ನರಳಿ ಸಸಿನ ನೆಟ್ಟಿದುರಾಲೆ
ಹೊನ್ನರಳಿ ಸಸಿಗೆ ಮದಿ ಮಾಡುವಾರೆ
ಪತ್ರಿಯ ಸಸಿಯಾನು ತಂದು ಇರ್ಸುವಾರೆ
ಹೊನ್ನರಳಿ ಸಸಿಯ ಮದಿ ಮಾಡುವಾರೆ
ಲಗ ಕಂಡುರಯ್ಯ ಅಜ್ಜಾರೆ ಅವ್ರು
ಅಜ್ಜಾರಿಗ್ ಮಾಹರ್ಸ್ ಆಗ್ಯಾದುವಾಲೆ
ಕೇಳ್ಯ ಯ್ಯ ಕೇಳಿ ನಾರಾಯ್ಣ ಸ್ವಾಮಿ
ಲಗ ಕಂಡುರಯ್ಯ ಹೆಣು ಮಕ್ಕುಳವ್ರು
ಆಟಾವ ಪಾಟಾವ ಕಲಿತಾರೆಲವ್ರು
ವಿದ್ಯಾಬುದ್ಧಿಯ ಕಲಿತಾರೆಲವ್ರು
ಗುರೂಪದೇಶದ ಕಲಿತಾರೆಲವ
ಹೆಣ್ಣು ಹೋಗಿ ಹೆಂಗೂಸು ಆದಾರೆಲವ್ರು
ಅಜ್ಜಾರಿಗ್ ಸಂತೋಸು ಆಗ್ಯಾದುವಯ್ಯ

ಕೇಳ್ರಜ್ಜ ಕೇಳಿ ನಮ್ಮಜ್ಜ ನೀವೆ
ನಮಗಾಪ ಗಂಡಾರು ಆಗಾಲೆ ಬೇಕಜ್ಜ
ಕೇಳ್ಯಯ್ಯ ಕೇಳಿ ಹೆಣುಮಕ್ಕೆ ನೀವು
ನಿಮಗಾಪ ಗಂಡಾರ ನಾವ್ ಮಾಡುತೇವೆ
ಕೇಳ್ಯಯ್ಯ ಕೇಳಿ ಅಜ್ಜಾರೆ ನೀವು
ನಮಗಾಪ ಗಂಡಾರ ನಾವ್ ನೋಡುತೇವೆ
ನಿಮಗಾಪ ನೆಂಟಾರ ನಾವ್ ಮಾಡುತೇವೆ
ಲಗ ಕಂಡುಳಯ್ಯ ದದುಬಾಲಿ ದೇವಿ
ಲಗ ಕಂಡುರಯ್ಯ ನಗುರಾಸಿ ಸ್ವಾಮಿ
ಬಳುಗಾರ ಯೇಸವ ತೊಟ್ಟಿದುರಾಲೆ
ಬಳೆಕಂಬಿ ಮಲ್ಲಾರನ ಹೊಗಲಿಟ್ಟುರಾಲೆ
ಅಜ್ಜಾರ ಬಳಿಗಾಗಿ ಬಂದಾರೆ ನೋಡು
ಅಜ್ಜಾರ ಮನಿಗಾಗಿ ಬಂದಾರೆ ನೋಡು
ಯಾರಮ್ಮ ನೀವು ಅರುಮನಿ ಒಳಗೆ
ಯಾರಮ್ಮ ನೀವು ಗುರುಮಠದೊಳಗೆ
ಬಳಿಗಾರ ಜೋಗಿ ನಾನಂದುರಾಲೆ
ಬಳಿಯಿಡುವಲ್ಲಿ ಬನ್ನಿ ಎಂದುರಾಲೆ
ದದುಬಾಲಿ ದೇವಿ ಬಂದು ಬಳಿಯಿಟ್ಟುಳಾಲೆ
ಹಲುಬಾಲಿ ದೇವಿ ಬರುಲಿಲಿಯಾಲೆ
ದದುಬಾಲಿ ದೇವಿ ಬಳಿಯಿಟ್ಟುಳಾಲೆ
ಬಳಿ ಕರೂದಿಯ ಕೊಡುತಿದ್ದುಳಾಲೆ
ಬಳಿ ಕರೂದಿಯ ಬ್ಯಾಡೆಂದುರಾಲೆ
ಅಜ್ಜಾರ ಬಳಿಯ ಹೆಣಮಕ್ಕೆ ನೀವು
ನೀವಾದುರೀಗ ಹೆಡ್ಯೇಸರು ನೋಡಿ
ನಗುರಾಸಿ ಸ್ವಾಮಿ ನಾನೆಂದುರಾಲೆ
ಧಾರೀಯ ಬಳಿ ಇದು ಅಂದ್ಹೇಳುವಾರು
ಲಗ ಕಂಡುಳಯ್ಯ ದದುಬಾಲಿ ದೇವಿ
ಗಡುರೂಪನಾದರು ತಾಳೀದುಳಾಲೆ
ಬಾರಕೂರ ಪಟ್ಟಣಕೆ ನಡೀದುಳಾಲೆ
ಮುತ್ತೀನ ಯಾಪಾರ ಮಾಡೀದುಳಾಲೆ

ಎತ್ತೀನ ಮ್ಯಾಲೆ ಹೇರೀದುಳಾಲೆ
ನಗುರಾಸಿ ಸ್ವಾಮಿ ಪಟ್ಟಣಕೆ ನಡೆದಾಳೆಲವ್ವ
ಎತ್ತೀನ ಬೀಡಿಕೆ ಬಿಟ್ವಾಲೆಲವ್ವ
ನಗುರಾಸಿ ಸ್ವಾಮಿಯ ಬಳಿಗಾಗಿ ಬಂದಾಳೆಲವ್ವ
ಯಾರಯ್ಯ ನೀವು ಅರುಮನಿಯೊಳಗೆ
ಯಾರಯ್ಯ ನೀವು ಗುರುಮಠದೊಳಗೆ
ಮುತ್ತೀನ ಕರೂದಿ ಮಾಡಿಬನ್ನಿ ಸ್ವಾಮಿ
ಲಗ ಕಂಡುರಯ್ಯ ನಗುರಾಸಿ ಸ್ವಾಮಿ
ಮುತ್ತೀನ ಕರೂದಿ ಮಾಡೀದುರಾಲೆ
ಮುತ್ತುರತುನವ ಕೊಂಡೀದುರಾಲೆ
ಮುತ್ತೀನ ಕರೂದಿ ಕೊಡುತಿದ್ದುರಾಲೆ
ಕೇಳ್ಯಯ್ಯ ಕೇಳಿ ನಗುರಾಸಿ ಸ್ವಾಮಿ
ಮುತ್ತೀನ ಕರೂದಿ ಬ್ಯಾಡೆಂದುಳಾಲೆ
ಅಜ್ಜಾರ ಬಳಿಯ ಹೆಣುಮಗ್ಳು ನಾನು
ನಿಮ್ಮಾನು ಮೆಚ್ಚಿ ನಾ ಬಂದಿನಾಲೆ
ಧಾರೀಯ ಮುತ್ತ ಇದೆಂದುಳಾಲೆ
ಅಜ್ಜಾರ ಬಳಿಯ ಹೆಣುಮಗ್ಳು ನಾನು
ನೀವಾದುರೀಗ ಹೆಡ್ಯೇರು ನೋಡಿ
ಲಗ ಕಂಡುಳಯ್ಯ ದದುಬಾಲಿ ದೇವಿ
ತನ್ನಾರಮನಿಗಾಗಿ ತಾನ್ ಬರುವಾಳು
ಲಗ ಕಂಡುರಯ್ಯ ನಗುರಾಸಿ ಸ್ವಾಮಿ
ಕೂತು ಯೇಚನಿ ಮಾಡಿದುರಾಲೆ
ನಿತ್ತು ಯೇಚನಿ ಮಾಡಿದುರಾಲೆ
ದಿಬ್ಬಾಣ ಸಹಿತ ಸೌನ್ನಿದುರಾಲೆ
ಜಾತಿ ಜನುವೆ ಕೂಡಿದುರಾಲೆ
ಸಭೆಯೆಂಬುದೆಲ್ಲ ಸೇರಿದುರಾಲೆ
ದಿಬ್ಬಾಣ ಸಹಿತ ಹೋದಾರೆಲವ್ರು
ಅಜ್ಜಾರ ಬಳಿಗಾಗಿ ಬಂದಾರೆಲವ್ರು
ಲಗ ಕಂಡುರಯ್ಯ ಅಜ್ಜಾರೆಲವ್ರು

ಇದೇನು ಚೋಜಿಗ ಅಂದ್ಹೇಳುವಾರು
ಇದೇನು ಮಾಯಾತ ಎಂದ್ಹೇಳುವಾರು
ಲಗ ಕಂಡುಳಯ್ಯ ದದುಬಾಲಿಲವ್ವು
ದದುಬಾಳಿ ದೇವಿಗೆ ದಿಬ್ಬಾಣ ಅಂದ್ರು
ಕೇಳ್ಯಯ್ಯ ಕೇಳಿ ನಮ್ಮಜ್ಜ ನೀವು
ಬಳುಗಾರ ಯೇಸವ ತೊಟ್ಟಿದುರವ್ರು
ನೀವಿಲ್ದ ಸಮಿಯಲ್ಲಿ ಬಂದೀರುಲವ್ರು
ಬಳಿ ಮಲ್ಲಾರನ ತಂದೀರೆಲವ್ರು
ಬಳಿ ಇಡುವಲ್ಲಿ ಬನ್ನಿ ಎಂದಾರೆಲವ್ರು
ಕೇಳ್ಯಜ್ಜ ಕೇಳಿ ಅಮುರುತುದಜ್ಜ
ಕೇಳ್ಯಯ್ಯ ಕೇಳಿ ಅವತಾರದಜ್ಜ
ಬಳಿಯೆಂಬುದೆಲ್ಲಾ ಇಟ್ಟಾರೆಲವ್ರು
ಬಳಿ ಕರೂದಿಯ ಕೊಡುತಿದ್ದುನಾಲೆ
ಅಜ್ಜಾರ ಬಳಿಯ ಹೆಣುಮಗ್ಳೆ ನೀವು
ನೀವಾದುರೀಗ ಹೆಡ್ಯೇರೆ ನೋಡಿ
ಧಾರಿಯ ಬಳಿ ಅಂದ್ಹೇಳುವಾರು
ಬಳಿ ಕರೂದಿಯ ಬ್ಯಾಡಂದುರಾಲೆ
ತಮ್ಮಾರಮನಿಗಾಗಿ ತಾವ್ ಬರುವಾರು
ಲಗ ಕಂಡುಳಯ್ಯ ದದುಬಾಲಿ ದೇವಿ
ಮುತ್ತುರತ್ನಾವ ಕೊಂಡೀದುನಾಲೆ
ಗಡುರೂಪನಾದರೂ ತಾಳೀದುನಾಲೆ
ಮುತ್ತೀನ ಯಾಪಾರ ಹೊಯ್ದೀದುನಾಲೆ
ಸ್ವಾಮಿಯ ಅರುಮನಿಗೆ ಹೋಗೀದುನಾಲೆ
ಯಾರ್ ಸ್ವಾಮಿ ನೀವು ಅರುಮನಿ ಒಳ್ಗೆ
ಯಾರ್‌ಸ್ವಾಮಿ ನೀವು ಗುರುಮಠದೊಳ್ಗೆ
ಮುತ್ತೀನ ಯಾಪಾರಿ ನಾನಂದುನಾಲೆ
ಮುತ್ತೀನ ಯಾಪಾರ ಮಾಡಿ ಸ್ವಾಮಿ
ಲಗ ಕಂಡುರಯ್ಯ ನಗುರಾಸಿ ಸ್ವಾಮಿ
ಮುತ್ತೀನ ಕರೂದಿ ಮಾಡಿದುರಾಲೆ

ಮುತ್ತೀನ ಕರೂದಿ ಕೊಡುತಿದ್ದುರಾಲೆ
ಸ್ವಾಮಿ ನೀವಾದುರೀಗ ಹೆಡ್ಯೇರೆ ನೋಡಿ
ಅಜ್ಜಾರ ಬಳಿಯ ಹೆಣಮಗ್ಳು ನಾನು
ಮುತ್ತೀನ ಕರೂದಿ ಬ್ಯಾಡೆಂದುನಾಲೆ
ನಿಮ್ಮಾ ಮೆಚ್ಚಿ ನಾ ಬಂದಿನಾಲೆ
ನಿಮ್ಮಾರಮನಿಗಾಗಿ ನಾ ಬಂದಿನಾಲೆ
ಲಗ ಕಂಡುರಯ್ಯ ಅಜ್ಜಾರೆಲವ್ರು
ಸ್ವಾಮಿಗೆ ಧಾರೀಯ ಎರಿಯಾಲು ಬೇಕೆ
ದಿಬ್ಬಾಣ ಎಂಬುದು ಕೂಡಿದುರಾಲೆ
ದದುಬಾಲಿ ದೇವಿಗೆ ಮದಿ ಮಾಡುವಾರೊ
ನಗುರಾಸಿ ಸ್ವಾಮಿಗೆ ಮದಿ ಮಾಡುವಾರೊ
ಲಗ ಕಂಡುರಯ್ಯ ದದುಬಾಲಿ ದೇವಿ
ತಮ್ಮಾರಮನಿಗಾಗಿ ತಾವ್ ಬಂದುರಾಲೆ
ದದುಬಾಲಿ ದೇವಿಗೆ ಮದಿಯಾದುವಾಲೆ
ಹಲುಬಾಲಿ ದೇವಿಗೆ ಮದಿಯಿಲ್ಲಿಯಾಲೆ
ಲಗ ಕಂಡುಳಯ್ಯ ಹಲುಬಾಲಿ ದೇವಿ
ಭಾವಾನ ಮನಿಗೆ ನಾನ್ಹೋಗುಬೇಕೆ
ಬಾವಂಗೆ ಮಾಡಿದಾಳು ಕಾಯ್‌ಕಜ್ಜಾಯ್‌ಹಿಟ್ಟ
ಅಕ್ಕಂಗ್ ಮಾಡಿದಾಳು ಇಸಕಜ್ಜಾಯ್‌ಹಿಟ್ಟ
ಹಿಟ್ಟೀನ ಹೊರಿಯ ಮಾಡೀದುಳಾಲೆ
ಹಿಟ್ಟೀನ ಹೊರಿಯ ಹೊರುವಲ್ಲಿ ನೋಡಿ
ಕುಂಬಾರ ರಂಗನ ಮನಿಗ್ಹೋದುಳಾಲೆ
ಕುಂಬಾರ ರಂಗ ನಾ ಬತ್ತಿಲ್ಲಾಂದ
ಇನ್ನೇನು ಮಾಡೂದು ಅಂದ್ಹೇಳುವಾಳು
ಲಗ ಕಂಡುಳಯ್ಯ ಹಲುಬಾಲಿ ದೇವಿ
ಕೇಳಜ್ಜ ಕೇಳು ನಮ್ಮಜ್ಜ ನೀವು
ಹಿಟ್ಟೀನ ಹೊರಿಯ ಹೊರುವಲ್ಲಿ ನೋಡಿ
ಜನುವಾದುರೀಗ ಇಲ್ಲಂದುಳಾಲೆ
ಕೇಳಮ್ಮ ಕೇಳು ಹಲುಬಾಲಿ ನೋಡು

ಹಿಟ್ಟೀನ ಹೊರಿಯ ಹೊರುವಲ್ಲಿ ನೋಡು
ಎಲ್ಲಂದ್ರು ಜನುವೆ ಇಲ್ಲಂದುರಾಲೆ
ಕೇಳಮ್ಮ ಕೇಳು ಹಲುಬಾಲಿ ನೀನು
ಹಿಟ್ಟೀನ ಹೊರಿಯ ನಾನ್ ಹೊರತೇನೆ
ಲಗ ಕಂಡುನಯ್ಯ ಅವತಾರದಜ್ಜ
ಹಿಟ್ಟೀನ ಹೊರಿಯ ಸೌನ್ನಿದುರಾಲೆ
ಬಾವನ ಮನಿಗೆ ಸೌನ್ನಿದುರಾಲೆ
ಅಜ್ಜಾನ ಮ್ಯಾಲೆ ಹೊರಿ ಹೇರಿದಾಳು
ಲಗ ಕಂಡುನಯ್ಯ ಅವತಾರದಜ್ಜ
ಹಿಟ್ಟೀನ ಹೊರಿಯ ಹೊತ್ತಾನೆ ನೋಡೆ
ನಗುರಾಸಿ ಸ್ವಾಮಿ ಅರುಮನಿ ಮುಂದೆ
ಹಳ್ಳ ಹೊಳಿಯೆ ಇದ್ದಾವೆ ನೋಡಿ
ಕೇಳಮ್ಮ ಕೇಳು ಹಲುಬಾಲಿ ನೀನು
ಬ್ಯಾಸೂಗಿ ಬಿಸಿಲಿಗಿ ನಾವ್ ಬಂದಿತಾಲೆ
ಹಿಟ್ಟೀನ ಹೊರಿಯ ಇಳುಸಮ್ಮ ನೀನು
ಹನಿನೀರ ನಾನು ಕುಡ್ದು ಬರುತೇನೆ
ಹಿಟ್ಟೀನ ಹೊರಿಯ ಇಳಿಸೀದುಳಾಲೆ
ಲಗ ಕಂಡುನಯ್ಯ ಅವತಾರದಜ್ಜ
ಹೇಳಿ ಕೆಳಗೆ ಹೋದಾನೆಲಂವ
ನಗುರಾಸಿ ಪಟ್ಟಣಕೆ ಹೋದಾನೆ ನೋಡು
ದದುಬಾಲಿ ದೇವಿಗೆ ಚಾಡಿ ಹೇಳಿದಾನು
ಕೇಳಮ್ಮ ಕೇಳೆ ದದುಬಾಲಿ ನೀನು
ನಿನ ತಂಗಿ ಹಲುಬಾಲಿ ಬರುತಾಳೆ ನೋಡೆ
ಬಾವಂಗೆ ಮಾಡಿದಳು ಕಾಯಿ ಕಜ್ಜಾಯ್ ಹಿಟ್ಟ
ಅಕ್ಕಂಗೆ ಮಾಡಿದಳು ಸಿಂಗಿಗಂಗರ್ ಹಿಟ್ಟ
ಅಕ್ಕಂಗೆ ಮಾಡಿದಳು ಇಸದ್ ಕಜ್ಜಾಯ್ ಹಿಟ್ಟ
ಆ ಹಿಟ್ಟ ನೀನು ಮೆಲುಕಾರೆ ನೋಡು
ಸಾಕೀದ ನಾಯೀಗೆ ಹಾಕಿ ನೋಡುಬೇಕು
ಸಾಕೀದ ಕೋಳಿಗೆ ಹಾಕಿ ನೋಡುಬೇಕು
ಆ ಹಿಟ್ಟ ನೀನು ತಿನುಬ್ಯಾಡ ನೋಡು

ಚಾಡ್ಯೆಂಬುದೆಲ್ಲ ಹೇಳಿದನಜ್ಜ
ಹೊಳಿ ಬುಡಕೆ ಬಂದಾನೆ ನೋಡು
ಹಲುಬಾಲಿ ದೇವಿ ಬುಡಕೆ ಬಂದಾನೆ ನೋಡು
ಕೇಳಮ್ಮ ಕೇಳು ಹಲುಬಾಲಿ ನೀನು
ಹಿಟ್ಟೀನ ಹೊರಿಯ ನೆಗ್ಗಮ್ಮ ನೀನು
ಬಿಸಿಲೀಗೆ ತಣುನೀರ ಮಿಂದು ಬಂದಿನಾಲೆ
ಬಾಯಿರೀಗೆ ನೀರ ಕುಡಿದೇನೆ ನಾನು
ಅದರಿಂದ ಸೊಲ್ಪ ತಡುವಾಯಿತಮ್ಮ
ಹಿಟ್ಟೀನ ಹೊರಿಯ ನೆಗ್ಗಿದುಳಾಲೆ
ನಗುರಾಸಿ ಪಟ್ಟಣಕೆ ಬಂದಾರೆಲವ್ರು
ಕೇಳಕ್ಕ ಕೇಳು ದದುಬಾಲಿ ನೀನು
ಹಿಟ್ಟೀನ ಹೊರಿಯ ಇಳುಸಮ್ಮ ನೀನು
ಹಿಟ್ಟೀನ ಹೊರಿಯ ಇಳುಸೀದುಳಾಲೆ
ಲಗ ಕಂಡುಳಯ್ಯ ಹಲುಬಾಲಿ ತಾನು
ಇಲ್ಲಾದುರೀಗ ಬಾವಿಲ್ಲಿಯಾಲೆ
ಕೇಲಕ್ಕ ಕೇಳು ದದುಬಾಲಿ ದೇವಿ
ಬಾವೆಲ್ಲಿಗಾಗಿ ಹೋಗೀದುರಕ್ಕ
ಬಾವೆಲ್ಲಿಗಾಗಿ ಹೋಗೀದುರಕ್ಕ
ಬಾವ ಹೂಗಿನ ವನುಕೆ ಹೋಗೀದುರಾಲೆ
ಹೂಗಿನ ವನಕೆ ನಡಿದಾಳೆ ದೇವಿ
ಸ್ಯಾವಂತ್ಗಿ ವನುಕೆ ನಡಿದಾಳೆ ದೇವಿ
ಸ್ಯಾವಂತ್ಗಿ ವನುವೆಲ್ಲ ಹುಡುಕ್ಯಾಡುವಾಳೆ
ಸ್ಯಾವಂತ್ಗಿ ವನುದಲ್ಲಿಬಾವಿಲ್ಯಾಲೆ
ಮಲ್ಲಿಗಿ ವನುಕೆ ನಡಿದಾಳೆ ದೇವಿ
ಮಲ್ಲಿಗಿ ವನುವೆಲ್ಲ ಹುಡುಕ್ಯಾಡುವಾಳೆ
ಮಲ್ಲಿಗೆ ವನುದಲ್ಲಿ ಬಾವಿಲ್ಯಾಲೆ
ಸುರುಗಿಯ ವನುಕೆ ನಡಿದಾಳೆ ದೇವಿ
ಸುರುಗಿಯ ವನವೆಲ್ಲ ಹುಡುಕ್ಯಾಡುವಾಳೆ
ಸುರುಗಿಯ ವನುದಲ್ಲಿ ಬಾವಿಲ್ಯಾಲೆ
ಜಾಜಿಯ ವನಕೆ ನಡಿದಾಳೆ ದೇವಿ

ಜಾಜಿಯ ವನುವೆಲ್ಲ ಹುಡುಕ್ಯಾಡುವಾಳೆ
ಜಾಜಿಯ ವನುದಲ್ಲಿ ಬಾವಿಲ್ಯಾಲೆ
ಹೂಗಿನ ವನುವೆಲ್ಲ ಹುಡುಕ್ಯಾಡುವಾಳೆ
ಹೂಗಿನ ವನುದೊಳಗೆ ಬಾವಿಲ್ಯಾಲೆ
ಬಾಳಿಯ ವನಕೆ ನಡಿದಾಳೆ ದೇವಿ
ಬಾಳಿಯ ವನುವೆಲ್ಲ ಹುಡುಕ್ಯಾಡುವಾಳು
ಬಾಳಿಯ ವನುದಲ್ಲಿ ಬಾವಿದ್ದುರಾಲೆ
ಬಾವಂಗೆ ಕೊಟ್ಟಾಳು ಕಾಯ್‌ಕಜ್ಜಾಯ್‌ಹಿಟ್ಟ
ಅಕ್ಕಂಗೆ ತಕ್ಕಂಡಾಳು ಸಿಂಗಿಗಂಗರ್‌ಹಿಟ್ಟ
ಅಕ್ಕಂಗೆ ಕೊಟ್ಟಾಳು ಸಿಂಗಿಗಂಗರ್‌ಹಿಟ್ಟ
ಅವ್ಳ್ ಸಾಕಿದ ನಾಯೀಗೆ ಹಾಕಿ ನೋಡುವಾಳು
ಆವ್ಳ್ ಸಾಕಿದ ಕೋಳೀಗೆ ಹಾಕಿ ನೋಡುವಾಳು
ಕೋಳ್ಯೆಂಬುದೆಲ್ಲ ಸತ್ಹೋದುವಾಲೆ
ನಾಯೆಂಬುದೆಲ್ಲ ಅರ್ದ್ ಹೋದುವಾಲೆ
ಬಾವಂಗೆ ಕೊಟ್ಟಾಳು ಕಾಯ್ ಕಜ್ಜಾಯ್‌ಹಿಟ್ಟ
ಬಾವನು ನಾದಿನಿ ಒಂದಾದುರಾಲೆ
ಮೂರೆ ದಿವ್ಸಕೆ ಮುಟ್ಟು ಬಂದಾದುವಾಲೆ
ಗರ್ಭಿಣಿ ಎಂಬಾದು ಆದಾಳು ದೇವಿ
ಹತ್ತೆಂಬ ತಿಂಗಳ ಹೊತ್ತೀನ ದಿನುವೆ
ಹೊನ್ನರಮನಿಗಾಗಿ ಬಂದಾಳೆ ದೇವಿ
ಗರ್ಭಿಣಿ ಬೆನ್ನ ಬಿಟ್ಟು ನಿಲ್ಲುವಾಳೆ
ಹೊಟ್ಟೆನೋವು ಅಕ್ಕಾ ಸುಡುಮೂಡಿ ಬೇನೆ
ಹೊಟ್ಟೆನೋವು ಅಕ್ಕಾ ಸುಡುಮೂಡಿ ಬೇನೆ
ಬಾವನ ಕೋಣಿಯ ಸೌನ್ಸಿ ಕೊಡಕ್ಕ
ಅದ್ ನಿನ್ನ ಬಾವಾನು ಮಲಗುವ ಕೋಣೆ
ಅಡುಗೀಯ ಮನೆಯ ಸೌನ್ಸಿ ಕೊಡಕ್ಕ
ಅದು ನಿನ್ನ ಬಾವಾನ ಊಟದ ಕೋಣೆ
ಕೋಣಾನ ಹಟ್ಟಿಯ ಸೌನ್ಸಿ ಕೊಡಕ್ಕ
ಅದು ನಿನ್ನ ಬಾವಾನ ಹೂಡುವ ಕೋಣ

ಎತ್ತಿನ ಲಾಡಾನು ಸೌನ್ನಿ ಕೊಡಕ್ಕ
ಅದು ನಿನ್ನ ಬಾವಾನ ಹೇರೂವ ಎತ್ತು
ಹೊಟ್ಟೆ ನೋವು ಅಕ್ಕಾ ಸುಡುಮೂಡಿ ಬೇನೆ
ಕೋಳಿ ಗೂಡಾನು ಸೌನ್ನಿ ಕೊಡಕ್ಕ
ಅದು ನಿನ್ನ ಬಾವಾನ ಅಂಕಾದ ಕೋಳಿ
ಹೊಟ್ಟೆ ನೋವು ಅಕ್ಕಾ ಸುಡುಮೂಡಿ ಬೇನೆ
ಗರ್ಭಿಣಿ ಬೆನ್ನ ಬಿಟ್ಟು ನಿಲ್ಲುವಾಳೆ
ಹೊಟ್ಟೆ ನೋವು ಅಕ್ಕ ಸುಡುಮೂಡಿ ಬೇನೆ
ಹೊಟ್ಟೆಲಿದ್ದ ಸಿಸುವು ಮಾತಾಡುವಾದು
ಕೇಳು ತಾಯಿ ನೀನು ಹಲುಬಾಲಿ ನೀನು
ಹಕ್ಕಾಲ ಬದಿಗೆ ಹೋಗು ತಾಯಿ ನೀನು
ನುಕ್ಕಿಯ ಗೂಡ ಬನಿ ತಾಯಿ ನೀನು
ಬ್ಯಾನಿ ಇಲ್ದೆ ಬೆಸಲಾಗುತೇನೆ
ಲಗ ಕಂಡುಳಯ್ಯ ಹಲುಬಾಲಿ ತಾನು
ಹಕ್ಕಾಲ ಬದಿಗೆ ಹೋದಾಳೆ ಅವ್ವು
ನುಕ್ಕೀಯ ಗೂಡ ಬನಿತಿರುವಳು
ನುಕ್ಕೀಯ ಗೂಡಲ್ಲೆ ಕುಳಿತಾಳೆಲವ್ವು
ಹೊಟ್ಟೆ ನೋವಾಲೆ ಸುಡುಮೂಡಿ ಬೇನೆ
ಬ್ಯಾನಿಲ್ದೆ ಅಂವ ಬೆಸುಲಾದುನಾಲೆ
ಹಲುಬಾಲೆ ಕರುತ ಹುಟ್ಟಿದುನಾಲೆ
ಹುಟ್ಟಿದ ಕರುತಂಗೆ ರೆಕ್ಕೆ ಮೂಡುವಾದೆ
ಲಗ ಕಂಡುನಯ್ಯ ಹಲುಬಾಲೆ ಕರುತ
ಅಜ್ಜಾರಲರುಮನಿ ಬಂದಾನೆಲಂವ
ಗೋಳೀಯ ಮರನಲ್ಲಿ ಹೋಯ್ ಕೂತುನಾಲೆ
ಲಗ ಕಂಡುರಯ್ಯ ಅಜ್ಜಾರೆಲವ್ರು
ಲಗ ಕಂಡುನಯ್ಯ ಅವತಾರದಜ್ಜ
ಲಗ ಕಂಡುನಯ್ಯ ಅಮುರುತುನಜ್ಜ
ಹಲುಬಾಲೆ ಕರುತನ ಕಂಡೀದುರಾಲೆ
ಕೋಲೊರ್ಧಿಯಾಗಿ ಮಾಡಿ ಬಿಡುವಾರು

ಹಲುಬಾಲಿ ಕರುತಂಗೆ ರೆಕ್ಕೆಗೆ ಹಿಡಿದೊ
ರೆಕ್ಕ್ಯೆಂಬುದೆಲ್ಲ ಮುರಿದೋದುವಾಲೆ
ರೆಕ್ಕ್ಯೆಂಬುದೆಲ್ಲ ಉದುರೀದುವಾಲೆ
ಹೊನ್ನಳ್ಳಿಗಾಗಿ ಬಿದ್ದಾನೆಲಂವ
ಲಗ ಕಂಡುರಯ್ಯ ಅಜ್ಜಾರೆಲವ್ರು
ಹೊನ್ನೆಳೆ ನುಗುಲನೆ ಮಾಡಿಬಿಡುವಾರು
ಹೊನ್ನೆಳೆ ನುಗುಲಲ್ಲಿ ಹೋದಾರೆಲವ್ರು
ಲಗ ಕಂಡುನಯ್ಯ ಹಲುಬಾಲಿ ಕರುತ
ಹೊನ್ನೆಳೆ ನೂಲಲ್ಲಿ ಹೋದಾರೆಲವ್ರು
ಹೊನ್ನೆಳೆ ನೂಲನ್ನು ಕಡ್ದ್ ಬಿಡುವಾನು
ಹೊನ್ನಳ್ಳಿಗಾಗಿ ಬಿದ್ದಾರೆಲವ್ರು
ಲಗ ಕಂಡುರಯ್ಯ ಅಜ್ಜಾರೆಲವ್ರು
ಕಂತುತನಜ್ಜ ಮುಳುಗುತನಜ್ಜ
ಮೊಮ್ಮಾಳಿ ಚಾಡಿಯ ಹೇಳುತನಜ್ಜ
ಲಗ ಕಂಡುನಯ್ಯ ಹಲುಬಾಲೆ ಕರುತ
ಅಜ್ಜಂದುರಾಲೆ ತಂದಾನೆ ನೋಡಿ
ಲಗ ಕಂಡುಳಯ್ಯ ಹಲುಬಾಲಿ ತಾನು
ಹಲುಬಾಲಿ ಕರುತನು ಇದ್ದಾನು ನೋಡೆ
ನಗುರಾಸಿ ಪಟ್ಟಣಕೆ ನಡೆದಾನೆಲಂವ
ಲಗ ಕಂಡುಳಯ್ಯ ಹಲುಬಾಲಿ ತಾನು
ಲಗ ಕಂಡುನಯ್ಯ ಹಲುಬಾಲಿ ಕರುತ
ಹೊನ್ನಾರಮನಿಗಾಗಿ ಬಂದಾರೆಲವ್ರು
ಲಗ ಕಂಡುಳಯ್ಯ ದದುಬಾಲಿದೇವಿ
ಮಗನೆಂಬುದೆಲ್ಲ ಪಡೆದೀಯ ತಂಗಿ
ಕೇಳಕ್ಕ ಕೇಳು ದದುಬಾಲಿ ನೀನು
ಬಾವಾನ ಕೋಣಿ ಸೌನ್ಸಿ ಕೊಡಂದ್ರೆ
ಅದು ನಿನ್ನ ಬಾವಾನು ಮಲಗುವ ಕೋಣಿ ಅಂದಿ
ತಂಗ್ಯೆಂಬ ಮಮತು ನಿನಗಿಲ್ಲಿಯಾಲೆ
ಕೇಳು ತಂಗಿ ಕೇಳು ಹಲುಬಾಲಿ ನೀನು

ಬಾವಂಗೆ ಮಾಡಿದೆ ಕಾಯ್‌ಕಜ್ಜಾಯ್ ಹಿಟ್ಟ
ನಂಗೆ ಮಾಡಿದೆ ಇಸ ಕಜ್ಜಾಯ್ ಹಿಟ್ಟ
ನನ್ನಾದುರೀಗ ತೆಗಿಕಂದೆ ನೋಡು
ಅದುರಿಂದೆ ನಾನು ಹೇಳೀದುನಾಲೆ
ಬಾವಾನ ಕೋಣಿ ಸೌನ್ಸಿ ಕೊಡಲ್ಲೆ
ನೀ ಮಾಡಿದಕ್ಕೆ ನಾ ಹೇಳಿದೇನೆ
ಲಗ ಕಂಡುರಯ್ಯ ಅಜ್ಜಾರೆಲವ್ರು
ಕೇಳಯ್ಯ ಕೇಳೊ ಅಮುರುತನಜ್ಜ
ಕೇಳಯ್ಯ ಕೇಳೊ ಅವತಾರದಜ್ಜ
ಅಜ್ಜಾರು ಇಬ್ಬಾರು ಕೇಳೀದುರಾಲೆ
ಮೊಮ್ಮಕ್ಳಿಗ್ ಬುದ್ದಿ ಹೇಳಿದುರಯ್ಯ
ಮೊಮ್ಮಕ್ಳಿಗ್ ಇದ್ದಿ ಹೇಳಿದುರಯ್ಯ
ಇನು ಮುಂದೆ ನೀವು ಇರಬೇಕು ನೋಡಿ
ಅರುಮನಿಗೆ ಇರುವೆ ನೀವಾಗಬೇಕು
ಕೇಳಮ್ಮ ಕೇಳು ಹಲುಬಾಲಿ ನೀವು
ಕೇಳಮ್ಮ ಕೇಳು ದದುಬಾಲಿ ನೀವು
ಅಕ್ಕಾ ತಂಗ್ಯಾರು ಒಂದಾಗಬೇಕು
ನಿನಗಾದರೀಗ ಮಕ್ಕಾಳಿಲ್ಲಿಯಾಲೆ
ತಂಗೀಗೆ ಈಗ ಮಕ್ಕಾಳಿದ್ದುವಾಲೆ
ಕೇಳಮ್ಮ ಕೇಳೋ ದದುಬಾಲಿ ನೀವು
ಅರುಮನಿ ಇರುವೆ ಆಗಾಲು ಬೇಕೆ
ತಪಸ್ಸಿನಿಂದ ನೀವ್ ಹುಟ್ಟಿರ್‍ಯಾಲೆ
ಹಮುನ್ದಲ್ಲಿ ನಾವು ಹುಟ್ಟಿದುವಾಲೆ
ಕೇಳಮ್ಮ ಕೇಳೊ ಹಲುಬಾಲಿ ನೀವು
ಕೇಳಮ್ಮ ಕೇಳೊ ದದುಬಾಲಿ ನೀವು
ಸೌಖ್ಯದಲಿ ನೀವು ಇರಬೇಕು ನೋಡಿ

(ಹೇಳಿದವರು : ಶ್ರೀ ಬಚ್ಚಮೇರ)

## ಯುಗ ಮಗುಚುವ ಹಾಡು

ಉಗುವೆಂಬ ಉಗುವಾನು ತೋರ್‍ವಾಳು ಗಂಗೆ
ಎಂತೆಂಬ ಉಗುವಾನು ತೋರ್‍ವಾಳು ಗಂಗೆ
ಕಲ್ಲಾಮಿ ಎದ್ದು ಬಳುವಾಗಳೀಗ
ಅದು ಒಂದ್ ಉಗುವ ತೋರ್‍ವಾಳು ಗಂಗೆ
ಕಲುಕೋಳಿ ಎದ್ದು ಕೂಗ್ವಾಗಳೀಗ
ಅದು ಒಂದ್ ಉಗುವ ತೋರ್‍ವಾಳು ಗಂಗೆ
ಕಲುಬಸವ ಎದ್ದು ಗುಟ್ರು ಹೊಡುವಾಗಳೀಗ
ಅದು ಒಂದ್ ಉಗುವ ತೋರ್‍ವಾಳು ಗಂಗೆ
ಬೆಣಗಲ್ಲು ಎದ್ದು ಬಳುವಾಗಳೀಗ
ಅದು ಒಂದ್ ಉಗುವ ತೋರ್‍ವಾಳು ಗಂಗೆ
ಬೆಣ್ಣೆಯ ಸೆಟ್ಟೆ ಕಂತುವಾಗಳೀಗ
ಅದು ಒಂದ್ ಉಗುವ ತೋರ್‍ವಾಳು ಗಂಗೆ
ಏನೆಂದ್ ಉಗುವ ತೋರ್‍ವಾಳು ಗಂಗೆ
ಉಗುವೆಂಬ ಉಗುವ ತೋರ್‍ಯಾದ ಮ್ಯಾಲೆ
ಏನೆಂಬ ಉಗುವ ತೋರ್‍ವಾಳು ಗಂಗೆ
ರಾವೀನ ಬಿಸಿಲು ಕಾವಾಗಳೀಗ
ಅದು ಒಂದ್ ಉಗುವ ತೋರ್‍ವಾಳು ಗಂಗೆ
ಇಸದ ಗಾಳಿ ಬೀಸ್ವಾಗುಳೀಗ
ಅದು ಒಂದ್ ಉಗುವ ತೋರ್‍ವಾಳು ಗಂಗೆ
ಪಚ್ಚೆಯ ಮಳಿಯ ಸುರುವಾಗಳೀಗ
ಅದು ಒಂದ್ ಉಗುವ ತೋರ್‍ವಾಳು ಗಂಗೆ
ನೀಲಾದ ಮಳಿಯ ಹೊಡುವಾಗಳೀಗ
ಅದು ಒಂದ್ ಉಗುವ ತೋರ್‍ವಾಳು ಗಂಗೆ

ಚೆನ್ನಾದ ಮಳಿಯ ಸುರುವಾಗಳೀಗ
ಅದು ಒಂದ್ ಉಗುವ ತೋರ್ವ್ವಾಳು ಗಂಗೆ
ತಾಮ್ರದ ಮಳಿಯ ಹೊಡುವಾಗಳೀಗ
ಅದು ಒಂದ್ ಉಗುವ ತೋರ್ವ್ವಾಳು ಗಂಗೆ
ಮುತ್ತಿನ ಮಳಿಯ ಸೊರುವಾಗಳೀಗ
ಅದು ಒಂದ್ ಉಗುವ ತೋರ್ವ್ವಾಳು ಗಂಗೆ
ಕೆಂಡಾದ ಮಳಿಯ ಹೊಯ್ಯುವಾಗಳೀಗ
ಲಗ ಕಂಡುರಯ್ಯ ನರಮನಸರೆಲ್ಲ
ಮಕ್ಕಳಿದ್ದರೆಲ್ಲ ಮಕ್ಕಳಿಡಿವಾರು
ಕೆಂಡಾದ ಮಳೆಯೆ ಹೊಯ್ಯುವಾಗಳೀಗ
ಕೈಹಿಡಿದ ಗಂಡ್ರನ್ನ ಅಡ್ಡ್ ಹಿಡಿವಾರೆ
ಉಗುವೆಂಬ ಉಗುವನು ತೋರ್ವ್ವಾಳು ಗಂಗೆ
ಎಂತೆಂಬ ಉಗುವನು ತೋರ್ವ್ವಾಳು ಗಂಗೆ
ನರಮನಸ್ರ್ ಕುಲುವೆ ಲಯವಾಗುವಾದೆ
ನಾಲೂಕು ಅಳಿವಿ ಒಂದಾಗುವಾದೆ
ನಾಲೂಕು ಸಮುದುರ ಒಂದಾಗುವಾದೆ
ಏಳ್ ಹಗಲಾದೊ ಏಳ್ ಇರುಳಾದೊ
ಏಳ್ ಇರುಳಾದೊ ಏಳ್ ಹಗಲಾದೊ
ಗುಡ್ಡ್ಯೆಂಬುದೆಲ್ಲ ಬಯ್ಲಾದುವಾಲೆ
ಬಯ್ಲೆಂಬುದೆಲ್ಲ ಗುಡ್ಡ್ಯಾದುವಾಲೆ
ನರಮನಸ್ರ್ ಕುಲುವೆ ಇಲ್ಲೆಂದುರಾಲೆ
ಹುಟ್ಟ್‌ಚಿತ್ತೇರಿಗೆ ನಿರುನೇದ್ಯ ಇಲ್ಲೆ
ದೈವ್‌ದಿಕ್ಕಳೆಂಬುದು ತೇಲ್ಯಾಡುವಾರೆ
ಲಗ ಕಂಡುರಯ್ಯ ನಾರಾಯ್ಣಸ್ವಾಮಿ
ಕೀಳೇಳು ರಾಜವ ನಿತ್ತು ನೋಡುವಾರೆ
ನಾಲೂಕು ಅಳಿವಿಯು ಒಂದಾದುವಾಲೆ
ನರಮನಸ್ರ ಕುಲುವೆಲ್ಲ ಲಯವಾದುವಾಲೆ
ದೈವ್‌ದಿಕ್ಕುಳೆಲ್ಲ ತೇಲ್ಯಾಡುವಾಲೆ

ಹರಹರ ಅಂದು ಹೇಳಿದುರಾಲೆ
ಶಿವ ಶಿವ ಅಂದು ಹೇಳಿದುರಾಲೆ
ಹೊನ್ನಳ್ಳಿಯಲ್ಲಿ ಹೊನುಮದ್ದಳಿ ಬಳಿದೊ
ಲಗ ಕಂಡುರಯ್ಯ ನಾರಾಯ್ಣಸ್ವಾಮಿ
ಮಾಯ್‌ದಲ್ಲಿ ಅಂಬಿಗನ ಮಾಡಿ ಬಿಡುವಾರೊ
ಹೊನು ದೋಣಿ ಹೊನು ತೊಲಿ ಕೊಡುಸೀದುರಾಲೆ
ಮಾಯ್‌ದಂಬಿಗಾಗೆ ಕೊಟ್ಟೀದುರಾಲೆ
ಇಲುಬಾರೊ ಇಲ್ಲೊ ಹೊಳಿಯಂಬಿಗಾರ
ಹೊನು ದೋಣಿ ಹೊನು ತೊಲಿ ಹಿಡಿಯಯ್ಯ ನೀನು
ಹೊನ್ನಳ್ಳಿಯಲಿ ಹೊನು ಮದ್ದಳಿ ಬಳಿದೊ
ಹೊನು ದೋಣಿ ಹೊನು ತೊಲಿ ತೆಗಿದಾನೆಲಂವ
ಹೊನು ಮದ್ದಳೆಂಬುದು ಹಿಡುತರಬೇಕೆ
ಅಕ್ಕಾಲಿ ಎಂದ ಮಾಯ್‌ದಂಬಿಗಾರ
ಹೊನು ದೋಣಿ ಹೊನು ತೊಲಿ ತೆಗೆದಾನೆಲಂವ
ಹೊನು ದೋಣಿ ಎಂಬುದ ಹತ್ತಿದನಂವ
ಹೊನ್ನಳ್ಳಿಗಾಗಿ ದೋಣಿ ತೆಗಿದಾನು
ಹೊನುಕೂರುಮದ್ದಳಿ ಹಿಡಿದಾನೆಲಂವ
ಸ್ವಾಮಿಯ ಬಳಿಗಾಗಿ ಬಂದಾನೆಲಂವ
ಹೊನುಕೂರುಮದ್ದಳಿ ಹಿಡುತಂದನಾಲೆ
ಸ್ವಾಮಿಯ ಬಳಿಗಾಗಿ ತಂದಾನೆಲಂವ
ಹೊನುಕೂರುಮದ್ದಳಿ ಒಡ್ಡು ನೋಡುಬೇಕೆ
ಹೊನುಕೂರುಮದ್ದಳಿ ಒಡುಸೀದುರಾಲೆ
ಹೊನುಕೂರುಮದ್ದಳಿ ಒಡ್ಡು ನೋಡುವಾಗ
ಕೊರಗನು ಕೊರತಿಯು ಇದ್ದಾರೆ ನೋಡೆ
ಸೊಪ್ಪುಡ್ಸಿ ಅವ್ರ ಎದ್ರ್ ತಂದುರಾಲೆ
ನೀವಾದುರೀಗ ಏನಾಗಬೇಕೆ
ನಾವಾದುರೀಗ ಅಣ್ಣಾನು ತಂಗಿ
ಪಾಪಾದು ಮಾತಾನು ನೀವಾಡುಬೇಡಿ

ಹೊಟ್ಟೆ ತೆಗ್ದು ಬೆನ್ನ ಮಾಡಿದುರಾಲೆ
ಬೆನ್ನ ತೆಗ್ದು ಹೊಟ್ಟೆ ಮಾಡಿದುರಾಲೆ
ಸೊಪ್ಪುಡ್ಸಿ ಅವ್ರ್ನ ಎದ್ರ್ ತಂದುರಾಲೆ
ನೀವಾದುರೀಗ ಏನಾಗಬೇಕೆ
ನಾವಾದುರೀಗ ಕೊರಗನು ಕೊರತಿ
ಕೇಳ್ಯಯ್ಯ ಕೇಳಿ ಕೊರಗನು ಕೊರತಿ
ನರಮನಸ್ರ ಕುಲುವನು ಹಡ್ದ್ ಹಾಕಬೇಕೆ
ನೂರೊಂದು ಕುಲುವನು ಹಡ್ದ್ ಹಾಕಬೇಕೆ
ನರಮನಸ್ರ ಕುಲುಮೆ ಆಗಲುಬೇಕೆ
ನಿಮ್ಮಿಂದ ಕುಲುಮೆ ಆಗಾಲುಬೇಕೆ
ಅಕ್ಕಾಲಿ ಎಂದ್ರು ಕೊರಗನು ಕೊರತಿ
ನೂರೊಂದು ಕುಲುವನು ಹಡ್ದ್ ಹಾಕುವಾರೆ
ಬೀರಾಮ್ರ ಕುಲುವನು ಹಡ್ದ್ ಹಾಕುವಾರೆ
ಕೊಂಕಾಣಿ ಕುಲುವನು ಹಡ್ದ್ ಹಾಕುವಾರೆ
ಸೆಟ್ಟಾರ ಕುಲುವನು ಹಡ್ದ್ ಹಾಕುವಾರೆ
ನೂರೊಂದು ಕುಲುವನು ಹಡ್ದ್ ಹಾಕುವಾರೆ
ಹುಟ್ಟೀದ ನರರಿಗೆ ಅನ್ನಾರ ಇಲ್ಲ
ಹುಟ್ಟ್ ಚಿತ್ತೇರಿಗೆ ನಿರುನೇದ್ಯ ಇಲ್ಲ
ಹುಟ್ಟೀದ ನರರಿಗೆ ಅನ್ನಾರಬೇಕು
ಹುಟ್ಟ್ ಚಿತ್ತೇರಿಗೆ ನಿರುನೇದ್ಯಬೇಕು
ಯಾವೂರೆಗಿದ್ದ ನೆಲಸಂಕ್ರಗಂಡ
ದೇವೇಂದ್ರ ಬಳಿಯಲ್ಲೆ ಇದ್ದಾನೆಲಂವ
ಲಗ ಕಂಡುರಯ್ಯ ನಾರಾಯ್ಣಸ್ವಾಮಿ
ಹರಿಕಾರ ನಿಂಗಾನ ಕರಿಸೀದುರಯ್ಯ
ಕೇಳ್ಯಯ್ಯ ಕೇಳು ಹರಿಕಾರ ನಿಂಗ
ಮೇಲೇಳಿ ಲೋಕಕೆ ನೀನ್ಹೋಗುಬೇಕೆ
ದೇವೇಂದ್ರ ಬಳಿಗಾಗಿ ನೀನ್ಹೋಗುಬೇಕೆ
ಹುಟ್ಟೀದ ನರರಿಗೆ ಅನ್ನಾರ ಇಲ್ಲ

ಹುಟ್ಟ್ ಚಿತ್ತೇರಿಗೆ ನಿರುನೇದ್ಯ ಇಲ್ಲ
ಅಕ್ಕಾಲಿ ಎಂದ ಹರಿಕಾರ ನಿಂಗ
ಮೇಲೇಳಿ ಲೋಕಕೆ ಹೋದಾನೆಲಂವ
ಕೇಳ್ಯಯ್ಯಕೇಳಿ ಸ್ವಾಮಿಯೆ ನೀವೆ
ಕೇಳ್ಯಯ್ಯ ಕೇಳಿ ದೇವೇಂದ್ರಸ್ವಾಮಿ
ಕೀಳೇಳಿ ಲೋಕಕೆ ನಾನ್ಹೋದುನಾಲೆ
ನರಮನಸ್ರ ಕುಲುವೆ ಆದುದುವಯ್ಯ
ಹುಟ್ಟೇದ ನರರಿಗೆ ಅನ್ಹಾರ ಇಲ್ಲ
ಹುಟ್ಟ್‌ಚಿತ್ತೇರಿಗೆ ನಿರುನೇದ್ಯ ಇಲ್ಲ
ಸಂಕ್ರಗಂಡನ ನೀವ್ ಕೊಡುಬೇಕೆ
ಲಗ ಕಂಡುರಯ್ಯ ದೇವೇಂದ್ರಸ್ವಾಮಿ
ಕೇಳ್ಯಯ್ಯ ಕೇಳಿ ನೆಲುಸಂಕ್ರಗಂಡ
ಕೀಳೇಳಿ ರಾಜಾಕೆ ನೀವ್ ಹೋಗುಬೇಕೆ
ಹುಟ್ಟೇದ ನರರಿಗೆ ಅನ್ಹಾರ ಇಲ್ಲ
ಹುಟ್ಟ್‌ಚಿತ್ತೇರಿಗೆ ನಿರುನೇದ್ಯ ಇಲ್ಲ
ಕೀಳೇಳಿ ಲೋಕಕೆ ನೀವ್ ಹೋಗುಬೇಕೆ
ಲಗ ಕಂಡುರಯ್ಯ ನೆಲುಸಂಕ್ರಗಂಡ
ಹಿಂದೊಂದು ಜನುಮ ನಾ ಮಾಡಿನಾಲೆ
ನಾ ಬತ್ತಿಲ್ಲಾಂದ ನೆಲುಸಂಕ್ರಗಂಡ
ಕುಡಿಕೆಲ್ಲಿ ಮಡಿಕೆಲ್ಲಿ ಅಡುವಾರು ನನ್ನ
ಹಪ್ಪಡು ಮಡಿಕೆಲ್ಲಿ ಅಡುವಾರು ನನ್ನ
ಕುಡಿಕೆಲ್ಲಿ ಮಡಿಕೆಲ್ಲಿ ಬೇಸಿ ತಿನ್ನುವಾರೆ
ನಾ ಬತ್ತಿಲ್ಲಾಂದ ನೆಲುಸಂಕ್ರಗಂಡ
ಹಿಡಿಕಟ್ಟಿನಲ್ಲೆ ಒಡುವಾರು ನನ್ನ
ಚಕ್ಕಾಣ್ದ ಕಾಲಲ್ಲೆ ತೊಳುವಾರು ನನ್ನ
ಗೇರುವ ಗೆರ್ಸಿಲೆ ಗೇರ್‍ಯಾಡುವಾರೆ ನನ್ನ
ಹಪ್ಪಡು ಗಡ್ಗಿಲೆ ಆಡುವಾರು ನನ್ನ
ನಾ ಬತ್ತಿಲ್ಲೆಂದ ನೆಲುಸಂಕ್ರಗಂಡ

ನಾ ಬತ್ತಿಲೆಂದ ನೆಲುಸಂಕ್ರಗಂಡ
ಏಳೇಳಿದಾರು ಕೇಳಾಲು ಇಲ
ಎಂತೇಳಿದಾರು ಕೇಳಾಲು ಇಲ್ಲೆ
ಹೊನು ಬಸುವಯ್ಯ ಬಂದಾರೆ ನೋಡಿ
ಅವ್ನ ಬೆನ್ಹಿಂದೆ ನಾ ಬರುತೇನೆ ಅಂದ
ಕೇಳ್ಯಯ್ಯ ಕೇಳಿ ದೇವೇಂದ್ರಸ್ವಾಮಿ
ಕೇಳ್ಯ ಯ್ಯ ಕೇಳಿ ದೇವೇಂದ್ರಸ್ವಾಮಿ
ಹೊನುಬಸುವಯ್ಯನ ಕಳುಸಾಲುಬೇಕೆ
ಕೇಳ್ಯಯ್ಯ ಕೇಳಿ ಹೊನುಬಸುವಯ್ಯ
ಕೀಳೇಳಿ ರಾಜಾಕೆ ನೀನ್ಹೋಗುಬೇಕೆ
ಹುಟ್ಟೀದ ನರರಿಗೆ ಅನ್ಹಾರ ಇಲ್ಲ
ಹುಟ್ಟ್‌ಚಿತ್ತೇರಿಗೆ ನಿರುನೇದ್ಯ ಇಲ್ಲ
ಲಗ ಕಂಡುರಯ್ಯ ಹೊನುಬಸುವಯ್ಯ
ಹಿಂದೊಂದು ಜನುಮ ನಾ ಮಾಡಿನಾಲೆ
ನಾ ಬತ್ತಿಲ್ಲಾಂದ ಹೊನುಬಸುವಯ್ಯ
ಹೂಡುವಾರು ನನ್ನ ಹೊಡುವಾರು ನನ್ನ
ಮೇಸಿ ನನ್ನ ಮೈಯ ತಿಕ್ಕುವರಿಲ್ಲೆ
ನಾ ಬತ್ತಿಲ್ಲಾಂದ ಹೊನುಬಸುವಯ್ಯ
ಏನೇಳಿದಾರು ಕೇಳಾಲು ಇಲ್ಲೆ
ಎಂತೇಳಿದಾರು ಕೇಳಾಲು ಇಲ್ಲೆ
ಕೇಳ್ಯಯ್ಯ ಕೇಳು ಹೊನುಬಸುವಯ್ಯ
ಕೇಳ್ಯಯ್ಯ ಕೇಳು ಹೊನುಬಸುವಯ್ಯ
ಹುಟ್ಟೀದ ನರರಿಗೆ ಅನ್ಹಾರ ಇಲ್ಲ
ಹುಟ್ಟ್‌ಚಿತ್ತೇರಿಗೆ ನಿರುನೇದ್ಯ ಇಲ್ಲ
ಏನೇಳಿದಾರು ಕೇಳಲು ಇಲ್ಲೆ
ಎಂತೇಳಿದಾರು ಕೇಳಲು ಇಲ್ಲೆ
ಹುಲುನೆಲ್ಲು ನಮ್ಮ ಕಾಂಬವರಿಲ್ಲೆ
ಮೇಸಿ ಮೈಯ ತಿಕ್ಕುವರಿಲ್ಲೆ

ಹೊಡ್ದಲ್ಲಿ ನನ್ನ ಹೊಗ್ಲ್ ಉದ್ದುವರಿಲ್ಲೆ
ನಾ ಬತ್ತಿಲ್ಲಾಂದ ಹೊನು ಬಸುವಯ್ಯ
ಮಾದಾರ ಚೆನ್ನ ಬಂದಾರೆ ನೋಡಿ
ಅವ್ನ ಬೆನ್ನಿಗ್ ನಾನ್ ಬತ್ತೆಂದುನಾಲೆ
ಲಗ ಕಂಡುರಯ್ಯ ದೇವೇಂದ್ರಸ್ವಾಮಿ
ಮಾದಾರ ಚೆನ್ನನ ಕರುಸೀದುರಾಲೆ
ಲಗ ಕಂಡುನಯ್ಯ ಮಾದಾರ ಚೆನ್ನ
ಕೇಳ್ಯಯ್ಯ ಕೇಳು ಹೊನು ಬಸುವಯ್ಯ
ಕೀಳೇಳಿ ರಾಜಾಕೆ ನೀ ಬರುಬೇಕೆ
ಮೇಸಿ ಮೈಯ ನಾ ತಿಕ್ಕುತೇನೆ
ಹುಲು ನೆಲ್ಲು ನಿನ್ನದು ನಾ ಕಾನುತೇನೆ
ಸತ್ತಾರು ಮೋಗುಸಿ ನಾ ಮಾಡುತೇನೆ
ಲಗ ಕಂಡುನಯ್ಯ ಹರಿಕಾರ ನಿಂಗ
ಲಗ ಕಂಡುನಯ್ಯ ಹೊನು ಬಸುವಯ್ಯ
ಕೀಳೇಳಿ ರಾಜಾಕೆ ನಾ ಬರಕಾರೆ
ಹುಲು ಬೀಜ ಎಂಬಾದು ಮುಂದು ಬಿತ್ತುಬೇಕೆ
ನೆಲು ಬೀಜ ಎಂಬಾದು ಹಿಂದು ಬಿತ್ತುಬೇಕೆ
ಅಕ್ಕಾಲಿ ಎಂದ ಹರಿಕಾರ ನಿಂಗ
ಕೀಳೇಳಿ ರಾಜಾಕೆ ಬಂದಾನೆ ಬಸವ
ನೆಲುಸಂಕ್ರಗಂಡ ಬಂದಾನೆ ನೋಡಿ
ಭೂಮ್ಯಂಬುದೆಲ್ಲ ಆಗಾಲೆ ಇಲ್ಲ
ಭೂಮಿಯ ಜೌಳನು ಸೆಳಿದಾರು ನೋಡಿ
ಗೆದ್ದ್ಯೆಂಬುದೆಲ್ಲ ಮಾಡೀದುರಾಲೆ
ಬಯ್ಲೆಂಬುದೆಲ್ಲ ಮಾಡೀದುರಾಲೆ
ಹಳ್ಳ ಹೊಳಿಯೆ ಆಗ್ಯಾದುವಯ್ಯ
ಲಗ ಕಂಡುನಯ್ಯ ಮಾದಾರ ಚೆನ್ನ
ಬಯ್ಲೆಂಬುದೆಲ್ಲ ಹೂಡಿದುನಾಲೆ
ಹೊನ್ನಬಸುವಯ್ನು ಮೈಯ ತಿಕ್ಕಿದುನಾಲೆ

ನೆಲುಸಂಕ್ರಗಂಡನ ಬಿತ್ತೀದುನಾಲೆ
ಮುಂದು ಬಿತ್ತಿದಾನು ಹುಲು ಬೀಜವಾನೆ
ಹಿಂದು ಬಿತ್ತಿದಾನು ನೆಲುಸಂಕ್ರಗಂಡ
ಹುಟ್ಟೀದ ನರರಿಗೆ ಅನ್ನಾರ ಆದೊ
ಹುಟ್ಟ್‌ಚಿತ್ತೇರಿಗೆ ನಿರುನೇದ್ಯ ಆದೊ
ದೈವ್‌ದಿಕ್ಕಿಗ್ ಸಂತೋಸ ಆದಾವೆ ನೋಡಿ
ನರಮನಸ್ರ್ ಸೌಖ್ಯ ಆದಾರೆ ನೋಡಿ

(ಹೇಳಿದವರು : ಬಚ್ಚಮೇರ)

# ಪಾಪದೋಷರ ಹಾಡು

ಕಂತೀದ ಸೂರ್ಯ ಮೂಡಾಲು ಇಲ್ಲೆ
ಏಳ್ ಹಗಲಾದೊ ಏಳ್ ಇರುಳಾದೊ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಲಗ ಕಂಡುರಯ್ಯ ನಗುರಾಸಿ ಸ್ವಾಮಿ
ಲಗ ಕಂಡುರಯ್ಯ ಕರಿಸೂರ ಸ್ವಾಮಿ
ತಾವ್ ತಾವೆ ಕೂತು ಮಾತಾಡುವಾರೆ
ಏಳ್ ಹಗಲಾದೊ ಏಳ್ ಇರುಳಾದೊ
ಕಂತೀದ ಸೂರ್ಯ ಮೂಡಾಲು ಇಲ್ಲೆ
ಸ್ವಾಮಿ ಕೂತು ಮಾತಾಡುವಾರೆ
ಇದುವೇನು ಚೋಜಿಗ ಎಂದ್ಹೇಳುವಾರೆ
ಇದುವೇನು ಮಾಯಾತ ಎಂದ್ಹೇಳುವಾರೆ
ಹರಿಕಾರ ನಿಂಗನ ಕರುಸೀದುರಾಲೆ
ಇಲು ಬಾರೊ ಇಲ್ಲೊ ಹರಿಕಾರ ನಿಂಗ
ನಾಲೂಕು ತೊರಿಗೆ ನೀನ್ಹೋಗುಬೇಕೆ
ಯಾವ್ ರಾಜದಾಲೆ ಏನೇನು ಮಾಯಾತ
ಏನೇನು ಮಾಯಾತ ನೋಡಿ ಬರುಬೇಕೆ
ಅಕ್ಕಾಲಿ ಎಂದ ಹರಿಕಾರ ನಿಂಗ
ಬೆಳ್ಳೀಯ ಬೆತ್ತಾವ ಹಿಡಿದಾನೆಲಂವ
ಬಡುಗಾನ ತೊರಿಗಾಗಿ ನಡೆದಾನೆಲಂವ
ಬಡುಗಾನ ತೊರಿಯ ನರಮನಸರೆಲ್ಲ
ಹೊನ ತಂಬ್ಗಿ ತುಂಬಲು ಮಾಡಿಕಳ್ಸಿರಾಲೆ
ಮೂಡಾನ ತೊರಿಗಾಗಿ ನಡೆದಾನೆಲಂವ
ಮೂಡಾನ ತೊರಿಯ ನರಮನಸರೆಲ್ಲ
ಹೊನ ತಂಬ್ಗಿ ತುಂಬಲು ಮಾಡಿಕಳ್ಸಿರಾಲೆ
ಪಡುವಾನ ತೊರಿಗಾಗಿ ನಡೆದಾನೆಲಂವ

ಪಡುವಾನ ತೊರಿಯ ನರಮನಸರೆಲ್ಲ
ಹೊನ ತಂಬ್ಗಿ ತುಂಬಲು ಮಾಡಿಕಳ್ಸಿರಾಲೆ
ತೆಂಕಾನ ತೊರಿಗಾಗಿ ನಡೆದಾನೆಲಂವ
ತೆಂಕಾನ ತೊರಿಯ ನರಮನಸರೆಲ್ಲ
ದಾನಿಲ್ಲುವಾಲೆ ದರುಮಿಲ್ಲುವಾಲೆ
ತಾವ್ ತಮ್ಮ ಪಾಪ ಅನುಗೈಯುವಾರೆ
ಅಣ್ಣನೆಂದು ತಂಗಿ ಅರಿಯಾಲು ಇಲ್ಲೆ
ಬಾವನೆಂದು ನಾದಿನಿ ಅರಿಯಾಲು ಇಲ್ಲೆ
ತಾವ್ ತಮ್ಮ ಪಾಪ ಅನುಗೈಯುವಾರೆ
ಅಷ್ಟೊಂದು ಮಾಯಾತ ಕಂಡಾನೆಲಂವ
ಸ್ವಾಮಿಯ ಬಳಿಗಾಗಿ ಬಂದಾನೆಲಂವ
ಸ್ವಾಮಿಗೆ ಕೈಯ ಮುಗಿದಾನೆಲಂವ
ಭೂಮಿಗೆ ತಲೀನ ಎರುಗೀದನಂವ
ಕೇಳ್ಯಯ್ಯ ಕೇಳಿ ನಾರಾಯ್ಣ ಸ್ವಾಮಿ
ಬಡಗಾನ ತೊರಿಗಾಗಿ ನಾ ಹೋದುನಾಲೆ
ಬಡಗಾನ ತೊರಿಯ ನರಮನಸರೆಲ್ಲ
ದಾನ ದರುಮವ ಮಾಡೀದುರಾಲೆ
ಹೋಮ ನೇಮವ ಮಾಡೀದುರಾಲೆ
ಹೊನ ತಂಬ್ಗಿ ತುಂಬಲು ಮಾಡಿ ಕಳ್ಸಿರಾಲೆ
ಮೂಡಾನ ತೊರಿಗಾಗಿ ನಾ ಹೋದುನಾಲೆ
ಮೂಡಾನ ತೊರಿಯ ನರಮನಸರೆಲ್ಲ
ದಾನ ದರುಮವ ಮಾಡೀದುರಾಲೆ
ಹೋಮ ನೇಮವ ಮಾಡೀದುರಾಲೆ
ಹೊನ ತಂಬ್ಗಿ ತುಂಬಲು ಮಾಡಿ ಕಳ್ಸಿರಾಲೆ
ಪಡುವಾನ ತೊರಿಗೆ ನಾ ಹೋದುನಾಲೆ
ಪಡುವಾನ ತೊರಿಯ ನರಮನಸರೆಲ್ಲ
ದಾನ ದರುಮವ ಮಾಡೀದುರಾಲೆ
ಹೋಮ ನೇಮವ ಮಾಡೀದುರಾಲೆ
ಹೊನ ತಂಬ್ಗಿ ತುಂಬಲು ಮಾಡಿ ಕಳ್ಸಿರಾಲೆ
ತೆಂಕಾನ ತೊರಿಗೆ ನಾ ಹೋದುನಾಲೆ
ತೆಂಕಾನ ತೊರಿಯ ನರಮನಸರೆಲ್ಲ
ದಾನಿಲ್ಲುವಾಲೆ ದರುಮಿಲ್ಲುವಾಲೆ

ಹೋಮಿಲ್ಲುವಾಲೆ ನೇಮಿಲ್ಲುವಾಲೆ
ತಮ್ಮತಮ್ಮ ಪಾಪವ ಅನುಗೈಯುವಾರೆ
ಅಣ್ಣನೆಂದು ತಂಗಿ ಅರಿಯಾಲು ಇಲ್ಲೆ
ಬಾವನೆಂದು ನಾದಿನಿ ಅರಿಯಾಲು ಇಲ್ಲೆ
ಅದರಿಂದೆ ಸೂರ್ಯ ಮೂಡಾಲು ಇಲ್ಲೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಇಲು ಬಾರೊ ಇಲ್ಲೊ ಮಾದಾರ ಚೆನ್ನ
ಕೇಳ್ಯಯ್ಯ ಕೇಳು ಮಾದಾರ ಚೆನ್ನ
ಹೊನು ಬಸುವಯ್ಯನ ಹಿಡುತಾರುಬೇಕೆ
ಅಕ್ಕಾಲಿ ಎಂದ ಮಾದಾರ ಚೆನ್ನ
ಹೊನು ಬಸುವಯ್ಯನ ಹಿಡಿತಂದುನಾಲೆ
ಕೇಳ್ಯಯ್ಯ ಕೇಳು ಹೊನು ಬಸುವಯ್ಯ
ತೆಂಕಾನ ತೊರಿಗಾಗಿ ನೀನ್ಹೋಗುಬೇಕೆ
ತೆಂಕಾನ ತೊರಿಯ ನರಮನಸರೆಲ್ಲ
ನಿನ್ನನ್ನೆಲಾದರೆ ಈಗ ಕಂಡಾರೆಲವ್ರು
ಓಡಿ ನಿನ್ನನ್ನು ಹಿಡಿವಾರೆ ಅವ್ರು
ಬೆರುಸಿ ನಿನ್ನನ್ನು ಹಿಡುವಾರೆ ಅವ್ರು
ಅವರನ್ನೆ ಆದಾರು ಬಿಡುಬ್ಯಾಡ ನೀನು
ಸ್ವಾಮಿಯ ಬಳಿಗೆ ತಂದು ಕೆಡಿಬೇಕು
ಹೊನು ಬಸುವಯ್ಯಂಗೆ ಬುದ್ಧಿ ಹೇಳುವರು
ಹೊನು ಬಸುವಯ್ಯಂಗೆ ವಿದ್ಯೆ ಹೇಳುವರು
ಅಕ್ಕಾಲಿ ಎಂದ ಹೊನು ಬಸುವಯ್ಯ
ತೆಂಕಾನ ತೊರಿಗಾಗಿ ನಡೆದಾನೆಲಂವ
ತೆಂಕಾನ ತೊರಿಯಲಿ ಹೋಯ್ ನಿಲ್ಲುವಾನೆ
ಲಗ ಕಂಡುರಯ್ಯ ಪಾಪ ದೋಷರವ್ರು
ಹೊನ ಬಸುವಯ್ಯನ ಕಂಡಾರೆಲವ್ರು
ಬೆರುಸಿ ಅದನ ಹಿಡಿದಾರೆ ಅವ್ರು
ಲಗ ಕಂಡುನಯ್ಯ ಹೊನು ಬಸುವಯ್ಯ
ಕೇಳ್ಯಯ್ಯ ಕೇಳಿ ನರಮನಸ್ರು ನೀವು
ಕೇಳ್ಯಯ್ಯ ಕೇಳಿ ಪಾಪದೋಷ್ರು ನೀವು
ನಾನೊಂದು ಚಂಗ್ಹಾರುತೇನೆ
ಒಂದೇ ಚಂಗಾನೆ ಹಾರಿದಲಂವ

ಒಂದೇ ಚಂಗಾನೆ ಹಾರೀದುನಾಲೆ
ಲಗ ಕಂಡುರಯ್ಯ ನರಮನಸರೆಲ್ಲ
ಕೇಳ್ಯಯ್ಯ ಕೇಳಿ ನರಮನಸರೆಲ್ಲ
ಇನ್ನೊಂದು ಚಂಗಾನೆ ನಾನ್ಹಾರುತೇನೆ
ಎರಡಾನೆ ಚಂಗಾನೆ ಹಾರೀದುನಾಲೆ
ಲಗ ಕಂಡುರಯ್ಯ ಪಾಪ ದೋಷರೀಗ
ಹೊನು ಬಸುವಯ್ಯನ ಬಿಡಲಿಲ್ಲಲೀಗ
ಕೇಳ್ಯಯ್ಯ ಕೇಳಿ ನರಮನಸರೆಲ್ಲ
ಮೂರಾನೆ ಚಂಗಾನೆ ನಾನ್ಹಾರುತೇನೆ
ನನ್ನಾದುರೀಗ ಬಿಡುಬ್ಯಾಡಿ ನೋಡಿ
ಅಕ್ಕಾಲಿ ಎಂದಾರು ಪಾಪದೋಷ್ರು
ಹೊನು ಬಸುವಯ್ಯನ ಹಿಡಿದಾರೆಲವ್ರು
ಮೂರಾನೆ ಚಂಗಾನೆ ಹಾರಿದ ಬಸವ
ಸ್ವಾಮಿಯ ಬಳಿಯಲ್ಲೆ ತಂದು ಕೆಡಿದಾನೊ
ಕೇಳ್ಯಯ್ಯ ಕೇಳಿ ನಾರಾಯ್ಣ ಸ್ವಾಮಿ
ಪಾಪ ದೋಷು ಅಂಬಾರ್ನ ತಂದು ಕೆಡಿದೇನು
ಲಗ ಕಂಡುರಯ್ಯ ದೇವ್‌ದಿಕ್ಕುಳೆಲ್ಲ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಪಾಪ ದೋಷರ್ನ ಕಂಡಾರೆಲವ್ರು
ಸ್ವಾಮಿ ಕೂತು ಮಾತಾಡುವಾರೆ
ಏನಂದು ಮಾತಾನು ಆಡೀದುರಾಲೆ
ಎಂತಂದು ಮಾತಾನು ಆಡೀದುರಾಲೆ
ಪಾಪ ದೋಷ್ರ ಪಾಪ ಪರಿ ಮಾಡುಬೇಕೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಮೆಣಸಿನ ಹೊಗಿಯನ್ನ ಹಾಕೀದುರಾಲೆ
ಬೆಳ್ಳಿಯ ಬೆತ್ತ ಎಳಿದಾರೆ ಸ್ವಾಮಿ
ಪಾಪ ದೋಷ್ರ ಪಾಪ ಪರಿಯಾಗುವಾದೆ
ಬೆಳ್ಳಿಯ ಮೂಡಿ ಬೆಳಗಾಗುವಂಗೆ
ಪಾಪ ದೋಷ್ರ ಹಾಡಂದು ಗಡಿಯಾದುವಯ್ಯ

(ಹೇಳಿದವರು : ಶ್ರೀ ಬಚ್ಚಮೇರ)

## ಮಂಡಲ ಬರೆಯುವ ಹಾಡು

ಹೊಯ ಹೊಯ್ಯುವಂಗೆ ಮೆಲು ಮೆಲು ಗಿನ್ನಾ
ಹೊಯ ಹೊಯ್ಯುವಂಗೆ ಮೆಲು ಮೆಲು ಗಿನ್ನಾ
ಲಗ ಕಂಡುನಯ್ಯ ಬೈದ್ಯೇನು ಮಗುನೆ
ಹೆರುತಾಯ ಮಗುನ ಕರಿದಾನೆಲಂವ
ಲಗ ಕಂಡುನಯ್ಯ ಹೆರಿತಾಯಿ ಮಗುನೆ
ಊರುಳ್ಳ ಜಾತೀನ ಕರಿದಾನೆಲಂವ
ಲಗ ಕಂಡುನಯ್ಯ ಬೈದ್ಯೇನು ಮಗುನೆ
ಮಂಡ್ಲಕ್ಕೆ ಹೊಡಿನ ಹಿಡಿತಿದ್ದುನಯ್ಯ
ಐದಂಗ ಹೊಡಿಯಾನು ಹಿಡಿತಿದ್ದುನಯ್ಯ
ಲಗ ಕಂಡುನಯ್ಯ ಬೈದ್ಯೇನು ಮಗುನೆ
ಹೊಡಿ ಎಂಬುದೆಲ್ಲ ಹಿಡುದಾದ ಮ್ಯಾಲೆ
ಹೊನು ಮಂಡ್ಲದ್ಹೊಡಿಯಾನೆ ಹಿಡುದಾದ ಮ್ಯಾಲೆ
ಏನಂಗದುರುವಾನು ಬರಿತಿದ್ದುನಯ್ಯ
ಎಂತಂಗದುರುವಾನು ಬರಿತಿದ್ದುನಯ್ಯ
ತಾಮಾಲಿ ಉರುವಾನು ಬರಿತಿದ್ದುನಯ್ಯ
ತಾಮಾಲಿ ಉರುವಾನು ಬರುದಾದ ಮ್ಯಾಲೆ
ಏನಂಗದುರುವಾನು ಬರಿತಿದ್ದುನಯ್ಯ
ಸುತುಕಟ್ಟಿ ತಾನು ಬರಿತಿದ್ದುನಯ್ಯ
ಸುತುಕಟ್ಟಿ ಉರುವಾನು ಬರುದಾದ ಮ್ಯಾಲೆ
ಏನಂಗದುರುವಾನು ಬರಿತಿದ್ದುನಯ್ಯ
ಸೂರೀ ದೇವರ ಉರು ಬರುವಾನೊ
ಸುಕುರು ದೇವರ ಉರು ಬರುವಾನೊ
ತಿಂಗಾಳ ದೇವರ ಉರು ಬರುವಾನೊ
ಮಂಗಾಳ ದೇವರ ಉರು ಬರುವಾನೊ

ದೇವರ ಉರುವ ಬರುದಾದ ಮ್ಯಾಲೆ
ಏನಂಗದುರುವಾನು ಬರಿತಿದ್ದುನಯ್ಯ
ಮುತ್ತೀನ ಕಾಳಿಂಗ ಉರು ಬರುವಾನೊ
ನಾಗದೇವರ ಉರುವಾನು ಬರಿತಿದ್ದುನಯ್ಯ
ನಾಗದೇವರ ಉರುವಾನು ಬರುದಾದ ಮ್ಯಾಲೆ
ಏನಂಗದುರುವಾನು ಬರಿತಿದ್ದುನಯ್ಯ
ಹೊನ್ನೈರ ಮೀನ ಉರು ಬರುವಾನು
ಹೊನ್ನರಳಿ ಮರನ ಉರು ಬರುವಾನು
ಉರುವೆಂಬ ಉರುವಾನು ಬರುದಾದ ಮ್ಯಾಲೆ
ಏನಂಗದುರುವಾನು ಬರಿತಿದ್ದುನಯ್ಯ
ಹುಲುಗುಬ್ಬಿ ಉರುವಾನು ಬರಿತಿದ್ದುನಯ್ಯ
ಗೇರ್‍ಯಾಡು ಗೆರುಸಿಯ ಬರುತಿದ್ದುನಯ್ಯ
ಲಗ ಕಂಡುನಯ್ಯ ಬೈದ್ಯೇನು ಮಗುವೆ
ಹೊನ್ನೊರಳು ಒನಕೆ ಬರುತಿದ್ದುನಯ್ಯ
ಹೊನ್ನು ಚೆನ್ನಿಮಣಿ ಉರು ಬರುವಾನು
ಕಕಚಾಂಡಲಕ್ಕಿ ಉರು ಬರುತಿದ್ದುನಯ್ಯ
ಕಕಚಾಂಡಲಕ್ಕಿ ಉರುನ ಬರುದಾದ ಮ್ಯಾಲೆ
ಗೋವಕ್ಕಿ ಉರುವಾನು ಬರಿತಿದ್ದುನಯ್ಯ
ಉರುವೆಂಬ ಉರುವಾನು ಬರುದಾದ ಮ್ಯಾಲೆ
ಏನಂಗದುರುವಾನು ಬರಿತಿದ್ದುನಯ್ಯ
ಸುತುಕಟ್ಟಿ ತಾನು ಬರಿತಿದ್ದುನಯ್ಯ
ಲಗ ಕಂಡುರಯ್ಯ ಬೈದ್ಯೇನು ಮಗುನೆ
ಪೂಜಾದ ಸಾಯಾತ ತರ್‍ಸಿಕೊಂಡುನಯ್ಯ
ಹೊನು ಮಂಡಲ್ದ ಪೂಜಾವ ಮಾಡಿದಲಂವ
ಸುತುಕಟ್ಟಿ ತಾನು ಬಂದಾನೆಲಂವ
ಭೂಮಿಗೆ ತಲಿಯ ಎರುಗೀದುನಾಲೆ
ಪೂಜೆಂಬುದೆಲ್ಲ ಮಾಡೀದುನಾಲೆ
ಮಂಡ್ಲದ ಪೂಜಾವ ಮಾಡೀದನಾಲೆ

(ಹೇಳಿದವರು : ಬಚ್ಚಮೇರ)

# ಗೋವಕ್ಕಿ ಹಾಡು

ಬಡಗಾನ ತೊರಿಯ ಬಡಗೋಲಿ ಮರುನೆ
ಬಡಗೋಳಿ ಮರುನಲ್ಲೆ ಹಣ್ಣಾಗುವಾದೆ
ಹಣ್ಣೀನ ಗಜಗಂಪು ನೆಸಿದಾವೆ ನೋಡಿ
ಮೇಲೇಳಿ ಲೋಕಕೆ ನೆಸಿತಿದ್ದುವಯ್ಯ
ಕೀಳೇಳಿ ಲೋಕಕೆ ನೆಸಿದಾಡುವಾದೆ
ನಾಲೂಕು ತೊರಿಗೂ ನೆಸಿದಾವೆ ಹಣ್ಣು
ಹಣ್ಣೀನ ಗಜಗಂಪು ನೆಸಿದಾವೆ ನೋಡಿ
ತೆಂಕಾನ ತೊರಿಯ ಗೋವಕ್ಕಿ ಮರಿಯೆ
ಬಡಗೋಳಿ ಮರುಕೆ ಗಗಣ್ಹಾರಿದಕ್ಕಿ
ಬಡಗೋಳಿ ಮರುನಲ್ಲಿ ಬಂದು ಕೂತಹಕ್ಕಿ
ಬಂದು ಕೂತ ಹಕ್ಕಿ ಹಣ್ಣು ಮೆಲ್ಲುವಾದೆ
ಹೊತ್ತ್ ಹೋದ ಗುತ್ತ ಅರಿಯಾಲು ಇಲ್ಲೆ
ಕಾಲಲ್ಲೆ ಮೆಟ್ಟಿದ್ಹಣ್ಣು ಕಾಲಲ್ಲೆ ಉಂಟು
ರೆಕ್ಕೈಲ್ಲೆ ಬಡಿದ್ಹಣ್ಣು ರೆಕ್ಕೈಲ್ಲೆ ಉಂಟು
ಚುಳ್ಳೈಲ್ಲೆಕೊಡಿದ್ಹಣ್ಣು ಚುಳ್ಳೈಲ್ಲೆ ಉಂಟು
ಹೊತ್ತ್ ಹೋದ ಗುತ್ತ ಅರಿಯಾಲು ಇಲ್ಲೆ
ಹೊತ್‌ಹೋಗಿ ಹೊಲುವೆ ಸೇರ್ವಾಗುಳೀಗೆ
ಅಜ್ಞಾನ ಅರುಮನಿ ಗಗಣ್ಹಾರಿದಕ್ಕಿ
ಕೇಳ್ಯಯ್ಯ ಕೇಳಿ ನಮ್ಮಜ್ಜ ನೀವೆ
ಗೋವಕ್ಕಿ ಉಳಿವಲ್ಲಿ ಜಾಗ ಸಿಕ್ಕುವ ಅಜ್ಜ
ಕೇಳ್ಯಯ್ಯ ಕೇಳಿ ಗೋವಕ್ಕಿ ಮರಿಯೆ
ಉಳುದ್ಹೋದ ಗುರುತ ತೋರ್‍ಯೋಗು ಬೇಕೆ
ಅಕ್ಕಾಲಿ ಎಂದೊ ಗೋವಕ್ಕಿ ಮರಿಯೆ

ಲಗ ಕಂಡುರಯ್ಯ ಅಜ್ಜಾರೆಲವ್ರು
ಕೇಳ್ಯಯ್ಯ ಕೇಳಿ ಗೋವಕ್ಕಿ ಮರಿಯೆ
ಚಿನ್ನಾಯ ಕಡುಮಾಡಲ್ಲ್ ಉಳಿದ್ಹೋಗಿರಕ್ಕಿ
ಬಣ್ಣಾದ ಬಳುಮಾಡಲ್ಲ್ ಉಳಿದ್ಹೋಗಿರಕ್ಕಿ
ಲಗ ಕಂಡುವಯ್ಯ ಗೋವಕ್ಕಿ ಮರಿಯೆ
ಬೆಳ್ಳೀಯ ಮೂಡಿ ಬೆಳುಗಾಗುವಂಗೆ
ಕೋಳೀಯ ಕೂಗಿ ವದಿಯಾಗುವಂಗೆ
ಗಂಡ್ಹಕ್ಕಿ ಎದ್ದು ಸರಗೈಯುವಾದೆ
ಹೆಣ್ಣಕ್ಕಿ ಎದ್ದು ಪಕ್ಕ ಬಡುವಾದೆ
ಚುಳ್ಳ್ಯಲ್ಲೆ ಕೊಡಿದ್ಹಣ್ಣು ತಿಂದ್ ಉಗಿದಾವೆ
ಕಾಲಲ್ಲೆ ಮೆಟ್ಟಿದ್ಹಣ್ಣು ತಿಂದ್ ಉಗಿದಾವೆ
ರೆಕ್ಕ್ಯಲ್ಲೆ ಬಡಿದ್ಹಣ್ಣು ತಿಂದ್ ಉಗಿದಾವೆ
ತೆಂಕಾನ ತೊರಿಗಾಗಿ ಗಗಣ್ಹಾರಿದಕ್ಕಿ
ಲಗ ಕಂಡುರಯ್ಯ ಅಜ್ಜಾರೆಲವ್ರು
ಯಾರಮ್ಮ ನೀವೆ ಗೌಡ್ತ್ಯೇರು ನೀವೆ
ಯಾರಮ್ಮ ನೀವೆ ತೊತ್ತ್ಯೇರು ನೀವೆ
ಅರುಮನಿ ಕದುವನು ತೆಗಿರಮ್ಮ ನೀವೆ
ಅರುಮನಿ ಕಸುವನು ಒಡಿರಮ್ಮ ನೀವೆ
ಲಗ ಕಂಡುರಯ್ಯ ಗೌಡ್ತ್ಯೇರೆಲವ್ರು
ಲಗ ಕಂಡುರಯ್ಯ ತೊತ್ತ್ಯೇರೆಲವ್ರು
ಚಿನ್ನಾದ ಬೀಸ್ಹಿಡಿ ತೆಗಿದಾರೆಲವ್ರು
ಅರುಮನಿ ಕಸುವನು ಒಡಿದಾರೆಲವ್ರು
ಕಸು ಒಡ್ದು ಅಂಗಣಕೆ ಹಾರಿಸುವರು
ಚಿನ್ನಾದ ಹಾರ್‌ಹೆಡ್ಗೆ ತೆಗಿದಾರೆಲವ್ರು
ಅಂಗಣದ ಕಸುವನು ಹೊತ್ತ್ ಒಯ್ಯುವಾರು
ಲಗ ಕಂಡುರಯ್ಯ ಅಜ್ಜಾರೆಲವ್ರು
ಸಾಸುರು ಸರುಗೋಳಿ ಸಸಿ ಹುಟ್ಟುವಾದೆ
ಸಾಸುರು ಸರುಗೋಳಿ ಸಸಿನ ಕಿತ್ತ್ ಹೊಡುವಾರೆ
ಸರುಗೋಳಿ ಸಸೀನ ಸಾಕೀದುರಾಲೆ

ನೀರ್ ಹೊಯ್ದ್ ಅದನ ಸಾಕೀದುರಾಲೆ
ಹಾಲ್ ಹೊಯ್ದ್ ಅದನ ಸಲಹೀದುರಾಲೆ
ಒಂದ್ ಎಗುಲ್ಹೋದೊ ಬಡಗಾನ ತೊರಿಗೆ
ಒಂದ್ ಎಗುಲ್ಹೋದೊ ತೆಂಕಾನ ತೊರಿಗೆ
ಒಂದ್ ಎಗುಲ್ಹೋದೊ ಮೂಡಾನ ತೊರಿಗೆ
ಒಂದ್ ಎಗುಲ್ಹೋದೊ ಪಡುವಾನ ತೊರಿಗೆ
ಒಂದ್ ಎಗುಲ್ಹೋದೊ ಆಕಾಸಕಾಗಿ
ಒಂದ್ ಹಗುಲಲ್ಲೆ ಹೂಗಾಗುವಾಗೆ
ಒಂದ್ ಹಗುಲಲ್ಲೆ ಮಿಡಿ ಬೀಳುವಾದೆ
ಒಂದ್ ಹಗುಲಲ್ಲೆ ಕಾಯಾಗುವಾದೆ
ಒಂದ್ ಹಗುಲಲ್ಲೆ ಹಣ್ಣಾಗುವಾದೆ
ಹಣ್ಣೀನ ಗಜಗಂಪು ನೆಸಿದಾವೆ ನೋಡಿ
ತೆಂಕಾನ ತೊರಿಯ ಗೋವಕ್ಕಿ ಮರಿಯೆ
ಸರುಗೋಳಿ ಮರುನಲ್ಲೆ ಬಂದು ಕೂರುವಾದೆ
ಲಗ ಕಂಡುರಯ್ಯ ಅಜ್ಜಾರೆಲವ್ರು
ಗೋವಕ್ಕಿ ಮರಿಯಾನು ಕಂಡಾರೆಲವ್ರು
ಕೇಳ್ಯಯ್ಯ ಕೇಳಿ ಗೋವಕ್ಕಿ ಮರಿಯೆ
ಆ ಹಣ್ಣನಾದರೆ ಮೆಲುಕಾರೆ ನೀವು
ಸರುಗೋಳಿ ಮರುನಲ್ಲೆ ಗೂಡ್ಹಾಕುಬೇಕೆ
ಸರುಗೋಳಿ ಮರುನಲ್ಲೆ ಮಟ್ಟಿ ಇಡುಬೇಕೆ
ಅಕ್ಕಾಲಿ ಎಂದೊ ಗೋವಕ್ಕಿ ಮರಿಯೆ
ಸರುಗೋಳಿ ಮರುನಲ್ಲೆ ಹೋಯ್ ಕೂತೊ ಹಕ್ಕಿ
ಹೋಯ್ ಕೂತೊ ಹಕ್ಕಿ ಹಣ್ಣು ಮೆಲ್ಲುವಾದೆ
ನಾಲೂಕು ತೊರಿಗೆ ಹೋದಾವೆ ಹಕ್ಕಿ
ನಾಲೂಕು ಚಪ್ಪಾನು ತಂದಾವೆ ಹಕ್ಕಿ
ಆನಿ ತ್ವಾರದ ಗೂಡಿಟ್ಟುವಾಲೆ
ಕುದುರಿ ನೀಟಾದ ಮಟ್ಟಿ ಇಟ್ಟುವಾಲೆ
ಸರುಗೋಳಿ ಸಸಿಯೆ ತೇಲ್ಯಾಡುವಾಲೆ
ಲಗ ಕಂಡುರಯ್ಯ ಅಜ್ಜಾರೆಲವ್ರು

ಮಟ್ಟಿ ಎಂಬುದೆಲ್ಲ ಜಾರೀದುವಾಲೆ
ಲಗ ಕಂಡುರಯ್ಯ ಅಜ್ಜಾರೆಲವ್ರು
ಸರುಗೋಳಿ ಸಸಿಗೆ ತಲಿ ಕೊಟ್ಟುರಾಲೆ
ತಲಿ ತಪ್ಪಿ ಹೊಗಲಿಗೆ ಬಿದ್ದಾವೆ ಮಟ್ಟಿ
ಹೊಗಲಿಂದ ತಪ್ಪಿ ಜಾರೀದುವಾಲೆ
ಸೊಂಟಾದ ಮ್ಯಾಲೆ ಜಾರೀದು ಮಟ್ಟಿ
ಸೊಂಟಾದಲದನ ಹಿಡಿದಾರೆ ಅಜ್ಜ
ಸೊಂಟ ತಪ್ಪಿ ಮುಂಗೈಗೆ ಜಾರೀದು ಮಟ್ಟಿ
ಮುಂಗೈಯಲ್ಲೆ ಆಚ್ ಹಿಡಿದಾನು ಅಜ್ಜ
ಮುಂಗೈ ತಪ್ಪಿ ಜಾರೀದು ಮಟ್ಟಿ
ಮುಂಗಾಲು ಮ್ಯಾಲೆ ಊರೀದು ಮಟ್ಟಿ
ಮುಂಗಾಲಲ್ಲೆ ಆಚ್ ಹಿಡಿದಾನು ಅಜ್ಜ
ಭೂಮೀಗೆ ಸಮನಾಗಿ ಬಿದ್ದಾವೆ ಮಟ್ಟಿ
ಸ್ವಾಮೀಗೆ ಸೇರಿ ಹೋದಾವೆ ಮಟ್ಟಿ
ಗೋವಕ್ಕಿ ಕತಿ ಗಡಿಯಾಗುವಾದೆ

(ಹೇಳಿದವರು : ಬಚ್ಚಮೇರ)

# ಜಕ್ಕಿಯರ ಹಾಡು

ಹುಟ್ಟಿದರೆ ಅವ್ರು ಜಕ್ಕಿಯರೆ
ಬೆಳೆದರೆ ಅವ್ರು ಜಕ್ಕಿಯರೆ
ಹುಟ್ಟಿ ಹುಟ್ಟಿ ಬೆಳೆದಾರು ಒಮ್ಮೊಟ ನೆಲನಲ್ಲಿ
ಅವ್ವ ಕಾಣವ್ವ ನೈಲಾಟು ಆಡುವಾಳು
ಹುಟ್ಟುವರೆ ಅವ್ರು ಜಕ್ಕಿಯರೆ ಬೆಳುವರೆ ಅವ್ರು ಜಕ್ಕಿಯರೆ
ಹುಟ್ಟಿಹುಟ್ಟಿ ಬೆಳೆದರು ಬಾರುಕೂರ ಪಟ್ಟಣದಲ್ಲಿ
ಅವ್ವ ಕಾಣವ್ವ ನೈಲಾಟು ಆಡುವಾಳು
ನೈಲ ಹೂಗಿನ ಜಕ್ಕಿ ಬಾನ ಬಾನ
ಹೂಗ್ ಜಕ್ಕಿಯೆ ಅವ್ವ್ ಹೂಗ್ ಕೊಯ್ವಾಳ್
ಕಾಯ್ ಜಕ್ಕಿಯೆ ಅವ್ವ್ ಕಾಯ್ ಕೊಯ್ವಾಳ್
ಹಣ್ ಜಕ್ಕಿಯೆ ಅವ್ವ್ ಹಣ್ಣ್ ಕೊಯ್ವಾಳ್
ಮಿಟ್ಟಿಮಿಟ್ಟಿ ಹೂಗ್ ಕೊಯ್ದ್ ಒಳ ಮಟ್ಯಾಗ್ ಕಟ್ಟ್‌ಕಂಡ್
ಅವ್ವ ಕಾಣವ್ವ ನೈಲಾಟು ಆಡುವಾಳು
ನುಗ್ಲ್ ಇಲ್ದೆ ಹೂಗ ಸುರ್ದು ಮಾಲಿಯ ಮಾಡಿ
ಹುಟ್ಟಿನ್ ದೈಯ್ಕ್ ಅವ್ವ್ ಪೂಜಿ ಮಾಡ್ವಾಳ್
ಹಣ್ಣಡ್ಕಿ ಇಟ್ಟ್ ಒಡ್ದ್ ಕಾಯಡ್ಕಿ ಮೆಟ್ಟಿ ಒಡ್ದ್
ಅವ್ವ ಕಾಣವ್ವ ನೈಲಾಟು ಆಡುವಾಳು
ನೈಲ ಹೂಗಿನ ಜಕ್ಕಿ ಬಾನ ಬಾನ
ಆತೆ ಬಂದೊ ಅಣಲ ಕೊಡಿ
ಸೋತೆ ಬಂದೊ ಗುಂಬಳ ಕೊಡಿ
ಅವ್ ಎಯ್ದು ಒಟ್ಟ್‌ಕೂಡಿ
ಹೊಸ ಹಂದ್ರ ಗಳಿದಾವೆ
ಅವ್ವ ಕಾಣವ್ವ ನೈಲಾಟು ಆಡುವಾಳು
ನೈಲ ಹೂಗಿನ ಜಕ್ಕಿ ಬಾನ ಬಾನ

(ಹೇಳಿದವರು : ಬಚ್ಚಮೇರ)

## ಬೀಳದೇವನ ಹಾಡು

ಅಜ್ಜ ಬಂದ ಜಲ್ಲ ಮ್ಯಾಲೆ
ಬೀಳೆ ಬಂದೊ ಬಿಲ್ಲ ಮ್ಯಾಲೆ
ಶಿವನ ಬೀಳೆ ಬಂದೊ ಬಿಲ್ಲ ಮ್ಯಾಲೆ
ಲಗ ಕಂಡನೆ ಬೀಲದೇವ
ಸಂಬುಳಕೆ ಹೋಯ್ಕುಂದನೊ ಅವ್ನು
ಸಾರಿಕೆಗೆ ಹೋಯ್ಕುಂದನೊ
ತಾಯ್ ಕೈನಿಗ ಹೇಳುತಿದ್ದನೊಲಂವ
ತಂದಿ ಕೈನಿಗ ಹೇಳುತಿದ್ದನೊಲಂವ
ನಿನಗೆಂತ ಬೋ ಸಂಬುಳವೊ ಮಗನೆ
ನಿನಗೆಂತ ಬೋ ಸಾರಿಕೆಯೊ
ನೆತ್ತಿ ಎಣ್ಣೆಯೆ ಆರಲಿಲ್ಲೆ ನಿಂದು
ಬಾಯ್ ಹಲ್ಲೀಗ ಮುರಿಯಲಿಲ್ಲೆನಿಂದು
ಅಮಿರುಳಿಯೆ ಉದುರಲಿಲ್ಲೆ ನಿನ್ಗೆ
ನಿನಗೆಂತ ಬೋ ಸಂಬುಳವೊ ಮಗನೆ
ನಿನಗೆಂತ ಬೋ ಸಾರಿಕೆಯೊ
ಲಗ ಕಂಡನೆ ಬೀಳದೇವಲಂವ
ಏನ್ ಹೇಳಿರೂ ಕೇಳಲಿಲ್ಲೆಲಂವ
ಎಂತ್ಹೇಳಿರೂ ಕೇಳಲಿಲ್ಲೆ
ಸಂಬುಳಕೆ ಹೋಯ್ಕ್ ಅಂದಾನೊಲಂವ
ಸಾರಿಕೆಗೆ ಹೋಯ್ಕುಂದಾನೊ
ತಾಯ್ ಮಾತಾನು ಕೇಳದಿದ್ರೆ ನೀನು
ನಾಯ್ ಬಾಯಿಗೆ ಹಪ್ಪ್ ಆಪಾನು
ತಂದಿ ಮಾತಾನು ಕೇಳದಿದ್ರೆ ನೀನು

ಸೂಲದ ಮಣಿಯ ಹೆಣಆಪಾನು
ಏನ್ ಹೇಳಿರೊ ಕೇಳಲಿಲ್ಲೆಲಂವ
ಎಂತ್ಹೇಳಿರೂ ಕೇಳಲಿಲ್ಲೆಲಂವ
ಲಗ ಕಂಡನೆ ಬೀಳದೇವಲಂವ
ಬ್ಯಾಟಿ ಕೂಡಿಗಿ ಕೂಡಿಸಿದ
ಅಜ್ಜನೆಂಬ ಅರಿಕಲ್ಲಲ್ಲಿ ಈಗ
ಗುಜ್ಜನೆಂಬ ಗೋಳಿಮರ್ನಲ್ಲಿ
ಬ್ಯಾಟಿ ಕೂಡಿಗಿ ಕೂಡಿಸಿದ
ಲಗ ಕಂಡನೆ ಬೀಳದೇವಲಂವ
ನ್ಯಾಲಿ ಬಿಲ್ಲಾನ ತೆಗಿತಿದ್ದಾನೊಲಂವ
ಅಂಡಿ ಅಂಬನ್ನ ತೆಗಿತಿದ್ದಾನೊ
ಬ್ಯಾಟಿ ಕೂಡಿಗಿ ಹೋದಾನೊಲಂವ
ಬ್ಯಾಟಿ ವೀಳಿಯ ಹಂಚುತಿದ್ದಾನೊಲಂವ
ಕೂಡಿಗಿಯ ಹಿರಿಸೀದನೊಲಂವ
ಮಾಜಿಮಲ್‌ಸಪ್ಪ ಕಟ್ಟಿದನೊಲಂವ
ನೈಲ ಬಂದೊ ಈಗ ಹಿಂಡೆ ಬಂದೊ
ಹಾರೆ ಬಂದೊ ಹೋರೆ ಮಿಗ
ಅದ್ರ್ ಹೋಕನ ಬಿಡುತಿದ್ದನೊಲಂವ
ಕೆಂಜಿಕಿರ್‌ಗೋಡ ಕಟ್ಟುತಿದ್ದನೊಲಂವ
ಗುಜ್ಜು ಕಾಲಿನ ಹಂದಿ ಬಂದೊ ಈಗ
ಅದ್ರ್ ಹೋಕನ ಬಿಡುತಿದ್ದನೊಲಂವ
ಹೊನುಬಣ್ಣದ ಹುಲಿಯೆ ಬಂದೊ ಈಗ
ತಪ್ಪೆಚ್ಚಿದ ಬೀಳದೇವಲಂವ
ತಾನೆಚ್ಚಿದ ಬೀಳದೇವಲಂವ
ಹೊನುಬಣ್ಣದ ಹುಲಿಯ ಹೊಡ್ದಲಂವ
ಲಗ ಕಂಡಾನೆಲಂವ ಬೀಳದೇವ
ಹುಲಿ ಮೆರುವಣ್ಗಿ ಮೆರ್ಸಿದನೊ
ಲಗ ಕಂಡಾನೆಲಂವ ಬೀಳದೇವ

ತಾಯಿ ಕೈನಿಗ ಹೇಳಿದನೊಲಂವ
ತಂದಿ ಕೈನಿಗ ಹೇಳಿದನೊಲಂವ
ಕೇಳಮ್ಮ ಕೇಳೊ ನನ ತಾಯಿಯೆ
ಹುಲಿ ಎಂಬಾದು ನಾ ಹೊಡ್ದೆನೆ
ಕೀರ್ತಿ ಎಂಬಾದು ನಾ ಪಡ್ದೀದಿ
ತಂದಿ ಕೈನಿಗ ಹೇಳುತಿದ್ದನೊಲಂವ
ಹುಲಿ ಎಂಬಾದು ನಾ ಹೊಡ್ದೆನೆ
ಕೀರ್ತಿ ಎಂಬಾದು ನಾ ಪಡ್ದೀದಿ
ಬೀಳದೇವನ ಹಾಡೆಂಬಾದು
ಇಲ್ಲಿಗೀಗ ಗಡಿಯಾದುವೆ

(ಹೇಳಿದವರು : ಬಚ್ಚಮೇರ)

## ಕಳಸ ನಾಡಮೇಲೆ ಹೋಗುವ ಹಾಡು

ಹಿಂದೆ ಸಾವಿರ ಮಂದಿ ಮುಂದೆ ಸಾವಿರ ಮಂದಿ
ನಡಗೆ ಬೆರ್ಮಸ್ಥಾನದ ಮರಿಮಟ್ಟಿ
ನಡಗೆ ಬೆರ್ಮಸ್ಥಾನದ ಮರಿಮಟ್ಟಿ ಕೂಡಿಕಂಡ್
ನಾಡಾಮ್ಯಾಲೆ ತಾಯಿ ಹೊಯ್ತೀರ
ನಾಡಮ್ಯಾಲೆ ತಾಯಿ ಏನೆಂದ ಹೊಯ್ತೀರ
ಊರ ಉಂಬುಳಿಯ ವಸುಲಿಗೂ
ಊರ ಉಂಬುಳಿಯ ವಸುಲಿಗು ನಾಡವ್ರ್
ಕಾಯ್ ಒಡ್ದೆ ಕೈಯ ಮುಗುವಾರು
ಕಾಯ್ ಒಡ್ದೆ ಕೈಯ ಏನೆಂದೆ ಮುಗುವಾರು
ಪಂಚ ದೀವಿಗೆಯು ಉರಿಬೇಕ
ಪಂಚ ದೀವಿಗೆಯ ಉರಿಬೇಕೆಲಂತ್ಹೇಳಿ
ನಂದಾದೀವಿಗೆಯ ಉರುಸೂರು
ನಂದಾ ದೀವಿಗೆಯ ಉರುಸುರೆ ಹಾಯ್ಗುಳಿ
ಕಾಯ್ ಒಡ್ದ್ ಕೈಯ ಮುಗಿಬೇಕ
ಕಾಯ್ ಒಡ್ದ್ ಕೈಯ ಏನೆಂದ ಮುಗುವಾರು
ಮನಿ ಒಳ್ಗ್ ಜ್ಯೋತಿ ಉರಿಕಂದ್
ಮನಿ ಒಳ್ಗ್ ಜ್ಯೋತಿ ಉರಿಕಂದ್ ನಾಡವ್ರ್
ಹೂಗ್ ಒಡ್ದ್ ಉಸಿಯ ಇರುಸೂರು

(ಹೇಳಿದವರು : ಶ್ರೀಮತಿ ಬುಡ್ಡು)

# ಕೂಟದ ಹಾಡು

ಹೊಯ ಹೊಯ್ಯುವಂಗೆ ಮೆಲು ಮೆಲು ಗಿನ್ನಾ
ಹೊಯ ಹೊಯ್ಯುವಂಗೆ ಮೆಲು ಮೆಲು ಗಿನ್ನಾ
ಸ್ವಾಮಿ ಹುಟ್ಟಿ ಹನ್ನೆಯ್ಡು ದಿವುಸಾದುವಯ್ಯಾ
ಶಿವುಭಾಮೆ ಆಗ ಹುಟ್ಟಿದಾಳೆ ನೋಡೆ
ಹೆಣ್ಣೋಗಿ ಹೆಂಗೂಸು ಆದಾಳೆ ಭಾಮೆ
ಸೊಕ್ಕಿದಾಳೆ ಭಾಮೆ ಮಿಕ್ಕಿದಾಳೆ ಭಾಮೆ
ಮಿಕ್ಕಿ ಮೆಟ್ಟಂಗಳಿಳಿದಾಳೆ ಭಾಮೆ
ಲಗ ಕಂಡುರಯ್ಯ ಕರಿಸೂರ ಸ್ವಾಮಿ
ಲಗ ಕಂಡುರಯ್ಯ ನಗುರಾಸಿ ಸ್ವಾಮಿ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಸ್ವಾಮಿ ಕೂತು ಮಾತಾಡುವಾರೆ
ಏನಂದು ಮಾತಾನು ಆಡೀದುರಾಲೆ
ಹೆಣ್ಣೋಗಿ ಹೆಂಗೂಸು ಆದಾಳೆ ಭಾಮೆ
ಸೊಕ್ಕಿದಾಳೆ ಭಾಮೆ ಮಿಕ್ಕಿದಾಳೆ ನೋಡೆ
ಮಿಕ್ಕಿ ಮೆಟ್ಟಂಗಳಿಳಿದಾಳೆ ಭಾಮೆ
ಭಾಮೆಗು ಆಗು ಗಂಡರಾಗುಬೇಕೆ
ಮೇಲೇಳಿ ಕೂಟಾವ ನಾವ್ ಕೂಡುಬೇಕೆ
ಕೂಟುದಧಿಕಾರಾನ ಕರುಸೀದುರಯ್ಯ
ಮೇಲೇಳಿ ರಾಜಾಕೆ ನೀನ್ಹೋಗುಬೇಕೆ
ದೈವ್‌ದಿಕ್ಕಾಳಿಗ್ವಾಲಿ ಬರಿಯಾಲುಬೇಕೆ
ಲಗ ಕಂಡುನಯ್ಯ ಕೂಟುದಧಿಕಾರ
ಏನಂದು ವಾಲೀಯ ಬರಿತ್ಯಯ್ಯ ನೀನು
ಎಂತಂದು ವಾಲೀಯ ಬರಿತ್ಯಯ್ಯ ನೀನು

ಮೇಲೇಳಿ ಲೋಕಾದ ದೈವದಿಕ್ಕುಳೆಲ್ಲ
ಮೇಲೇಳಿ ಕೂಟಾಕೆ ನೀವ್ ಕೂಡುಬೇಕು
ಹಾಗಂದೆ ವಾಲೀನ ಬರಿಸಯ್ಯ ನೀನು
ಅಕ್ಕಾಲಿ ಎಂದ ಅಂವ ಕೂಟುದಧಿಕಾರ
ಬರುಸ್ಯಾನುಬಯ್ಯಾನ ಮನಿಗ್ಹೋದುನಯ್ಯ
ಲಗ ಕಂಡುನಯ್ಯ ಬರುಸ್ಯಾನಬಯ್ಯ
ಇಲು ಬಾರೊ ಇಲ್ಲು ಕೂಟುದಧಿಕಾರ
ಹಗ್ಗೀನ ಹೋಕಿಗೆ ಏನು ಬಂದೆ ನೀನು
ಬ್ಯಾಸೀಗಿ ಮೊದಲೀಗೆ ಏನು ಬಂದೆ ನೀನು
ಕೇಳ್ಯಯ್ಯ ಕೇಳಿ ಬರುಸ್ಯಾನುಬಯ್ಯ
ಸೊಕ್ಕಿದಾಳೆ ಭಾಮೆ ಮಿಕ್ಕಿದಾಳೆ ನೋಡೆ
ಮಿಕ್ಕಿ ಮೆಟ್ಟಂಗಳಿಳಿದಾಳೆ ಭಾಮೆ
ಭಾಮೆಗೆ ಆಗು ಗಂಡುರಾಗುಬೇಕೆ
ಮೇಲೇಳಿ ಕೂಟಾವ ನಾವ್ ಕೂಡುಬೇಕೆ
ದೈವ್‌ದಿಕ್ಕಾಳಿಗ್ವಾಲಿ ಬರಿಯಯ್ಯ ನೀನು
ಮೇಲೇಳಿ ಕೂಟಾಕೆ ನೀವ್ ಬರುಬೇಕೆ
ಹಾಗಂದೆ ವಾಲೀಯ ಬರಿಯಯ್ಯ ನೀನು
ಲಗ ಕಂಡುನಯ್ಯ ಬರುಸ್ಯಾನುಬಯ್ಯ
ಹಾಗಂದೆ ವಾಲೀಯ ಬರಿದಾನೆಲಂವ
ವಾಲೀಗೆ ಒಂಕಾಣಿ ಬರಿದಾನೆಲಂವ
ಕೇಳ್ಯಯ್ಯ ಕೇಳು ಕೂಟುದಧಿಕಾರ
ವಾಲ್ಯಂಬುದೆಲ್ಲ ಬರಿದಾದುವಯ್ಯ
ಲಗ ಕಂಡುನಯ್ಯ ಕೂಟುದಧಿಕಾರ
ಕೊಟ್ವಾಲಿ ಮಡುಲಲ್ಲಿ ಸರ್ರಿಕೊಂಡುನಾಲೆ
ಮೇಲೇಳಿ ಲೋಕಾಕೆ ಹೋದಾನೆಲಂವ
ಲಗ ಕಂಡುನಯ್ಯ ಕೂಟುದಧಿಕಾರ
ಕೂಟಾದ ಕಟ್ಟಿ ಕಡಿಸೀದುನಾಲೆ
ಮೇಲೇಳಿ ಕಟ್ಟಿ ಕಟ್ಟೀದುನಾಲೆ
ದೈವ್‌ದಿಕ್ಕಾಳಿಗ್ ವಾಲೀಯ ಕೊಟ್ಟಾನೆಲಂವ

ನಾಲೂಕು ತೊರಿಗೆ ಕೊಟ್ಟಾನೆಲಂವ
ಲಗ ಕಂಡುನಯ್ಯ ಕೂಟುದಧಿಕಾರ
ಸ್ವಾಮಿಯ ಬಳಿಗಾಗಿ ಬಂದಾನೆಲಂವ
ಕೇಳ್ಯಯ್ಯ ಕೇಳಿ ನಾರಾಯ್ಣ ಸ್ವಾಮಿ
ಮೇಲೇಳಿ ಕೂಟಾವ ನಾವ್ ಕೂಡುಬೇಕೆ
ಕೂಟಾದ ಕಟ್ಟಿ ಕಡಿಸೀದುನಾಲೆ
ದೈವ್‌ದಿಕ್ಕಳಿಗ್‌ವಾಲೀಯ ಕೊಡುಸೀದುನಾಲೆ
ಮೇಲೇಳಿ ಕೂಟಾವ ಕೂಡೀದುರಾಲೆ
ಅಕ್ಕಾಲಿ ಎಂದ್ರು ನಾರಾಯ್ಣ ಸ್ವಾಮಿ
ಮೇಲೇಳಿ ಕೂಟಾವ ಕೂಡೀದುರಾಲೆ
ನಾಲೂಕು ತೊರಿಯ ದೈವ್‌ದಿಕ್ಕುಳೆಲ್ಲ
ಕೂಟಾದ ರಾಶಿಗೆ ಬಂದಾರೆಲವ್ರು
ಲಗ ಕಂಡುಳಯ್ಯ ಶಿವುಭಾಮೆ ತಾನು
ಕೂಟಾದ ರಾಶಿಗೆ ಬಂದಾಳೆಲವ್ವು
ಕೇಳ್ಯಯ್ಯ ಕೇಳು ಕೂಟುದಧಿಕಾರ
ಕೂಟಾದು ರಾಶೀಯ ಹೊಕು ನೋಡುಬೇಕೆ
ಯಾವ್ ಸ್ವಾಮಿಯಾದಾರು ಬಂದಾರೆ ನೋಡು
ಯಾವ್ ಸ್ವಾಮಿಯಾದಾರು ಬರಲಿಲ್ಲೆ ನೋಡು
ಅಕ್ಕಾಲಿ ಎಂದ ಕೂಟುದಧಿಕಾರ
ಕೂಟಾದ ಕಟ್ಟ್ಯಲ್ಲೆ ಹೋಯ್ ನಿಲ್ಲುವಾನೆ
ಸ್ವಾಮಿಗೆ ಕೈನ ಮುಗಿದಾನೆಲಂವ
ಭೂಮಿಗೆ ತಲಿನ ಎರುಗೀದುನಾಲೆ
ಎಡಕ್ಹೋಗಿ ಬಲುಕೆ ಬಂದು ನಿಲ್ಲುವಾನೆ
ನಾಲೂಕು ತೊರಿಯ ದೈವ್‌ದಿಕ್ಕುಳೆಲ್ಲ
ಕೂಟಾದು ರಾಶಿಗೆ ಕೂಡೀದುರಾಲೆ
ಕೂಡೀದ ಕೂಟ ಒಲುವಿಲ್ಲುವಾಲೆ
ಆಡೀದ ಮಾತು ಸರಿಬರಲಿಲ್ಲುವಾಲೆ
ಮೇಲೇಳಿ ಕೂಟಾವ ಹಿರಿಯಾಲುಬೇಕೆ
ಕೀಳೇಳಿ ಕೂಟಾವ ನಾವ್ ಕೂಡುಬೇಕೆ

ಅಕ್ಕಾಲಿ ಎಂದ್ರು ನಾರಾಯ್ಣ ಸ್ವಾಮಿ
ಕೇಳ್ಯಯ್ಯ ಕೇಳು ಕೂಟದಧಿಕಾರ
ಕೀಳೇಳಿ ರಾಜಾಕೆ ನೀನ್ಹೋಗುಬೇಕೆ
ಕೂಟಾದ ಕಟ್ಟೀಯ ಕಡಿಸಾಲುಬೇಕೆ
ವಡ್ಡಾರಿಗ್ ವಾಲೀಯ ಬರಿಯಾಲುಬೇಕೆ
ಲಗು ಕಂಡುನಯ್ಯ ಕೂಟುದಧಿಕಾರ
ಹೊನ್ನೆಳಿ ನುಗುಲನು ಕೆಳ್ಗ್ ಬಿಡುವಾನು
ಹೊನ್ನೆಳಿ ನಗುಲಲ್ಲಿ ಕೆಳ್ಗ್ ಬಂದುನಾಲೆ
ಕೀಳೇಳಿ ರಾಜಾಕೆ ಬಂದಾನೆಲಂವ
ಬರುಸ್ಯಾನುಬಯ್ಯಾನ ಮನಿಗ್ಹೋದುನಲೆ
ಹಗ್ಗೀನ ಹೋಕಿಗೆ ಏನು ಬಂದೆ ನೀನು
ಬ್ಯಾಸೀಗಿ ಮೊದಲೀಗೆ ಏನು ಬಂದೆ ನೀನು
ಕೇಳ್ಯಯ್ಯ ಕೇಳಿ ಬರುಸ್ಯಾನುಬಯ್ಯಾ
ಮೇಲೇಳಿ ಕೂಟಾವ ನಾವ್ ಕೂಡಿದಾವೆ
ಕೂಡಿದ ಕೂಟ ಒಲುವಿಲ್ಲಿಯಾಲೆ
ಆಡಿದ ಮಾತು ಸರಿಬರುಲಿಲ್ಲಿಯಾಲೆ
ಕೀಳೇಳಿ ರಾಜಾಕೆ ನಾ ಬಂದುನಾಲೆ
ಕೂಟಾದ ಕಟ್ಟೀಯ ಕಡುಸಾಲುಬೇಕೆ
ವಡ್ಡಾರಿಗ್ ವಾಲೀಯ ಬರಿಯಾಲುಬೇಕೆ
ಅಕ್ಕಾಲಿ ಎಂದ ಬರುಸ್ಯಾನುಬಯ್ಯ
ಹೊನ್ವಾಲಿ ಸರುನೆ ಕೊಯ್‌ಕಂಡುನಾಲೆ
ಬಂಗಾರ್ದ ಬರುಕಂಟ ಕೈಲಿಡುವಾನು
ವಾಲ್ಯಂಬುದೆಲ್ಲ ಬರಿತಿರುವಾನು
ಕೇಳ್ಯಯ್ಯ ಕೇಳು ಕೂಟುದಧಿಕಾರ
ವಾಲೀಗೆ ಒಂಕಾಣಿ ಏನು ಬರುದಯ್ಯ
ಕೇಳ್ಯಯ್ಯ ಕೇಳು ಬರುಸ್ಯಾನುಬಯ್ಯ
ಈ ವಾಲಿಯಾನ ಕಂಡ ಗಳ್ಗಿಯಲ್ಲೆ
ಸ್ವಾಮಿಯ ಬಳಿಗಾಗಿ ನೀವ್ ಬರುಬೇಕೆ
ಕೂಟಾದ ಕಟ್ಟೀಯ ಕಟ್ಟಾಲುಬೇಕೆ

ಸ್ವಾಮಿಯ ಬಳಿಗಾಗಿ ನೀವ್ ಬರುಬೇಕೆ
ಹಾಗಂದೆ ವಾಲೀಯ ಬರಿಯಯ್ಯ ನೀನು
ನಾಲೂಕು ತೊರಿಯ ವಡ್ಡಾರೆಲವ್ರು
ವಡ್ಡಾರಿಗ್ ವಾಲೀಯ ಬರೆದಾನೆಲಂವ
ಲಗ ಕಂಡುನಯ್ಯ ಬರುಸ್ಯಾನುಬಯ್ಯ
ಕೇಳ್ಯಯ್ಯ ಕೇಳು ಕೂಟುದಧಿಕಾರ
ವಾಲ್ಯೆಂಬುದೆಲ್ಲ ಬರಿದಾದುವಯ್ಯ
ಲಗ ಕಂಡುನಯ್ಯ ಕೂಟುಧಧಿಕಾರ
ವಾಲ್ಯಂಬುದೆಲ್ಲ ಕೊಡುತಿದ್ದುನಾಲೆ
ಲಗ ಕಂಡುನಯ್ಯ ಕೂಟುದಧಿಕಾರ
ಕೊಟ್ವಾಲಿ ಮಡುಲಲ್ಲೆ ಸರ್ರಿಕೊಂಡುನಾಲೆ
ಮೂಡಾನ ತೊರಿಗೆ ನಡೆದಾನೆಲಂವ
ಮುತ್ತಿನೊಡ್ಡಂಗ್ ವಾಲಿ ಕೊಡುತಿದ್ದುನಾಲೆ
ಲಗ ಕಂಡುನಯ್ಯ ಮುತ್ತಿನೊಡ್ಡಲಂವ
ಬಂದ್ವಾಲಿಗಳನು ಕೈಲಿಡುವಾನು
ಬಂದ್ವಾಲಿಗಳನು ನಿಂದೋದುವಾನು
ವಾಲೀಗೆ ಜಾಬಾವು ಬರೆದಾನೆಲಂವ
ಹೊಲುಕ್ ಹೋದ ಹೋರೀನ ಹೊಡುತಂದುನಾಲೆ
ಹೇರೂಕ್ ಹೋದ ಎತ್ತೀನ ಹೊಡುತಂದುನಾಲೆ
ಲಗ ಕಂಡುನಯ್ಯ ಬಂಗಾರೊಡ್ಡ್ಲಂವ
ಎತ್ತೀನ ಮ್ಯಾಲೆ ಹೇರ್ ಹೇರುವಾನು
ತಾತನ್ನಗಳ ಮುಟ್ಟ ಹೊರಿಕಟ್ಟುವಾನು
ಎತ್ತೀನ ಮ್ಯಾಲೆ ಹೇರೀದುನಾಲೆ
ಸ್ವಾಮೀಯ ಬಳಿಗಾಗಿ ಬಂದಾನೆಲಂವ
ಲಗ ಕಂಡುನಯ್ಯ ಮುತ್ತಿನೊಡ್ಡಲಂವ
ಲಗ ಕಂಡುನಯ್ಯ ಕೂಟುದಧಿಕಾರ
ಬಡುಗಾನ ತೊರಿಗೆ ನಡೆದಾನೆಲಂವ
ಬಂಗಾರೊಡ್ಡಂಗ್ ವಾಲಿ ಕೊಡುತಿದ್ದುನಾಲೆ
ಲಗ ಕಂಡುನಯ್ಯ ಬಂಗಾರೊಡ್ಡಲಂವ

ಕೊಟ್ವಾಲಿಯನು ನಿಂದೋದುವಾನು
ವಾಲೀಗೆ ಜಾಬಾವು ಬರೆದಾನೆಲಂವ
ಹೊಲುಕೋದ ಹೋರೀನ ಹೊಡುತಂದುನಾಲೆ
ಹೇರೂಕ್ ಹೋದ ಎತ್ತೀನ ಹೊಡುತಂದುನಾಲೆ
ತಾತನ್ನಗಳ ಮುಟ್ಟ ಹೊರಿಕಟ್ಟುವಾನು
ಎತ್ತೀನ ಮ್ಯಾಲೆ ಹೇರಿದುನಾಲೆ
ಸ್ವಾಮೀಯ ಬಳಿಗಾಗಿ ಬಂದಾನೆಲಂವ
ಕೀಳೇಳಿ ಲೋಕಾಕೆ ಬಂದಾನೆಲಂವ
ಪಡುವಾನ ತೊರಿಗಾಗಿ ಬಂದಾನೆಲಂವ
ಲಗ ಕಂಡುನಯ್ಯ ಕೂಟುದಧಿಕಾರ
ಚೆಂಬಿನೊಡ್ಡಂಗ್ ವಾಲಿ ಕೊಡುತಿದ್ದುನಾಲೆ
ವಾಲ್ಯೆಂಬುದೆಲ್ಲ ಕೊಡುತಿದ್ದುನಾಲೆ
ಲಗ ಕಂಡುನಯ್ಯ ಬಡುಗೇರ ಮಗನೆ
ಕೊಟ್ವಾಲಿಯನು ನಿಂದೋದುವಾನು
ವಾಲೀಗೆ ಜಾಬಾವು ಬರೆತಿದ್ದುನಾಲೆ
ಹೊಲುಕ್ ಹೋದ ಹೋರೀನ ಹೊಡುತಂದುನಾಲೆ
ಹೇರೂಕ್ ಹೋದ ಎತ್ತೀನ ಹೊಡುತಂದುನಾಲೆ
ತಾತನ್ನಗಳ ಮುಟ್ಟ ಹೊರಿಕಟ್ಟುವಾನು
ಎತ್ತೀನ ಮ್ಯಾಲೆ ಹೇರೀದುನಾಲೆ
ಸ್ವಾಮೀಯ ಬಳಿಗಾಗಿ ಬಂದಾನೆಲಂವ
ಕೀಳೇಳಿ ಲೋಕಕೆ ಬಂದಾನೆಲಂವ
ಲಗ ಕಂಡುನಯ್ಯ ಕಂಚಿನೊಡ್ಡಲಂವ
ತೆಂಕಾನ ತೊರಿಗಾಗಿ ಹೋದಾನೆಲಂವ
ಕಂಚಿನೊಡ್ಡಂಗೆ ವಾಲಿಯ ಕೊಡುತಿದ್ದುನಾಲೆ
ಬಂದ್ವಾಲಿಗಳನು ನಿಂದೋದುವಾನು
ವಾಲೀಗೆ ಜಾಬಾವು ಬರೆದಾನೆಲಂವ
ಹೊಲುಕ್ ಹೋದ ಹೋರೀನ ಹೊಡುತಂದುನಾಲೆ
ಹೇರೂಕ್ ಹೋದ ಎತ್ತೀನ ಹೊಡುತಂದುನಾಲೆ
ತಾತನ್ನಗಳ ಮುಟ್ಟ ಹೊರಿಕಟ್ಟುವಾನು

ಎತ್ತೀನ ಮ್ಯಾಲೆ ಹೇರೀದುನಾಲೆ
ನಾಲೋಕು ತೊರೆಯ ವಡ್ಡಾರೆಲವ್ರು
ಸ್ವಾಮೀಯ ಬಳಿಗಾಗಿ ಬಂದಾರೆಲವ್ರು
ಸ್ವಾಮೀಗೆ ಕೈಯ್ನು ಮುಗಿದಾರೆಲವ್ರು
ಸ್ವಾಮೀಗೆ ತಲೆಯ ಎರುಗೀದುರಾಲೆ
ಮುಗಿದಂತ ಕೈಗೆ ಹಾ ಎಂದುರಾಲೆ
ಎರುಗಿದ ತಲೆಗೆ ಬಾ ಎಂದುರಾಲೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಲಗ ಕಂಡುರಯ್ಯ ನಗುರಾಸಿ ಸ್ವಾಮಿ
ಲಗ ಕಂಡುರಯ್ಯ ಕರಿಸೂರ ಸ್ವಾಮಿ
ಕೇಳ್ಯಯ್ಯ ಕೇಳಿ ವಡ್ಡಾರೆ ನೀವು
ಕೂಟಾದು ಕಟ್ಟಿ ಕಟ್ಟಾಲುಬೇಕು
ಅಕ್ಕಾಲಿ ಎಂದ್ರು ವಡ್ಡಾರೆಲವ್ರು
ಬೆಳ್ಳೀಯ ಮೂಡಿ ಬೆಳಗಾಗುವಂಗೆ
ಕೋಳೀಯ ಕೂಗಿ ವದಿಯಾಗುವಂಗೆ
ಕಲಮಾರಿ ಎಂಬೂದು ತೊಳೆದಾರೆಲವ್ರು
ಹಲಬಾನದೂಟವ ಉಂಡಾರೆಲವ್ರು
ಕಪುರಾದ ವೀಳ್ಯಾದ ಕವಳೆತ್ತುವಾರು
ಕಲು ಕಡಿವಾರು ಕಲು ಕಡಿದಾರು
ಮಣು ತರುವಾರು ಮಣು ತಂದಾರು
ಕಲು ಕಟ್ಟುವಾರು ಕಲು ಕಟುವಾರೆ
ಮಣು ಮೆತ್ತುವಾರು ಮಣು ಮೆತ್ತುವಾರೆ
ಬಂಗಾರ್‌ಹಾಕುವಾರು ಬಂಗಾರ ಹಾಕಿದಾರೆ
ಕಟ್ಟಿಗೊಪ್ಪಿದ ಮೆಟ್ಲ ಕಟ್ಟೀದುರಾಲೆ
ಕಟ್ಟಿಗೊಪ್ಪಿದ ಕೆರಿಯ ತೋಡೀದುರಾಲೆ
ಕೂಟಾದ ಕಟ್ಟೀಯ ಕಟ್ಯಾದು ಮ್ಯಾಲೆ
ಕೇಳ್ಯಯ್ಯ ಕೇಳಿ ನಾರಾಯ್ಣ ಸ್ವಾಮಿ
ಕೂಟಾದ ಕಟ್ಟೀಯ ಕಟ್ಯಾದ ಮ್ಯಾಲೆ
ಲಗ ಕಂಡುರಯ್ಯ ಸ್ವಾಮಿಯೆಲವ್ರು

ಕೂಟಾದ ಕಟ್ಟೀನ ನೋಡುತಿರುವಾರು
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಕೇಳ್ಯಯ್ಯ ಕೇಳಿ ವಡ್ಡಾರೆ ನೀವು
ನಿಮ ಕೆಲುಸಕೆ ನಾ ಮೆಚ್ಚಿದೇನೆ
ಹೊನ್ನಾನು ಕೊಟ್ಟು ಬಣ್ಣಾನೆಡುವಾರು
ಊಟನ್ನೆ ಕೊಟ್ಟು ಉಪಚಾರ್ ಆಡುವರು
ಲಗ ಕಂಡುರಯ್ಯ ವಡ್ಡಾರೆಲವ್ರು
ತಮ ತಮ್ಮ ಊರೀಗೆ ತಾವು ಹೋಗುವಾರು
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಇಲು ಬಾರೊ ಇಲ್ಲು ಕೂಟುದಧಿಕಾರ
ಬರುಸಾನುಬಯ್ಯಾನ ಮನಿಗ್ಹೋಗುಬೇಕೆ
ದೇವ್‌ದಿಕ್ಕಿಗೆಲ್ಲ ವಾಲಿ ಬರಿಸಯ್ಯ ನೀನು
ಕೀಳೇಳಿ ಕೂಟಾಕೆ ನೀವ್ ಬರಬೇಕು
ಹಾಗಂದೆ ವಾಲೀಯ ಬರಿಸಯ್ಯ ನೀನು
ಅಕ್ಕಾಲಿ ಎಂದ ಕೂಟುದಧಿಕಾರ
ಸ್ವಾಮೀಗೆ ಕೈಯ್ನ ಮುಗಿದಾನೆಲಂವ
ಭೂಮಿಗೆ ತಲಿನ ಎರುಗೀದನೆಲಂವ
ಬರುಸ್ಯಾನುಬಯ್ಯಾನ ಮನೆಗ್ಹೋದುನಾಲೆ
ಲಗ ಕಂಡುನಯ್ಯ ಬರುಸ್ಯಾನುಬಯ್ಯ
ಕೇಳ್ಯಯ್ಯ ಕೇಳು ಕೂಟುದಧಿಕಾರ
ಹಗ್ಗೀನ ಹೋಕೀಗೆ ಏನು ಬಂದೆ ನೀನು?
ಬ್ಯಾಸೀಗಿ ಮೊದಲೀಗೆ ಏನು ಬಂದೆ ನೀನು?
ಕೇಳ್ಯಯ್ಯ ಕೇಳು ಬರುಸ್ಯಾನಬಯ್ಯ
ದೇವ್‌ದಿಕ್ಕಿಗ್ ವಾಲೀಯ ಬರಿಯಯ್ಯ ನೀನು
ಕೀಳೇಳಿ ಕೂಟಾವ ನಾವ್ ಕೂಡಬೇಕು
ಹಾಗಂದೆ ವಾಲಿಯ ಬರಿಯಯ್ಯ ನೀನು
ಲಗ ಕಂಡುನಯ್ಯ ಬರುಸ್ಯಾನುಬಯ್ಯ
ಹಾಗಂದೆ ವಾಲಿಯ ಬರೆದಾನೆಲಂವ
ವಾಲ್ಯೆಂಬುದೆಲ್ಲ ಬರುದಾದುವಯ್ಯ

ಲಗ ಕಂಡುನಯ್ಯ ಕೂಟುದಧಿಕಾರಿ
ಬರಿದಂಥ ವಾಲಿಯ ತೆಗ್ದುಕೊಂಡುನಾಲೆ
ನಾಲೂಕು ತೊರಿಗಾಗಿ ಹೋದಾನೆಲಂವ
ವಾಲ್ಯಂಬುದೆಲ್ಲ ಕೊಡುತಿದ್ದುನಾಲೆ
ಮೇಲೇಳಿ ಲೋಕಕೆ ಹೋದಾನೆಲಂವ
ದೇವ್‌ದಿಕ್ಕಿಗೆಲ್ಲ ವಾಲಿಯ ಕೊಡುತಿದ್ದುನಾಲೆ
ಕೀಳೇಳಿ ಲೋಕಕೆ ಬಂದಾನೆಲಂವ
ದೇವ್‌ದಿಕ್ಕಿಗೆಲ್ಲ ವಾಲಿಯ ಕೊಡುತಿದ್ದುನಾಲೆ
ಈ ವಾಲಿಯಾನ ಕಂಡುಗಳ್ಗಿಯಲ್ಲೆ
ಕೂಟಾದು ರಾಶೀಗೆ ನೀವ್ ಬರುಬೇಕು
ವಾಲ್ಯೆಂಬುದೆಲ್ಲ ಕೊಡುತಿದ್ದುನಾಲೆ
ನಾಲೂಕು ತೊರಿಗೆ ಕೊಟ್ಟಾನೆಲಂವ
ಸ್ವಾಮೀಯ ಬಳಿಗಾಗಿ ಬಂದಾನೆಲಂವ
ಸ್ವಾಮೀಗೆ ಕೈಯ್ನ ಮುಗಿದಾನೆಲಂವ
ಸ್ವಾಮೀಗೆ ವಾಲೀಯ ಕೊಟ್ಟೀದುನಾಲೆ
ದೇವ್‌ದಿಕ್ಕಿಗ್ ವಾಲೀಯ ಕೊಟುಬಂದುನಾಲೆ
ಕೀಳೇಳಿ ಕೂಟ ನಾವ್ ಕೂಡುಬೇಕೆ
ನಾಲೋಕು ತೊರಿಯ ವಡ್ಡಾರೆಲವ್ರು
ಕೀಳೇಳಿ ಕೂಟಾಕೆ ಬಂದಾರೆಲವ್ರು
ಹೊನ್ನರಳಿ ಕಟ್ಯೇಲಿ ಕೂಟ ಕೂಡುವಾರು
ಅಸವಂತ ಕಟ್ಯೇಲಿ ಕೂಟ ಕೂಡುವಾರು
ಮಾನ್ಯಾರಿಗೆಲ್ಲ ಮಾವೀನ ಕಟ್ಟೆ
ಅರ್ರುಸಗಳಿಗೆಲ್ಲ ಹೆಲಸೀನ ಕಟ್ಟೆ
ದೇವ್‌ದಿಕ್ಕಿಗೆಲ್ಲ ಅರಳೀಯ ಕಟ್ಟೆ
ದೇವ್ ಕೂಟಾನಾದರೂ ಕೂಡಿದ್ರು ಸ್ವಾಮಿ
ಲಗ ಕಂಡುಳಯ್ಯ ಶಿವುಭಾಮೆ ತಾನು
ಕೂಟಾದ ರಾಶಿಗೆ ಬಂದಾಳೆಳವ್ವ
ಇಲು ಬಾರೊ ಇಲ್ಲು ಕೂಟುದಧಿಕಾರ
ಕೂಟಾದು ರಾಶಿ ಹೊಕ್ಕು ನೋಡುಬೇಕೆ

ಅಕ್ಕಾಲಿ ಎಂದ ಕೂಟುದಧಿಕಾರ
ಕೂಟಾದ ರಾಶಿಗೆ ಬಂದು ನಿಲ್ಲುವಾನು
ಸ್ವಾಮೀಗೆ ಕೈಯ್ನ ಮುಗಿದಾನೆಲಂವ
ಎಡಕ್ಹೋಗಿ ಬಲುಕೆ ಬಂದು ನಿಲ್ಲುವಾನೆ
ಕೂಟಾದು ರಾಶಿ ಹೊಕ್ಕು ನೋಡುವಾನು
ಕೂಟಾದು ರಾಶೀಯ ತಿರಿಗ್ಯಾಡುವಾನು
ಮತ್ತೆಲ್ಲ ಆದಾರು ಬಂದೀರು ಸ್ವಾಮಿ
ಕೊಟೆಸೂರದಲ್ಲೆ ಕೋಟ್ಲಿಂಗ ಒಡಿಯ
ಅವ್ರಾದುರೀಗ ಬರುಲಿಲ್ಲಯಾಲೆ
ನಾಲೂಕು ತೊರಿಯ ದೇವ್‌ದಿಕ್ಕುಳೆಲ್ಲ
ಕೂಟಾದು ರಾಶಿಗೆ ಬಂದೀರು ನೋಡಿ
ಕೊಟೆಸೂರದಲ್ಲೆ ಕೋಟ್ಲಿಂಗ ಒಡಿಯ
ಅವ್ರಾದುರೀಗ ಬರುಲಿಲ್ಲಿಯಾಲೆ
ಅವ್ರ್ ಬಾರದಿದ್ದಾರೆ ಆಟ್ ಇಲ್ಲಿಯಾಲೆ
ಅವ್ರ್ ಬಾರದಿದ್ದಾರೆ ಕೂಟ್ ಇಲ್ಲಿಯಾಲೆ
ಕೂಡೀದ ಕೂಟ ಒಲುವಿಲ್ಲಿಯಾಲೆ
ಆಡೀದ ಮಾತು ಸರಿ ಬರುಲಿಲ್ಲಿಯಾಲೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಕೊಟೆಸೂರ ಸ್ವಾಮಿಗೆ ವಾಲಿ ಬರಿದಾರೆ
ಕೂಟಾದು ರಾಶಿಗೆ ನೀವ್ ಬರುಬೇಕೆ
ಕೂಟಾದು ರಾಶಿಗೆ ನೀವ್ ಬಾರದಿದ್ರೆ
ಅಟ್ಟ್ಯಾಣದ್ಹಾಗೆ ಕಟ್ಟ್ಯಾಣದ್ವಾಲೆ ನಾವ್ ಬರಿತೇವೆ
ಹಾಗಂದೆ ವಾಲೀಯ ಬರೆದಾರೆಲವ್ರು
ಕೊಟೆಸೂರು ಸ್ವಾಮೀಗೆ ವಾಲಿ ಹೋದುವಾದೆ
ಲಗ ಕಂಡುರಯ್ಯ ಕೊಟೆಸೂರು ಸ್ವಾಮಿ
ಕೀಳೇಳಿ ಕೂಟಾಕೆ ಬಂದಾರೆಲವ್ರು
ಕೂಟಾದ ರಾಶೀಗೆ ಬಂದಾರೆಲವ್ರು
ಕೂಡೀದ ಕೂಟ ಒಲುವಾಯಿತಾಲೆ
ಆಡೀದ ಮಾತು ಸರಿ ಬಂದುವಾಲೆ

ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಕಿಸ್ಕಂಗೆ ಶಿವುಭಾಮೆ ನಗುತಾಳೆ ನೋಡಿ
ಕೊಟೆಸೂರು ಸ್ವಾಮಿ ನನಗಂದುಳಾಲೆ
ಚುಳ್ಳೀಯ ಹೂಗ ನಿನಗಕ್ಕ ಭಾಮೆ
ಚುಳ್ಳೀಯ ಹೂಗ ಬ್ಯಾಡಂದುಳಾಲೆ
ಸಂಪಿಗೆ ಹೂಗ ನಿನಗಕ್ಕ ಭಾಮೆ
ಸಂಪಿಗೆ ಹೂಗ ಬ್ಯಾಡಂದುಳಾಲೆ
ಇನ್ನ್ಯಾವ ಹೂಗ ನಿನಗಕ್ಕ ಭಾಮೆ
ಮತ್ತ್ಯೆಲ್ಲ ಹೂಗ ಬ್ಯಾಡಂದುಳಾಲೆ
ನರಮನಸ್ರ್ ಕಾಣಾದ ಹೂಗಾಗುಬೇಕೆ
ಅತ್ತೀಯ ಹೂಗ ನಿನಗಕ್ಕ ಭಾಮೆ
ಅತ್ತೀಯ ಹೂಗ್ ಅಕ್ಕಂದುಳಾಲೆ
ಅತ್ತೀಯ ಹೂಗ್ ಕೊಯ್ದ್ ತಂದುರಾಲೆ
ಸ್ವಾಮಿಗೂ ಭಾಮೆಗೂ ಧಾರಿಯಾದುವಾಲೆ
ಕೂಟಾದ ರಾಶಿ ಹಿರಿದಾವೆ ನೋಡಿ
ಲಗ ಕಂಡುರಯ್ಯ ಕೊಟೆಸೂರ ಸ್ವಾಮಿ
ತಮ್ಮಾರಮನಿಗಾಗಿ ತಾವ್ ಬರುವಾರು
ಸ್ವಾಮಿ ಭಾಮೆ ಬಂದಾರೆ ನೋಡಿ
ಲಗ ಕಂಡುರಯ್ಯ ಕೊಟೆಸೂರ ಸ್ವಾಮಿ
ಕೂಟಕೆ ಹೋಗಿ ಮೈ ಮಾಸಿದಾವೆ
ಗಂಗೇ ಸಾನ ನಾವ್ ಮಾಡುಬೇಕೆ
ಕೂಟಾಕೆ ಹೋಗಿ ಮಡಿ ಮಾಸಿದಾವೆ
ಶಿವುಗಂಗೆ ಸಾನ ನಾವ್ ಮಾಡುಬೇಕೆ
ಯಾರಮ್ಮ ನೀವು ಗೌಡ್ಯೇರು ನೀವು
ಯಾರಮ್ಮ ನೀವು ತೊತ್ತ್ಯೇರೆ ನೀವು
ಲಗ ಕಂಡುಳಯ್ಯ ಶಿವುಭಾಮೆ ತಾನು
ಗೌಡ್ಯೇರು ತೊತ್ತ್ಯೇರ್ನ ಕರೆದಾರೆಲವ್ರು
ಗೌಡ್ಯೇರು ತೊತ್ತ್ಯೇರು ಬಂದಾರೆಲವ್ರು
ಹನ್ನೆಯ್ಡು ಹಾಡ ಹಳಿ ಎಣ್ಣಿಯಾಲೆ

ಹನ್ನೆಯ್ಡು ಜೀನಾಸು ತರ್ಸಿಕೊಂಡುರಾಲೆ
ಲಗ ಕಂಡುರಯ್ಯ ಕೊಟೆಸೂರು ಸ್ವಾಮಿ
ಗಂಗೇ ಸಾನಾವ ನಾವ್ ಮಾಡುಬೇಕೆ
ಹೊನ್ನ ತೇಜಿ ಏರೀದುರಾಲೆ
ಹೊನ್‌ಹೊಸ್ತಲೆಂಬಾದು ತಲಿತಾಡಿದಾವೆ
ಇದು ಏನು ಚೋಜೀಗ ಅಂದ್ಹೇಳುವಾರು
ಇದು ಏನು ಮಾಯಾತ ಅಂದ್ಹೇಳುವಾರು
ಹಿರಿಯಾರು ಕಟ್ಟೀದ ಹೊನ್ನ್ ಹೊಸ್ತುಲಉ
ಅದರಿಂದಲಾದು ತಲಿತಾಡಿದಾವೆ
ಬಾಗೀಲಿನಾರು ದಾಟೀದುರಾಲೆ
ಮನಿ ಮುಂದಿನ ಮಲಗೆದ್ದಿ ಬಂದು ನಿಲುವಾರು
ಮನಿ ಮುಂದಿನ್ ಅಸುವಂತ ಬೆರುಬೆರ್ಸಿಬಿದ್ದೊ
ಇದು ಏನು ಚೋಜೀಗ ಅಂದ್ಹೇಳುವಾರು
ಇದು ಏನು ಮಾಯಾತ ಅಂದ್ಹೇಳುವಾರು
ಬಾಳಾ ಕಾಲಾದು ಅಸುವಂತ ಮರ
ಅದರಿಂದಲಾದು ಬೆರುಬೆರ್ಸಿ ಬಿದ್ದೊ
ಹೊನತೇಜಿ ಎಂಬಾದು ದೊಗಲಾಕುವಾದೆ
ಇದು ಏನು ಚೋಜೀಗ ಅಂದ್ಹೇಳುವಾರು
ಸೊಕ್ಕೀದ ತೇಜಿ ದೊಗಲಾಕುವಾದೊ
ಹೊನ್ನಳ್ಳಿಗಾಗಿ ನಡೆದಾರೆ ಸ್ವಾಮಿ
ಲಗ ಕಂಡುರಯ್ಯ ಕೊಟೆಸೂರು ಸ್ವಾಮಿ
ಗಂಗೆ ಎಂಬಾಳು ಕಂಡಾಳೆಲವ್ವು
ಸ್ವಾಮೀಯನಾದಾರು ಮೆಚ್ಚೀದುಳಾಲೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಹೊನ್ನರಳಿ ಎಲೀನಾ ತೆರೀದಾರೆಲವ್ರು
ಹೊನು ದೋಣಿ ಹೊನು ತೊಲಿ ಮಾಡೀದುರಾಲೆ
ಮಾಯ್ದ್ ಅಂಬಿಗಾರಾನ ಕರೆಸೀದುರಾಲೆ
ಹೊನು ದೋಣಿ ಹೊನು ತೊಲಿ ಕೊಟ್ಟಾರೆಲವ್ರು
ಕೇಳ್ಯಯ್ಯ ಕೇಳು ಮಾಯ್ದ್ ಅಂಬಿಗಾರ

ಹೊನು ದೋಣಿ ಹೊನು ತೊಲಿ ಸಂಗ್ಡ ಕಟ್ಟಯ್ಯ ನೀನು
ಅಕ್ಕಾಲಿ ಎಂದ ಮಾಯ್ದ್ ಅಂಬಿಗಾರ
ಹೊನು ದೋಣಿ ಹೊನು ತೊಲಿ ಸಂಗ್ಡ ಕಟ್ಟೀದುನಾಲೆ
ಹೊನು ದೋಣಿಯಲ್ಲೆ ಮುರುತಾದುರಾಲೆ
ಗೌಡ್ಯೇರು ತೊತ್ತ್ಯೇರು ಕೂತಾರೆಲವ್ರು
ಲಗ ಕಂಡುರಯ್ಯ ಕೊಟೆಸೂರ ಸ್ವಾಮಿ
ಹೊನ್ನಳ್ಳಿಗಾಗಿ ದೋಣಿ ತೆಗಿ ನೀನು
ಲಗ ಕಂಡುನಯ್ಯ ಮಾಯ್ದ್ ಅಂಬಿಗಾರ
ಹೊನ್ನಳ್ಳಿಗಾಗಿ ದೋಣಿ ತೆಗಿದಾನು
ಕೇಳ್ಯಯ್ಯ ಕೇಳಿ ಗೌಡ್ಯೇರೆ ನೀವು
ಕೇಳ್ಯಯ್ಯ ಕೇಳಿ ತೊತ್ತ್ಯೇರೆ ನೀವು
ಹನ್ನೆಯ್ಡು ಜಿಡಿಗೆಣ್ಣಿ ಬಿಡುಬೇಕು ನೀವು
ಹನ್ನೆಯ್ಡು ಜಿಡಿಗ್ ಸೀಕಾಯ್ ಹಾಕಾಲು ಬೇಕು
ಲಗ ಕಂಡುರಯ್ಯ ಗೌಡ್ಯೇರೆಲವ್ರು
ಲಗ ಕಂಡುರಯ್ಯ ತೊತ್ತ್ಯೇರೆಲವ್ರು
ಹನ್ನೆಯ್ಡು ಜಿಡಿಗ್ ಎಣ್ಣಿ ಬಿಟ್ಟಾರೆಲವ್ರು
ಹನ್ನೆಯ್ಡು ಜಿಡಿಗ್ ಸೀಕಾಯ್ ಹಾಕೀದರವ್ರು
ಲಗ ಕಂಡುರಯ್ಯ ಕೊಟೆಸೂರು ಸ್ವಾಮಿ
ಗಂಗೇ ಸಾನ ಮಾಡೀದುರಾಲೆ
ಶಿವುಗಂಗೆ ಸಾನ ಮಾಡೀದುರಾಲೆ
ಗಂಗೇ ಸಾನ ಆಗ್ಯಾದು ಮ್ಯಾಲೆ
ಜಿಡಿಲೆಕ್ಕ ಸ್ವಾಮಿ ಮಾಡುತಿರುವಾರು
ಮತ್ತೆಲ್ಲ ಜಿಡಿಗಳು ಬಂದಾವೆ ನೋಡಿ
ಹಲುಜಿಡಿಗಳು ಬರುಲಿಲ್ಲಿಯಾಲೆ
ಕೇಳ್ಯಯ್ಯ ಕೇಳು ಹೊಳಿಯಂಬಿಗಾರ
ಕೇಳ್ಯಯ್ಯ ಕೇಳು ಮಾಯ್ದ್ ಅಂಬಿಗಾರ
ಜಿಡಿಹಿಡಿದೆ ನೀನು ಕೇಳ್ಗ್ ಹೋಗುಬೇಕು
ಹಲು ಜಿಡಿ ಹೋಕಾನು ನೀನ್ ಕಾಣುಬೇಕು
ಅಕ್ಕಾಲಿ ಎಂದ ಮಾಯ್ದ್ ಅಂಬಿಗಾರ

ಜಿಡಿ ಹಿಡಿದೆಲಂವ ಕೆಳ್ಗ್ ಹೋದುನಾಲೆ
ಹೊನ್ನಳ್ಳಿಯಲ್ಲೆ ಹೋಯ್ ಕಂತುವಾನು
ಜಿಡಿ ಒಳ್ಗೆ ಗಂಗೆ ಅಡುಗೀದುಳಾಲೆ
ಕೇಳ್ಯಯ್ಯ ಕೇಳು ಶಿವುಗಂಗೆ ನೀನು
ಸ್ವಾಮಿ ಜಿಡಿಯನು ಬಿಡುಬೇಕು ನೀನು
ಸ್ವಾಮೀಯ ಮೆಚ್ಚಿ ನಾ ಹಿಡಿದೇನು
ಸ್ವಾಮೀಯ ಜಿಡಿಯ ಬಿಡುದಿಲ್ಲೆ ನಾನು
ಸ್ವಾಮೀಯ ಜಿಡಿ ಒಳ್ಗೆ ಅಡುಗೀದುಳ್ ಗಂಗೆ
ಹಲು ಜಿಡಿಗಾಳ ತಂದಾನೆಲಂವ
ಹೊನು ದೋಣಿ ಹೊನು ತೊಲಿ ಸಂಗ್ಡ ಹತ್ತೀದುರವ್ರು
ಬ್ಯಾಲೀಯ ತಡಿಗಾಗಿ ಬಂದಾರೆಲವ್ರು
ಲಗ ಕಂಡುರಯ್ಯ ಕೊಟೆಸೂರು ಸ್ವಾಮಿ
ಕೇಳ್ಯಯ್ಯ ಕೇಳು ಶಿವುಗಂಗೆ ನೀನು
ನನ ಜಿಡಿಯಾದರು ಬಿಡುಬೇಕು ನೀನು
ಏನ್ಹೇಳಿದಾರು ಕೇಳಾಲು ಇಲ್ಲೆ
ಎಂತ್ಹೇಳಿದಾರು ಕೇಳಾಲು ಇಲ್ಲೆ
ಲಗ ಕಂಡುಳಯ್ಯ ಶಿವುಗಂಗೆ ಇವ್ಳು
ಲಗ ಕಂಡುರಯ್ಯ ಕೊಟೆಸೂರು ಸ್ವಾಮಿ
ಗಬ್ಬಿ ಗಗಣಾದ ಶಿವುಭಾವೆ ಅವ್ಳು
ನಿನ್ನೊಡ್ಡುವಾಳು ನನ ಬಯ್ಯುವಾಳೊ
ಚಕ್ಕಾಣ್ದಿ ಕಾಲಲ್ಲೆ ತೊಳುವಾಳು ನಿನ್ನ
ಹಿಡಿಕಟ್ಟಿನಲ್ಲೆ ಹೊಡುವಾಳು ನಿನ್ನ
ನಿನ್ನೊಡ್ಡುವಾಳು ನನ ಬಯ್ಯುವಳೊ
ನನ ಜಿಡಿಯಾದಾರು ಬಿಡುಬೇಕು ನೀನು
ಲಗ ಕಂಡುರಯ್ಯ ಕೊಡೆಸೂರು ಸ್ವಾಮಿ
ಏನ್ಹೇಳಿದಾರು ಕೇಳಾಲು ಇಲ್ಲೆ
ಎಂತ್ಹೇಳಿದಾರು ಕೇಳಾಲು ಇಲ್ಲೆ
ಲಗ ಕಂಡುಳಯ್ಯ ಶಿವುಗಂಗೆ ತಾನು
ಭಾಮೆಗೆ ಸಪನಾ ಬಿದ್ದಾವೆ ನೋಡಿ

ಏನಂದು ಸಪನಾ ಬಿದ್ದಾವೆ ನೋಡಿ
ಎಂತಂದು ಸಪನಾ ಬಿದ್ದಾವೆ ನೋಡಿ
ಸ್ವಾಮೀಯ ಜಿಡಿಒಳ್ಗೆ ಗಂಗೆ ಅಡ್ಗಿದಾಳೆ
ಹಾಂಗಂದೆ ಸಪನಾ ಬಿದ್ದಾವೆ ನೋಡೆ
ಲಗ ಕಂಡುರಯ್ಯ ಕೊಟೆಸೂರು ಸ್ವಮಿ
ಹೊನ್ನಾರಮನಿಗಾಗಿ ಬಂದಾರೆಲವ್ರು
ದಾರಿ ಕೂಡಿಯವ್ರು ಬರುತೀರುವಾರು
ಹೊನ್ನೂಜಿನುದಕ ಅನುಮಾಡುವಾಳು
ಮಣ್ಣೂಜಿನುದಕ ಅನುಮಾಡುವಾಳು
ಲಗ ಕಂಡುಳಯ್ಯ ಶಿವುಭಾಮೆಯವ್ವು
ಹೊನ್ನಾರ ಮನಿಗಾಗಿ ಬಂದಾರೆ ಸ್ವಾಮಿ
ಲಗ ಕಂಡುಳಯ್ಯ ಶಿವುಭಾಮೆ ತಾನು
ಹೊನ್ನೂಜಿನುದುಕ್ದಲಿ ಪಾದ ತೊಳುವಾಳು
ಮಣ್ಣೂಜಿನುದುಕ ಯಾರಿಗೆ ಭಾಮೆ
ನಿಮ್ಹೆಣುತೀಗೆ ನನ್ ಸವುತಿಗಾಲೆ
ಹೊನ್ನೂಜಿನುದುಕ ನಿಮ ಪಾದುಕಾಲೆ
ಮಣ್ಣೂಜಿನುದುಕ ನನ ಸವುತಿಗಾಲೆ
ಲಗ ಕಂಡುರಯ್ಯ ಕೋಟೆಸೂರು ಸ್ವಾಮಿ
ಹೊನ್ನಾರಮನಿಗಾಗಿ ಬಂದಾರೆಲವ್ರು
ಲಗ ಕಂಡುಳಯ್ಯ ಶಿವುಭಾಮೆ ತಾನು
ಗೌಡ್ಯೇರು ತೊತ್ತ್ಯೇರ್ನ ಕರೆದಾಳೆಲವ್ವು
ಇಲು ಬನ್ನಿ ಇಲ್ಲೆ ಗೌಡ್ಯೇರು ನೀವು
ಇಲು ಬನ್ನಿ ಇಲ್ಲೆ ತೊತ್ಯೇರು ನೀವು
ಗೌಡ್ಯೇರು ತೊತ್ತ್ಯೇರು ಬಂದಾರೆಲವ್ರು
ಗಿಣ್ಣಾಲಿ ಎಣ್ಣೆ ಅನು ಮಾಡಿ ಮಕ್ಕೆ
ಬಣ್ಣಾದ ಬಾಚಣ್ಗಿ ಅನು ಮಾಡಿ ಮಕ್ಕೆ
ಚಿನ್ನಾದ ಚೀರಣ್ಗಿ ಅನು ಮಾಡಿ ಮಕ್ಕೆ
ಕದುರೀಯ ಕಾಲುಮಣಿ ಅನು ಮಾಡಿ ಮಕ್ಕೆ
ಕೇಳ್ಯಯ್ಯ ಕೇಳಿ ಕೊಟೆಸೂರು ಸ್ವಾಮಿ

ಹನ್ನೆಯ್ದು ಜಿಡಿಗೆಣ್ಣೆ ನಾ ಬಿಡುತೇನೆ
ಹನ್ನೆಯ್ದು ಜಿಡಿಯಾನು ನಾ ಸೆಳಿತೇನೆ
ಲಗ ಕಂಡುರಯ್ಯ ಕೊಟೆಸೂರ ಸ್ವಾಮಿ
ಕದುರೀಯ ಕಾಲುಮಣಿಗ್ಯೋಯ್ ಕೂತುರಾಲ್
ಲಗ ಕಂಡುಳಯ್ಯ ಶಿವುಭಾಮೆ ತಾನು
ಹನ್ನೆಯ್ದು ಜಿಡಿಯಾನು ಬಿಟ್ಟಾಳೆ ಅವ್ವು
ಹನ್ನೆಯ್ದು ಜಿಡಿಗಾಳ ಸೆಳಿದಾಳೆ ಅವ್ವು
ಮತ್ತೆಲ್ಲ ಜಿಡಿಗಾಳ ಸೆಳಿದಾಳೆ ಅವ್ವು
ಹಲು ಜಿಡಿಗಾಳ ಸೆಳಿಲಿಲ್ಲಿಯಾಲೆ
ಲಗ ಕಂಡುಳಯ್ಯ ಶಿವುಭಾಮೆ ತಾನು
ಹಲು ಜಿಡಿಗೆಣ್ಣೆ ಬಿಡುತಿದ್ದುಳಾಲೆ
ಹಲುಜಿಡಿಗಾಳ ಸೆಳಿದಾಳೆ ಅವ್ವು
ಹಣ್ ಅಡ್ಕಿಯಾಗಿ ಬಿದ್ದಾಳೆ ಗಂಗೆ
ಲಗ ಕಂಡುಳಯ್ಯ ಶಿವುಭಾಮೆ ಗಂಗೆ
ಏನು ಮಕ್ಕೆ ನೀವು ಗೌಡ್ಯೇರೆ ನೀವು
ಏನು ಮಕ್ಕೆ ನೀವು ತೊತ್ಯೇರೆ ನೀವು
ಮೆಟ್ಟುಕತ್ತಿಮಣಿಯ ತನಿ ಮಕ್ಕೆ ನೀವು
ಹಣ್ ಅಡ್ಕಿಯಾನು ಒಡ್ದು ತಿಂಬುವಾಲೆ
ಗೌಡ್ಯೇರು ತೊತ್ತ್ಯೇರು ತಂದಾರೆಲವ್ರು
ಹಣ್ ಅಡ್ಕಿಯಾನ ಒಡಿದಾರೆಲವ್ರು
ಲಗ ಕಂಡುಳಯ್ಯ ಶಿವುಭಾಮೆ ತಾನು
ಹಲು ಜಿಡಿಗೆಣ್ಣೆ ಬಿಟ್ಟಾಳೆ ನೋಡಿ
ಆ ಜಿಡಿಗಾಳ ಸೆಳಿದಾಳೆ ಅವ್ವು
ಬಣ್ಣಾದ ಬಾಚಣ್ಗಿ ಬಾಚೀದಲವ್ವು
ಚಿನ್ನಾದ ಚೀರಣ್ಗಿ ಸೆಳಿದಾಳೆಲವ್ವು
ಲಿಂಬೀ ಹಣ್ಣಾಗಿ ಬಿದ್ದಾಳೆ ಗಂಗೆ
ಏನು ಮಕ್ಕೆ ನೀವು ಗೌಡ್ಯೇರು ನೀವು
ಲಿಂಬಿಯ ಹಣ್ಣಾನು ಕಡಿರಯ್ಯ ನೀವು
ಲಗ ಕಂಡುಳಯ್ಯ ಶಿವುಗಂಗೆ ತಾನು

ತನ್ನಿಂದೆ ತಾನೆ ಎದ್ದಾಳು ಗಂಗೆ
ಕೇಳಕ್ಕ ಕೇಳು ಶಿವುಭಾಮೆ ನೀನು
ಒಬ್ರ್ ಹಾಕು ಚಿನ್ನ ಇಬ್ರ್ ಹಾಕುವಕ್ಕ
ಒಬ್ರ್ ಉಡು ಸೀರಿ ಇಬ್ರ್ ಉಡುವಕ್ಕ
ಒಂದಿನುದ ಎಂಜಾಲ ನೀ ತೆಗಿಯಕ್ಕ
ಒಂದಿನುದ ಎಂಜಾಲ ನಾ ತೆಗಿತೇನೆ
ಹೋರಿಪ್ಪುವಕ್ಕ ಸರಿಬಾಳುವಾಲೆ
ಒಂದಿನುದ ಹಾಸೀಗಿ ನೀ ಹಾಸುವಕ್ಕ
ಒಂದಿನುದ ಹಾಸಿಗಿ ನೀ ಹಾಸುತೇನೆ
ಹೋರಿಪ್ಪುವಕ್ಕ ಸರಿಬಾಳುವಾಲೆ
ಲಗ ಕಂಡುಳಯ್ಯ ಶಿವುಗಂಗೆ ತಾನು
ಲಗ ಕಂಡುಳಯ್ಯ ಶಿವುಭಾಮೆ ತಾನು
ಚಕ್ಕಾಣ್ದ ಕಾಲಲ್ಲಿ ತೊಳುಕ್ ಹೋದುಳವ್ವು
ಹಿಡಿಕಟ್ಟಿನಲ್ಲಿ ಹೊಡುಕ್ ಹೋದುಳವ್ವು
ಗಂಗೀಗೆ ಸಿಟ್ಟು ಬಂದಾವೆ ನೋಡೆ
ಕೇಳಕ್ಕ ಕೇಳು ಶಿವುಭಾಮೆ ನೀನು
ನಿನ್ನ್ ಹೊಲಿ ನಿನ್ನ ಕೈಲಿ ತೊಳಿಸ್ತೇನೆ ನೋಡೆ
ಸಿಟ್ಟಿಂದ ಶಿವುಗಂಗೆ ಇಳಿದಾಳೆ ನೋಡೆ
ಅರೇ ಕಣ್ಣಾನು ಕಡುಸೀದುಳಾಲೆ
ಅನುಪಿನ ಕಣ್ಣಾನು ಕಡುಸೀದುಳಾಲೆ
ಗಂಗೆ ಪಾತಾಳಕ್ಕಿಳಿದಾಳೆ ನೋಡೆ
ಲಗ ಕಂಡುಳಯ್ಯ ಶಿವುಭಾಮೆ ತಾನು
ಶಿವುಭಾಮೆಗ್ ಮುಟ್ಟೆ ಬಂದಾವೆ ನೋಡೆ
ಕಣ್ಣಲ್ಲಿ ಕಾಂಬಲ್ಲಿ ನೀರಿಲ್ಲಿಯಾಲೆ
ಕೈಯಲ್ಲಿ ಮುಟ್ಟಾಲು ನೀರಿಲ್ಲಿಯಾಲೆ
ಬಡ ಸೌಂದ್ರುದಲ್ಲಿ ನೀರಿಲ್ಲಿಯಾಲೆ
ನಾಲೂಕು ಅಳಿವ್ಯಲ್ಲಿ ನೀರಿಲ್ಲಿಯಾಲೆ
ಹಕ್ಕಿ ಪಕ್ಕಿ ಕುಡುವಲ್ಲಿ ನೀರಿಲ್ಲಿಯಾಲೆ
ಲಗ ಕಂಡುಳಯ್ಯ ಶಿವುಭಾಮೆ ತಾನು

ಹನ್ನೆಯ್ದು ದಾವಾಣಿ ಎಮ್ಮಿ ಕೊಂಡುಳಾಲೆ
ಹಾಲು ಕರ್ದು ಕೊಪ್ಪರ್ಗಿಗ್ ಹೊಯ್ದಾಳೆಲವ್ವ
ಹಾಲಲ್ಲಿ ಭಾಮೆ ಮಿಂದ್ ಒಗಿದಾಳು
ಲಗ ಕಂಡುಳಯ್ಯ ಶಿವುಭಾಮೆ ತಾನು
ಲಗ ಕಂಡುರಯ್ಯ ಕೊಟೆಸೂರು ಸ್ವಾಮಿ
ನನ್ನಾರಮನಿಗಾಗಿ ನೀ ಬರುಬೇಡ
ಹಾಲಲ್ಲಿ ನೀನು ಮಿಂದ್ ಒಗಿದಾರೆ
ನನ್ನಾರಮನಿಗಾಗಿ ನೀ ಬರುಬೇಡ
ಲಗ ಕಂಡುಳಯ್ಯ ಶಿವುಭಾಮೆ ತಾಣು
ಅನುಪಣ್ಣನ ಮನಿಗೆ ಹೋದಾಳೆಲವ್ವ
ಕೇಳಣ್ಣ ಕೇಳು ಅನುಪಣ್ಣ ನೀನು
ಸೂಜೀನ ತೋರಾದ ನೀರು ಬಿಡಣ್ಣ
ಲಗ ಕಂಡುನಯ್ಯ ಅನುಪಣ್ಣಲಂವ
ಕೇಳಮ್ಮ ಕೇಳು ಶಿವುಭಾಮೆ ನೀನು
ಸಿಟ್ಟಿಂದ ಶಿವುಗಂಗೆ ಇಳಿದಾಳೆ ನೋಡೆ
ಅನುಪೀನ ಕಣ್ಣಾನು ಕಟ್ಟಿಸೀದುಳಾಲೆ
ನನ್ನೊಡುವಾಳು ನಿನ ಬಯ್ಯುವಾಳು
ಲಗ ಕಂಡುಳಯ್ಯ ಶಿವುಭಾಮೆ ತಾನು
ಆರೇಕಣ್ಣೀನ ಅಜ್ಜಾನ ಮನಿಗೆ ಬಂದಾಳೆಲವ್ವ
ಹಗ್ಗೀನ ಹೋಕೀಗೆ ಏನು ಬಂದೆ ಭಾಮೆ
ಬ್ಯಾಸೀಗಿ ಮೊದಲಲ್ಲಿ ಏನು ಬಂದೆ ಭಾಮೆ
ಕೇಳ್ಯಜ್ಜ ಕೇಳೀ ನಮ್ಮಜ್ಜ ನೀವೆ
ಕೊಳಲ್ ತೋರಾದ ನೀರು ಬಿಡಜ್ಜ
ಕೇಳಮ್ಮ ಕೇಳು ಶಿವುಭಾಮೆ ನೀನು
ಸಿಟ್ಟಿಂದ ಶಿವುಗಂಗೆ ಇಳಿದಾಳೆ ನೋಡಿ
ಸಿಟ್ಟಿಂದ ಶಿವುಗಂಗೆ ನಿತ್ತಾಳೆ ನೋಡಿ
ನನ್ನೊಡುವಾಳು ನನ ಬಯ್ಯುವಾಳು
ಲಗ ಕಂಡುರಯ್ಯ ಕೊಟೆಸೂರು ಸ್ವಾಮಿ
ಸಿರುಬಾಗಿ ನೀನು ಅಡ್ಡು ಬೀಳುಬೇಕೆ

ಗಂಗೀಗೆ ನೀನು ಅಡ್ಡು ಬೀಳುಬೇಕೆ
ಲಗ ಕಂಡುಳಯ್ಯ ಶಿವುಭಾಮೆ ತಾನು
ಹೋರಿಪ್ಪುತಂಗಿ ಸರಿಬಾಳುವಾಲೆ
ಒಬ್ರ್‌ಉಂಬು ಅನ್ನ ಇಬ್ರ್ ಉಂಬುವಾಲೆ
ಹೋರಿಪ್ಪು ತಂಗಿ ಸರಿಬಾಳುವಾಲೆ
ಒಬ್ರ್ ಉಡು ಶ್ಯಾಲಿ ಇಬ್ರ್ ಉಡುವಾಲೆ
ಹೋರಿಪ್ಪುತಂಗಿ ಸರಿಬಾಳುವಾಲೆ
ಒಬ್ರ್ ಹಾಕು ಚಿನ್ನ ಇಬ್ರ್ ಹಾಕುವಾಲೆ
ಹೋರಿಪ್ಪುತಂಗಿ ಸರಿಬಾಳುವಾಲೆ
ಓಬ್ರ್ ಬೆಚ್ಚು ಬಳಿ ಇಬ್ರ್ ಬೆಚ್ಚುವಾಲೆ
ಹೋರಿಪ್ಪುತಂಗಿ ಸರಿಬಾಳುವಾಲೆ
ಸೆರುಗ್ಹಾಕಿ ತಾನು ಅಡ್ಡಬಿದ್ದುಳಾಲೆ
ಸಿಟ್ಟಿಂದ ಶಿವುಗಂಗೆ ಏರೀದುಳಾಲೆ
ಲಗ ಕಂಡುಳಯ್ಯ ಶಿವುಭಾಮೆ ಅವ್ಳು
ನೀರಲ್ಲೆ ಮಡಿನ ಮಾಡೀದುಳಾಲೆ
ನೀರಲ್ಲಿ ಈಗ ಮಿಂದು ಒಗಿದಾಳೆ
ಅಕ್ಕಾ ತಂಗೀ ಒಂದಾದುರಾಲೆ
ಕೂಟಾದ ಹಾಡು ಗಡಿಯಾಗುವಾದೆ.

(ಹೇಳಿದವರು : ಬಚ್ಚಮೇರ)

# ಗಂಗೆ ಸ್ನಾನಕ್ಕೆ ಹೋಗುವ ಹಾಡು

ಕೇಳಮ್ಮ ಕೇಳೊ ಮುಗ್ತಿನು ತಾಯೆ
ನಾಲ್ತೂರು ನೆಲಾನ ಮುಗ್ತಿನು ತಾಯೆ
ಕೇಳಮ್ಮ ಕೇಳೊ ಮುಗ್ತಿನು ತಾಯೆ
ಗಂಗೆ ಸಾನಾಕೆ ನೀನ್ಹೋಗುಬೇಕೆ
ಊರ ಕೂಡೋಳ್ಕಿ ಕೂಡ್ಯೋಗ್ಹುಬೇಕೆ
ನೆಂಟಾರು ಬಂಟಾರು ಕೂಡ್ಯೋಗ್ಹುಬೇಕೆ
ಜಾತಿ ಜನುವೆ ಕೂಡ್ಯೋಗ್ಹುಬೇಕೆ
ತಳ್ನ ಹಾಯ್ಗುಳಿನ ಕೂಡ್ಯೋಗ್ಹುಬೇಕೆ
ಮುಂಡ್ಗಿ ಹಾಯ್ಗುಳಿನ ಕೂಡ್ಯೋಗ್ಹುಬೇಕೆ
ಒಬ್ಬರ್ಯರಾಯನ ಕೂಡ್ಯೋಗ್ಹುಬೇಕೆ
ಕೈ ಹಿಡಿದ ಗಂಡಾನ ಕೂಡ್ಯೋಗ್ಹುಬೇಕೆ
ಹೊಟ್ಟೆಗ್ ಹುಟ್ಟಿದ ಮಕ್ಕಾಳ್ನ ಕೂಡ್ಯೋಗ್ಹುಬೇಕೆ
ನಾಲ್ತೂರು ನೆಲಾನ ನಮ್ಮ ಮುಗ್ತಿನು ತಾಯೆ
ಸುಬುದ ಒಳ್ಳೇದು ತಾಯೆ
ಯಾಳ್ಯೆಲ್ಲ ಸಂದಾವೆ ತಾಯೆ ಗಳುಗಿ ಬಂದಾವೆ
ಆನೆ ಸಿಂಗಾರವಾಗಿ ಅಂಗಳದಲ್ ನಿತ್ತಾವು
ಕುದುರೆ ಸಿಂಗಾರವಾಗಿ ಬೀದಿಯಲ್ ನಿತ್ತಾವು
ಸುಬುದ ಒಳ್ಳೇದು ತಾಯೆ
ಯಾಳ್ಯೆಲ್ಲ ಸಂದಾವು ತಾಯೆ ಗಳುಗಿ ಬಂದಾವು
ಎತ್ತಿದ ಅಗುಳನು ನೀವು ಹತ್ಯೋಗುಬೇಡಿ
ಕಟ್ಟಿದ ತೊಡಿಮೆನು ನೀವು ದಾಟಿಹೋಗುಬೇಡಿ
ತಾನೇರುವಾಳು ಹೊನ್ನ್ ತೇಜಿಯಾನ
ತಾನೇರುವಾಳು ಕನಕದಂಡಿಗ್ಯಾನ
ಗಂಗೆಸಾನಾಕೆ ಹೊಯ್ತಾಳು ದೇವಿ
ಸುಬುದ ಒಳ್ಳೇದು ತಾಯೆ
ಗಂಗಿ ಸಾನಾದ ಈಗ ಮಾಡಿ ಬಂದುಳಾಲೆ

(ಹೇಳಿದವರು : ಬಚ್ಚಮೇರ)

## ಕುದುರೆ ಕೋಲದ ಹಾಡು

ಹಿಂದೆ ಸಾವಿರ ಮಂದಿ ಮುಂದೆ ಸಾವಿರ ಮಂದಿ
ನಡಗೆ ಹಾಯ್ಗುಳಿಯ ಬೆಳಿ ಆನಿ
ನಡಗೆ ಹಾಯ್ಗುಳಿಯ ಬೆಳಿ ಆನಿ ಕೂಡಿಕಂಡ
ಗಂಗೀ ತೀರುತುಕು ನೆಡಿದಾರ
ಹಿಂದೆ ಸಾವಿರ ಮಂದಿ ಮುಂದೆ ಸಾವಿರ ಮಂದಿ
ನಡಗೆ ಗಾಮನ ಬೆಳಿ ಕುದುರಿ
ನಡೆಗೆ ಗಾಮನ ಬೆಳಿ ಕುದುರಿ ಏರಿಕಂಡ
ಗಂಗೀ ಸಾನಾಕು ನೆಡಿದಾರ
ಹಿಂದೆ ಸಾವಿರ ಮಂದಿ ಮುಂದೆ ಸಾವಿರ ಮಂದಿ
ನಡಗೆ ಮುಗ್ತಿನಮ್ಮನ ಮರಿಮಟ್ಟಿ
ನಡಗೆ ಮುಗ್ತಿನಮ್ಮನ ಮರಿಮಟ್ಟಿ ಕೂಡಿಕೊಂಡ
ಗಂಗೀ ಸಾನಾಕು ನೆಡಿದಾರ
ಗಂಗೀ ಸಾನಾಕು ನೆಡಿದಾಳೆ ಹೊನ್ನಿ
ಪಾಂಡಿ ಹೊಳಿಗಾಗಿ ನೆಡಿದಾಳ
ಪಾಂಡಿ ಹೊಳಿಗಾಗಿ ನೆಡಿದಾಳೆ ಹೊನ್ನಿ
ನಿತ್ತು ಯೇಚುನಿಯ ಮಾಡುವಾಳೆ
ನಿತ್ತು ಯೇಚುನಿಯ ಮಾಡ್ವಳ್ ಹೊನ್ನಿ
ಕಣ್ಣಂಗೆ ನೀರ ಸೆಡುವಾಳ
ಕಣ್ಣಂಗೆ ನೀಋು ಸೆಡುವಾಳ ಮ್ಯಾರರ ಹೊನ್ನಿ
ಸುರುಸುರು ಸುಂಬುಳನ ಇಡುವಾಳ
ಸುರುಸುರು ಸುಂಬುಳನ ಇಡುವಾಳೆ ಹೊನ್ನಿ
ಗೆಟ್ಟ ಕಾಡೆಲೆಯ ತೆರಿದಾಳ
ಗೆಟ್ಟ ಕಾಡೆಲೆಯ ತೆರಿದಾಳೆ ಹೊನ್ನಿ

ಚೊಟ್ಟ ಮುರ್ದು ದೋಣಿ ನೆಡುಸ್ವಾಳ
ಚೊಟ್ಟ ಮುರ್ದು ದೋಣಿ ನೆಡುಸ್ವಾಳೆ ಹೊನ್ನಿ
ಬ್ಯಾಲಿಯ ಮರಕೆ ತೊಟ್ಲೆ ಕಟ್ಟಿ
ಬ್ಯಾಲಿಯ ಮರಕೆ ತೊಟ್ಲೆ ಕಟ್ಟಿ ಹೊನ್ನಿ
ಹಾಯ್ಗುಳಿಯಾರು ಕರುವಾಳೆ
ಹಾಯ್ಗುಳಿಯಾರು ಕರುವಾಳೆ ಹೊನ್ನಿ
ಹಾಯ್ಗುಳಿನಾದಾರು ಏನೆಂದು ಕರುವಾಳೆ
ಗಂಗೀ ತೀರುತುವ ಪೂರೈಸಿ
ಗಂಗೀ ತೀರುತುವ ಪೂರೈಸಿ ಮುಗ್ತಿನಮ್ಮ
ಮರಿಮಟ್ಟಿ ಸಾನೊ ಮುಗುತಾಯ
ಮರಿಮಟ್ಟಿ ಸಾನೊ ಮುಗುತಾಯ ಹೊನ್ನಿ
ಬಂದಾಳೆ ತನ್ನ ಗಡಿಗಾಗಿ

(ಹೇಳಿದವರು : ಶ್ರೀಮತಿ ಬುಡ್ಡು)

## ರಣಸಿರಿದೇವಿ

ಹೊಯ ಹೊಯ್ಯುವಂಗೆ ಮೆಲು ಮೆಲು ಗಿನ್ನಾ
ಹೊಯ ಹೊಯ್ಯುವಂಗೆ ಮೆಲು ಮೆಲು ಗಿನ್ನಾ
ಮೇಲೇಳಿ ಲೋಕಾದ ನಾರಾಯ್ಣ ಸ್ವಾಮಿ
ಕೀಳೇಳಿ ಲೋಕಾದ ರಣಸಿರಿದೇವಿ
ಬಡಬಾಗಿಲಲ್ಲೆ ಸಾರಿಗೆ ಹೊರ್ಡುವಾರೆ
ಹೊನ್ನರುಳಿ ಕಟ್ಟೈಲ್ಲೆ ಮುರುತಾದುರಾಲೆ
ಹಳಕೋಸನಾದಾರು ಆಡುತಿದ್ದುರಾಲೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಲಗ ಕಂಡುಳಯ್ಯ ರಣಸಿರಿದೇವಿ
ಕಪುರಾದ ವೀಳ್ಯಾವ ಮೆಲುವಾಗುಳೀಗ
ಬೆಳಿಯಲಿ ಸಂಚಿ ಕೈ ತಪ್ಪುವಾದೆ
ಅಂತ್ರಾಂಗದಲಿ ಹಿಡಿದಾರೆಲದುನ
ಮಂತ್ರಾಂಗದಲಿ ಹಿಡಿದಾರೆಲದುನ
ಬೆಳ್ಳೀಯ ಬೆತ್ತ ಕೈ ತಪ್ಪುವಾದೆ
ಅಂತ್ರಾಂಗದಲಿ ಹಿಡಿದಾರೆಲದನ
ಬೆಳ್ಳೀಯ ದಂಟೆ ಕೈ ತಪ್ಪುವಾದೆ
ಅಂತ್ರಾಂಗದಲಿ ಹಿಡಿದಾರೆಲದನ
ಮಂತ್ರಾದ ಕಡ್ಡಿ ಕೈ ತಪ್ಪುವಾದೆ
ಅಂತ್ರಾಂಗದಲಿ ಹಿಡಿದಾರೆಲದನ
ಮುತ್ತಿನ ಕೊಡಿಯೆ ಕೈ ತಪ್ಪುವಾದೆ
ಅಂತ್ರಾಂಗದಲಿ ಹಿಡಿದಾರೆಲದುನ
ಹೊನ್ನರುಳಿ ಕಟ್ಟೈಲ್ಲೆ ಕೂಡಿದುರಾಲೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ

ಲಗ ಕಂಡುಳಯ್ಯ ರಣಸಿರಿದೇವಿ
ತಮ್ಮಾರಮನೆಗಾಗಿ ತಾವ್ ಬಂದುರಾಲೆ
ರಣಸಿರಿಗೆ ಮುಟ್ಟು ಬಂದುವಾಲೆ
ಮೂರೇ ದಿನದ ಮುಟ್ಟು ಬಂದುವಾಲೆ
ನಾಕೆಂಬ ದಿನಕೆ ಮಿಂದಾಳೆ ದೇವಿ
ಆ ನೀರು ನಿತ್ತು ಬಸುರು ಬಂದುವಾಲೆ
ಒಂದೆಂಬ ತಿಂಗಳಿಗೆ ಒಂದಕ್ಕಿ ವರುಣ
ಎಯ್ಡೆಂಬ ತಿಂಗಳಿಗೆ ಎಳ್ಳ್ ಹೂಗಿನ ವರುಣ
ಮೂರೆಂಬ ತಿಂಗಳಿಗೆ ಮುತ್ತಿನ ವರುಣ
ನಾಕೆಂಬ ತಿಂಗಳಿಗೆ ನೆಗಳ್ಹೂಗಿನ ವರುಣ
ಐದೆಂಬ ತಿಂಗಳಿಗೆ ಕೊಯ್ದ್ ಹೂಗಿನ ವರುಣ
ಆರೆಂಬ ತಿಂಗಳಿಗೆ ತಾರೀಕಿ ವರುಣ
ಏಳೆಂಬ ತಿಂಗಳಿಗೆ ಎಳಿನಾಗ ವರುಣ
ಎಂಟೆಂಬ ತಿಂಗಳಿಗೆ ಗೆಂಟಿಮಣಿ ವರುಣ
ಒಂಬತ್ತೆ ತಿಂಗಳಿಗೆ ತುಂಬಿದು ಗರುಬ
ಹತ್ತೆಂಬ ತಿಂಗಾಳಿನ್ ಹೊತ್ತೀನು ದಿನುವೆ
ಗರುಬಾಣಿ ಬೆನ್ನು ಬಿಟ್ಟು ನಿಲ್ಲುವಾದೆ
ಹೊತ್ತೀನ ದಿನುವೆ ಲಗ ಬಂದುವಯ್ಯ
ಹೆಣ್ಣೆಂಬ ಶಿಶುವಾನು ಹಡೆದಾಳೆ ದೇವಿ
ಇಲು ಬನ್ನಿ ಇಲ್ಲೆ ನಾರಾಯ್ಣ ಸ್ವಾಮಿ
ಶಿಶು ಹುಟ್ಟಿದ್ ಗಳ್ಗಿ ನೋಡಿ ಬರುಬೇಕೆ
ದ್ಯಾವಾಡಿಗಳ ಮನಿ ನೀವ್ ಹೋಗುಬೇಕೆ
ಶಿಶು ಹುಟ್ಟಿದ್ ಗಳ್ಗಿ ನೋಡಿ ಬರುಬೇಕೆ
ಅಕ್ಕಾಲಿ ಎಂದ್ರು ನಾರಾಯ್ಣ ಸ್ವಾಮಿ
ದ್ಯಾವಾಡಿಗಳ ಮನಿ ನಡಿದಾರೆ ಸ್ವಾಮಿ
ಹಗ್ಗೀನ ಹೋಕೀಗೆ ಏನು ಬಂದ್ರಿ ಸ್ವಾಮಿ
ಬ್ಯಾಸೀಗಿ ಮೊದಲಲ್ಲೆ ಏನು ಬಂದ್ರಿ ಸ್ವಾಮಿ
ಕೇಳ್ಯಯ್ಯ ಕೇಳಿ ನಾರಾಯ್ಣ ಸ್ವಾಮಿ
ಬಂದ ಕಾರಣ ನನಗ್ಹೇಳು ಬೇಕೆ

ಕೇಳ್ಳಯ್ಯ ಕೇಳಿ ದ್ಯಾವಾಡಿಗಳೆ
ಶಿಶು ಹುಟ್ಟಿದ್ ಗಳ್ಗ್ಯಾನು ನೋಡಿ ಹೇಳುಬೇಕೆ
ಅಕ್ಕಾಲಿ ಎಂದ್ರು ದ್ಯಾವಾಡಿಗಳು
ತಣುನೀರು ಮಿಂದು ಮಡಿ ಉಟ್ಟೀದುರಾಲೆ
ಲಗ ಕಂಡುರಯ್ಯ ದ್ಯಾವಾಡಿಗಳು
ಕದುರ್ರೀಯ ಕಾಲುಮಣಿ ತರ್ರಿಸಿಕೊಂಡುರಾಲೆ
ಹೆಗುಡೀಯ ಹರಳನು ತರ್ರಿಸಿಕೊಂಡುರಾಲೆ
ಬಲುಕಿಂದೆ ಅಲೀನ ಹೊಯ್ದಾರೆ ಅವ್ರು
ಎಡುಕಿಂದೆ ಹರಳಾ ತೆಗಿತಿದ್ದುರಾಲೆ
ಲಗ ಕಂಡುರಯ್ಯ ದ್ಯಾವಾಡಿಗಳು
ಕಿಸುಕಂಗೆ ತಾವು ನಗುತಾರೆ ಅವ್ರು
ಕೇಳ್ಳಯ್ಯ ಕೇಳಿ ನಾರಾಯ್ಣ ಸ್ವಾಮಿ
ಶಿಶು ಹುಟ್ಟಿದ್ ಗಳ್ಗಿ ಏನು ಹೇಳಲಯ್ಯ
ಶಿಶು ಹುಟ್ಟಿದ್ ಗಳ್ಗಿ ಎಂತ್ ಹೇಳಲಯ್ಯ
ಶಿಶು ಹುಟ್ಟಿದ್ ಗಳುಗಿ ಇಸು ಗಳಿಗ್ಯಾಲೆ
ಅಮಾಸು ಬೂದ್ಯಾಗಿ ಹುಟ್ಟೀದ ಶಿಶುವೆ
ಹರದು ಹಾಲುಂಬಾಗೆ ತಾಯಿಗು ಮರುಣ
ಕೂತು ಕೂಳುಂಬಾಗೆ ತಂದೆಗು ಮರುಣ
ಹಾಗಂದೆ ಮಾತಾನು ಹೇಳೀದುರಾಲೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಮೂರೂಚಿನ್ ಕಟ್ಟಿ ಕೂತಾರೆ ಅವ್ರು
ಸ್ವಾಮಿಯಾಗಿ ಕೂತಾರೆ ಅವ್ರು
ತಮ್ಮಾರಮನಿಗಾಗಿ ತಾವ್ ಬಂದುರಾಲೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಲಗ ಕಂಡುಳಯ್ಯ ರಣಸಿರಿದೇವಿ
ಶಿಶು ಹುಟ್ಟಿದ್ ಗಳುಗೀಯ ನೋಡಿ ಬಂದ್ರ್ಯಾಸ್ವಾಮಿ
ಶಿಶು ಹುಟ್ಟಿದ್ ಗಳುಗೀಯ ನಾ ನೋಡಿ ಬಂದೆ
ಕೇಳಮ್ಮ ಕೇಳು ರಣಸಿರಿ ನೀನು
ಶಿಶು ಹುಟ್ಟಿದ್ ಗಳುಗಿ ಇಸು ಗಳಿಗ್ಯಾಲೆ

ಹರದು ಹಾಲುಂಬಾಗು ತಾಯಿಗು ಮರುಣ
ಕೂತು ಕೂಳುಂಬಾಗು ತಂದೆಗು ಮರುಣ
ಲಗ ಕಂಡುಳಯ್ಯ ರಣಸಿರಿದೇವಿ
ಮೂರೂಚಿನ್ ಕಟ್ಟಿ ಬಿದ್ದಾಳೆ ದೇವಿ
ಮಕ್ಕಾಳ ವರುವಾನು ನಾ ಬೇಡಿನಾಲೆ
ಮಾಹರ್ಸದಿಂದ ನಾನಿದ್ದುನಾಲೆ
ಹರ ಹರ ಎಂದು ಹೇಳೀದುಳಾಲೆ
ಶಿವ ಶಿವ ಎಂದು ಹೇಳೀದುಳಾಲೆ
ದಾನ ಎಂಬುದು ನಾವ್ ಕೊಡುಬೇಕೆ
ಶಿಶುವಿನ ದಾನವ ನಾವ್ ಕೊಡುವಾದೆ
ಇನ್ನ್ಯಾರಿಗ್ ದಾನವ ನಾವ್ ಕೊಡುವಾದೆ
ಮೂಡಾನ ಮುಗತೇರಿಗ್ ದಾನ ಕೊಡುವಾದೆ
ಮುಗುತೇರಿಗ್ ದಾನ ನಾವ್ ಕೊಟ್ಟುರೀಗ
ಅವ್ರು ನಾವು ಸರುಕನ್ನಿಯಾರು
ಅವ್ರು ನಾವು ಸರುಮುನ್ನಿಯಾರು
ಆಡುವ ಆಟಾವೆ ಒಂದಂದುರಾಲೆ
ಕೂಡುವ ಕೂಟಾವೆ ಒಂದಂದುರಾಲೆ
ಇನ್ನ್ಯಾರಿಗ್ ದಾನವ ನಾವ್ ಕೊಡುವಾದೆ
ಪಡುವಾನ ಚೋಳ್ಯರಿಗ್ ದಾನ ಕೊಡುವಾದೆ
ಚೋಳ್ಯರಿಗ್ ದಾನವ ನಾವ್ ಕೊಟ್ಟುರೀಗ
ಅವ್ರು ನಾವು ಸರುಕನ್ನಿಯಾರೆ
ಅವ್ರು ನಾವು ಸರುಮುನ್ನಿಯಾರೆ
ಆಡುವ ಆಟಾವೆ ಒಂದಂದುರಾಲೆ
ಕೂಡುವ ಕೂಟಾವೆ ಒಂದಂದುರಾಲೆ
ಇನ್ನ್ಯಾರಿಗ್ ದಾನವ ನಾವ್ ಕೊಡುವಾದೆ
ತೆಂಕಾನ ತೊರಿಯ ದೇವದಿಕ್ಕಾಳಿಗ್ ದಾನ ಕೊಡುವಾದೆ
ಅವ್ರು ನಾವು ಸರುಕನ್ನಿಯಾರೆ
ಅವ್ರು ನಾವು ಸರುಮುನ್ನಿಯಾರೆ
ಆಡುವ ಆಟಾವೆ ಒಂದಂದುರಾಲೆ

ಕೂಡುವ ಕೂಟಾವೆ ಒಂದಂದುರಾಲೆ
ಇನ್ಯಾರಿಗ್ ದಾನವ ನಾವ್ ಕೊಡುವಾದೆ
ಬಡಗಾನ ಬಾಷೇರಿಗ್ ದಾನ ಕೊಡುವಾದೆ
ಅವ್ರು ನಾವು ಸರುಕನ್ನಿಯಾರೆ
ಅವ್ರು ನಾವು ಸರುಮುನ್ನಿಯಾರೆ
ಆಡುವ ಆಟಾವೆ ಒಂದಂದುರಾಲೆ
ಕೂಡುವ ಕೂಟಾವೆ ಒಂದಂದುರಾಲೆ
ಇನ್ಯಾರಿಗ್ ದಾನವ ನಾವ್ ಕೊಡುವಾದೆ
ಭೂಮಿಗು ದಾನವ ನಾವ್ ಕೊಡುವಾದೆ
ಭೂಮಿಗು ದಾನವ ನಾವ್ ಕೊಟ್ಟುರೀಗ
ತುಪುಮಣ್ಣು ಆಗಿ ಬೆಳೆವಾಳು ನೋಡು
ಇನ್ಯಾರಿಗ್ ದಾನವ ನಾವ್ ಕೊಡುವಾದೆ
ಅಗುನಿಗೆ ದಾನವ ನಾವ್ ಕೊಡುವಾದೆ
ಅಗುನಿಗೆ ದಾನವ ನಾವ್ ಕೊಟ್ಟುರೀಗ
ಮೇಲೇಳಿ ಲೋಕಕೆ ಹೋಗಿ ಹಂಬುವಾದೆ
ಇನ್ಯಾರಿಗ್ ದಾನವ ನಾವ್ ಕೊಡುವಾದೆ
ಶಿವುಗಂಗೆ ದಾನವ ನಾವ್ ಕೊಡುವಾದೆ
ಹೊನು ಮಂದಾಸ್ ಎಂಬಾದು ಹೂಡಾಲು ಬೇಕೆ
ಬಡುಗೇರು ಮಗನ ಕರುಸೀದುರಾಲೆ
ಇಲು ಬಾರೊ ಇಲ್ಲೆ ಬಡುಗೇರು ಮಗನೆ
ಶಿಶುವಿನ ಶಿವುಗಂಗಿಗೆ ದಾನ ಕೊಡುಬೇಕೆ
ಹೊನ್ನರಳಿ ಮರುನ ಬುಡು ಕಡುಬೇಕೆ
ಹೊನು ಮಂದಾಸ್ ಎಂಬಾದು ಹೂಡಾಲು ಬೇಕೆ
ಹನ್ನೆಯ್ದು ಅರಿಯಾನು ಮಾಡಾಲು ಬೇಕೆ
ಹನ್ನೆಯ್ದು ಬಾಗೀಲು ಮಾಡಾಲು ಬೇಕೆ
ಲಗ ಕಂಡುನಯ್ಯ ಬಡುಗೇರ ಮಗುನೆ
ಚೀರುಳಿ ಚಿಕ್ಕುಳಿ ತೆಗೆದಾನೆಲಂವ
ಮಾಮೇರಿ ಮಚ್ಚಾನು ಹೊಗಲಿಡುವಾನು
ಹೊನ್ನರಳಿ ಮರುನ ಬುಡುಕ್ಕೋದುನಾಲೆ

ಹೊನ್ನರಳಿ ಮರುನ ಬುಡ ಕಡುವಾನು
ಬುಡು ಕಡುವಾನು ತಲಿ ಕಡುವಾನು
ಬುಡಕಡ್ದು ಅದನ ಹಾಳಿಸುವಾನು
ಹಾಳಿಸಿಲಾಂವ ಕೆತ್ತಿಸುವಾನು
ಹನ್ನೆಯ್ಡು ಅರಿಯಾನು ಮಾಡಿದುನಾಲೆ
ಹನ್ನೆಯ್ಡು ಬಾಗಿಲು ಮಾಡಿದುನಾಲೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಹೊನು ಮಂದಾಸ್ ಎಂಬಾದು ನೋಡಿದುರಾಲೆ
ಬಡುಗೇರಿಗ್ ಸಂಬುಳು ಕೊಡುತ್ತಿದ್ದುರಾಲೆ
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ನಾಲೂಕು ತೊರಿಗೆ ಡಂಗೂರ್ ಹೊಡುವಾರು
ಏನಂದು ಡಂಗೂರು ಹೊಡಿದಾರೆ ಅವ್ರು
ಎಂತಂದು ಡಂಗೂರು ಹೊಡಿದಾರೆ ಅವ್ರು
ಶಿಶುವೀನ ಶಿವುಗಂಗಿ ದಾನ ಕೊಡುತೇವೆ
ನೀವಾದುರೀಗ ಬರಬೇಕೆ ನೋಡಿ
ನಾಲೂಕು ತೊರಿಯ ದೈವ್‌ದಿಕ್ಕುಳೆಲ್ಲ
ನಾಲೂಕು ದೇಶಾದ ದೈವ್‌ದಿಕ್ಕುಳೆಲ್ಲ
ನೀವಾದುರೀಗ ಬರಬೇಕೆ ನೋಡಿ
ಶಿಶುವೀನ ಶಿವುಗಂಗಿ ದಾನ ಕೊಡುತೇವೆ
ಊರೂರಿಗ್ ಡಂಗೂರ ಹೊಡೆದಾರೆಲವ್ರು
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ
ಹೊನು ಮಂದಾಸ್ ಸಿಂಗಾರ ಮಾಡೀದುರಾಲೆ
ಒಂದರಿಗೀಗ ಅಕ್ಕಿ ಹಾಕುವಾರು
ಒಂದರಿಗೀಗ ಜೀನ್ಸ್ ಹಾಕುವಾರು
ಒಂದರಿಗೀಗ ಚಿನ್ನು ಹಾಕುವಾರು
ಒಂದರಿಗೀಗ ಹೂಗ್ ಹಾಕುವಾರು
ಒಂದರಿಗೀಗ ಬಾಚಣ್ಗಿ ಹಾಕುವಾರು
ಒಂದರಿಗೀಗ ಚೀರಣ್ಗಿ ಹಾಕುವಾರು
ಲಗ ಕಂಡುರಯ್ಯ ನಾರಾಯ್ಣ ಸ್ವಾಮಿ

ಒಂದರಿಗೀಗ ಶಿಶುನ್ ಹಾಕುವಾರು
ಹೊನು ಮಂದಾಸ್ಗೆ ಬೀಗುವ ಹಾಕೀದುರಾಲೆ
ಕೇಳ್ಯಯ್ಯ ಕೇಳಿ ದೈವ್‌ದಿಕ್ಕುಳೆಲ್ಲ
ಹೊನು ಮಂದಾಸ್ಗೆ ಪೂಜಾವ ನೀವ್ ಮಾಡಬೇಕು
ಹೊನು ಮಂದಾಸ್ ಮಿಳಿನೆ ಹಿಡಿಯಾಲೆಬೇಕು
ಹೊನು ಮಂದಾಸ್ ಎಂಬಾದು ಎಳಿಯಾಲೆಬೇಕೆ
ನಾಲೂಕು ತೊರಿಯ ದೈವ್‌ದಿಕ್ಕುಳೆಲ್ಲ
ಹೊನು ಮಂದಾಸ್ ಎಂಬಾದು ಎಳಿದಾರೆ ಅವ್ರು
ಹೊನು ಮಂದಾಸ್ ಎಂಬಾದು ಎದ್ದ್ ಹರಿಲಿಲ್ಲೆ
ಕೇಳ್ಯಯ್ಯ ಕೇಳಿ ನಾರಾಯ್ಣ ಸ್ವಾಮಿ
ತಾಯ್ ತಂದೆ ಹೊನು ಮಂದಾಸ್ ಮುಟ್ಟಾಲು ಬೇಕೆ
ತಾಯ್ ತಂದೆ ಹೊನು ಮಂದಾಸ್ ಮುಟ್ಟಿದುರಾಲೆ
ಹೊಯ್ ಎಂದೆ ಹೊನು ಮಂದಾಸ್ ಎಳಿರಯ್ಯ ನೀವು
ಹೊನು ಮಂದಾಸ್ ಎಂಬಾದು ಎದ್ದ್ ಹಾರುವಾದೆ
ನಾಲೂಕು ಅಳುವಿಗೆ ಓಡ್ಯಾಡುವಾದೆ
ಹೊನು ಮಂದಾಸ್ ಎಂಬಾದು ಓಡ್ಯಾಡುವಾದೆ
ಅಸುರೀಯ ಗುಂಡ್ಯಲ್ಲಿ ಹೋಯ್ ಕಂತುವಾದೆ
ಲಗ ಕಂಡುರಯ್ಯ ಹನ್ನೆಯ್ಡು ತಪ್ಪಾಸಿಗಳು
ಮುನ್ನೂರು ಮಂದಿ ಮುನಿಸೂರ ಅವ್ರು
ತಪ್ಪಾಸಿ ಜಪುವೆ ಮಾಡ್ವಾಗುಳೀಗೆ
ತಪ್ಪಾಸಿ ಜಪುವೆ ಹಿಡಿದಾಳೆ ನೋಡಿ
ಹೊನು ಮಂದಾಸ್ ಚೊಟ್ಟಿಗೆ ಜಿಡಿ ಸಿಕ್ಕುವಾದೆ
ಜಿಡಿ ಲೆಕ್ಕ ತಾವು ಮಾಡೀದುರಾಲೆ
ಹನ್ನೆಯ್ಡು ಮಂದಿ ತಪ್ಪಾಸಿಗಳೆ
ಮತ್ತೆಲ್ಲ ಜಿಡಿಗಾಳು ಬಂದಾವೆ ನೊಡಿ
ಹಲು ಜಿಡಿ ಎಂಬಾದು ಬರುಲಿಲ್ಲಿಯಾಲೆ
ಮಾಯ್‌ದಲ್ಲಿ ಅಂಬಿಗಾರ್‍ನ ಮಾಡಿ ಬಿಡುವಾರೆ
ಇಲು ಬಾರೊ ಇಲ್ಲೆ ಮಾಯ್ದ್ ಅಂಬಿಗಾರ
ಜಿಡಿ ಹಿಡ್ದೆ ನೀನು ಕೆಳ್ಗ್ ಹೋಗುಬೇಕೆ

ಮತ್ತೆಲ್ಲ ಜಿಡಿಗಾಳು ಬಂದಾವೆ ನೋಡು
ಹಲುಜಿಡಿ ಎಂಬಾದು ಬರುಲಿಲ್ಲಿಯಾಲೆ
ಆ ಜಿಡಿ ಹೋಕಾನು ನೀ ನೋಡುಬೇಕೆ
ಅಕ್ಕಾಲಿ ಎಂದ ಮಾಯ್ದ್ ಅಂಬಿಗಾರ
ಜಿಡಿ ಹಿಡಿದೆ ಅಂವ ಕೆಳ್ಗ್ ಹೋದುನಾಲೆ
ಹೊನು ಮಂದಾಸ್ ಎಂಬಾದು ದಿಡುಕ್ ಎಳಿದಾಣು
ದೈವ್‌ದಿಕ್ಕುಳೆಲ್ಲ ನೋಡೀದುರಾಲೆ
ಹೊನು ಮಂದಾಸ್ ಎಂಬಾದು ಒಡ್ದ್ ನೋಡುಬೇಕೆ
ಹೊನು ಮಂದಾಸ್ ಎಂಬಾದು ಒಡುಸೀದುರಾಲೆ
ಹನ್ನೆಯ್ಡು ವರುಸದ ಹೆಣ್ಣು ಮಗುಳಾಲೆ
ಲಗ ಕಂಡುರಯ್ಯ ತಪ್ಪಾಸಿಗಳು
ಮನದಲ್ಲಿ ಮಾಹರ್ಸ ಮಾಡೀದುರಯ್ಯ
ಶಿಶುವಿಗು ಹೊಸರ ಏನಿಡುದಯ್ಯ
ಶಿಶುವಿಗು ಹೊಸರ ಎಂತಿಡುದಯ್ಯ
ಹೀಗಂದೆ ಮಾತಾನು ಆಡುತಿರುವಾರು
ಮೂರೇ ಸೀನಾವ ಸೀನೀದುಳಮ್ಮ
ಲಗ ಕಂಡುರಯ್ಯ ತಪ್ಪಾಸಿಗಳು
ಮನದಲ್ಲಿ ಮಾಹರ್ಸ ಮಾಡೀದುರಾಲೆ
ಸೀತಗ್ನಿ ಎಂದೇ ಹೊಸರೀಡುವಾರೆ
ಲಗ ಕಂಡುರಯ್ಯ ತಪ್ಪಾಸಿಗಳು
ಮನದಲ್ಲಿ ಮಾಹರ್ಸ ಮಾಡೀದುರಾಲೆ
ಸೀತೀಗೆ ಮದುವೆ ಮಾಡಾಲು ಬೇಕೆ
ಸೀತೀಗೆ ಆಗು ಗಂಡರಾಗುಬೇಕೆ
ಬಿಲ್ ಹಬ್ಬನಾದಾರು ನಾವ್ ಮಾಡುಬೇಕೆ
ಬಿಲು ಕಾಮನಬ್ಬ ನಾವ್ ಮಾಡುಬೇಕೆ
ಬೂಮಿ ತೂಕಾದು ಬಿಲ್ಲು ಮಾಡುಬೇಕೆ
ಆಕಾಸ ತೂಕಾದು ಅಂಬು ಮಾಡುಬೇಕೆ
ಬಿಲು ಕಮನಬ್ಬಾವ ನಾವ್ ಮಾಡುಬೇಕೆ
ಬಿಲ್ ಹಬ್ಬನಾದಾರೂ ನಾವ್ ಮಾಡುಬೇಕೆ

ಸೀತೀಯನಾದರೂ ಕೂರಿಸಬೇಕೆ
ಸೀತೀಯ ಕಾಲಡಿ ಬಿಲ್ಸ್ ಹಾಕುಬೇಕೆ
ನಾಲೂಕು ತೊರಿಗೆ ಡಂಗೂರ ಹೊಡುವಾರು
ನಾಲೂಕು ಲೋಕದ ದೈವ್‌ದಿಕ್ಕುಳೆಲ್ಲ
ಬಿಲುಕಾಮನಬ್ಬಾಕೆ ನೀವ್ ಬರುಬೇಕೆ
ಹತ್ತೇಳಿ ಲೋಕದ ದೈವದಿಕ್ಕುಳೆಲ್ಲ
ಬಿಲುಕಾಮನಬ್ಬಾಕೆ ನೀವ್ ಬರುಬೇಕೆ
ಸುತ್ತೇಳಿ ಲೋಕದ ದೈವದಿಕ್ಕುಳೆಲ್ಲ
ಬಿಲುಕಾಮನಬ್ಬಾಕೆ ನೀವ್ ಬರುಬೇಕೆ
ಸುರುಳೇಳಿ ಲೋಕದ ದೈವದಿಕ್ಕುಳೆಲ್ಲ
ಬಿಲುಕಾಮನಬ್ಬಾಕೆ ನೀವ್ ಬರುಬೇಕೆ
ಪಾಂಚೇಳಿ ಲೋಕದ ದೈವದಿಕ್ಕುಳೆಲ್ಲ
ಬಿಲುಕಾಮನಬ್ಬಾಕೆ ನೀವ್ ಬರುಬೇಕೆ
ಪಾಂಡೇಳಿ ಲೋಕದ ದೈವದಿಕ್ಕುಳೆಲ್ಲ
ಬಿಲುಕಾಮನಬ್ಬಾಕೆ ನೀವ್ ಬರುಬೇಕೆ
ಕೀಳೇಳಿ ಲೋಕದ ದೈವದಿಕ್ಕುಳೆಲ್ಲ
ಬಿಲುಕಾಮನಬ್ಬಾಕೆ ನೀವ್ ಬರುಬೇಕೆ
ಹಾಂಗಂದೆ ಡಂಗೂರ ಸಾರೀದುರಾಲೆ
ಸೀತೀಯನಾದರೂ ಕೂರೀಸುವಾರು
ಸೀತೀಯ ಕಾಲಡಿ ಬಿಲ್ಲ್ ಹಾಕುವಾರು
ನಾಲೂಕು ತೊರಿಯ ದೈವ್‌ದಿಕ್ಕುಳೆಲ್ಲ
ಬಿಲುಕಾಮನಬ್ಬಾಕೆ ಬಂದಾರೆಲವ್ರು
ಸೀತೀಯನಾದರೂ ನೋಡ್ವಾಗ ಈಗ
ಈ ಬಿಲ್ಲ ನಾವು ಎತ್ತ್ಯೋಡುದಿಲ್ಲೆ
ಸೀತೀಯ ದರುಮದಾರಿ ನಮ್ಗ್ ಬ್ಯಾಡಂದ್ರು
ಪಡುಲಂಕ ಕಡುಲ ಹೊಲು ರಾವುಳಯ್ಯ
ಹೊಲು ರಾವುಳಯ್ಯಂಗೆ ಸಪುನ ಬಿದ್ದುವಾಲೆ
ಬಿಲು ಕಾಮನಬ್ಬಾಕೆ ಹೊರಟೀದುನಾಲೆ
ಸೀತೀಗೆ ಸಪುನು ಬಿದ್ದಾವೆ ನೋಡೆ

ಏನಂದೆ ಸಪುನಾ ಬಿದ್ದಾವೆ ನೋಡೆ
ಎಂತಂದೆ ಸಪುನಾ ಬಿದ್ದಾವೆ ನೋಡೆ
ಪಡುಲಂಕ ಕಡುಲ ಹೊಲು ರಾವುಳಯ್ಯ
ಅಂವನಾದುರೀಗ ಬರುತಾನೆ ನೋಡೆ
ಸೀತಿ ಸಾಪುವ ಕೊಟ್ಟೀದುಳಾಲೆ
ಏನಂದೆ ಸಾಪುವ ಕೊಟ್ಟೀದುಳಾಲೆ
ಎಂತಂದೆ ಸಾಪುವ ಕೊಟ್ಟೀದುಳಾಲೆ
ಪಡುಲಂಕ ಕಡುಲ ಹೊಲು ರಾವುಳಯ್ಯ
ಅಂವಾದುರೀಗ ಬಂದಾರೆ ನೋಡೆ
ರಾಮಾನ ಬಾಣಾಕೆಲಂವ ಹಣ್ಕಬೇಕೆ
ಮುಕ್ಕರ್ನಿ ಅಂವ ಬೀಳಾಲು ಬೇಕೆ
ಮುಂಬ್ಚಲೆಂಬಾದು ಒಡ್ದ್ ಹೋಗುಬೇಕೆ
ಮುಂಗಾಲೆಂಬಾದು ಒಡ್ದ್ ಹೋಗುಬೇಕೆ
ಹಾಂಗಂದೆ ಸಾಪುವ ಕೊಟ್ಟಾಳೆ ಸೀತೆ
ಪಡುಲಂಕ ಕಡುಲ ಹೊಲು ರಾವುಳಯ್ಯ
ಬಿಲು ಕಾಮನಬ್ಬಾಕೆ ಬಂದಾನೆ ಅಂವ
ಬಿಲು ಹಬ್ಬಕಾದರೆ ಬಂದಾನೆ ಅಂವ
ರಾಮನ ಬಾಣಾಕೆ ಹಣಿಕೀದುನಾಲೆ
ಮುಕ್ಕರ್ನಿ ಅಂವ ಬಿದ್ದಾನೆ ನೋಡೆ
ಮುಂಬ್ಚಲ್ಲ್ ಎಂಬಾದು ಮುರ್ದ್ ಹೋದುವಾಲೆ
ಮುಂಗಾಲ್ ಎಂಬಾದು ಜರ್ದ್ ಹೋದುವಾಲ
ಹೆದುರಿ ಅಂವ ಓಡೀದುನಾಲೆ
ಲಗ ಕಂಡುರಯ್ಯ ರಾಮಯ್ಯ ಸ್ವಾಮಿ
ಲಗ ಕಂಡುರಯ್ಯ ಲಕ್ಷುಮಾಣ ಸ್ವಾಮಿ
ಕೇಳು ತಮ್ಮ ಕೇಳು ಲಕ್ಷುಮಾಣ ನೀನು
ಕೀಳೇಳಿ ರಾಜದಲ್ಲಿ ಬಿಲ್ಲ್ ಹಬ್ಬುವಾಲೆ
ಬಿಲು ಕಾಮನಬ್ಬಾಕೆ ನಾವ್ ಹೋಯಿಕಾರೆ
ಹನ್ನೆಯ್ಡು ವರುಸ ತಪಸೀರುಬೇಕೆ
ಕೇಳಣ್ಣ ಕೇಳು ರಾಮಯ್ಯ ಸ್ವಾಮಿ

ಹನ್ನೆಯ್ದು ವರುಸ ತಪಸಿದ್ದುನಾಲೆ
ಕೇಳು ತಮ್ಮ ಕೇಳು ಲಕ್ಷುಮಾಣ ನೀನು
ಹಲು ಬಾಯನಾದಾರೂ ಕಳ್ದು ತೋರುಬೇಕೆ
ಲಗ ಕಂಡುರಯ್ಯ ಲಕ್ಷುಮಾಣ ಸ್ವಾಮಿ
ಹಲು ಬಾಯನೆಂಬಾದು ಕಳ್ದು ತೋರೀದುನಾಲೆ
ಗೆಂಟುಲಲ್ಲೆ ಹೊನು ಸಾಲೆಬಲಿ ಕಟ್ಟೀದುವಾಲೆ
ಕೇಳು ತಮ್ಮ ಕೇಳು ಲಕ್ಷುಮಾಣ ನೀನು
ಹಸುವೀಗೆ ಹಾಲ್ ಹಣ್ಣ ಮೆಲುಲಲ್ಲೆ ತಮ್ಮ
ಬಾಯಾರಿಗ್ ಹಾಲ ಕುಡಿಲಿಲ್ಲೆ ತಮ್ಮ
ಕೇಳ್ಯಯ್ಯ ಕೇಳು ರಾಮಯ್ಯ ಸ್ವಾಮಿ
ನೀವಾದುರೀಗ ಕೊಡುಲಿಲ್ಲಿಯಾಲೆ
ನಾವಾದುರೀಗ ಮೆಲುಲಿಲ್ಲಿಯಾಲೆ
ಬಿಲು ಕಾಮನಬ್ಬಾಕೆ ನಾವ್ ಹೋಗುಬೇಕೆ
ಬಿಲ್ ಹಬ್ಬಕಾದಾರು ನಾವ್ ಹೋಗುಬೇಕೆ
ರಾಮಾನ ಬಾಣಾವ ನಾನ್ ಹೊಡಿತೇನೆ
ಕೇಳ್ಯಯ್ಯ ಕೇಳು ರಾಮಯ್ಯ ಸ್ವಾಮಿ
ಬಾಣೆಂಬುದೆಲ್ಲ ನನುಗೆಂದುನಾಲೆ
ಹೆಣ್ಣೆಂಬುದೆಲ್ಲ ನಿಮಗೆಂದುನಾಲೆ
ಹಾರ್ವಾರ ಯೇಸಾವ ತೊಟ್ಟೀದುರಾಲೆ
ಬಿಲು ಕಾಮನಬ್ಬಾಕೆ ಹೊರಟೀದುರಾಲೆ
ಅತ್ತಿಂದೆ ಅಂವ ಹೊಲು ರಾವುಳಯ್ಯ
ಇತ್ತಿಂದೆ ಇವ್ರು ರಾಮಯ್ಯ ಸ್ವಾಮಿ
ಲಗ ಕಂಡುನಯ್ಯ ಹೊಲು ರಾವುಳಯ್ಯ
ಯಾವಲ್ಲಿಗ್ ಹೋತ್ರಿ ಮಾಣ್‌ಕಾಳೆ ನೀವು
ಎತ್ತಿಂದೆ ಬತ್ರಿ ಮಾಣ್‌ಕಾಳೆ ನೀವು
ಕೇಳ್ಯಯ್ಯ ಕೇಳು ಹೊಲು ರಾವುಳಯ್ಯ
ಕೇಳೇಳಿ ರಾಜದಲಿ ಬಿಲ್ಲ್ ಹಬ್ಬುವಾಲೆ
ಬಿಲ್ಲ್ ಹಬ್ಬುಕಾಗಿ ನಾವ್ ಹೋಗುತೇವೆ
ರಾಮಾನು ಬಾಣ ನಾನ್ ಹೊಡಿತೇನೆ

ಸೀತೀಯ ದರ್ಮಧಾರಿ ನಾವ್ ತರುತೇವೆ
ಲಗ ಕಂಡುನಯ್ಯ ಹೊಲು ರಾವುಳಯ್ಯ
ಕೇಳ್ಯಯ್ಯ ಕೇಳಿ ಮಾಣ್ಕಾಳೆ ನೀವೆ
ನನ ಬಾಣ ಎಂಬಾದು ನೀವ್ ನೆಗ್ಗಬೇಕೆ
ಬಿಲು ಕಾಮನಬ್ಬಾಕೆ ನೀವ್ ಹೋಗುಕಾರೆ
ನಿಮ್ಮಿಂದ ಈಗ ಆಗಾದು ನೋಡಿ
ಬಂದ್ ಹಾದಿಯಲಿ ಹಿಂದ್ ಹೋಗಿ ನೀವು
ಲಗ ಕಂಡುನಯ್ಯ ಲಕ್ಷುಮಾಣ ಸ್ವಾಮಿ
ಲಕ್ಷುಮಾಣ ಸ್ವಾಮಿಗೆ ಸಿಟು ಬಂದುವಾಲೆ
ಎಡದೀ ಉಂಗುಟ್ಟದ್ಲಿ ದಂಟಿ ಚೊಗುವಾನು
ಏಳ್ ಸೌಂದ್ರ್ರದಾಚಿಗೆ ಕೀಳ್ ಸೌಂದ್ರುವಾಲೆ
ಅಲ್ಹೋಗಿ ದಂಟಿ ಬಿದ್ದಾವೆ ನೋಡಿ
ಲಗ ಕಂಡುನಯ್ಯ ಹೊಲು ರಾವುಳಯ್ಯ
ಸ್ವಾಮಿಯೆಂದು ನಾನು ಅರಿಯಾಲು ಇಲ್ಲೆ
ನನು ದಂಟಿ ನನುಗೆ ತರ್ರಿಕೊಡು ಬೇಕೆ
ಹಿಂಡಾರು ಮಕ್ಕಾಳು ಹೊಟ್ಟ್ಯೋರುದಂಟೆ
ಕೂಡುಕುಟುಂಬ ಹೊಟ್ಟ್ಯೋರುದಂಟೆ
ನನು ದಂಟಿ ನನುಗೆ ತರ್ರಿ ಕೊಡುಬೇಕೆ
ಲಗ ಕಂಡುನಯ್ಯ ಲಕ್ಷುಮಾಣ ಸ್ವಾಮಿ
ಕೂಡುಕುಟುಂಬ ಹೊಟ್ಟ್ಯೋರುದಂಟೆ
ಮಾಣ್ಕಾಳ ಇಸಯ ನೀನ್ ತೆಳ್ದುಬಲ್ಲ್ಯಾ
ಲಗ ಕಂಡುರಯ್ಯ ರಾಮಯ್ಯ ಸ್ವಾಮಿ
ಲಗ ಕಂಡುನಯ್ಯ ಲಕ್ಷುಮಾಣ ಸ್ವಾಮಿ
ತಂತುರು ಮಂತುರು ಮಾಡೀದುರಾಲೆ
ಮಂತುರದಲ್ಲೆ ದಂಟಿ ತರ್ರಿದಾರು
ಅಂವ್ನ ದಂಟಿ ಅವ್ನಿಗೆ ತರ್ರಿಕೊಟ್ಟುರಾಲೆ
ಬಿಲು ಕಾಮನಬ್ಬಾಕೆ ಹೋದಾರೆ ಅವ್ರು
ಬಿಲ್ಲ್ ಹಬ್ಬಕಾದರೆ ಹೋದಾರೆ ಅವ್ರು
ರಾಮಾನ ಬಾಣಾಕೆ ಹಣಕೀದುರವ್ರು

ಲಕ್ಷುಮಾಣ ಸ್ವಾಮಿ ಎತ್ತಿಹೊಡಿದಾರು
ಸೀತೀಯ ದರ್ಮಧಾರಿ ಎರಿದಾರೆ ನೋಡಿ
ರಾಮಯ್ಯ ಸ್ವಾಮಿಗೆ ಎರಿದಾರೆ ನೋಡಿ
ಹೊನ್ನಾರಮನಿಗಾಗಿ ಬಂದಾರೆ ಸ್ವಾಮಿ
ಲಗ ಕಂಡುರಯ್ಯ ತಪ್ಪಾಸಿಗಾಳು
ತಪ್ಪಾಸಿ ಜಪುವೇ ಮಾಡ್ವಾಗುಳೀಗ
ಅಸುರೀಯ ಕಲುಮ್ಯಾಲೆ ಕಾಕಿ ಹೇಲುವಾದೆ
ತಪ್ಪಾಸಿ ಜಪುವೆ ಕೆಡಿಸೀದುವಾಲೆ
ಬಾಣಾಕೆ ಅಪ್ಪಾಣಿ ಕೊಟ್ಟಾರೆ ಅವ್ರು
ಕಾಕೀಯ ಬೆನ್ಹತ್ತಿ ನಡೆದಾವೆ ಬಾಣ
ಲಗ ಕಂಡುದಯ್ಯ ಕಾಕೀಯ ಮರಿಯೆ
ಲಗ ಕಂಡುಳಯ್ಯ ಮಂಡೋದ್ರಿ ತಾನು
ತಿರುಪತಿಗಾಗಿ ಹಾರ್‍ಯೋದು ಕಾಕಿ
ಕಾಕೀಯ ಬೆನ್ನ ಬಿಡಲಿಲ್ಲೆ ಬಾಣ
ಮಂಡೋದ್ರಿ ಬೆನ್ನ ಬಿಡಲಿಲ್ಲೆ ಬಾಣ
ವಜ್ಜುರದ ಕಂಬಲ್ಲಿ ಹೋಯ್ ಕೂತೊ ಕಾಕಿ
ವಜ್ಜುರದ ಕಂಬೀಗೆ ಹೋಯ್ ಬಡಿದೊ ಬಾಣ
ಹೊನ್ನಾರಮನಿ ಎಂಬಾದು ಗಡಗುಟ್ಟುವಾದೆ
ಲಗ ಕಂಡುರಯ್ಯ ತಿಮ್ಮಪ್ಪ ಸ್ವಾಮಿ
ಕೇಳ್ಳಯ್ಯ ಕೇಳು ಮಂಡೋದ್ರಿ ನೀನು
ನನ್ನಾರಮನಿಯಲ್ಲಿ ನೀನಿರಬ್ಯಾಡ
ರಾಮಾನ ಬಾಣಾವು ಅಂದ್ಹೇಳುವಾರು
ಧರ್ಮಸ್ಥಳಕಾಗಿ ಹಾರ್‍ಯೋದು ಕಾಕಿ
ವಜ್ಜುರದ ಕಂಬಲ್ಲಿ ಹೋಯ್ ಕೂತೊ ಕಾಕಿ
ಲಗ ಕಂಡುರಯ್ಯ ಮಂಜುನಾಥ ಸ್ವಾಮಿ
ಕೇಳ್ಳಯ್ಯ ಕೇಳು ಮಂಡೋದ್ರಿ ನೀನು
ನನ್ನಾರಮನಿಯಲ್ಲಿ ನೀನಿರಬ್ಯಾಡ
ರಾಮಾನ ಬಾಣಾವು ಅಂದ್ಹೇಳುವಾರು

ಕೊಲ್ಲೂರಿಗಾಗಿ ಹಾರ್‍ಯೋದು ಕಾಕಿ
ಕೊಲ್ಲೂರ ಮೂಕಮ್ಮನ ಮನಿ ಸೇರುವಾದೊ
ಎಲ್ಲೋರು ಬೆನ್ನ ಬಿಡುಲಿಲ್ಲೆ ಬಾಣ
ವಜ್ಜುರದ ಕಂಬಲ್ಲಿ ಹೋಯ್ ಕೂತೊ ಕಾಕಿ
ವಜ್ಜುರದ ಕಂಬೀಗೆ ಬಡಿದಾವೆ ಬಾಣ
ಹೊನ್ನಾರಮನಿ ಎಂಬಾದು ಗಡಗುಟ್ಟುವಾದೊ
ಲಗ ಕಂಡುಳಯ್ಯ ಮೂಕಮ್ಮದೇವಿ
ಕೇಳ್ಯಯ್ಯ ಕೇಳು ಮಂಡೋದ್ರಿ ನೀನು
ನನ್ನಾರಮನಿಯಲ್ಲಿ ನೀನಿರಬ್ಯಾಡ
ರಾಮಾನ ಬಾಣಾವು ಅಂದ್ಹೇಳುವಾರು
ಎಲ್ಹೋದ್ರು ಬೆನ್ನಾ ಬಿಡುದಿಲ್ಲಿಯಾಲೆ
ಕೊಟೆಸುರುಕಾಗಿ ಬಂದಾವೆ ಕಾಕಿ
ಕೋಟ್ಲಿಂಗ್ನ ಮನಿಯ ಸೇರೀದು ಕಾಕಿ
ವಜ್ಜುರದ ಕಂಬಲ್ಲಿ ಹೋಯ್ ಕೂತೊ ಕಾಕಿ
ರಾಮಾನ ಬಾಣ ಬಿಡುಲಿಲ್ಲಿಯಾಲೆ
ರಾಮಾನ ಬಾಣ ಹೋಯ್ ಬಡಿದಾವು
ಲಗ ಕಂಡುರಯ್ಯ ಕೊಟೆಸೂರು ಸ್ವಾಮಿ
ಕೇಳ್ಯಯ್ಯ ಕೇಳು ಮಂಡೋದ್ರಿ ನೀನು
ಬಲುಗೀನ ಕಣ್ಣಾನು ಕಿತ್ತು ಕೊಡುಬೇಕೆ
ಲಗ ಕಂಡುದಯ್ಯ ರಾಮಾನ ಬಾಣ
ಬಲುದ ಕಣ್ಣಾನು ಕಿತುಕೊಂಡಿತಾಲೆ
ರಾಮಾನ ಬಾಣಕೆ ಹೊಸಿ ಇಲ್ಲಿಯಾಲೆ
ವಾಲಿಯ ಮೈಯಿಗೆ ಕಲಿಯಿಲ್ಲಿಯಾಲೆ

(ಹೇಳಿದವರು : ಬಚ್ಚಮೇರ)

# ಬ್ರಹ್ಮರ ಹಾಡು

ಬ್ರಹ್ಮಯ್ಯ ಹುಟ್ಟಿದನಂವ ಬ್ರಹ್ಮಮಂಡಳದಲಿ
ಮಾಜೋಕು ಹುಟ್ಟಿದಳವ್ವು ಮಾತಾಳದಲಿ
ಬ್ರಹ್ಮಯ್ಯ ಹುಟ್ಟಿದನಂವ ಬಡಸೇರುವಾನು
ಬಡಗಿನ ರಾಜಂಗಳನೆಲ್ಲ ಆಳಿ ಕಂಡುನಾಲೆ
ಮಾಜೋಕು ಹುಟ್ಟಿದಳವ್ವು ತೆಂಕ ಸೇರುವಾಳು
ತೆಂಕಿನ ರಾಜಂಗಳನೆಲ್ಲ ಆಳಿಕಂಡುಳಾಲೆ
ಲಗ ಕಂಡುಳಯ್ಯ ಮಾಜೋಕು ಬಾಲೆ
ಹರದು ಹಾಲುಂಬಾಗು ಅಣ್ಣನ್ನ ಕಾಣಲ್ಲೆ
ಕೂತು ಕೂಳುಂಬಾಗು ಅಣ್ಣನ್ನ ಕಾಣಲ್ಲೆ
ಅಣ್ಣಾನ ಅರುಮನಿ ನಾನ್ಹೋಗುಬೇಕೆ
ಅಣ್ಣಾನ ಕಾಣದೆ ಹನ್ನೆಯ್ಡು ವರುಸಾದೊ
ಅಣ್ಣಾನ ಕಾಣದೆ ಕಣ್ಣು ಕಂಗಳಾದೊ
ಅಣ್ಣಾನ ಅರುಮನಿ ನಾನ್ಹೋಗುಬೇಕೆ
ಅಣ್ಣಾನ ಅರುಮನಿ ಹನ್ನೆಯ್ಡು ವರುಸಾದೊ
ಅಣ್ಣಾನ ಕಾಣದೆ ಕಣ್ಣು ಕಂಗಳಾದೊ
ಅಣ್ಣಾನ ಅರುಮನಿ ನಾನ್ಹೋಗುಬೇಕೆ
ಅಣ್ಣಾನ ಅರುಮನಿ ಹನ್ನೆಯ್ಡು ಬಾಗಿಲು
ಹನ್ನೆಯ್ಡು ಬಾಗಿಲು ಹನ್ನೆಯ್ಡು ಕಾವಲು
ಅಣ್ಣಾನ ಅರುಮನಿ ನಾನ್ಹೋಗುಬೇಕೆ
ಮೂರು ಹೊನ್ನಿನ ಬೀಣಿ ಹಣುಬರುಬೇಕೆ
ಬಡುಗೇರ ಮನಿಗೆ ನಡೆದಾಳೆಲವ್ವು
ಅಕ್ಕುಸಾಲಿ ಮನಿಗೆ ನಡೆದಾಳೆಲವ್ವು
ಲಗ ಕಂಡುಳಯ್ಯ ಮಾಜೋಕು ಬಾಲೆ

ಕೇಳ್ಯಯ್ಯ ಕೇಳಿ ಬಡುಗೇರ ಮಗುನೆ
ಅಣ್ಣಾನ ಅರುಮನಿ ನಾನ್ಹೋಗುಬೇಕೆ
ಮೂರ್ ಹೊನ್ನಿನ ಬೀಣಿ ಹಣ್ದುಕೊಡಬೇಕೆ
ಅಕ್ಕಾಲಿ ಎಂದ ಬಡುಗೇರ ಮಗನು
ಮೂರ್ ಹೊನ್ನಿನ ಬೀಣಿ ಹಣ್ದು ಕೊಟ್ಟುನಾಲೆ
ಲಗ ಕಂಡುಳಯ್ಯ ಮಾಜೋಕುಬಾಲೆ
ತನ್ನಾರಮನಿಗಾಗಿ ತಾ ಬರುವಾಳು
ಅಣ್ಣಾನ ಅರುಮನಿ ನಾನ್ಹೋಗುಬೇಕೆ
ಮೂರ್ ಹೊನ್ನಿನ್ ಬೀಣಿ ಹೊಡಿಯಾಲುಬೇಕೆ
ಅಣ್ಣಾನ ಅರುಮನಿ ಸೌನಿದುಳಾಲೆ
ಹನ್ನೆಯ್ಡು ಹೊರಿಯ ಅನು ಮಾಡುವಾಳೆ
ಅಷ್ಟೊಂದು ಸಂಗೂರ ತರ್ಸಿಕೊಂಡುಳಾಲೆ
ಜನೀನು ಮ್ಯಾಲೆ ಹೊರುಸೀದುಳಾಲೆ
ದಾರಿ ಕೂಡಿಲವ್ಳು ನಡಿತೀರುಳಾಲೆ
ಲಗ ಕಂಡುಳಯ್ಯ ಮಾಜೋಕು ಬಾಲೆ
ಒಂದ್ ಹೊನ್ನಿನ್ ಬೀಣಿಯ ಹೊಡಿದಾಳೆ ದೇವಿ
ಅಣ್ಣಾನ ಅರುಮನಿ ಕೇಣಾಲು ಇಲ್ಲೆ
ಎಯ್ಡು ದಾರಿ ಕೂಡಿ ನಡಿದಾಳೆ ದೇವಿ
ಎಯ್ಡ್ ಹೊನ್ನಿನ್ ಬೀಣಿ ಹೊಡಿದಾಳೆ ದೇವಿ
ಅಣ್ಣಾನ ಅರುಮನಿ ಕೇಂಡಾವೆ ಬೀಣಿ
ಲಗ ಕಂಡುನಯ್ಯ ಅಣ್ಣಾನು ಪಣ್ಣ
ಹಾದಿಯ ಒಕ್ಕಾಲು ತೆಗಿತಿರುವಾಲೆ
ಕೇಳ್ಯಯ್ಯ ಕೇಳಿ ನರಮನಸ್ರೆ ನೀವು
ನನು ತಂಗಿ ಮಾಜೋಕು ಬರುತಾಳೆ ನೋಡಿ
ಮನುಸಾರ ತಿಂಬ ಮಾಜೋಕು ಬಾಲೆ
ನನು ತಂಗಿ ಮಾಜೋಕು ಬರುತಾಳೆ ನೋಡಿ
ಹಾದಿಯ ಸಬತ ಅನುಗೈಯುವಾನು
ಬೀದಿಯ ಒಕ್ಕಾಲು ತೆಗಿತಿದ್ದುನಾಲೆ
ಅಣ್ಣಾನ ಅರುಮನಿ ಬಂದಾಳೆ ದೇವಿ

ಅರುಮನಿ ಬಾಗ್ಲಲ್ಲಿ ಬಂದಾಳೆ ದೇವಿ
ಆನಿಯ ಬಾಗ್ಲಲ್ಲೆ ಬಂದ್ ನಿಲ್ಲುವಾಳೊ
ಸೊಪ್ಪಿನ ಹೊರಿಯ ಕೊಂಡ್ಹಿಡಿವಾಳೊ
ಆನಿಗೆ ಕೊಟ್ಟಾಳೊ ಸೊಪ್ಪೊರಿಗಾಳ
ಹಿಡಿ ನಿನ್ನ ಆಹುತಿ ಬಿಡು ಬಾಗಿಲಾನ
ಒಂದೆ ಬಾಗಿಲು ದಾಟೀದುಳಮ್ಮ
ಕುದುರಿಯ ಬಾಗ್ಲಲ್ಲಿ ಬಂದು ನಿಲ್ಲುವಾಳೊ
ಕುದುರಿಗೆ ಕೊಟ್ಟಾಳು ಹುರೋಳಿ ಹೊರಿಗಾಳ
ಹಿಡಿ ನಿನ್ನ ಆಹುತಿ ಬಿಡು ಬಾಗಿಲಾನ
ಎಯ್ಡೆ ಬಾಗಿಲು ದಾಟೀದುಳಮ್ಮ
ಕತ್ತಿಯ ಬಾಗ್ಲಲ್ಲಿ ಹೋಯ್ ನಿಲ್ಲುವಾಳೊ
ಕತ್ತಿಗೆ ಕೊಟ್ಟಾಳು ಗಂಜಿ ಹೊರಿಯಾನು
ಹಿಡಿ ನಿನ್ನ ಆಹುತಿ ಬಿಡು ಬಾಗಿಲಾನ
ಮೂರೆ ಬಾಗಿಲು ದಾಟೀದುಳಮ್ಮ
ಹೋರಿಯ ಬಾಗ್ಲಲ್ಲೆ ಹೋಯ್ ನಿಲ್ಲುವಾಳೊ
ಹೋರೀಗೆ ಕೊಟ್ಟಾಳು ಹುಲ್ಲು ಹೊರಿಗಾಳ
ಹಿಡಿ ನಿನ್ನ ಆಹುತಿ ಬಿಡು ಬಾಗಿಲಾನ
ನಾಕೆ ಬಾಗಿಲು ದಾಟೀದುಳಮ್ಮ
ಎತ್ತಿನ ಬಾಗ್ಲಲ್ಲಿ ಹೋಯ್ ನಿಲ್ಲುವಾಳೊ
ಎತ್ತಿಗೆ ಕೊಟ್ಟಾಳು ಹುಲ್ಲು ಹೊರಿಗಾಳ
ಹಿಡಿ ನಿನ್ನ ಆಹುತಿ ಬಿಡು ಬಾಗಿಲಾನ
ಐದೆ ಬಾಗಿಲ ದಾಟೀದುಳಮ್ಮ
ಕೋಳಿಯ ಬಾಗ್ಲಲ್ಲೆ ಹೋಯ್ ನಿಲ್ಲುವಾಳೊ
ಕೋಳಿಗೆ ಕೊಟ್ಟಾಳು ಬತ್ತದ ಹೊರಿಗಾಳ
ಹಿಡಿ ನಿನ್ನ ಆಹುತಿ ಬಿಡು ಬಾಗಿಲಾನ
ಆರೆ ಬಾಗಿಲು ದಾಟೀದುಳಮ್ಮ
ನಾಯಿಯ ಬಾಗ್ಲಲ್ಲೆ ಹೋಯ್ ನಿಲ್ಲುವಾಳೊ
ನಾಯಿಗೆ ಕೊಟ್ಟಾಳು ಗಂಜಿ ಹೊರಿಗಾಳ

ಹಿಡಿ ನಿನ್ನ ಆಹುತಿ ಬಿಡು ಬಾಗಿಲಾನ
ಏಳೆ ಬಾಗಿಲು ದಾಟೀದುಳಮ್ಮ
ಬೆಕ್ಕಿನ ಬಾಗ್ಲಲ್ಲೆ ಹೋಯ್ ನಿಲ್ಲುವಾಳೊ
ಬೆಕ್ಕಿಗೆ ಕೊಟ್ಟಾಳು ಅನ್ನದ ಹೊರಿಗಾಳ
ಹಿಡಿ ನಿನ್ನ ಆಹುತಿ ಬಿಡು ಬಾಗಿಲಾನ
ಎಂಟೆ ಬಾಗಿಲು ದಾಟೀದುಳಮ್ಮ
ಒಂಟಿ ಬಾಗ್ಲಲ್ಲೆ ಹೋಯ್ ನಿಲ್ಲುವಾಳು
ಒಂಟಿಗೆ ಕೊಟ್ಟಾಳು ಸೊಪ್ಪೊರಿಗಾಳ
ಹಿಡಿ ನಿನ್ನ ಆಹುತಿ ಬಿಡು ಬಾಗಿಲಾನ
ಒಂಬತ್ತೆ ಬಾಗಿಲು ದಾಟೀದುಳಮ್ಮ
ಕೈಡಿಯ ಬಾಗ್ಲಲ್ಲೆ ಹೋಯ್ ನಿಲ್ಲುವಾಳು
ಕೈಡಿಗೆ ಕೊಟ್ಟಾಳು ಒರ್ಲಿ ಹೊರಿಗಾಳ
ಹಿಡಿ ನಿನ್ನ ಆಹುತಿ ಬಿಡು ಬಾಗಿಲಾನ
ಹತ್ತೆ ಬಾಗಿಲು ದಾಟೀದುಳಮ್ಮ
ಹುಲಿಯ ಬಾಗ್ಲಲ್ಲೆ ಹೋಯ್ ನಿಲ್ಲುವಾಳು
ಹುಲಿಗೆ ಕೊಟ್ಟಾಳು ಬಾಡ್ ಹೊರಿಗಳ
ಹಿಡಿ ನಿನ್ನ ಆಹುತಿ ಬಿಡು ಬಾಗಿಲಾನ
ಹನ್ನೊಂದೆ ಬಾಗಿಲು ದಾಟೀದುಳಮ್ಮ
ಸರ್ಪದ ಬಾಗ್ಲಲ್ಲೆ ಹೋಯ್ ನಿಲ್ಲುವಾಳು
ಸರ್ಪಕೆ ಕೊಟ್ಟಾಳು ಮಟ್ಟಿ ಹೊರಿಗಾಳ
ಹಿಡಿ ನಿನ್ನ ಆಹುತಿ ಬಿಡು ಬಾಗಿಲಾನ
ಹನ್ನೆಯ್ಡೆ ಬಾಗಿಲು ದಾಟೀದುಳಮ್ಮ
ಅಣ್ಣಾನ ಪಣ್ಣಾನ ಅರುಮನಿಗಾಗಿ
ಕೇಳು ತಂಗಿ ಕೇಳು ಮಾಜೋಕು ನೀನು
ಹಗ್ಗೀನ ಹೋಕಿಗೆ ಎನು ಬಂದೆ ತಂಗಿ
ಬ್ಯಾಸೀಗಿ ಮೊದಲೀಗೆ ಎನು ಬಂದೆ ತಂಗಿ
ಹಸಿವಿಗೆ ಹಾಲ್ಹಣ್ಣ ಮೆಲುಬೇಕು ತಂಗಿ
ಬಾಯೇರಿಗ್ ಹಾಲ ಕುಡಿಬೇಕು ತಂಗಿ

ಕೂಪಲ್ಲಿಗ್ ಹೊನು ಬ್ಯಾಡಂದುಳಾಲೆ
ಬಾಯಾರಿಗ್ ಹಾಲ ಬ್ಯಾಡಂದುಳಾಲೆ
ಹಸಿವಿಗೆ ಹಾಲ್ಹಣ್ಣ ಬ್ಯಾಡಂದುಳಾಲೆ
ಅಣ್ಣಾಗೆ ಹಿಡಿದೊ ಹನ್ನೆಯ್ಡು ತಾಪ
ತಲೀಗೆ ಹಿಡಿದೊ ಕುದಲೀನ ತಾಪ
ಕುದುಲೀಗೆ ಹಿಡಿದೊ ಚೀರುಗಳ ತಾಪ
ಚೀರಿಗೆ ಹಿಡಿದೊ ಮರಿಹೇನು ತಾಪ
ತಲೀಗೆ ಹಿಡಿದೊ ಹೇನುಗಳ ತಾಪ
ಅಣ್ಣಾಗೆ ಹಿಡಿದೊ ಹನ್ನೆಯ್ಡು ತಾಪ
ಕೇಳಣ್ಣ ಕೇಳೊ ಅಣ್ಣಾನು ಪಣ್ಣ
ನಿನ ತಾಪನಾದಾರು ಬಿಡ್ಸಿ ಹೋಗುತೇನೆ
ಹನ್ನೆಯ್ಡು ಸಂಗೂರ ತರ್ಸಿ ಕೊಡುಬೇಕೆ
ಹನ್ನೆಯ್ಡು ಕಾಯಿ ಆಗಾಲುಬೇಕೆ
ಹನ್ನೆಯ್ಡು ಕೊಟ್ಟಿ ಹಾನು ಆಗುಬೇಕೆ
ಹನ್ನೆಯ್ಡು ಸಿದ್ದಕ್ಕಿ ಬಲಿಯಾಗುಬೇಕೆ
ಹನ್ನೆಯ್ಡು ಸಿದ್ದಕ್ಕಿ ಚರುವಾಗುಬೇಕೆ
ಹನ್ನೆಯ್ಡು ಕೋಳಿ ಆಗಾಲುಬೇಕೆ
ಅಷ್ಟೊಂದು ಸಾಯತ ತರ್ಸಿಕೊಂಡುಳಾಲೆ
ಲಗ ಕಂಡುಳಯ್ಯ ಮಾಜೋಕುಬಾಲೆ
ಅಣ್ಣಾನಲಾದರೂ ಕೂರಿಸುವಾಳು
ಮೂರು ದಾರಿ ಕೂಡಿ ನಡೆದಾರೆಲವ್ರು
ಅಷ್ಟೊಂದು ಸಾಯತ ತಕ್ಕೊಂಡುಳಾಲೆ
ಮೂರುದಾರಿಯಲ್ಲಿ ಕೂರಿಸುವಾಳು
ಹನ್ನೆಯ್ಡು ಸಿದ್ದಕ್ಕಿ ಚರು ಹೊಯ್ಯುವಾಳು
ಹನ್ನೆಯ್ಡು ಸಿದ್ದಕ್ಕಿ ಹಾನು ಇಡುವಾಳು
ಹನ್ನೆಯ್ಡು ಕೋಲುನೆಣಿ ಇಡುವಾಳೂ
ಹನ್ನೆಯ್ಡು ಕಾಯಿ ಒಡಿದಾಳೆಲವ್ವು
ಹನ್ನೆಯ್ಡು ಕೋಳಿ ಕಡಿದಾಳೆಲವ್ವು
ಅಣ್ಣಾನ ತಾಪ ಬಿಟ್ಹೋದುವಾಲೆ

ಅಣ್ಣಾನ ಅರುಮನಿ ಬಂದಾರೆಲವ್ರು
ಲಗ ಕಂಡುಳಯ್ಯ ಮಾಜೋಕು ಬಾಲ
ತನ್ನಾರಮನಿಗಾಗಿ ನಡೆದಾಳೆಲವ್ವು
ಅಣ್ಣಾನ ತಾಪ ಬಿಡುಸೀದುಳಾಲೆ
ದಾರಿ ಕೂಡಿ ಹೊಯ್ತಾಳೆಲವ್ವು
ಇತ್ತಿಂದೆ ಇವ್ವು ಮಾಜೋಕು ಬಾಲೆ
ಅತ್ತಿಂದೆ ಅಂವ ದೇವುರುಕಂದ
ತನುಬಾರಿಗಂಡಿನ ಬೆರ್ಸಿ ಹಿಡಿದಾಳು
ಅಂಗೈಯಲ್ಲೆ ಹಾರಿ ಹಿಡಿದಾಳು
ಮುಂಗೈಯಲ್ಲೆ ಮುರಿದಾಳು
ಸುಳ್ಳುಉಗ್ರಿನಲ್ಲಿ ಒಟ್ಟಿ ತಿನ್ನುವಾಳು
ತನುಬಾರಿಗಂಡಿನ ತಿಂದಾಳೆಲವ್ವು
ದಾರಿ ಕೂಡಿ ಅವ್ವು ನಡೆದಾಳೆಲವ್ವು
ಇತ್ತಿಂದೆ ಇವ್ವು ಮಾಜೋಕು ಬಾಲೆ
ಅತ್ತಿಂದೆ ಅಂವ ದೇವುರುಕಂದ
ದೇವುರುಕಂದಾನ ಕಂಡಾಳೆಲವ್ವು
ದೇವುರು ಕಂದಾನ ಬೆರ್ಸಿ ಹಿಡಿದಾಳು
ಅಸುವಂತನ ಕಟ್ಟೀನ ಕಟ್ಟೀದಳವ್ವು
ದೇವುರುಕಂದಾನ ಕೂರುಸೀದುಳವ್ವು
ಪಾಪಕೆ ತನುಬಾರಿ ಗಂಡಿನ ತಿಂದಿ
ಪುಣ್ಯಕೆ ಹೊನುದ್ಯಾವರಿ ಕಡಿಸೀದುನಾಲೆ
ನನ್ನ ಪಾಪ ಅಂಬುದು ಪರಿಯಾದುವಾಲೆ
ಮಾಜೋಕು ಹಾಡು ಗಡಿಯಾದುವಾಲೆ

(ಹೇಳಿದವರು : ಬಚ್ಚಮೇರ)

**ಬಿನ್ನ ಪತ್ಯ**

## ಕಾಡ್ಯನ ಹುಟ್ಟು

ಕಂತುತಾನಬ್ಬಿಯ ಮಗಳು ಮಿಂಚುತಾನಬ್ಬಿಯೆ
ಮಿಂಚುತಾನಬ್ಬಿಯ ಮಗಳು ಸೆಡರಬ್ಬೆ
ಸೆಡರಲಬ್ಬೆಯ ಮಗಳು ಬ್ಯಾಡರಬ್ಬೆ
ಹುಟ್ಟಿದಳ್ ಹುಟ್ಟಿದಳವ್ವ ಮ್ಯಾರರ ಹೊನ್ನಿ
ಏನೆಂಬ ದಿನದಲ್ಲಿ ಹೊನ್ನಿ ಹುಟ್ಟಿದಾಳು
ಎಂತೆಂಬ ದಿನದಲ್ಲಿ ಹೊನ್ನಿ ಹುಟ್ಟಿದಾಳು
ಶನಿವಾರ ದಿನದಲ್ಲಿ ಹೊನ್ನಿ ಹುಟ್ಟಿದಾಳ
ಆಯಿತ್ಯವಾರ ದಿನದಲ್ಲಿ ಉದುಬಾಗ ಆದುಳಾಲೆ
ಹಸು ಹೋಗಿ ಶಿಶುವು ತಾನು ಆದುಳಾಲೆ
ಶಿಶು ಹೋಗಿ ಹೆಣ್ಣೊಂದು ತಾನು ಆದುಳಾಲೆ
ಹೆಣ್ಣು ಹೋಗಿ ಹೆಂಗೂಸು ತಾನು ಆದುಳಾಲೆ
ಗಾಳಿದೇವರ ಸಂಗ ಮಾಡುವಾಳು ಹೊನ್ನಿ
ಮೂರೆ ದಿನದ ಮುಟ್ಟು ಬಂದುವಾಲೆ
ಐದೆಂಬ ದಿನದಲ್ಲಿ ನದಿ ಸಾನು ಮಾಡಿ ಹೊನ್ನಿ
ಆ ನೀರು ನಿತ್ತು ಬಸುರು ಬಂದುವಾಲೆ
ಒಂದೆಂಬ ತಿಂಗಳು ಎಲ್ಲ ಸಂದುವಾಲೆ ಹೊನ್ನಿಗೆ
ಎರಡೆಂಬ ತಿಂಗಳು ಎಲ್ಲ ಸಂದುವಾಲೆ
ಮೂರೆಂಬ ತಿಂಗಳು ಎಲ್ಲ ಸಲ್ಲುವಾದೆ
ನಾಕೆಂಬ ತಿಂಗಳು ಎಲ್ಲ ಸಲ್ಲುವಾದೆ
ಐದೆಂಬ ತಿಂಗಳು ಎಲ್ಲ ಸಂದುವಾಲೆ
ಆರೆಂಬ ತಿಂಗಳು ಎಲ್ಲ ಸಂದುವಾಲೆ
ಏಳೆಂಬ ತಿಂಗಳು ಎಲ್ಲ ಸಂದುವಾಲೆ
ಎಂಟೆಂಬ ತಿಂಗಳು ಎಲ್ಲ ಸಂದುವಾಲೆ
ಒಂಬತ್ತು ತಿಂಗಳಿಗೆ ತುಂಬಿದು ಗರುಬ

ಹತ್ತೆಂಬ ತಿಂಗಳು ಎಲ್ಲ ಸಂದುವಾಲೆ
ಹತ್ತೆಂಬ ತಿಂಗಳು ಹೊತ್ತೀನು ದಿನುವಾಲೆ
ಹೊತ್ತೀನ ದಿನುದಲ್ಲಿ ತಾನು ಹಡಿದಾಳು ಹೊನ್ನಿ
ಒಂದೆ ಬಸಿರಿಗೆ ಏಳ್‌ಮಂದಿ ಮಕ್ಕಾಳ್ ಹುಟ್ಟಿ
ಅರ್‍ಗ್ಗಲೊ ಬರ್‍ಗ್ಗಲೊ ಎಲ್ಲ ಬಂದಿದಾವೆ
ಬರ್‍ಗ್ಗಲ ಕಾಲ್ದಲ್ಲಿ ಏಳ್‌ಮಂದಿ ಹುಟ್ಟಿದಾವೆ
ಎನ್ನ ಮಕ್ಕಾಳ್ ಎನ್ನ ಕೂಸಾಳ್ ಹಸಿದಾವೆ
ಒಡಿಯಾರ ಮನಿಗೆ ಓಡಿ ನೆಡಿದಾಳ ಹೊನ್ನಿ
ಒಡಿಯಾರ ಒಡಿಯಾರ ಎಂದ ಕರಿದಾಳ ಹೊನ್ನಿ
ಯಾರೆ ಏನೆ ಹೊನ್ನಿ ಕೇಂಡುರಾಲೆ
ಅರ್‍ಗ್ಗಲೊ ಬರ್‍ಗ್ಗಲೊ ಎಲ್ಲ ಬಂದುವಾಲೆ ಒಡಿನೆ
ಬರ್‍ಗ್ಗಲ ಕಾಲ್ದಲ್ಲಿ ಏಳ್‌ಮಂದಿ ಮಕ್ಕಾಳ್ ಹುಟ್ಟಿ
ಎನ್ನ ಮಕ್ಕಾಳ್ ಎನ್ನ ಕೂಸಾಳ್ ಹಸಿದಾವೆ ಒಡಿನೆ
ಚಕ್ರಕೆ ಒಪ್ಪಾನ ಬತ್ತ ಕೊಡಬೇಕು
ಆಗಳಿ ಕಂಡರೆ ಹೊನ್ನಿ ಒಡಿಯಾರು
ಹಂಗರೆ ಹಾನಿಯಲಾರು ತಂದುರಾಲೆ ಅವ್ರ್
ಚುಂಗಿನ ಬತ್ತವ ಅಳ್ದು ಕೊಟ್ಟುರಾಲೆ
ಶ್ಯಾಲಿಯ ಸೆರ್‍ಗ್‌ಒಡ್ಡಿ ಹೊನ್ನಿ ಕಟ್ಟಿದಾಳ
ತನ್ನಲ್ಲಿ ಮನಿಗೆ ತಾನು ತಂದುಳಾಲೆ ಹೊನ್ನಿ
ಸುವ್ವಾಲೆ ಸೊಪ್ಪಾಲೆ ಎಂದು ಕುಟ್ಟಿದಾಳ ಹೊನ್ನಿ
ಬೇವಾಲೆ ಬೆಪ್ಪಾಲೆ ಎಂದು ಬೇಗಿದಾಳು
ಒಂದ್ ಸಿದ್ದೆ ಅಕ್ಕಿಯನಾರು ಮಾಡಿ ಹೊನ್ನಿ
ಗಂಜಿಯ ತೆಳಿಯನಾದಾರು ಮಾಡುವಾಳು
ಏಳೆ ಹೊಂಡುವೆಲಾದಾರು ತೆಗಿದಾಳು ಹೊನ್ನಿ
ಏಳೆ ಹೊಂಡುಕೆ ಗಂಜಿ ಎರಿದಾಳೆ
ಏಳ್ ಮಂದಿ ಮಕ್ಕಳನೀಗ ಕುಳ್ಸುವಾಳು
ಏಳ್ ಮಂದಿ ಮಕ್ಕಾಳು ಗಂಜಿ ತಿಂದುವಾಲೆ
ಏಳೆ ಹೊಂಡುವೆಲಾರು ನೆಕ್ಕಿದಾಳು ಅವ್ವು
ಏಳೆ ತೇಗನೀಗ ತೇಗುವಾಳು ಹೊನ್ನಿ
ಇನ್ನೇಳೆ ಹೊಂಡುವನಿದ್ದರೆಲೀಗ ನೆಕ್ಕುತಿದ್ದಿ
ಇನ್ನೇಳೆ ತೇಗುನೀಗ ತೇಗುತಿದ್ದಿ

ಆಗಳಿ ಕಂಡಳೆಲವ್ವು ಮ್ಯಾರರ ಹೊನ್ನಿ
ಹೀಗೆ ಕೂತರು ನನ್ನ ಕಾಲ ಕಳಿಯ
ಹೀಗೆ ಕೂತರು ನನ್ನ ಗಳ್ಗಿ ಹೋಗ
ಅರ್ಗಾಲೊ ಬರ್ಗಾಲೊ ಎಲ್ಲ ಬಂದುವಾಲೆ
ಜಾತಿಯ ಕಸುಬನಾದಾರು ಮಾಡಬೇಕೆ
ಕುಲದ ಉದ್ಯೋಗನಾದಾರು ಮಾಡಬೇಕೆ
ಹಣರಲಾಚಾರಿ ಮನಿಗೆ ನೆಡಿದಾಳ ಹೊನ್ನಿ
ಕೇಳಿ ಕೇಳಯ್ಯ ನೀನು ಹಣರಲಾಚಾರಯ್ಯ
ಒಂದೆ ಕಾಸಣಿಗೆ ಒಂದೆ ಹಣುತಕೆ
ಏಳೆ ಆಯುದು ನನಗೆ ಆಗುಬೇಕೆ
ಆಗಳಿ ಕಂಡನೆಲಂವ ಹಣರಲಾಚಾರಿ
ಒಂದೆ ಕಾಸಿಗೆ ಒಂದೆ ಹಣುತಕೆ
ಏಳರ ಆಯುದುನಂವ ಹಣ್ಣು ಕೊಟ್ಟುನೀಗ
ಏಲೆ ಆಯುದು ಹೊರಿ ಕಟ್ಟುಕಂಡ್ ಹೊನ್ನಿ
ಮೂಡಣ ತೊರಿಗೆಲೀಗ ನೆಡಿದಾಳ
ಗಡ್ಡೆಗೆಣ್ಣನು ಹೆಯ್ದುವಲ್ ಹೋದುಳಾಲೆ ಹೊನ್ನಿ
ಒಂದೆ ಬಳ್ಳಿಯನಾದಾರು ಕಂಡುಳಾಲೆ
ಮೇಲ್ ಕಡು ಮೇಲ್ಕತ್ತಿಯಲ್ಲಿ ಸವ್ರುವಾಳು ಹೊನ್ನಿ
ಸವ್ರಿ ದಿಡುಕೊಮ್ಮೆ ಒತ್ತುವಾಲು
ಮುಂಡ್ ಕಡು ಮುಂಡ್ಕತ್ತಿಯಲ್ಲಿ ಕಡಿದಾಳು
ಮಣ್ಣ್‌ಕಡು ಬಂಗಾರ್ ಹಾರಿಯಲ್ ಕಡಿದಾಳು ಹೊನ್ನಿ
ಕಡಿದು ದಿಡುಕರು ಹಾಕುವಾಳು
ಕುದ್ರಿಯ ತೋರಾದ ಬೇರು ಬಂದುವಾಲೆ
ಬೇರ್ ಕಡು ಬೇರ್ಮಚ್ವಲೀಗ ಕಡಿದಾಳು ಹೊನ್ನಿ
ಆನಿಯ ತೋರಾದ ಕಲ್ಲು ಬಂದುವಾಲೆ
ಕಲ್ಲ್‌ಕಡು ಕಲ್ಮಚ್ಚಲ್ ಹೊನ್ನಿ ಕಡಿದಾಳು
ಕಡಿದೆ ದಿಡುಕೆಲಾರು ಒತ್ತಿದಾಳೆ
ಚಿನ್ನದ್ ಕಳ್ಸ ಮಣ್ಣಿನ್ ಕಳ್ಸ ಸಿಕ್ಕಿದಾವೆ
ಅದುವೆ ಅಲ್ಲಾದುರೀಗ ಬಿಟ್ಟುಳಾಲೆ ಹೊನ್ನಿ
ಒಡಿಯರ ಮನಿಗೆ ಓಡಿ ನೆಡಿದಾಳ
ಒಡಿಯಾರ ಒಡಿಯಾರ ಎಂದು ಕರಿದಾಳು

ಏನೆ ಎಂತದೆ ಹೊನ್ನಿ ಕೇಂಡುರಾಲೆ
ಗೆಡ್ಡೆಗೆಣ್ಣನು ಹೆಯ್ದುವಲ್ ಹೋದಿ ಒಡಿನೆ
ಗೆಡ್ಡೆಗೆಣ್ಣನು ನಾನು ಹೆಯ್ದುವಾಗ ಒಡಿನೆ
ಕುದ್ರಿಯ ತೋರಾದ ಬೇರು ಬಂದುವಾಲೆ
ಕಡಿದೆ ದಿಡುಕೆ ನಾನು ಒತ್ತಿನಾಲೆ
ಆನಿಯ ತೋರಾದ ಕಲ್ಲು ಬಂದುವಾಲೆ
ಕಲ್ಲ್‌ಕಡು ಕಲ್ಮಚ್ಚಲದನ ಕಡುದೀದಿ
ಕಡಿದೆ ದಿಡುಕೆ ನಾನು ಹಾಕಿನಾಲೆ
ಕಡಿದೆ ದಿಡುಕೆ ನಾನ್ ಹಾಕುವಾಗೆ ಒಡಿನೆ
ಚಿನ್ನದ ಕಳ್ಸ ಮಣ್ಣಿನ ಕಳ್ಸ ಬಂದುವಾಲೆ
ಅದುಕೆ ಏನೆ ಚಿಂತಿಯು ನಿನಗೆ ಬ್ಯಾಡ ಹೊನ್ನಿ
ಅದಲನಾದರು ಹೋಗಿ ತಾರೆ ಹೊನ್ನಿ
ಚಿನ್ನದ ಕಳ್ಸ ತಲಿಮ್ಯಾಲೆ ಹೊತ್ತಿದಾಳೆ ಹೊನ್ನಿ
ಮಣ್ಣಿನ್ ಕಳ್ಸ ಬಗಲಲ್ಲಿ ಚಂಚಿದಾಳ
ಒಡಿಯಾರ ಮನಿಗೆ ಓಡಿ ನೆಡಿದಾಳೆ
ಚಿನ್ನದ ಕಳ್ಸ ಎಂಬಾದು ಕೇಳೆ ಹೊನ್ನಿ
ನನ್ನ ಮನಿ ಮುಂದಿನ ಮಲಗೆದ್ದಿಯಲ್ಲಿ
ಅಲ್ಲೆನಾದರು ಅದರ ಇಡೆ ಹೊನ್ನಿ
ಮಣ್ಣಿ ಕಳ್ಸ ಎಂಬಾದೀಗ ನಿನುಗಾಲೆ ಹೊನ್ನಿ
ಇದು ನನ್ಗೆ ಹುಟ್ಟಿನ್ ಚಿತ್ತೇರಿಯಾದು ಹೊನ್ನಿ
ಅದು ನಿನ್ಗೆ ಹುಟ್ಟಿನ್ ಕಾಡ್ಯ ಆದುವಾಲೆ ಹೊನ್ನಿ
ಅದುನೆ ಎಲ್ಲೆ ಇರು ಮಾಡ್ಲಿ ಹೊನ್ನಿ
ಕಾಸಾರ ಹಾಳಿದುದಾಚಿ ಬಾಂಕರ ಹಾಳಿ
ಬಾಂಕರ ಹಾಳಿದಾಚಿ ಕಾಕಿ ಹಾಡಿ
ಕಾಕಿಯ ಹಾಡಿದಾಚಿ ಸೊಳ್ಳಿ ಹಾಡಿ
ಸೊಳ್ಳಿಹಾಡಿಲಿ ಇರು ಮಾಡೆ ಹೊನ್ನಿ
ಸೊಳ್ಳಿಯ ಹಾಡ್ಯಲ್ಲಿ ಇರು ಮಾಡಿದಾಳ ಹೊನ್ನಿ
ಪೂಜೊ ಪ್ರಸ್ತವ ಎಲ್ಲ ಮಾಡುವಾಳು
ಕುಲದ ದೇವರು ನನಗೆ ಆದುವಾಲೆ

(ಹೇಳಿದವರು : ಶ್ರೀ ನೀಚ ಮೇರ, ಶ್ರೀ ಕುಷ್ಟ ಮೇರ)

# ಮೂರನೇ ಭಾಗ

# ಡಕ್ಕೆ ಬಲಿಯ ಹೊಗಳಿಕೆಗಳು

## ಅಥವಾ

# ಪಾಣರಾಟದ ಹಾಡುಗಳು

# ಸ್ವಾಮಿ (ನಾಗ)ಯ ಹೊಗಳಿಕೆಗಳು

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ, ಉಡುಪಿ ಪ್ರದೇಶದ ವಿಶಿಷ್ಟ ಆಚರಣೆ ಡಕ್ಕೆಬಲಿ. ಡಕ್ಕೆ ಬಲಿ ಎಂದರೆ ನಾಗಮಂಡಲದ ಸಂಕ್ಷೇಪರೂಪ ಎಂದು ಅನೇಕರು ಹೇಳುವುದುಂಟು. ಆದರೆ ವಾಸ್ತವಿಕವಾಗಿ ಅಲ್ಲ. 'ಸ್ವಾಮಿಯ ಮನೆ'(ಗುಡಿ)ಗಳಲ್ಲಿ ಅಥವಾ ಇನ್ನಿತರ ದೈವದ ಮನೆಗಳಲ್ಲಿ ಸ್ವಾಮಿ ಹಾಯ್ಗುಳಿ, ಚಿಕ್ಕು, ಹಳೆಯಮ್ಮ ಒಬ್ಬರ್ಯ ಮುಂತಾದ ದೈವಗಳಿಗೆ ಡಕ್ಕೆ ನುಡಿಸಿ 'ಹೊಗಳಿಕೆ' ಹಾಡಿ ಕುಣಿದು ಪಾಣರು ನಡೆಸುವ ಉಪಚಾರವೇ ಡಕ್ಕೆ ಬಲಿ. 'ಸ್ವಾಮಿ' ಕನ್ನಡ ಪ್ರದೇಶದ ಅತ್ಯಂತ ಜನಪ್ರಿಯ ದೈವ. ಸ್ವಾಮಿಯ ಗುಡಿಗಳಲ್ಲಿ ಸಾಮಾನ್ಯವಾಗಿ ಬೃಹತ್ ಗಾತ್ರದ ಹುತ್ತ ಬೆಳೆದಿರುತ್ತದೆ. ಸ್ವಾಮಿಯ ಹೊಗಳಿಕೆ ಹಾಡನ್ನು ಕಂಡರೆ ಹಾಗೂ ಅದರ ಕೊನೆಯಲ್ಲಿ ಬರುವ 'ಚಿತ್ತಾ ಸಂತೋಷದಲ್ಲಿ ತನ್ನ ಸ್ಥಾನದಲ್ಲಿ ಸ್ಥಿರವಾಗಿ ನಿಲ್ಲುವಂತಹ ಮುದ್ದುಸ್ವಾಮಿ' ಎಂದಿರುವುದನ್ನು ಕಂಡರೆ ಈ 'ಸ್ವಾಮಿ' ಸುಬ್ರಹ್ಮಣ್ಯರೂಪದ ನಾಗನಲ್ಲದೆ ಬೇರೆ ಅಲ್ಲ. ಕೇರಳದಲ್ಲಿ ಸುಬ್ರಹ್ಮಣ್ಯನನ್ನು ಮುದ್ದುಸ್ವಾಮಿ ಎನ್ನುವುದಿದೆ. ನಾಗಾರಾಧನೆ ಕರಾವಳಿಯ ಆದಿಮ ಆರಾಧನೆಗಳಲ್ಲಿ ಒಂದು.

ಡಕ್ಕೆಬಲಿಯು ಸಂದರ್ಭದಲ್ಲಿ ಪಾಣರು ಸ್ವಾಮಿ ಕೋಲವನ್ನು ನಡೆಸಿಕೊಡುತ್ತಾರೆ. ಈ ಆಚರಣೆಯ ಸಂದರ್ಭದಲ್ಲಿ ಪಾಣರು ನಾಗ(ಸಪಾಕ ಕೃತಿ), ಬ್ರಹ್ಮ, ಹಾಗೂ ಸ್ವಸ್ತಿಕ (ಗಣಪತಿ)ದ ರೂಪಗಳನ್ನು ಪಂಚವರ್ಣದ ಹುಡಿಯಲ್ಲಿ ರೇಖಿಸುವರು. ಪಾಣರು ತೊಡುವ ಅರ್ಧನಾರೀ ವೇಷದ ಸ್ವರೂಪ ನಾಗಮಂಡಲದ ಅರ್ಧನಾರಿ ವೇಷವನ್ನು ಹೋಲುತ್ತದೆ. ಪಾತ್ರಿ ಕೆಂಪು ಗೆಜ್ಜೆ ಚಲ್ಲಣ ತೊಟ್ಟು ತಲೆಗೆ ನಾಗನ ಹೆಡೆಯನ್ನು ಹೋಲುವ ಕಿರೀಟವನ್ನು ಧರಿಸಿಕೊಂಡು ಅರ್ಧನಾರಿ ವೇಷದ ಪಾಣನ ಹಾಡಿಗೆ ತಕ್ಕಂತೆ ಕುಣಿಯುತ್ತಿರುತ್ತಾನೆ. ನಾಗನಂತೆ ಬಾಗಿ ಬಾಳುಕುವ ನಟನೆ ಮಾಡುತ್ತಾನೆ. ಸ್ವಾಮಿಯ ಹಾಡಿನಲ್ಲಿ ನಾಗನ ಹುಟ್ಟು, ರೂಪವನ್ನು ವಿವರಿಸಿರುವುದು ಕಂಡು ಬರುತ್ತದೆ.

**ಸ್ವಾಮಿ ಹೊಗಳಿಕೆ**

ಸ್ಥಳವೆಂಬಾ ಸ್ಥಳದಲ್ಲಿ ಸ್ಥಿರವಾಗಿ ನಿಲ್ಲುವಂಥಾ ಶ್ರೀ ಸ್ವಾಮಿಲಿಂಗಾ ಆ ದಿನದ ಭೋಗಕ್ಕೆ ಸುಖಸಂತೋಷದಲಿ ವಾಸವಾಗಿರುವಂಥಾ ಶ್ರೀ ಸ್ವಾಮಿ ಲಿಂಗಾ.......

ಗಂಡಿನೊಳಗೆ ಗಂಡು ಮಹಾಚೆಲುವ ನೀನು
ಯಾವ ತಾಯಿಯ ಹಡೆದ ಮಗನೆ ನೀನು
ಸಿರಿದೇವಿಯ ಹಡೆದ ಕುವರ ನೀನು
ಸೊಂಟದ ಪರಿಕರ ಚೆಂಡ ಸ್ವಾಮಿಲಿಂಗನೆ
ತೋಳು ತೊಡಿಯ ಚೆಂದ ಸ್ವಾಮಿಲಿಂಗನೆ
ಕಾಮದೇವರು ಹಿಡಿವ ಬಿಲ್ಲಹೋಲೆ
ಹೊಟ್ಟೆಯ ಪರಿಕರ ಬೆಂದ ಸ್ವಾಮಿಲಿಂಗನೆ
ಎಳೆಯ ಸಿಂಗರ ಹೂವಿನ ಕೊನೆಯ ಹೋಲೆ
ಎದೆಯ ಪರಿಕರ ಚೆಂದ ಸ್ವಾಮಿ ಲಿಂಗನೆ
ಅರಗಿಸಿಟ್ಟ ಹಲಿಗೆ ಹೋಲೆ
ಮುಖದ ಪರಿಕರ ಚೆಂದ ಸ್ವಾಮಿಲಿಂಗನೆ
ಬಿಳಗಿರಿಸಿದ ಬಿಂದು ಕನ್ನಡಿಯ ಹೋಲೆ
ಹತ್ತು ಬೆರಳು ಚೆಂದ ಸ್ವಾಮಿಲಿಂಗನೆ
ಅರಸಿನ ಕೊಂಬಿನ ಹಲ್ಲೆ ಹೋಲೆ
ಹಲ್ಲು ಬಾಯಿನೆ ಚೆಂದ ಸ್ವಾಮಿಲಿಂಗನೆ
ದಾಳಿಂಬನ ಬಿಂದು ಬೀಜವ ಹೋಲೆ
ದೃಷ್ಟಿಂಗಳೆ ಚೆಂದ ಸ್ವಾಮಿಲಿಂಗನೆ
ಹೊತ್ತಿರಿಸಿದ ಎರಡು ದೀವಿಗೆ ಹೋಲೆ
ತಲೆಯ ಕೇಶವೆ ಚೆಂದ ಸ್ವಾಮಿ ಲಿಂಗನೆ
ಕಡೆ ತಿಂಗಳ ಬೆಳಕಿನ ತೇಜ ಹೋಲೆ
ಒಂದಲ್ಲ ಒಂದು ಸಮಯದಲ್ಲೆ
ತಿರುಪತಿ ಎಂಬ ಹೊನ್ನಸ್ಥಳದಲ್ಲೆ
ಗಂಧಕಸ್ತೂರಿ ಎಂಬ ವನದೊಳಗೆ
ಸ್ವಾಮಿ ಲಿಂಗಮ್ಮ ಬಿಡ್ಡು ಮಾಡಿದವರೆ
ನಡೆವಲ್ಲಿ ಪೂಜಭೋಗ ನಡಿಲೆಬೇಕು
ಇರುವಲ್ಲಿ ಸ್ಥಳಮನಿ ಪಡಿಲಾವಣಿ
ಉಳಹಾಳ ಎಂಬ ಹೊನ್ನಸ್ಥಳವೆಂಬಲ್ಲೆ
ವಾಲ್ಮೀಕಿಯಲ್ಲೆ ಸ್ವಾಮಿ ಬಿಡ್ಡು ಮೂಡಿದವನೆ
ಸರ್ಪಸೈನ್ಯವ ಸ್ವಾಮಿ ತೆಗುದುಕೊಂಡೆ
ಉಳಹಾಳದಿಂದ ಸ್ವಾಮಿ ಹೊರಟಾರಲ್ಲಿ

ಭೂಮಿಪುತ್ರರ ಬೆನ್ನು ಹಿಡುದುಕೊಂಡೆ
ಉಳಹಳ ನಾಗೂರು ದಾಟಿಕೊಂಡೆ
ನೂರೊಂದು ಸ್ಥಳಮನಿ ಪಡುದುಕೊಂಡೆ
ಈ ಸ್ಥಳದಲ್ಲೆ ಒಂದು ಬಿಡ್ಡು ಮೂಡಿದವನೆ
ನಿಮ್ಮ ಸ್ಥಾನದಲ್ಲಿ ಸ್ಥಿರವಾಗಿ ನಿಲ್ಲುವಂಥಾ ಸ್ವಾಮಿಲಿಂಗನೆ.

# ನಾಲ್ಕನೇ ಭಾಗ

# ಕಾಡುಗೊಲ್ಲರ ಹುತ್ತದ ಪೂಜೆಯ ಹಾಡುಗಳು

# ಕಾಡುಗೊಲ್ಲರ ಹುತ್ತದ ಪೂಜೆಯ ಹಾಡು

ಮಧ್ಯಕರ್ನಾಟಕದ ಪೂರ್ವದಂಚಿನ ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ದಟ್ಟವಾಗಿ ನೆಲಸಿರುವ ಕಾಡುಗೊಲ್ಲ ಬುಡಕಟ್ಟಿನವರು ತಮ್ಮ ಮದುವೆಗಳಲ್ಲಿ 'ಹುತ್ತದಪೂಜೆ'ಗೆ ಹೋಗಿ ಹುತ್ತದ ಮಣ್ಣನ್ನು ತರುವ ವಿಶೇಷ ಸಂಪ್ರದಾಯವಿದೆ. ಮುಹೂರ್ತದ ಹಿಂದಣ ದಿನ ಹುತ್ತಕ್ಕೆ ಮಂಗಳವಾದ್ಯದೊಂದಿಗೆ ಹೋಗಿ ಪೂಜೆ ಮಾಡಿ ಮಣ್ಣು ತಂದು, ಅದನ್ನು ಕೋಣೆಯಲ್ಲಿ ನೆಲದ ಮೇಲೆ ಹರಡಿ ಅದರ ಮೇಲೆ 'ಅರಿಣೆ' (ಕುಂಭ ಕಲಶ) ಸ್ಥಾಪನೆ ಮಾಡುತ್ತಾರೆ. ಅವುಗಳಿಗೆ ಹೆಣ್ಣು-ಗಂಡು ಧರಿಸುವಂತಹ ಬಟ್ಟೆಗಳನ್ನು ಹೊದಿಸಿ ಸಾಂಕೇತಿಕವಾಗಿ 'ಹಿರೇರು' ಮಾಡುತ್ತಾರೆ. ಇದು ಫಲಸಮೃದ್ಧಿ ಆಚರಣೆಯನ್ನು ಹೋಲುತ್ತದೆ. ಇನ್ನೊಂದು ವಿಶೇಷವೆಂದರೆ ಕಾಡುಗೊಲ್ಲರ ಎಲ್ಲದೈವಗಳ ಆಕಾರ ನಾಗರ ಹೆಡೆಯನ್ನು ಹೋಲುತ್ತದೆ. ಅವರ ದೈವಗಳು ಕಾಣಿಸಿಕೊಳ್ಳುವುದೂ ಹಾವುಗಳ ರೂಪದಲ್ಲೇ ಎಂಬುದೂ ಮುಖ್ಯವಾಗುತ್ತದೆ. ಅವರು ಹುತ್ತದ ಮಣ್ಣು ತರಲು ಹೊರಟಾಗ ಈ ಹಾಡುಗಳನ್ನು ಹಾಡುತ್ತಾರೆ.

## ಹುತ್ತಪೂಜೆಯ ಹಾಡು

ಏತ್ತುಲುಂಟೆ ಎದ್ದು ಬಟ್ಟನೆ ಮಕವ ತೊಳೆದು
ಮುತ್ತೀನಿ ಚೆಂಬು ಬಲಗೈಲಿ ಜಯಣ್ಣ
ಉತ್ತಕೆ ಆಣೆಗಳ ಕರೆದಾನು ॥ ೧ ॥

ಉತ್ತಕೆ ಆಣೆಗಳ ಏನೆಂದು ಕರೆದಾನು
ಪಟ್ಟಿದಟ್ಯೋನ ಆಣೆ ಏರಿಯಾಕೆ ವರಡಬೇಕೆಂದು
ಉತ್ತಕೆ ಆಣೆಗಳ ಕರೆದಾನು ॥ ೨ ॥

ಏಳುತಲೆ ಎದ್ದು ನ್ಯಾರನೆ ಮಕವ ತೊಳೆದು
ತಾಮ್ರದ ಚೆಂಬು ಬಲಗೈಲಿ ಕ್ಯಾತಣ್ಣ
ಕ್ವಾಮೆಗೆ ಆಣೆಗಳ ಕರೆದಾನು ॥ ೩ ॥

ಕ್ವಾಮೆಗೆ ಆಣೆಗಳ ಏನೆಂದು ಕರೆದಾನು
ಸ್ವಾಲೆದಟ್ಟೀನ ಆಣೆ ಏರಿಯಾಕೆ ಏರಡಬೇಕೆಂದು
ಕ್ವಾಮೆಗೆ ಆಣೆಗಳ ಕರೆದಾನು ॥ ೪ ॥

ಬೆಟ್ಟದಾಗೆ ಇರುವ ಬುಟ್ಟಿಲಿ ನಾಗೇಂದ್ರ
ಬೆಟ್ಟಬಿಟ್ಟು ನೀನು ಬರಬೇಕು ನಾಳಿಕೆ ನಾಮ
ಉತ್ತಾಕೆ ತನಿಯ ಎರೆದೇವು ॥ ೫ ॥

ಅಳ್ಳಾದಾಗಿರುವ ಮೆಳ್ಳೆಗಣ್ಣಿನ ನಾಗೇಂದ್ರ
ಅಳ್ಳಬಿಟ್ಟು ನೀನು ಬರಬೇಕು ನಾಳಿಕೆನಾವು
ನಾಗರಕೆ ತನಿಯ ಎರೆದೇವು ॥ ೬ ॥

ಅತ್ತುಕಬ್ಬಿನ ಕೋಲು ಬುಟ್ಟು ಬಾಳೆಹಣ್ಣು
ಅತ್ತಮಂದಿ ಗೌಡರನ ಒಡಗೊಂಡು
ಜಯಣ್ಣ ಉತ್ತದ ಪೂಜೆಗೆ ನೆರೆದಾನು ॥ ೭ ॥

ಬೂದು ಬಾಳೆ ಅಣ್ಣು ಆಯ್ದು ಕಬ್ಬಿನ ಕೋಲು
ಆರುಮಂದಿ ಗೌಡರನ ಒಳಗೊಂಡು ಸಿರಿಯಣ್ಣ
ನಾಗರಪೂಜೆಗೆ ನೆರೆದಾನು ॥ ೮ ॥

ಏಸ ಉತ್ತದಾಗಿರುವ ಏಸಲದ ಕರಣಿಕಾಂತಿ
ಬುಸಮಂಗದಾಗೆ ಬಿಳಿಯ ಸೇಜಿ ನಾಗೇಂದ್ರ
ಅಸದು ಬಂಹೈದೀನಿ ದಯಮಾಡೋ ॥ ೯ ॥

ಸಣ್ಣ ಉತ್ತದಾಗಿನ ಚಿನ್ನದ ಕಣೆಕಾಂತಿ
ಪನ್ನಂಗದಾಗೆ ಬಿಳಿಯ ಸೇಜಿ ನಾಗೇಂದ್ರ
ಬಿನ್ನಕೆ ಬಂದೈದೀನಿ ದಯವಾಡೋ ॥ ೧೦ ॥

ಕಟ್ಟಿಕಲ್ಲೀಗೆ ಅತ್ತಿಕೊಂಡಿರುವೋನೆ
ಪಕ್ಕೇಲಿ ಮಚ್ಚೆ ಬೆಳಗಡಕಬಾರೆಂದು
ಅಕ್ಕ ಮುದ್ದು ಮಗನ ಕರದಾಳು ॥ ೧೧ ॥

ಏರಿಕಲ್ಲೀಗೆ ವಾಲಿಕೊಂಡಿರುವೋನೆ
ಬಾಲದಲಿ ಮಚ್ಚೆ ಬೆಳಗಡಕಬಾರೆಂದು
ತಾಯ ಮುದ್ದು ಮಗನ ಕರೆದಾಳು ॥ ೧೨ ॥

ಉಪ್ಪುರಿಗೆ ಮನೆಗೆ ಸುತ್ತ ಬೀಗನ್ಹಾಕಿ
ವಾವುರಿಗೆ ಮನೆಗೆ ಸಾಲು ಬೀಗನ್ಹಾಕಿ
ವಾರಗಿತ್ತೇರು ನೆರೆಯ ನಿನ್ನ ಮಕ್ಕಳು
ನಾಗರಪೂಜೆಗೆ ನಡದಾರು ॥ ೧೩ ॥

ಕಲ್ಲಾಗೆ ಇರುವ ಮೆಳ್ಳಗಣ್ಣೀನ ನಾಗೇಂದ್ರ
ಬಿಟ್ಟು ಬೆಟ್ಟುದ್ದ ನಿನಕೋಮೆ ನಾಗೇಂದ್ರ
ಯತ್ತಪ್ಪ ನಿನ್ನ ಎಡೆಗಾಳ ॥ ೧೪ ॥

ಉತ್ತದಾಗಿರುವ ಬುಟ್ಟಡೆಯ ನಾಗೇಂದ್ರ
ಬೆಳ್ಳು ಬೆಳ್ಳುದ ನಿನಕೋಮೆ ನಾಗೇಂದ್ರ
ಬಿನ್ನಕೆ ಬಂದ್ವೆದೀನಿ ದಯವಾಗೋ ॥ ೧೫ ॥

ನಾಳೆನಾಮ ಉತ್ತಕೆ ತನಿಯ ಎರೆದೇವು
ಅಡಿಯ ಉತ್ತ ಅಸ ಬಂದು ಗೂರ್‍ಯಾಡ್ಯಾವು
ನಸಲುಗಣ್ಣಯ್ಯ ಅಸಮಗ ಜಯಣ್ಣ ಎದಿರ್‍ಯಾನು ॥ ೧೬ ॥

ಆಲ ಉತ್ತೆ ಆವು ಒಂದು ಗೂರ್‍ಯಾಡ್ವಾವು
ಆಲಗಣ್ಣಯ್ಯ ನಲಿನಲಿದಾಡುವಾಗ ಸಣ್ಣಮಗ
ಸಿರಿಯಣ್ಣ ಎದಿರ್‍ಯಾನು ॥ ೧೭ ॥

(ಹಾಡಿದವರು ಸಿರಿಯಜ್ಜಿ, ಯಲಗಟ್ಟಿ, ಗೊಲ್ಲರಹಟ್ಟಿ, ಚಳ್ಳಕೆರೆ ತಾ)